ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಮಂಗಳೂರು

ಭಾನುವಾರ, 22 ಮಾರ್ಚ್ 2026

ಸಂಪುಟ 48, ಸಂಚಿಕೆ 3, ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital

ತುಮಕೂರಲ್ಲಿ ಅಂತಾರಾಷ್ಟ್ರೀಯ ಟೆನಿಸ್

ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಕೂಟಕ್ಕೆ ಸಿದ್ಧತೆ

ಮೇ 4ರಿಂದ 10ರವರೆಗೆ ಟೆನಿಸ್ ಹಬ್ಬ

೧೧

ಏ.3ಕ್ಕೆ ತಾರಾಗಿರಿ ಸ್ವದೇಶಿ ಯುದ್ಧನೌಕೆ ನಿಯೋಜನೆ



೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಭರಣಿ

ದಿನದ ಮಾತು

ತನ್ನ ಬಂಧು ಬಾಂಧವರನ್ನು ಅತಿಯಾಗಿ ಹಚ್ಚಿಕೊಂಡವನು ಭಯಶೋಕಗಳನ್ನು ಅನುಭವಿಸಲೇಬೇಕಾಗುತ್ತದೆ. ಅತಿ ಮಮತೆಯನ್ನು ಬಿಟ್ಟವನೇ ಸುಖಿಯಾಗಬಲ್ಲ.
▲ ಚಾಣಕ್ಯ ನೀತಿ

ಬಾಯ್ ಮಾತು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ತೀರ್ಥಹಳ್ಳಿ: ಮಂಗನ ಕಾಯಿಲೆಗೆ ಮಹಿಳೆ ಬಲಿ

• **ತೀರ್ಥಹಳ್ಳಿ:** ತಾಲೂಕಿನಲ್ಲಿ ಮಂಗನ ಕಾಯಿಲೆಗೆ ಈ ವರ್ಷ ಎರಡನೇ ಸಾವು ಸಂಭವಿಸಿದ್ದು, ಆರಳಸುರುಳಿ ಸಮೀಪದ ತಟ್ಟಿಕೇವಿ ಗ್ರಾಮದ ಮಹಿಳೆ ಮಣಿಪಾಲ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.



ಗುಲಾಬಿ ಶೆಟ್ಟಿ (ನಾಗು ಶೆಡ್ತಿ (60) ಮೃತಪಟ್ಟವರು.ರೋಗ ಉಲ್ಬಣಗೊಂಡ ಸ್ಥಿತಿಯಲ್ಲಿ ಮಂಗಳವಾರ ಸರ್ಕಾರಿ ಜೆಸಿ ಆಸ್ಪತ್ರೆಗೆ ದಾಖಲಾಗಿದ್ದ ಅವರನ್ನು ಅದೇ ದಿನ ಮಣಿಪಾಲ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ಅಸುನೀಗಿದರು. ಕಿಡ್ನಿ ಸಮಸ್ಯೆ ಕೂಡ ಇತ್ತು ಎಂದು ಹೇಳಲಾಗಿದೆ. ➡ ಪುಟ ೪

ಸರ್ಕಾರಿ ಕಚೇರಿಯಲ್ಲೇ ಅಧಿಕಾರಿ ಆತ್ಮಹತ್ಯೆ

• **ಪಾವಗಡ:** ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಸಹಾಯ ನಿರ್ದೇಶಕ ಮಲ್ಲಿಕಾರ್ಜುನ್(60) ಕಚೇರಿಯಲ್ಲೇ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಪಾವಗಡ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

• ಪುಟ ೫

ಡಿಜಿಟಲ್ ಅರೆಸ್ಟ್ ವಂಚನೆಗೆ ಕೇಂದ್ರ ಸರ್ಕಾರ ಬ್ರೇಕ್

• **ಹೊಸದಿಲ್ಲಿ:** ದೇಶದಲ್ಲಿ ಹೆಚ್ಚುತ್ತಿರುವ 'ಡಿಜಿಟಲ್ ಅರೆಸ್ಟ್' ಸೈಬರ್ ವಂಚನೆಗೆ ತಡೆ ಹಾಕಲು ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದು, ವಂಚನೆಗೆ ಬಳಸಲಾಗುತ್ತಿರುವ ಡಿವೈಸ್ ಐಡಿಗಳನ್ನು ಬ್ಲಾಕ್ ಮಾಡಲು ವಾಟ್ಸ್ಆ್ಯಪ್ ಗೆ ಸರ್ಕಾರ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

• ಪುಟ ೭

ಆರೆಸ್ಸೆಸ್ ನಿಷೇಧ ಶಿಫಾರಸು ಪೂರ್ವಾಗ್ರಹಪೀಡಿತ

• ಪುಟ ೭

ಅಪರಿಚಿತರಿಂದ ಮತ್ತೊಬ್ಬ ಭಯೋತ್ಪಾದಕನ ಹತ್ಯೆ

• ಪುಟ ೭

ವಾಣಿಜ್ಯ ಎಲ್‌ಪಿಜಿ ಹಂಚಿಕೆ ಶೇ.50ಕ್ಕೆ ಏರಿಕೆ

• ಪುಟ ೭

ಸರ್ಕಾರಿ ಸುಪರ್ದಿಗೆ ಅಲ್ ಫಲಾ ವಿವಿ

• ಪುಟ ೭

ವಿಕಿರಣ ಸೋರಿಕೆ? | ಟೆಹ್ರಾನ್‌ನಿಂದ 220 ಕಿಮೀ ದೂರದ ಸ್ಥಾವರ

ಇರಾನ್ ಪರಮಾಣು ಸ್ಥಾವರ ಮೇಲೆ ದಾಳಿ

• **ಟೆಹ್ರಾನ್:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಭೀಕರ ಯುದ್ಧ ಮೂರನೇ ವಾರಕ್ಕೆ ಕಾಲಿಟ್ಟಿದ್ದು, ಶನಿವಾರ ಅಮೆರಿಕ-ಇಸ್ರೇಲ್ ಇರಾನ್‌ನ ನಟಾಂಜ್ ಪರಮಾಣು ಸ್ಥಾವರದ ಮೇಲೆ ದಾಳಿ ನಡೆಸಿದೆ. ಇದರಿಂದ ವಿಕಿರಣ ಸೋರಿಕೆಯ ಆತಂಕ ಎಲ್ಲೆಡೆ ಮನೆ ಮಾಡಿದೆ.

ಶನಿವಾರ ಬೆಳಗ್ಗೆ ನಟಾಂಜ್‌ನಲ್ಲಿರುವ ಇರಾನ್‌ನ ಪ್ರಮುಖ ಯುರೇನಿಯಂ-ಪುಷ್ಟೀಕರಣ ಸ್ಥಾವರದ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸಿವೆ. ದಾಳಿ ನಂತರ ಯಾವುದೇ ವಿಕಿರಣ ಸೋರಿಕೆ ಪತ್ತೆಯಾಗಿಲ್ಲ ಮತ್ತು ಸ್ಥಾವರದ ಬಳಿ ವಾಸಿಸುವ ನಿವಾಸಿಗಳು ಅಪಾಯದಲ್ಲಿಲ್ಲ ಎಂದು ಸುದ್ದಿ ಸಂಸ್ಥೆ ತಿಳಿಸಿದೆ. ಆದರೂ ಸ್ಥಳೀಯ ನಿವಾಸಿಗಳು ವಿಕಿರಣ ಸೋರಿಕೆಯ ಆತಂಕದಲ್ಲಿದ್ದಾರೆ. ನಟಾಂಜ್ ಪರಮಾಣು ಸ್ಥಾವರ ಇರಾನ್ ರಾಜಧಾನಿ ಟೆಹ್ರಾನ್‌ನಿಂದ ಸುಮಾರು 220 ಕಿಮೀ ದೂರದಲ್ಲಿದೆ.ಇರಾನ್‌ನ ಪರಮಾಣು ಸೌಲಭ್ಯ ಕೇಂದ್ರವಾದ ನಟಾಂಜ್ ಅನ್ನು ಯುದ್ಧ ಶುರುವಾದ ಮೊದಲ ವಾರದಲ್ಲೇ ಗುರಿಯಾಗಿಸಿತ್ತು ಎಂದು ಮಧ್ಯಮಗಳು ವರದಿ ಮಾಡಿವೆ. ದಾಳಿಯ ಉಪಗ್ರಹ ಚಿತ್ರಗಳು ಬೆಳಕಿಗೆ ಬಂದಿವೆ. ಈ ಕೇಂದ್ರದಿಂದ ಯಾವುದೇ ವಿಕಿರಣ ಸೋರಿಕೆಯಾಗಿಲ್ಲ ಎಂದು ಇರಾನ್ ಸುದ್ದಿಸಂಸ್ಥೆ ವರದಿ ಮಾಡಿದೆ.





4,000 ಕಿ.ಮೀ. ದೂರ ಇರಾನ್ ಕ್ಷಿಪಣಿ ದಾಳಿ!



• **ಹೊಸದಿಲ್ಲಿ:** ಅಮೆರಿಕ ಮತ್ತು ಬ್ರಿಟನ್ ಜಂಟಿ ಸೇನಾನೆಲೆಯಾದ ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪದ ಮೇಲೆ ಇರಾನ್ ಎರಡು ಮಧ್ಯಂತರ-ಶ್ರೇಣಿಯ ಕ್ಷಿಪಣಿಗಳಿಂದ ದಾಳಿ ನಡೆಸಿದ್ದು, ಇರಾನ್ ಕ್ಷಿಪಣಿಗಳ ಅಘೋಷಿತ ದೂರ ಸಾಮರ್ಥ್ಯವು ವಿಶ್ವದ ಗಮನಸೆಳೆದಿದೆ. ತನ್ನಲ್ಲಿ ಕೇವಲ 2,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳಷ್ಟೇ ಇವೆಯೆಂದು ಘೋಷಿಸಿಕೊಂಡ ಇರಾನ್, 4,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳನ್ನು ಬಹುಶಃ ರಹಸ್ಯವಾಗಿಟ್ಟಿತ್ತು. • ವಿವರ ಪುಟ ೭

ಇರಾನ್ ಮೇಲಿನ ತೈಲ ನಿರ್ಬಂಧ ಸಡಿಲಿಸಿದ ಅಮೆರಿಕ

ಜಾಗತಿಕ ಇಂಧನ ಬೆಲೆಗಳನ್ನು ನಿಯಂತ್ರಿಸುವ ಉದ್ದೇಶದಿಂದ, ಸಮುದ್ರದಲ್ಲಿರುವ ಇರಾನ್ ತೈಲದ ಮಾರಾಟಕ್ಕೆ ಟ್ರಂಪ್ ಆಡಳಿತ ಶುಕ್ರವಾರ 30 ದಿನಗಳ ಕಾಲ ನಿರ್ಬಂಧ ಸಡಿಲಿಕೆ ಘೋಷಿಸಿದೆ. ಸುಮಾರು 140 ಮಿಲಿಯನ್ ಬ್ಯಾರೆಲ್ ತೈಲವನ್ನು ಜಾಗತಿಕ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು ಎಂದು ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ತಿಳಿಸಿದ್ದಾರೆ. ಫೆ.28ರಂದು ಮಿಲಿಟರಿ ಕಾರ್ಯಾಚರಣೆ ಆರಂಭವಾದಾಗಿನಿಂದ ತೈಲ ಬೆಲೆ ಶೇ.50ರಷ್ಟು ಏರಿಕೆಯಾಗಿದ್ದು, ಈ ಕ್ರಮ ಗ್ರಾಹಕರು ಮತ್ತು ಉದ್ಯಮಗಳಿಗೆ ನಿರಾಳತೆ ತರುವ ಗುರಿ ಹೊಂದಿದೆ. ಏಪ್ರಿಲ್ 19 ರವರೆಗೆ ಈ ರಿಯಾಯಿತಿ ಜಾರಿಯಲ್ಲಿರಲಿದೆ.

ಭಾರತಕ್ಕೂ ಪ್ರಯೋಜನ?: ಈ ತೈಲ ಕೆಲವೇ ದಿನಗಳಲ್ಲಿ ಏಷ್ಯಾದ ಮಾರುಕಟ್ಟೆ ತಲುಪಬಹುದು ಎಂದು ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ಹೇಳಿದ್ದಾರೆ. ➡ ಪುಟ ೪

ಇರಾನ್ ಅಧ್ಯಕ್ಷರ ಜತೆ ಮೋದಿ ಚರ್ಚೆ

• **ಹೊಸದಿಲ್ಲಿ:** ಪ್ರಧಾನಿ ಮೋದಿ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಝೆಷ್ಕಿಯನ್ ಅವರೊಂದಿಗೆ ಶನಿವಾರ ದೂರವಾಣಿ ಮಾತುಕತೆ ನಡೆಸಿ, ಪ್ರಮುಖ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ಕಟುವಾಗಿ ಖಂಡಿಸಿದರು. • ವಿವರ ಪುಟ ೫

ಹೆಚ್ಚುವರಿ ತೈಲ ಲಭ್ಯತೆ ನಿರಾಕರಿಸಿದ ಇರಾನ್



• **ಟೆಹ್ರಾನ್:** ಅಂತಾರಾಷ್ಟ್ರೀಯ ಮಾರುಕಟ್ಟೆಗಳಿಗೆ ಪೂರೈಸಲು ಪ್ರಸ್ತುತ ತನ್ನಲ್ಲಿ ಯಾವುದೇ ಹೆಚ್ಚುವರಿ ಅಥವಾ ಸಂಗ್ರಹಿತ ಕಚ್ಚಾ ತೈಲ ಲಭ್ಯವಿಲ್ಲ ಎಂದು ತಿಳಿಸುವ ಮೂಲಕ ಇರಾನ್ ತೈಲ ಸಚಿವಾಲಯ ಅಮೆರಿಕದ ಹೇಳಿಕೆಯನ್ನು ತಳ್ಳಿಹಾಕಿದೆ.ವಿವಾದಿತ ತೈಲ ದಾಸ್ತಾನು ವಾಷಿಂಗ್ಟನ್ ಗುರುತಿಸಿರುವಂತೆ ತನ್ನಲ್ಲಿ 140 ಮಿಲಿಯನ್ ಬ್ಯಾರೆಲ್‌ನಷ್ಟು ಸಿಲುಕಿಕೊಂಡಿರುವ ತೈಲ ದಾಸ್ತಾನು ಇಲ್ಲ ಎಂದು ಮುಂಬೈನಲ್ಲಿರುವ ಇರಾನ್ ರಾಯಭಾರ ಕಚೇರಿ ಸ್ಪಷ್ಟಪಡಿಸಿದೆ. ➡ ಪುಟ ೪

ಚಿಂತೆಗೀಡಾದ ಅಭ್ಯರ್ಥಿ ಆಕಾಂಕ್ಷಿಗಳು

ಬಗೆಹರಿಯದ ಕೈ ಟಿಕೆಟ್ ಗೊಂದಲ



• **ಬೆಂಗಳೂರು:** ಉಪ ಸಮರಕ್ಕೆ ಸಜ್ಜಾಗಿರುವ ಕಾಂಗ್ರೆಸ್‌ನಲ್ಲಿ ಆಂತರಿಕ ಬಡಿದಾಟವೇ ಹೆಚ್ಚಾಗಿದ್ದು, ಆಡಳಿತ ಪಕ್ಷ ಕಾಂಗ್ರೆಸ್‌ಗೆ ಬಣಗಳ ಬಡಿದಾಟವು ತಲೆನೋವು ತಂದಿರುವುದರಿಂದ ತಮ್ಮದೇ ಕ್ಷೇತ್ರಗಳನ್ನು ಮರಳಿ ಪಡೆಯುವ ತಂತ್ರಕ್ಕೆ ಆರಂಭಿಕ ಹಿನ್ನಡೆಯಾಗಿದೆ.

ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ ಮೇಟಿ ಅವರ ನಿಧನದ ನಂತರ ತೆರವಾಗಿರುವ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳಿಗೆ ಏ.9ರಂದು ಉಪ ಚುನಾವಣೆ ನಿಗದಿಯಾಗಿದ್ದು, ಮಾ.23 ಸೋಮವಾರ ನಾಮಪತ್ರ ಸಲ್ಲಿಸಲು ಕೊನೆ ದಿನವಾಗಿದ್ದರೂ ಇನ್ನೂ ಟಿಕೆಟ್ ಹಂಚಿಕೆ ಆಗದಿರುವುದು ಎರಡೂ ಕುಟುಂಬ ಸದಸ್ಯರನ್ನು ಚಿಂತೆಗೀಡು ಮಾಡಿವೆ.

ಉಪ ಸಮರ

ಮುಂಬರುವ ಸ್ಥಳೀಯ ಚುನಾವಣೆಗೆ ಈ ಉಪಕದನ ದಿಕ್ಸೂಚಿ ಎಂದು ಬಿಂಬಿತವಾಗಿರುವುದರಿಂದ ಈ ಚುನಾವಣೆ ಉಭಯ ಪಕ್ಷಗಳಿಗೆ ಸವಾಲಾಗಿದೆ. 3 ವರ್ಷದ ಸನಿಹದಲ್ಲಿರುವ ಗ್ಯಾರಂಟಿ ಸರ್ಕಾರವು 2 ಸ್ಥಾನವನ್ನು ಗೆಲ್ಲುವ ಮೂಲಕ ವಿಶ್ವಾಸ ಹೆಚ್ಚಿಸಿಕೊಳ್ಳುವ ಜತೆಗೆ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಸಮಿಫೈನಲ್ ಎಂದು ಪರಿಗಣಿಸಿರುವುದರಿಂದ ಈ ಚುನಾವಣೆ ಕಾಂಗ್ರೆಸ್‌ಗೆ ಮುಖ್ಯವಾಗಿದೆ.

ಲೋಕಸಭೆ ಚುನಾವಣೆ ನಂತರ ನಡೆದ ಉಪ ಚುನಾವಣೆಯಲ್ಲಿ ಮೇಲುಗೈ ಸಾಧಿಸಿದ್ದ ಕಾಂಗ್ರೆಸ್ ಅದನ್ನು ಮುಂದುವರಿಸಲು ಸಿದ್ಧತೆ ನಡೆಸಿದೆ. ➡ ಪುಟ ೪

ದಾವಣಗೆರೆಗೆ ಸಮರ್ಥ್, ಬಾಗಲಕೋಟೆಗೆ ಉಮೇಶ್ ಮೇಟಿ?

ಉಪ ಚುನಾವಣೆಗೆ ಕಾಂಗ್ರೆಸ್‌ನಿಂದ ಕುಟುಂಬ ಸದಸ್ಯರೆ ಅಭ್ಯರ್ಥಿಗಳು ಎಂದು ಹೇಳಲಾಗಿದ್ದರೂ ನಂತರದ ದಿನಗಳಲ್ಲಿ ಅದು ಬೇರೆ ರೀತಿ ತಿರುಗಿದ್ದರಿಂದ ಟಿಕೆಟ್ ಹಂಚಿಕೆ ಜಟಿಲವಾಗಿದೆ. ಬಾಗಲಕೋಟೆ, ದಾವಣಗೆರೆ ದಕ್ಷಿಣ ಟಿಕೆಟ್ ಬಹುತೇಕ ಬಗೆಹರಿದಿದ್ದು, ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಸಚಿವರಾದ ಮಲ್ಲಿಕಾರ್ಜುನ, ಜಮೀರ್ ಅಹಮದ್ ಉಪಸ್ಥಿತಿಯಲ್ಲಿ ಸಭೆ ನಡೆಸಿದ್ದು, ಭಾನುವಾರ ಅಧಿಕೃತವಾಗಿ ಟಿಕೆಟ್ ಘೋಷಣೆ ಆಗಲಿದೆ. ಸೋಮವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಬೈಕ್ ಮೇಲೆ ಟ್ರಕ್ ಹತ್ತಿಸಿ ಹತ್ಯೆ | ದಿಲ್ಲಿ-ಆಗ್ರಾ ರಾ.ಹೆ. ಬಂದ್

ಗೋರಕ್ಷಕ ಬಾಬಾ ಹತ್ಯೆಗೆ ಆಕ್ರೋಶ

• **ಲಖನೌ:** ಫರ್ಸಾ ವಾಲೆ ಬಾಬಾ (ಕೊಡಲಿ ಬಾಬಾ) ಎಂದೇ ಪ್ರಖ್ಯಾತರಾಗಿದ್ದ ಉತ್ತರಪ್ರದೇಶದ ಗೋರಕ್ಷಕ ಚಂದ್ರಶೇಖರ್ ಈದ್ ಹಬ್ಬದ ಸಂದರ್ಭ ಮಥುರಾದಲ್ಲಿ ಹತ್ಯೆಯಗೀಡಾಗಿದ್ದು,



ಭಕ್ತರು ಹಾಗೂ ಗ್ರಾಮಸ್ಥರಿಂದ ಭಾರೀ ಆಕ್ರೋಶ ವ್ಯಕ್ತವಾಗಿದೆ. ಬಾಬಾ ಹತ್ಯೆ ನಡೆಸಿದವರ ಮೇಲೆ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಲು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಪೊಲೀಸರಿಗೆ ಆದೇಶಿಸಿದ್ದಾರೆ. ಈದ್ ಹಬ್ಬದ ಸಂದರ್ಭ ಮಥುರಾದಲ್ಲಿ ಗೋವುಗಳ ಕಳ್ಳಸಾಗಣೆ ಮಾಡುತ್ತಿದ್ದ ಟ್ರಕ್‌ವೊಂದನ್ನು ಬಾಬಾ ತಮ್ಮ ಬೈಕ್‌ನಲ್ಲಿ ಬೆನ್ನಟ್ಟಿ ಅಡ್ಡಗಟ್ಟಲು ಪ್ರಯತ್ನಿಸಿದ್ದರು. ಆದರೆ ಟ್ರಕ್‌ನಲ್ಲಿದ್ದ ನಾಲ್ವರು ಆರೋಪಿಗಳು ಬೈಕ್ ಮೇಲೆಯೇ ಟ್ರಕ್ ಚಲಾಯಿಸಿ ಬಾಬಾರನ್ನು ಹತ್ಯೆ ಮಾಡಿದ್ದಾರೆಂದು ಆರೋಪಿಸಲಾಗಿದೆ. ಬೈಕ್ ಮೇಲೆ ಟ್ರಕ್ ಚಲಾಯಿಸಿದ ವೇಗಕ್ಕೆ ಗಂಭೀರ ಗಾಯಗೊಂಡಿದ್ದ ಬಾಬಾ ಸ್ಥಳದಲ್ಲೇ ಮೃತ ಪಟ್ಟಿದ್ದರು. ಪೊಲೀಸರ ಪ್ರಕಾರ, ಬಾಬಾ ಅಡ್ಡಗಟ್ಟಿದ್ದ ಟ್ರಕ್ ರಾಜಸ್ಥಾನದ್ದಾಗಿದ್ದು, ಟ್ರಕ್‌ನಲ್ಲಿ ದಿನಸಿ ಸಾಮಗ್ರಿಗಳಿದ್ದವು. ದಟ್ಟವಾದ ಮಂಜು ಇದ್ದಿದ್ದರಿಂದ ರಸ್ತೆ ಅಪಘಾತ ಸಂಭವಿಸಿದೆ. ➡ ಪುಟ ೪

ಬೃಹತ್ ಪ್ರತಿಭಟನೆ

ಗೋರಕ್ಷಕನ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಸಾವಿರಾರು ಸಂಖ್ಯೆಯಲ್ಲಿ ಜನ ಸೇರಿದ್ದು, ದಿಲ್ಲಿ-ಆಗ್ರಾ ನಡುವಿನ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್-19) ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಇದರಿಂದ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ವಾಹನಗಳು ಸಂಚರಿಸಲಾಗದೆ ಸಾಲಾಗಿ ನಿಂತಿದ್ದವು.

ವ್ಯವಸ್ಥೆಗೆ ಕೃತಕ ಬುದ್ಧಿಮತ್ತೆ ಪೂರಕವಾಗಿರಲಿ: ನ್ಯಾ.ಸೂರ್ಯಕಾಂತ್

ಎಐ ನ್ಯಾಯಾಂಗ ಆಳಬಾರದು: ಸಿಜೆಐ

• **ಬೆಂಗಳೂರು:** ನ್ಯಾಯಾಂಗ ವ್ಯವಸ್ಥೆಗೆ ಎಐ ತಾಂತ್ರಿಕತೆಯನ್ನು ಸಂಯೋಜನೆಗೊಳಿಸುವಾಗ ಅದು ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸುವ ರೀತಿಯಲ್ಲಿ ಇರಬೇಕೇ ಹೊರತು ಅದರ ಮೇಲೆಯೇ ಸವಾರಿ ಮಾಡುವಂತಿರಬಾರದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

ಕರ್ನಾಟಕ ನ್ಯಾಯಾಂಗ ಅಕಾಡೆಮಿಯು ವತಿಯಿಂದ ಶನಿವಾರ ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಸಭಾಂಗಣದಲ್ಲಿ ಹಮ್ಮಿಕೊಂಡ ಕೃತಕ ಬುದ್ಧಿಮತ್ತೆ-ವ್ಯಾಜ್ಯಗಳ ತಡೆ ಗಟ್ಟುವಿಕೆ ಮತ್ತು ಇತ್ಯರ್ಥ ಕುರಿತಾಗಿನ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಗಾಧ ಪ್ರಮಾಣದ ದತ್ತಾಂಶ-ದಾಖಲಾತಿಗಳನ್ನು ನಿರ್ವಹಿಸಲು, ಮಾದರಿಗಳನ್ನು ಗುರುತಿಸಲು, ಪ್ರಕ್ರಿಯೆಗಳ ವಿಳಂಬ ತಗ್ಗಿಸಲು ಎಐ ಸಹಾಯಕವಾಗಬೇಕು. ಆದರೆ, ಪ್ರಧಾನ ಕಾರ್ಯವಾದ ತೀರ್ಪು ಪ್ರಕಟಿಸುವಿಕೆಯನ್ನೇ ಅದು ಅತಿಕ್ರಮಿಸುವಂತಾಗಬಾರದು. ➡ ಪುಟ ೪



ನ್ಯಾಯಾಂಗ ಸುಧಾರಣಾ ಆಯೋಗ ರಚಿಸಿ: ನ್ಯಾ.ನಾಗರತ್ನ ಪುಟ ೩

ಭಕ್ತರ ಸಾಲಲ್ಲಿ ನಿಂತು ತಿರುಮಲ ದರ್ಶನ ಪಡೆದ ಸಿಎಂ ನಾಯ್ಡು



• **ತಿರುಮಲ:** ಮುಖ್ಯಮಂತ್ರಿ ಹುದ್ದೆಯಲ್ಲಿದ್ದರೂ ನಾರಾ ಚಂದ್ರಬಾಬು ನಾಯ್ಡು ಅವರು ವಿಐಪಿ ಸೌಲಭ್ಯಗಳನ್ನು ಬಳಸದೆ ಸಾಮಾನ್ಯ ಭಕ್ತರಂತೆ ಆಗಮಿಸಿ ಕುಟುಂಬಸ್ಥರೊಂದಿಗೆ ತಿರುಮಲದ ಶ್ರೀ ವೆಂಕಟೇಶ್ವರನ ದರ್ಶನ ಪಡೆದರು. ಶಿಷ್ಟಾಚಾರದ ಪ್ರಕಾರ ನೇರವಾಗಿ ಮಹಾದ್ವಾರದ ಮೂಲಕ ಪ್ರವೇಶಿಸುವ ಅವಕಾಶ ಇದ್ದರೂ, ವೈಕುಂಠಂ ಕ್ಯೂ ಕಾಂಪ್ಲೆಕ್ಸ್ ಮೂಲಕವೇ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಸರಳತೆ ಮೆರೆದಿದ್ದಾರೆ. ➡ ಪುಟ ೪

ಚಾಮುಂಡೇಶ್ವರಿಗೆ ನಮೋ ಭಕ್ತಿನಮನ



• **ಹೊಸದಿಲ್ಲಿ:** ಶ್ರೀಚಾಮುಂಡೇಶ್ವರಿ ಎಂಬ ಪ್ರಸಿದ್ಧ ಕನ್ನಡ ಭಕ್ತಿಗೀತೆಯನ್ನು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಳ್ಳುವ ಮೂಲಕ ಪ್ರಧಾನಿ ನರೇಂದ್ರ ಮೋದಿಯವರು ಚೈತ್ರ ನವರಾತ್ರಿಯ 3ನೇ ದಿನದ ಸಂದೇಶ ನೀಡಿದ್ದಾರೆ. ಇದು ಡಾ.ರಾಜಕುಮಾರ್ ಅಭಿನಯದ ಶ್ರೀ ಕೃಷ್ಣ ದೇವರಾಯ ಚಿತ್ರದ ಗೀತೆಯಾಗಿದ್ದು, ಮೋದಿ ಪೋಸ್ಟ್‌ಗೆ ವಿಶ್ವದೆಲ್ಲೆಡೆ ಕನ್ನಡಿಗರು, ಅಣ್ಣಾವ್ರ ಅಭಿಮಾನಿಗಳು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಜಗಜ್ಜನನಿ ಅಮ್ಮನವರ ಮೇಲಿನ ಅಚಲ ನಂಬಿಕೆಯು ಭಕ್ತರಲ್ಲಿ ಹೊಸ ಚೈತನ್ಯ ಮತ್ತು ಸ್ಫೂರ್ತಿ ತುಂಬಲಿದೆ ಎಂದು ಮೋದಿ ತಮ್ಮ ಚೈತ್ರ ನವರಾತ್ರಿ ಮೂರನೇ ದಿನದ ಸಂದೇಶದಲ್ಲಿ ಬರೆದುಕೊಂಡಿದ್ದರು. ➡ ಪುಟ ೪



ಎಕ್ಸ್‌ನಲ್ಲಿ ಡಾ.ರಾಜ್ ಚಿತ್ರದ ಗೀತೆ ಹಂಚಿಕೊಂಡ ಪ್ರಧಾನಿ

ಕಿರುಸುದ್ದಿ

ಚುನಾವಣಾ ಜಾಹೀರಾತುಗಳಿಗೆ ಪೂರ್ವಾನುಮತಿ ಕಡ್ಡಾಯ: ಕಾಸರಗೋಡು ಜಿಲ್ಲಾಧಿಕಾರಿ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ದೃಶ್ಯ, ಶ್ರವ್ಯ ಮತ್ತು ನವ ಮಾಧ್ಯಮಗಳ ಮೂಲಕ ನೀಡುವ ಜಾಹೀರಾತುಗಳಿಗೆ ಜಿಲ್ಲಾ ಮಟ್ಟದ ಮಾಧ್ಯಮ ನಿಗಾ ಮತ್ತು ಮಾಧ್ಯಮ ಪ್ರಮಾಣೀಕರಣ ಸಮಿತಿಯಿಂದ ಪೂರ್ವಾನುಮತಿ ಅಗತ್ಯವಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಸಮಿತಿಯಿಂದ ನಿಗದಿತ ನಮೂನೆಯಲ್ಲಿ ಅನುಮತಿ ಪಡೆಯಬೇಕು. ನಿಯಮಗಳನ್ನು ಪಾಲಿಸುವವರಿಗೆ ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ. ಚುನಾವಣೆಗೆ 48 ಗಂಟೆಗಳ ಮೊದಲು ಮತ್ತು ಚುನಾವಣಾ ದಿನದಂದು ನೀಡಲು ಉದ್ದೇಶಿಸಿರುವ ಮುದ್ರಣ ಮಾಧ್ಯಮ ಜಾಹೀರಾತುಗಳಿಗೆ ಅನುಮತಿ ಕಡ್ಡಾಯವಾಗಿದ್ದು , ಜಾಹೀರಾತು ನೀಡಲು ನಿಗದಿಪಡಿಸಿದ ದಿನಾಂಕಕ್ಕಿಂತ ಎರಡು ದಿನಗಳ ಮೊದಲು ಅರ್ಜಿಗಳನ್ನು ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದ್ದಾರೆ.ಇತರ ದೇಶಗಳ ಬಗ್ಗೆ ಟೀಕೆ, ದೇಶದ ಕೋಮು ಮತ್ತು ಸಾಮಾಜಿಕ ಏಕತೆಗೆ ಪರಿಣಾಮ ಬೀರುವ ವಿಷಯ, ಮಾನಹಾನಿಕರ ವಿಷಯ, ವೈಯಕ್ತಿಕ ಅವಮಾನ, ನ್ಯಾಯಾಲಯದ ತಿರಸ್ಕಾರಕ್ಕೆ ಕಾರಣವಾಗುವ ವಿಷಯ, ಅಧ್ಯಕ್ಷರು ಮತ್ತು ನ್ಯಾಯಾಂಗದ ವಿರುದ್ಧದ ವಿಷಯ, ಧಾರ್ಮಿಕ ಸಂಸ್ಥೆಗಳ ಚಿತ್ರಗಳು ಮತ್ತು ಧಾರ್ಮಿಕ ಚಿಹ್ನೆಗಳನ್ನು ಚುನಾವಣಾ ಜಾಹೀರಾತುಗಳಲ್ಲಿ ಅನುಮತಿಸಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ಉಲ್ಲೇಖಿಸಿದ್ದಾರೆ.

ಸ್ಕೂಟರ್-ಬೈಕ್ ಡಿಕ್ಕಿ: ಓರ್ವ ಸಾವು, ಇನ್ನೋರ್ವನಿಗೆ ಗಾಯ

ಕಾರ್ಕಳ: ಕಾರ್ಕಳ ತಾಲೂಕಿನ ಸಾಣೂರಿನಲ್ಲಿ ಬೈಕ್ ಹಾಗೂ ಸ್ಕೂಟರ್ ನಡುವೆ ನಡೆದ ಭೀಕರ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಸ್ಕೂಟರ್ ಸವಾರ ಸಾವನ್ನಪ್ಪಿದರೆ, ಬೈಕ್ ಸವಾರ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.ಸ್ಕೂಟರ್ ಸವಾರ ಹರೀಶ್ ಸುವರ್ಣ ಮೃತಪಟ್ಟ ದುರ್ದೈವಿ. ಶನಿವಾರ (ಮಾ.18) ಸಂಜೆ ಸಾಣೂರು ರಾಮ ಮಂದಿರದ ಬಳಿ ಇರುವ ಅಮ್ಮ ಹೊಟೇಲ್ ಮುಂದುಗಡೆ ಮೂಡಬಿದ್ರೆ ಕಡೆಯಿಂದ ಕಾರ್ಕಳ ಕಡೆಗೆ ಬರುತ್ತಿದ್ದ ಸುಕೇಶ್ ಎಂಬವರ ಬೈಕ್ ಮತ್ತು ಕಾರ್ಕಳ ಕಡೆಯಿಂದ ಸಾಣೂರು ಕಡೆಗೆ ಹೋಗುತ್ತಿದ್ದ ಹರೀಶ್ ಸುವರ್ಣ ಎಂಬವರ ಸ್ಕೂಟರ್ ಮುಖಾಮುಖಿ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಎರಡೂ ವಾಹನಗಳ ಸವಾರರು ರಸ್ತೆಗೆ ಎಸೆಯಲ್ಪಟ್ಟಿದ್ದು, ಆ ಪೈಕಿ ಹರೀಶ್ ಸುವರ್ಣ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ಸಾಗಿಸುವ ವೇಳೆಗೆ ಮೃತಪಟ್ಟಿದ್ದಾರೆ.ಬೈಕ್ ಸವಾರ ಸುಕೇಶ್ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಕುರಿತು ಕಾರ್ಕಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೆಂಗಿನ ಮರದಿಂದ ಬಿದ್ದು ಮೃತ್ಯು

ಬಂಟ್ವಾಳ: : ತೆಂಗಿನ ಮರದಿಂದ ಬಿದ್ದು ವ್ಯಕ್ತಿಯೋರ್ವರು ಮೃತಪಟ್ಟ ಘಟನೆ ತಾಲೂಕಿನ ನರಿಕೊಂಬು ಗ್ರಾಮದ ತಾರಿಪಡ್ಪು ಎಂಬಲ್ಲಿ ಸಂಭವಿಸಿದೆ. ಮೃತರನ್ನು ನರಿಕೊಂಬು ಗ್ರಾಮದ ನಿವಾಸಿ ಗಣೇಶ ಎಂದು ಹೆಸರಿಸಲಾಗಿದೆ. ಇವರು ತನ್ನ ಅಣ್ಣನ ಜೊತೆ ತೆಂಗಿನ ಕಾಯಿ, ಅಡಿಕೆ ಕೊಯ್ಯುವ ಕೆಲಸ ಮಾಡಿಕೊಂಡಿದ್ದು, ಮಾ 19 ರಂದು ಅಣ್ಣ ಪ್ರಕಾಶ ಜೊತೆ ಸೇರಿ ತಾರಿಪಡ್ಪು ನಿವಾಸಿ ವಿಠಲ ಮೂಲ್ಯ ಅವರ ಮನೆಯ ತೆಂಗಿನ ಮರದಿಂದ ತೆಂಗಿನ ಕಾಯಿ ಕೀಳಲೆಂದು ಹತ್ತಿದ್ದರು. ಈ ಸಂದರ್ಭ ಗಣೇಶ್ ಅವರು ಕಾಲಿಗೆ ಹಾಕಿದ ಹಗ್ಗವು ಆಕಸ್ಮಿಕವಾಗಿ ತುಂಡಾಗಿ ಮರದ ಬುಡದ ಅಗರಿಗೆ ಬಿದ್ದಿದ್ದಾರೆ. ತಕ್ಷಣ ಬಿ ಸಿ ರೋಡಿನ ಖಾಸಗಿ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಆದಾಗಲೇ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಈ ಬಗ್ಗೆ ಮೃತರ ಸಹೋದರ ಪ್ರಕಾಶ್ ಅವರು ನೀಡಿದ ದೂರಿನಂತೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಂಜಾನ್ ಹಬ್ಬ ಆಚರಣೆ

ಸುಂಟಿಕೊಪ್ಪ : ಸುಂಟಿಕೊಪ್ಪದಲ್ಲಿ ಮುಸ್ಲಿಮರ ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ವಿವಿಧ ಮಸೀದಿಗಳಲ್ಲಿ ಮುಸ್ಲಿಮರು ಶ್ರದ್ಧಾ ಭಕ್ತಿಯಿಂದ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸುವ ಮೂಲಕ ಪರಸ್ಪರ ಆಲಂಗಿಸಿಕೊಂಡು ಶುಭಾಶಯ ವಿನಿಮಯಗೊಳಿಸುವುದರೊಂದಿಗೆ ಸಡಗರ ಸಂಭ್ರಮದಿಂದ ರಂಜಾನ್ ಹಬ್ಬವನ್ನು ಆಚರಿಸಿಕೊಂಡರು.

ಶುಕ್ರವಾರ ದಂದು ರಂಜಾನ್ ಈದ್‌ಉಲ್ ಫಿತ್ರ್ ಅಂಗವಾಗಿ ಪಟ್ಟಣದಲ್ಲಿ ಹೊಸ ಉಡುಪುಗಳನ್ನು ತೊಟ್ಟು ಒಬ್ಬರಿಗೊಬ್ಬರು ಈದ್‌ಉಲ್ ಫಿತ್ರ್ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವುದು ಮುಂಜಾನೆ ಕಂಡು ಬಂತು. ಸುಂಟಿಕೊಪ್ಪ ಪಟ್ಟಣದ ಸುನ್ನಿ ಶಾಫಿ ಜುಮ್ಮಾ ಮಸ್ಜಿದ್‌ನಲ್ಲಿ ಇಬ್ರಾಹಿಂ ಅಹ್ಸನಿ,ಸುನ್ನಿ ಹನಫಿ ಮುಸ್ಲಿಂ ಜಮಾಅತ್ ಹಫೀಜ್ ಜುಬೇರ್,ಸುನ್ನಿ ಶಾಫಿ ಜುಮಾ ಮಸ್ಜಿದ್ ಧಾರ್ಮಿಕ ಮೌಲವಿ ಸಾಲಿಮ್, ಕಟ್ಟ ಮಸ್ಜಿದ್ ಮೌಲಾನ ಇಸಾಂ, ಗದ್ದೆಹಳ್ಳದ ನೂರು ಜುಮ್ಮ ಮಸ್ಜಿದ್‌ನಲ್ಲಿ ಅಬ್ದುಲ್ ಅಜೀಜ್ ಸಖಾಫಿ ಅವರುಗಳು ಹಬ್ಬದ ವಿಶೇಷ ಧಾರ್ಮಿಕ ಪ್ರವಚನ ನೀಡಿದರು.



ಉಡುಪಿ ಜಿಲ್ಲೆಯ ಕೋಟ ಕೋಡಿ ಕನ್ಯಾಣದ ಅಯೋಧ್ಯ ಫ್ರೆಂಡ್ಸ್ ಸಂಸ್ಥೆಯ ಆಶ್ರಯದಲ್ಲಿ ಅಯೋಧ್ಯಾ ಉತ್ಸವ-2026ರ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಸಂಸ್ಥೆಯ ಮಾರ್ಗದರ್ಶಕ ಶಂಕರ್ ಕುಂದರ್ ಹಾಗೂ ಜಗನ್ನಾಥ್ ಅಮೀನ್‌ರವರು ಬಿಡುಗಡೆಗೊಳಿಸಿ ಶುಭ ಹಾರೈಸಿದರು.

ಜಾನುವಾರು ಕಳವು ಪ್ರಕರಣ ಬೇಧಿಸಿದ ಪೊಲೀಸರು
ಪಾರಿವಾಳ ನಿಸಾರ್ ಸಹಿತ ಇಬ್ಬರ ಬಂಧನ





ಕೈಕಂಬ: ಕಳೆದ ಬುಧವಾರ ಎಡಪದವಿನ ಶಾಸ್ತಾವು ಬಳಿಯ ಫಾರ್ಚ್ಯುನರ್ ಕಾರಿನಲ್ಲಿ ದನಗಳನ್ನು ಸಾಗಿಸುವ ಜಾನುವಾರು ಕಳವು ಜಾಲವೊಂದನ್ನು ಪತ್ತೆ ಹಚ್ಚಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇಬ್ಬರು ಆರೋಪಿಗಳನ್ನು ಬಜಪೆ ಪೊಲೀಸರು ಬಂಧಿಸಿದ್ದಾರೆ.

ಮಂಗಳೂರು ತಾಲೂಕು ಪೆರ್ಮುದೆ ಭಟ್ರಕೆರೆ ಪಡೀಲ್ ಹೌಸ್ ಬಿಕೆ ಹೌಸ್ ನಿವಾಸಿ ನಿಸಾರ್ ಯಾನೆ ನಿಸಾರುದ್ದೀನ್ ಯಾನೆ ಪಾರಿವಾಳ ನಿಸಾರ್(28) ಮತ್ತು ಮಂಗಳೂರು ತಾಲೂಕು ಉಳಾಯಿಬೆಟ್ಟು ಪೆರ್ಮಂಕಿ ಅಕ್ಕೋಡಿ ಹೌಸ್ ನಿವಾಸಿ ಮೊಹಮ್ಮದ್ ಜಮಾಲುದ್ದೀನ್ ಯಾನೆ ಜಮಾಲ್(24) ಬಂಧಿತ ಆರೋಪಿಗಳು.

ಕಳೆದ ಬುಧವಾರ ಮುಂಜಾನೆ ನಾಲ್ಕು ಗಂಟೆಗೆ ಪೊಲೀಸ್ ಠಾಣಾ ವ್ಯಾಪ್ತಿಯ ಎಡಪದವು ಸಮೀಪದ ಶಾಸ್ತಾವು ದೇವಸ್ಥಾನದ ಬಳಿ ಬಿಳಿ ಬಣ್ಣದ ಫಾರ್ಚ್ಯುನರ್ ಕಾರಿನಲ್ಲಿ ಕೈಕಾಲು ಕಟ್ಟಿ ಹಿಂಸಾತ್ಮಕವಾಗಿ ದನಗಳನ್ನು ಸಾಗಾಟ ಮಾಡಲಾಗುತ್ತಿದೆ ಎಂದು ಬಂದ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ಧಾಳಿ ನಡೆಸಿದ್ದು, ಈ ವೇಳೆ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು. ಕೆಎ 51ಎಎನ್ 8967 ನೊಂದಣಿ ಸಂಖ್ಯೆಯ ಕಾರಿನಲ್ಲಿ ಹಿಂಸಾತ್ಮಕವಾಗಿ ದನಗಳನ್ನು ತುಂಬಿಸಿದ್ದು ಪತ್ತೆಯಾಗಿತ್ತು.

ಅಂದಾಜು 8ಲಕ್ಷ ಮೌಲ್ಯದ ಕಾರು ಮತ್ತು ನಾಲ್ಕು ದನಗಳ ಸಹಿತ ಒಟ್ಟು 8 ಲಕ್ಷ 42 ಸಾವಿರ ಮೌಲ್ಯದ ಸೊತ್ತುಗಳನ್ನು ವಶಕ್ಕೆ ಪಡೆದುಕೊಂಡು ಎಫ್ ಐ ಆರ್ ದಾಖಲಿಸಿಕೊಂಡಿದ್ದರು.

ಎ.ಸಿ.ಪಿ ಶ್ರೀಕಾಂತ್ ಮತ್ತು ಬಜಪೆ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಬಾಲಕೃಷ್ಣ ರವರ ಮಾರ್ಗದರ್ಶನದಲ್ಲಿ ಬಜಪೆ ಠಾಣಾ ಪಿ.ಎಸ್.ಐ ಶ್ರೀಮತಿ ಲತಾ ಮತ್ತು ಸಿಬ್ಬಂದಿಗಳಾದ ರಾಜೇಶ್, ಚಿದಾನಂದ, ಪ್ರಕಾಶ್ ದಾಳಿಯಲ್ಲಿ ಪಾಲ್ಗೊಂಡಿದ್ದರು.

ಪುತ್ತೂರು ನರೇಂದ್ರ ಕಾಲೇಜಿನಲ್ಲಿ ಆಶಾ ಕಾರ್ಯಕರ್ತೆಯರ ಸಮಾವೇಶ
ಆರೋಗ್ಯ ಇಲಾಖೆಗೆ ತಳಪಾಯ

ಪುತ್ತೂರು: ಆರೋಗ್ಯ ಇಲಾಖೆ ಅಂದರೆ ಅಲ್ಲಿ ವೈದ್ಯರು, ಶುಶ್ರೂಷಕಿಯರು ಮಾತ್ರವಲ್ಲ. ಇಲಾಖೆಯಲ್ಲಿ ವೈದ್ಯರ ಸೇವೆ ಶೇ. 5ರಷ್ಟು ಮಾತ್ರ. ಆಶಾ ಕಾರ್ಯಕರ್ತೆಯರೇ ಆರೋಗ್ಯ ಇಲಾಖೆಯ ಭದ್ರ ತಳಪಾಯ. ಅವರಿಲ್ಲದೆ ಇಲಾಖೆಯ ಯಾವುದೇ ಕೆಲಸವಿಲ್ಲ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ದೀಪಕ್ ರೈ ಹೇಳಿದರು.

ಸಂಸ್ಕಾರ ಭಾರತೀ ದ.ಕ ಜಿಲ್ಲೆ, ಇನ್ನರ್‌ವೀಲ್ ಕ್ಲಬ್ ಪುತ್ತೂರು ಇದರ ಜಂಟಿ ಆಶ್ರಯದಲ್ಲಿ ಪುತ್ತೂರು ರೋಟರಿ ಮೆಮೊಗ್ರಾಫಿ ಸೆಂಟರ್‌ನ ಸಹಯೋಗದಲ್ಲಿ ಶನಿವಾರ ತೆಂಕಿಲ ನರೇಂದ್ರ ಪದವಿ ಪೂರ್ವ ಕಾಲೇಜಿನ ಹಂಸಧ್ವನಿ ವೇದಿಕೆಯಲ್ಲಿ ನಡೆದ 'ಭರವಸೆ ಆಶಾ' ಆಶಾ ಕಾರ್ಯಕರ್ತೆಯರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಆಶಾ ಕಾರ್ಯಕರ್ತೆಯರ ಕೆಲಸದ ಮಹತ್ವ ಬಗ್ಗೆ ಅರಿವಿರುವುದು ಆರೋಗ್ಯ ಇಲಾಖೆಗೆ ಮಾತ್ರ. ಹಲವು ಸಂಕಷ್ಟಗಳನ್ನು ಎದುರಿಸಿಕೊಂಡು ಅವರು ಕೆಲಸ ಮಾಡುತ್ತಾರೆ. ಮಳೆ, ಬಿಸಿಲು ಎನ್ನದೆ ಮನೆ ಮನೆ ಭೇಟಿ ಮಾಡಿ, ನಂತರ ಮನೆ ಭೇಟಿ ವಿಚಾರಗಳನ್ನು ಆ್ಯಪ್ ಮೂಲಕ ದಾಖಲಿಸುತ್ತಾರೆ. ತಂತ್ರಜ್ಞಾನದ ಬಗ್ಗೆ ಅರಿವಿಲ್ಲದವರು ತಮ್ಮ ಮಕ್ಕಳ ಮೂಲಕ ದಾಖಲಿಸಿ ತಮ್ಮ ಕೆಲಸವನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೆ. ಅವರ ಸೇವೆಗೆ



ಕನಿಷ್ಠ ಸಂಭಾವನೆ ಮಾತ್ರ ನೀಡುತ್ತಿದೆ. ಆರೋಗ್ಯ ಇಲಾಖೆಯ ಕೆಲಸಗಳ ಜೊತೆಗೆ ಇತರ ಇಲಾಖೆಯ ಕೆಲಸ ನಿರ್ವಹಿಸುತ್ತಿದ್ದಾರೆ ಎಂದರು. ಆಶಾ ಕಾರ್ಯಕರ್ತೆಯರನ್ನು ಸೇವೆಯಿಂದ ವಜಾಗೊಳಿಸಲು ಶೇ. 100ರಷ್ಟು ಸಾಧ್ಯವಿಲ್ಲ. ವೈದ್ಯರ ಸಂಘ ನಿಮ್ಮ ಜೊತೆಯಿದೆ ಎಂದ ಭರವಸೆ ನೀಡಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರತಿನಿಧಿ ಸಭೆಯ ಆಮಂತ್ರಿತ ಸದಸ್ಯ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಮಾತನಾಡಿ, ಪ್ರತಿ ಮನೆ ಮನೆಗಳಿಗೆ ಭೇಟಿ ನೀಡಿ ಅಲ್ಲಿನ ಜನರ ಆರೋಗ್ಯದ ಬಗ್ಗೆ ವಿಚಾರಿಸಿ ಇಲಾಖೆಗೆ ವರದಿ ನೀಡುತ್ತಿರುವ ಆಶಾ ಕಾರ್ಯಕರ್ತೆಯರ ಕಾರ್ಯವು ಥ್ಯಾಂಕ್‌ಫುಲ್ ಆಗಿದೆ. ಇಲಾಖೆಯ ಕೆಲಸದ ಜೊತೆಗೆ ಮನೆಯವರನ್ನು ಸ್ವಚ್ಛತೆ, ಪರಿಸರ ಸಂರಕ್ಷಣೆ, ಸಂಸ್ಕಾರಗಳ ಬಗ್ಗೆ ಭಾವನಾತ್ಮಕವಾಗಿ ಜಾಗೃತಿ ಮೂಡಿಸುವ ಕೆಲಸವಾಗಬೇಕು. ಉತ್ತಮ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಬೇಕು. ನಿಮ್ಮ ಜಾಗೃತಿಯ ಮೂಲಕ ಜನರ ಜೀವನ ಶೈಲಿ ಬದಲಾಗಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ವೈದ್ಯರಾದ ಡಾ. ಶ್ರುತಿ ಅಲೆವೂರು ಅವರು ಮಹಿಳೆಯಲ್ಲಿ ಕಾಡುತ್ತಿರುವ ಗರ್ಭ ಕಂಠದ ಕ್ಯಾನ್ಸರ್ ಮತ್ತು ಡಾ. ಸ್ಮಿತಾ ರಾವ್ ಸ್ತನ ಕ್ಯಾನ್ಸರ್ ರೋಗಗಳ ಲಕ್ಷಣ, ಮುನ್ನೆಚ್ಚರಿಕಾ ಕ್ರಮಗಳು, ಅದರ ಚಿಕಿತ್ಸೆ, ಔಷಧಿಗಳು ಹಾಗೂ ತಡೆಗಟ್ಟುವ ಕ್ರಮಗಳ ಬಗ್ಗೆ ವಿಸ್ತೃತ ಮಾಹಿತಿ ನೀಡಿದರು.

ಶಂಕರ್ ಗ್ರೂಪ್ ಆಫ್ ಕಂಪನಿಯ ನಿರ್ದೇಶಕಿ ರಂಜಿತಾ ಶಂಕರ್, ಇನ್ನರ್ ವೀಲ್ ಕ್ಲಬ್ ಕಾರ್ಯದರ್ಶಿ ಸಂಧ್ಯಾ ಸಾಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮದ ಬಳಿಕ ವಿವಿಧ ಮನೋರಂಜನಾತ್ಮಕ ಕ್ರೀಡೆಗಳ ನಡೆದು ಕೊನೆಯಲ್ಲಿ ಸಹ ಭೋಜನ ನೆರವೇರಿತು.

ಸನ್ಮಾನ

ಕಾರ್ಯಕ್ರಮದಲ್ಲಿ ಹಿರಿಯ ಆಶಾ ಕಾರ್ಯಕರ್ತೆಯರಾದ ಕೆಯ್ಯೂರಿನ ಕಲಾವತಿ ಸಣಂಗಲ ಹಾಗೂ ಜಿಡೆಕಲ್ಲಿನ ಸುನಂದ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ವಿದುಷಿ ಪ್ರೀತಿಕಲಾ ಪ್ರಾರ್ಥಿಸಿದರು. ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ರೂಪಲೇಖಾ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಶಂಕರಿ ಶರ್ಮ ಸನ್ಮಾನಿತರ ಪರಿಚಯ ಮಾಡಿದರು. ಸಂಸ್ಕಾರ ಭಾರತೀ ಜಿಲ್ಲಾ ಉಪಾಧ್ಯಕ್ಷ ದತ್ತಾತ್ರೇಯ ರಾವ್ ವಂದಿಸಿದರು. ಶೋಭಾ ಕೊಳತ್ತಾಯ ಕಾರ್ಯಕ್ರಮ ನಿರ್ವಹಿಸಿದರು.

ಮನೆಯ ಗೇಟ್‌ಗೆ ಡಿಕ್ಕಿ: ಜಿಂಕೆಯ ದಾರುಣ ಸಾವು

ಕೋಟ: ನಾಯಿ ಅಟ್ಟಿಸಿಕೊಂಡು ಬಂದ ಪರಿಣಾಮ ಜಿಂಕೆಯೊಂದು ಗೇಟಿಗೆ ಬಡಿದು ಜಿಂಕೆಯೊಂದನ್ನು ನಾಯಿ ಅಟ್ಟಿಸಿಕೊಂಡು ಬಂದು ಸಾವನ್ನಪ್ಪಿರುವ ಘಟನೆ ಐರೋಡಿ ಪಂಚಾಯತ್ ವ್ಯಾಪ್ತಿಯ ಬಾಳ್ಕುದ್ರು ಗ್ರಾಮದಲ್ಲಿ ಶನಿವಾರ ಸಂಭವಿಸಿದೆ.



ಜಿಂಕೆಯೊಂದನ್ನು ನಾಯಿ ಅಟ್ಟಿಸಿಕೊಂಡು ಬರುವ ಸಂದರ್ಭದಲ್ಲಿ ಜಿಂಕೆಯು ರಭಸದಿಂದ ಓಡಿ ಸಮಾಜ ಸೇವಕ ಹೆಚ್.ಇಬ್ರಾಹಿಂ ಸಾಹೇಬ್ ಅವರ ಮನೆಯ ಗೇಟ್‌ಗೆ ಡಿಕ್ಕಿ ಹೊಡೆದ ಪರಿಣಾಮ ಅದರ ಕೊಂಬಿಗೆ ಬಲವಾದ ಹೊಡೆತ ಬಿದ್ದು ಸ್ಥಳದಲ್ಲಿ ನರಳಾಡುತ್ತಿರುವುದನ್ನು ಕಂಡ ಸ್ಥಳೀಯರಾದ ಡೆನ್ನೀಸ್ ಡಿಸೋಜಾ ಅದರ ಉಳಿವಿಗಾಗಿ ಅರಣ್ಯ ಇಲಾಖೆಯವರಿಗೆ ಶೀಘ್ರವಾಗಿ ಕರೆ ಮಾಡಿ ಮಾಹಿತಿಯನ್ನು ತಿಳಿಸಿದರು. ನಂತರ ಸ್ಥಳೀಯ ಗ್ರಾಮಸ್ಥರು ಜಿಂಕೆಗೆ ನೀರನ್ನು ಕುಡಿಸಿ ಬದುಕಿಸುವ ಪ್ರಯತ್ನ ಮಾಡಿದ್ದು ಪ್ರಯತ್ನ ವಿಫಲವಾಗಿ ಜಿಂಕೆ ಸ್ಥಳದಲ್ಲೇ ಸಾವನ್ನಪ್ಪಿದೆ. ಬಳಿಕ ಅರಣ್ಯ ಇಲಾಖೆಯ ಸಿಬ್ಬಂದಿಯವರು ಸ್ಥಳಕ್ಕೆ ಆಗಮಿಸಿ ಸ್ಥಳ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಘಟನಾ ಸ್ಥಳದಲ್ಲಿ ಸ್ಥಳೀಯರಾದ ರವೀಂದ್ರ ಸುವರ್ಣ, ಐರೋಡಿ ಪಂಚಾಯತ್‌ನ ಪಶು ಸಖಿ ಎಸ್.ಪ್ರೇಮಾ ಪೂಜಾರಿ, ಸತೀಶ್ ಸಾಲಿಕ, ಹೊಟೇಲ್ ಚಂದ್ರ ಪೂಜಾರಿ ಹಾಗೂ ಉಷಾ, ರವಿ ಪೂಜಾರಿ ಮತ್ತಿತರರು ಉಪಸ್ಥಿತರಿದ್ದರು.

ದೇರಳಕಟ್ಟೆ ಕೆಎಸ್ ಹೆಗ್ಡೆ ಆಸ್ಪತ್ರೆ: ದೊಡ್ಡ ಅಂಡಾಶಯ ಕೋಶದ ಯಶಸ್ವಿ ಶಸ್ತ್ರಚಿಕಿತ್ಸೆ



ಉಳ್ಳಾಲ: ಇಲ್ಲಿನ ದೇರಳಕಟ್ಟೆಯ ಜಸ್ಟೀಸ್ ಕೆ.ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯಲ್ಲಿ ಈಗಾಗಲೇ ಎರಡು ಹೆರಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುವ ರೋಗಿಯೊಬ್ಬರಲ್ಲಿ ಪತ್ತೆಯಾಗಿರುವ ದೊಡ್ಡ ಅಂಡಾಶಯದ ಸಿಸ್ಟ್ ಅನ್ನು ತೆಗೆದು ಹಾಕಲು 6.5X25.5X28.5 ಸೆಂ.ಮೀ ಅಳತೆಯ ದೊಡ್ಡ ಗಾತ್ರದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಲಾಯಿತು.

ಲ್ಯಾಪರೋಟಮಿ ಮೂಲಕ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿ ಸುಮಾರು 8 ಕಿಲೋಗ್ರಾಂ 300 ಗ್ರಾಂ ತೂಕದ ದೊಡ್ಡ ಎಡ ಅಂಡಾಶಯ ಸಿಸ್ಟ್ ಅನ್ನು ತುಂಡಾಗದಂತೆ ತೆಗೆದು ಹಾಕುವುದರ ಜೊತೆಗೆ ಸಂಪೂರ್ಣ ಗರ್ಭಾಶಯ (ಟೋಟಲ್ ಹಿಸ್ಟೆರೆಕ್ಟಮಿ)ಮತ್ತು ಬಲ ಅಂಡಾಶಯ (ಊಫರೆಕ್ಟಮಿ ಮತ್ತು ಸಲ್ಪಿಂಜೆಕ್ಟಮಿ)ವನ್ನು ತೆಗೆದುಹಾಕಲಾಯಿತು. ಈ ಸಂದರ್ಭದಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥರಾದ ಪ್ರೊ. ಡಾ. ಪ್ರಸನ್ನ ಕುಮಾರ್ ಶೆಟ್ಟಿ ಕೆ., ಡಾ. ಪೂಜಿತ ಮೂರ್ತಿ, ಸಹಾಯಕ ಪ್ರಾಧ್ಯಾಪಕರು, ಅನಸ್ತೇಶಿಯಾ ವಿಭಾಗದ ಪ್ರೊಫೆಸರ್, ವಿಭಾಗ ಮುಖ್ಯಸ್ಥರಾದ ಡಾ. ಅವನೀಶ್ ಭಂಡಾರಿ ಉಪಸ್ಥಿತರಿದ್ದರು .

ಸವಾಲಿನ ಶಸ್ತ್ರಚಿಕಿತ್ಸೆ ಇದು

ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಪ್ರೊಫೆಸರ್ ಡಾ. ವಿಜಯಾ ಎಂ. ರೇವಣಕರ್ ಅವರ ಮಾರ್ಗದರ್ಶನದಲ್ಲಿ, ಡಾ. ಪೂರ್ವಿಕಾ ಆಚಾರ್ಯರ ಸಹಕಾರದೊಂದಿಗೆ ಈ ಕ್ಲಿಷ್ಟಕರವಾದ ಸವಾಲಿನ ಶಸ್ತ್ರಚಿಕಿತ್ಸೆಯನ್ನು ನಡೆಸಿದ್ದು, ಅರಿವಳಿಕೆ ತಜ್ಞ ವಿಭಾಗದ ಡಾ. ಆತ್ಮಿಕ ಮತ್ತು ಆಪರೇಷನ್ ಥಿಯೇಟರ್ ಸಿಬ್ಬಂದಿ ನರ್ಸ್ ಮಿಸ್ ದಿಲ್ಜಾ ಶಸ್ತ್ರಚಿಕಿತ್ಸೆಯ ಯಶಸ್ಸಿಗೆ ಸಹಕರಿಸಿದ್ದಾರೆ. ' ರೋಗಿ ಯಾವುದೇ ಸಮಸ್ಯೆ ಗಳಿಲ್ಲದೆ ಚೇತರಿಸಿಕೊಂಡಿದ್ದಾರೆ.

ವೈದ್ಯಕೀಯ ತಂಡಕ್ಕೆ ಅಭಿನಂದನೆ ಸಲ್ಲಿಕೆ

ಕ್ಷೇಮ ಮೆಡಿಕಲ್ ಅಕಾಡೆಮಿಯ ಡೀನ್ ಡಾ. ಬಿ. ಸಂದೀಪ್ ರೈ ಮತ್ತು ಕೆ.ಎಸ್. ಹೆಗ್ಡೆ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಸುಮಲತಾ. ಆರ್. ಶೆಟ್ಟಿ ವೈದ್ಯಕೀಯ ತಂಡವನ್ನು ಅಭಿನಂದಿಸಿದ್ದಾರೆ.

ಪೆರ್ಮುದೆ ಜಯಪ್ರಕಾಶ್ ಶೆಟ್ಟಿಗೆ ಆರಾಧನಾ ಪ್ರಶಸ್ತಿ 2026 ಪ್ರದಾನ

ಬಂಟ್ವಾಳ: ಬಿ.ಸಿ.ರೋಡ್ ಬೈಪಾಸ್‌ನ ಆರಾಧನಾ ಫ್ರೆಂಡ್ಸ್ ಸರ್ಕಲ್ ವತಿಯಿಂದ 38ನೇ ವಾರ್ಷಿಕೋತ್ಸವ ಪ್ರಯುಕ್ತ ಯಕ್ಷಗಾನ ಬಯಲಾಟ, ಸನ್ಮಾನ ಸಮಾರಂಭ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಬಿ.ಸಿ. ರೋಡಿನ ಸ್ಪರ್ಶ ಕಲಾ ಮಂದಿರದಲ್ಲಿ ನಡೆಯಿತು.

ಇದೇ ವೇಳೆ ಕೆ. ಮರಿಯಪ್ಪಯ್ಯ ಹೊಳ್ಳ ಮತ್ತು ಲಕ್ಷ್ಮಮ್ಮ ಸ್ಮರಣಾರ್ಥ "ಆರಾಧನಾ ಪ್ರಶಸ್ತಿ 2026"ನ್ನು ಯಕ್ಷಗಾನದ ಮೇರು ಕಲಾವಿದ ಪೆರ್ಮುದೆ ಜಯಪ್ರಕಾಶ್ ಶೆಟ್ಟಿ ಅವರಿಗೆ ಪ್ರದಾನ ಮಾಡಲಾಯಿತು.

ನಮ್ಮ ನೆಲದ ಹೆಮ್ಮೆಯ ಕಲೆ

ಅತಿಥಿಯಾಗಿ ಭಾವಹಿಸಿದ್ದ ಮಾಜಿ ಸಚಿವ ಬಿ. ರಮಾನಾಥ ರೈ ಪ್ರಶಸ್ತಿ ಪ್ರದಾನಗೈದು ಮಾತನಾಡಿ, ಯಕ್ಷಗಾನ ನಮ್ಮ ನೆಲದ ಹೆಮ್ಮೆಯ ಕಲೆಯಾಗಿದ್ದು, ಅದನ್ನು ಉಳಿಸಿ ಬೆಳೆಸುವಲ್ಲಿ ಸಂಘ, ಸಂಸ್ಥೆಗಳು ಹಾಗೂ ಪ್ರಜ್ಞಾವಂತ ಪ್ರೇಕ್ಷಕರ ಪಾತ್ರ ಹಿರಿದು ಎಂದರು. ಕಳೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಸ್ಥಳೀಯ ವಿದ್ಯಾರ್ಥಿನಿ ಪ್ರಾರ್ಥನಾ ಎಸ್. ರಾವ್ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ರೋಟರಿ ಜಿಲ್ಲಾ ಮಾಜಿ ಗವರ್ನರ್ ಎನ್. ಪ್ರಕಾಶ್ ಕಾರಂತ, ಬುಡಾ ಅಧ್ಯಕ್ಷ ಬೇಬಿ ಕುಂದರ್, ಜಿ.ಪಂ ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ ತುಂಬೆ, ಬಂಟ್ವಾಳ ತಾಲೂಕು ಬಿಲ್ಲವ ಸಂಘದ ಉಪಾಧ್ಯಕ್ಷ ಜಯಪ್ರಕಾಶ್ ಜೆ.ಎಸ್, ಯುವವಾಹಿನಿ ಮಾಜಿ ಅಧ್ಯಕ್ಷ ಹರೀಶ್ ಕೋಟ್ಯಾನ್ ಕುದನೆ, ಬಂಟ್ವಾಳ ವಲಯ ಗ್ಯಾರೇಜ್ ಮಾಲೀಕರ ಸಂಘದ ಅಧ್ಯಕ್ಷ ಸುಧೀರ್ ಕುಮಾರ್, ಪ್ರಮುಖರಾದ ಗಣಪತಿ ಸೋಮಯಾಜಿ, ಸುಧಾಕರ ಹೊಳ್ಳ, ಸುರೇಶ್ ಹೊಳ್ಳ, ನರೇಶ್ ಹೊಳ್ಳ, ಪ್ರಕಾಶ್ ಪೂಂಜರಕೋಡಿ, ಯೋಗೀಶ್ ಪೂಂಜಕೋಡಿ, ಸಂಜೀವ ಕೊಟ್ಟಾರಿ, ರಾಮಚಂದ್ರ ಮಯ್ಯ, ಗಣೇಶ್ ಪೂಂಜರಕೋಡಿ ಮತ್ತು ಸರ್ವಸದಸ್ಯರು ಉಪಸ್ಥಿತರಿದ್ದರು, ಜಗದೀಶ ಹೊಳ್ಳ ಕಾರ್ಯಕ್ರಮ ನಿರ್ವಹಿಸಿದರು. ಈ ಸಂದರ್ಭ ಹನುಮಗಿರಿ ಶ್ರೀ ಕೋದಂಡರಾಮ ಕೃಪಾಪೋಷಿತ ಯಕ್ಷ ಗಾನ ಮಂಡಳಿ ವತಿಯಿಂದ ಸುಧನ್ವ ಬಬ್ರುವಾಹನ ವೀರವರ್ಮ ಎಂಬ ಪೌರಾಣಿಕ ಪ್ರಸಂಗದ ಬಯಲಾಟ ನಡೆಯಿತು.



ಕಲಾವಿದರು ಜನರ ಆಸ್ತಿ: ಪೆರ್ಮುದೆ

ಪ್ರಶಸ್ತಿ ಸ್ವೀಕರಿಸಿದ ಕಲಾವಿದ ಜಯಪ್ರಕಾಶ ಶೆಟ್ಟಿ ಅವರು ಮಾತನಾಡಿ, ಆರಾಧನಾ ಫ್ರೆಂಡ್ಸ್ ಕಳೆದ ಮೂವತ್ತೆಂಟು ವರ್ಷಗಳಿಂದ ಚಟುವಟಿಕೆಯಲ್ಲಿದ್ದು, ಯಕ್ಷಗಾನ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುತ್ತಾ ಬಂದಿದೆ. ಕಲಾವಿದರು ಜನರ ಆಸ್ತಿಯಾಗಿದ್ದು, ಅವರ ಅಭಿಮಾನದಿಂದ ಮತ್ತಷ್ಟು ರಂಗದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದರು.

ತೆಂಕುತಿಟ್ಟಿನ ಅಗ್ರಮಾನ್ಯ ಕಲಾವಿದ ಸೂರಿಕುಮೇರು ಕೆ. ಗೋವಿಂದ ಭಟ್ ನಿಧನಕ್ಕೆ ಗಣ್ಯರ ಸಂತಾಪ

ಮಂಗಳೂರು: ತೆಂಕುತಿಟ್ಟು ಯಕ್ಷಗಾನದ ಅಗ್ರಮಾನ್ಯ ಕಲಾವಿದರಾಗಿದ್ದ ಸೂರಿಕುಮೇರು ಕೆ. ಗೋವಿಂದ ಭಟ್ ನಿಧನ ಯಕ್ಷಗಾನ ಕಲಾ ಲೋಕಕ್ಕೆ ತುಂಬಲಾರದ ನಷ್ಟವಾಗಿದ್ದು, ನಾಡಿನ ವಿವಿಧ ಗಣ್ಯರು ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

ಶಾಸಕ ಬಿ. ವೈ. ವಿಜಯೇಂದ್ರ

ತೆಂಕುತಿಟ್ಟು ಯಕ್ಷಗಾನ ರಂಗದ ಮೇರು ಕಲಾವಿದ, ಕಲಾತಪಸ್ವಿ– ಯಕ್ಷರಂಗದ ಭೀಷ್ಮ ಸೂರಿಕುಮೇರು ಕೆ. ಗೋವಿಂದ ಭಟ್ ಅವರ ನಿಧನದ ಸುದ್ದಿ ನೋವುಂಟು ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಸಂತಾಪ ಸೂಚಿಸಿದ್ದಾರೆ.

ಯಕ್ಷಗಾನ ಕ್ಷೇತ್ರದ 'ನಡೆದಾಡುವ ವಿಶ್ವಕೋಶ, 'ದಶಾವತಾರಿ' ಎಂದೇ ಖ್ಯಾತರಾಗಿದ್ದ ಗೋವಿಂದ ಭಟ್, ತೆಂಕುತಿಟ್ಟು ಯಕ್ಷಗಾನ ಇದುವರೆಗೆ ಕಂಡ ಸರ್ವಶ್ರೇಷ್ಠ ಕಲಾವಿದರು ಎನಿಸಿಕೊಂಡಿದ್ದರು. ಯಕ್ಷಗಾನದಲ್ಲಿ ಅನೇಕ ಶಿಷ್ಯರನ್ನು ಅವರು ಹುಟ್ಟುಹಾಕಿದ್ದಾರೆ. ಧರ್ಮಸ್ಥಳ ಯಕ್ಷಗಾನ ಮೇಳದ ಪ್ರಮುಖ ಕಲಾವಿದರಾಗಿ, ಒಂದೇ ಮೇಳದಲ್ಲಿ 54 ವರ್ಷಗಳಿಗೂ ಹೆಚ್ಚು ಕಾಲ ತಿರುಗಾಟ ನಡೆಸಿ ದಾಖಲೆ ಮೆರೆದವರು. ಜೊತೆಗೆ ಮೂಲ್ಕಿ, ಕೂಡ್ಲು, ಸುರತ್ಕಲ್, ಇರಾ ಸೋಮನಾಥೇಶ್ವರ ಮೇಳಗಳಲ್ಲಿ ತಿರುಗಾಟ ನಡೆಸಿದ್ದ ಅವರಿಗೆ ಅನೇಕ ಪ್ರಶಸ್ತಿಗಳು ಲಭಿಸಿದ್ದವು ಎಂದು ಅವರು ನೆನಪಿಸಿಕೊಂಡಿದ್ದಾರೆ.


ಡಿ. ವೀರೇಂದ್ರ ಹೆಗ್ಗಡೆ

ಹಿರಿಯ ಯಕ್ಷಗಾನ ಕಲಾವಿದರಾಗಿ ಮೆರೆದ ಕೆ. ಗೋವಿಂದ ಭಟ್ ಅವರ ನಿಧನದ ಸುದ್ದಿ ತಿಳಿದು ವಿಷಾದವಾಯಿತು. ನಮ್ಮ ಧರ್ಮಸ್ಥಳ ಮೇಳದಲ್ಲಿ 54 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ ಅವರು, ಹಿರಿಯ ಯಕ್ಷಗಾನ ಕಲಾವಿದರಾಗಿದ್ದ ಕುರಿಯ ವಿಠಲಶಾಸ್ತ್ರಿ ಅವರಲ್ಲಿ ಯಕ್ಷಗಾನ ಹಾಗೂ ನಾಟ್ಯದಲ್ಲಿ ತರಬೇತಿ, ಮಾರ್ಗದರ್ಶನ ಪಡೆದು ಪ್ರಬುದ್ಧ ಕಲಾವಿದರಾಗಿ ಮೆರೆದರು. ಅವರ ಕೌರವ, ಬಾಹುಬಲಿ, ಇಂದ್ರಜಿತು, ಕರ್ಣ, ಅರ್ಜುನ, ದೇವೇಂದ್ರ ಮೊದಲಾದ ಪಾತ್ರಗಳು ಅವರಿಗೆ ವಿಶೇಷ ಮನ್ನಣೆ, ಗೌರವ ತಂದುಕೊಟ್ಟಿವೆ.

ಅವರ ಉತ್ತಮ ವಾಕ್‌ಚಾತುರ್ಯ, ಪ್ರೌಢ ಅಭಿನಯ, ಪ್ರಬುದ್ಧ, ವಿದ್ವತ್ಪೂರ್ಣ ಹಾಗೂ ಅರ್ಥಗರ್ಭಿತ ಮಾತುಗಳು ಪ್ರೇಕ್ಷಕರ ವಿಶೇಷ ಮೆಚ್ಚುಗೆಗೆ ಪಾತ್ರವಾಗಿವೆ. ಧರ್ಮಸ್ಥಳದಲ್ಲಿ ನಮ್ಮ ಯಕ್ಷಗಾನತರಬೇತಿಕೇಂದ್ರದಲ್ಲಿತರಬೇತುದಾರರಾಗಿ, ಗುರುಗಳಾಗಿ ಸೇವೆ ಸಲ್ಲಿಸಿದ ಅವರು ಪುರಾಣ ವಾಚನ-ಪ್ರವಚನ, ಭಜನಾ ತರಬೇತಿಯಲ್ಲಿಯೂ ಸಂಪನ್ಮೂಲ ವ್ಯಕ್ತಿಯಾಗಿ ಮಾರ್ಗದರ್ಶನ ನೀಡುತ್ತಿದ್ದರು. ಅವರ ನಿಧನ ನಿಜವಾದ ಅರ್ಥದಲ್ಲಿ ಯಕ್ಷಗಾನ ಕ್ಷೇತ್ರಕ್ಕೆ ತುಂಬಲಾರದ ನಷ್ಟವೇ ಆಗಿದೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ಅವರ ಅಗಲುವಿಕೆಯಿಂದ ಕುಟುಂಬವರ್ಗದವರಿಗೆ ಉಂಟಾದ ದುಃಖವನ್ನು ಸಹಿಸುವ ಶಕ್ತಿಯನ್ನಿತ್ತು ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಕೀರಿಕ್ಕಾಡು ಗಣೇಶ ಶರ್ಮ

ತೆಂಕುತಿಟ್ಟು ಯಕ್ಷಗಾನ ಕ್ಷೇತ್ರದ ದಶಾವತಾರಿ ಸೂರಿಕುಮೇರು ಕೆ. ಗೋವಿಂದ ಭಟ್ಟರ ನಿಧನಕ್ಕೆ ಹಿರಿಯ ಯಕ್ಷಗಾನ ಕಲಾವಿದ ಕೀರಿಕ್ಕಾಡು ಗಣೇಶ ಶರ್ಮ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.



ಭಟ್ಟರಅಗಲುವಿಕೆಯಕ್ಷಗಾನಕಲಾರಂಗಕ್ಕೆ ಬಹುದೊಡ್ಡ ನಷ್ಟ ಉಂಟುಮಾಡಿದೆ. ಸೂರಿಕುಮೇರು ಗೋವಿಂದ ಭಟ್ಟರು ನನ್ನ ಯಕ್ಷಗಾನದ ಗುರುಗಳು. ಅವರು ಪಾರಂಪರೀಯ ಶೈಲಿಯಲ್ಲಿ ಹೊಸತನವನ್ನು ರೂಪಿಸುವುದರ ಜೊತೆಗೆ ಯಕ್ಷಗಾನಕ್ಕೆ ವಿಶೇಷ ಆಯಾಮವನ್ನು ತಂದುಕೊಟ್ಟವರು. ಅವರ ಜೊತೆಗೆ ಉದಾರಿ, ಹರಿದಾಸರು, ಉತ್ತಮ ಅರ್ಥದಾರಿಗಳು, ಪ್ರಸಂಗಕರ್ತರೂ ಆಗಿದ್ದ ಗೋವಿಂದ ಭಟ್ಟರ ಕಲಾ ಸೇವೆ ಅನುಪಮ. ಶತಮಾನದ ಅಗ್ರಮಾನ್ಯ ಕಲಾವಿದ ಸಾಲಿನಲ್ಲಿ ಗೋವಿಂದಭಟ್ಟರು ಸದಾ ಶಾಶ್ವತ ಎಂದು ಅವರು ಕಂಬನಿ ಮಿಡಿದಿದ್ದಾರೆ.

ಎಸ್‌ಡಿಎಂ ಯಕ್ಷೋತ್ಸವ ಸಮಿತಿ

ತೆಂಕುತಿಟ್ಟಿನ ಅಗ್ರಮಾನ್ಯ ಕಲಾವಿದ ಸೂರಿಕುಮೇರು ಗೋವಿಂದ ಭಟ್ ಅವರ ನಿಧನಕ್ಕೆ ನಗರದ ಎಸ್‌ಡಿಎಂ ಕಾನೂನು ಕಾಲೇಜು ಯಕ್ಷೋತ್ಸವ ಸಮಿತಿ ಸಂತಾಪ ವ್ಯಕ್ತಪಡಿಸಿದೆ. ಗೋವಿಂದ ಭಟ್ ಅವರ ಅಗಲುವಿಕೆ ಯಕ್ಷಗಾನ ಕ್ಷೇತ್ರಕ್ಕೆ ಅಪಾರ ನಷ್ಟವನ್ನುಂಟುಮಾಡಿದೆ. ತಮ್ಮ ವೃತ್ತಿ ಬದುಕಿನ ಬಹುಪಾಲನ್ನು ಶ್ರೀ ಧರ್ಮಸ್ಥಳ ಮೇಳದಲ್ಲಿ ಕಳೆದ ಗೋವಿಂದ ಭಟ್ಟರು ಸಜ್ಜನಿಕೆಯ ಪ್ರತಿರೂಪ. ಅವರ ಆತ್ಮಕ್ಕೆ ದೇವರು ಚಿರಶಾಂತಿ ಕರುಣಿಸಲಿ ಎಂದು ಸಮಿತಿ ನಿರ್ದೇಶಕರು, ಸಂಚಾಲಕರು ಹಾಗೂ ಸರ್ವ ಸದಸ್ಯರು ಪ್ರಾರ್ಥಿಸಿದ್ದಾರೆ.

ಶ್ರೀಕೃಷ್ಣ ಯಕ್ಷಸಭಾ ಸಂತಾಪ

ಸೂರಿಕುಮೇರು ಗೋವಿಂದ ಭಟ್ ಅವರ ನಿಧನಕ್ಕೆ ಮಂಗಳೂರು ಕದ್ರಿಯ ಶ್ರೀಕೃಷ್ಣ ಯಕ್ಷಸಭಾ ಪರವಾಗಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸುಧಾಕರ ರಾವ್ ಪೇಜಾವರ ಅವರು ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಮಂಗಳೂರು ವಿವಿ ಯಕ್ಷಗಾನ ಅಧ್ಯಯನ ಕೇಂದ್ರ

ತೆಂಕುತಿಟ್ಟು ಯಕ್ಷಗಾನ ರಂಗದ ದಶಾವತಾರಿ ಎಂದೇ ಪ್ರಸಿದ್ಧರಾದ ಸೂರಿಕುಮೇರು ಗೋವಿಂದ ಭಟ್ ನಿಧನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ ಸಂತಾಪ ವ್ಯಕ್ತಪಡಿಸಿದೆ. ಗೋವಿಂದ ಭಟ್, ಯಕ್ಷಗಾನ ಪಾತ್ರಧಾರಿಯಾಗಿ, ಗುರುವಾಗಿ ಯಕ್ಷಕಲೆಯ ಸರ್ವಾಂಗಗಳನ್ನು ಬಲ್ಲ ಕಲಾವಿದರಾಗಿದ್ದರು. ಮೂಲ್ಕಿ, ಕೂಡ್ಲು, ಸುರತ್ಕಲ್, ಕುಂಡಾವು ಹಾಗೂ ಧರ್ಮಸ್ಥಳ ಮೇಳಗಳಲ್ಲಿ ಸುಮಾರು ಏಳು ದಶಕಗಳ ಕಾಲ ತಿರುಗಾಟ ನಡೆಸಿದ್ದ ಅವರು ತೆಂಕು ಹಾಗೂ ಬಡಗು ಎರಡು ತಿಟ್ಟುಗಳಲ್ಲೂ ಯಾವುದೇ ಪಾತ್ರ ನಿಭಾಯಿಸಬಲ್ಲ ಪರಿಪೂರ್ಣ ಕಲಾವಿದ ರಾಗಿದ್ದರು. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರಗಳಿಗೆ ಭಾಜನರಾಗಿದ್ದ ಗೋವಿಂದ ಭಟ್ಟರಿಗೆ 2012 ರಲ್ಲಿ ಮಂಗಳೂರು ವಿವಿಯ ಯಕ್ಷಗಾನ ಅಧ್ಯಯನ ಕೇಂದ್ರದ 'ಯಕ್ಷಮಂಗಳ' ಪ್ರಶಸ್ತಿ ನೀಡಿ ಗೌರವಿಸಿತ್ತು. ಅಲ್ಲದೆ ಉಡುಪಿಯ ಗೋವಿಂದ ವೈಭವ ಸಮಿತಿ ಹಾಗೂ ಯಕ್ಷಗಾನ ಕೇಂದ್ರದ ಸಹಯೋಗದೊಂದಿಗೆ ನಡೆದ 'ಗೋವಿಂದ ವೈಭವ' ಕಾರ್ಯಾಗಾರದ ಮೂಲಕ ಅವರ ವಿವಿಧ ಪಾತ್ರ, ವೈಶಿಷ್ಟ್ಯತೆ, ಹೆಜ್ಜೆಗಾರಿಕೆ, ಅರ್ಥಗಾರಿಕೆಯ ವೈಶಿಷ್ಟ್ಯತೆ ದಾಖಲೀಕರಣ ನಡೆಸಿದೆ. ಹಿರಿಯ ಸರ್ವಾಂಗೀಣ ಕಲಾವಿದ ಗೋವಿಂದ ಭಟ್ ನಿಧನದಿಂದ ಯಕ್ಷಗಾನ ರಂಗವು ಅಮೂಲ್ಯ ಕಲಾರತ್ನವೊಂದನ್ನು ಕಳೆದುಕೊಂಡಿದೆ ಎಂದು ಕೇಂದ್ರದ ನಿರ್ದೇಶಕರಾದ ಡಾ. ಧನಂಜಯ ಕುಂಬ್ಳೆ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಸಾಹಿತ್ಯ ಪರಿಷತ್ತು

ಯಕ್ಷಗಾನ ಕ್ಷೇತ್ರದ ಅಪೂರ್ವ ಕಲಾವಿದ, ದಶಾವತಾರಿ, ಸೂರಿಕುಮೇರು ಕೆ. ಗೋವಿಂದ ಭಟ್ ನಿಧನಕ್ಕೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ ಸಂತಾಪ ವ್ಯಕ್ತಪಡಿಸಿದೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಮತ್ತು ಅವರ ಕುಟುಂಬಕ್ಕೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಅಧ್ಯಕ್ಷ ಡಾ. ಎಂ. ಪಿ.ಶ್ರೀನಾಥ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಪ್ರದೀಪ ಕುಮಾರ ಕಲ್ಕೂರ

ಪಾರಂಪರಿಕ ಯಕ್ಷಗಾನ ರಂಗದ ಹಿರಿಯ ವೇಷಧಾರಿ ಕೆ. ಗೋವಿಂದ ಭಟ್ ಅವರ ನಿಧನಕ್ಕೆ ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಎಸ್. ಪ್ರದೀಪ ಕುಮಾರ ಕಲ್ಕೂರ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಪ್ರಾಯೋಜಿತ ಅಕಾಡೆಮಿ ಪ್ರಶಸ್ತಿ, ಪೇಜಾವರ ವಿಶ್ವೇಶತೀರ್ಥ ಜೀವಮಾನ ಸಾಧನಾ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ವಿದ್ವತ್ ಸನ್ಮಾನ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಶಸ್ತಿ ಸಹಿತ ಅಷ್ಟ ಮಠಗಳ ಯತಿಗಳಿಂದ, ಗಣ್ಯಾತಿಗಣ್ಯರಿಂದ, ಸಂಘ ಸಂಸ್ಥೆಗಳಿಂದ ಗೌರವ ಅಭಿನಂದನೆಗಳಿಗೆ ಪಾತ್ರರಾಗಿದ್ದ ಭಟ್ಟರು ಪಾರಂಪರಿಕ ಯಕ್ಷಗಾನ ಲೋಕದ ಸ್ಮರಣೀಯರು ಎಂದು ಅವರು ಹೇಳಿದ್ದಾರೆ.

ಕಿರು ಸುದ್ದಿ

ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ: 44 ದೂರುಗಳು

ಕಾಸರಗೋಡು: ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸುವವರ ವಿರುದ್ಧ ದೂರು ಸಲ್ಲಿಸಲು ರಾಜ್ಯ ಚುನಾವಣಾ ಆಯೋಗ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಜ್ಜೀಕರಿಸಿರುವ ಸಿ–ವಿಜಿಲ್ ಕಂಟ್ರೋಲ್ ರೂಮ್‌ಗೆ ಶುಕ್ರವಾರ ಸಂಜೆ ತನಕ 44 ದೂರುಗಳು ಲಭಿಸಿವೆ. ಆದರಲ್ಲಿ ಶುಕ್ರವಾರ ಏಳು ದೂರುಗಳು ಲಭಿಸಿವೆ. ಹೀಗೆ ಸಲ್ಲಿಸಿರುವ ದೂರುಗಳ ಪೈಕಿ 44 ದೂರುಗಳಿಗೆ ಪರಿಹಾರ ಕಂಡುಕೊಳ್ಳಲಾಗಿದೆ. ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ ಕಂಟ್ರೋಲ್ ರೂಮ್ ಸ್ವಯಂಪ್ರೇರಿತವಾಗಿಯೂ ಹಲವು ದೂರುಗಳನ್ನು ದಾಖಲಿಸಿಕೊಂಡಿದೆ. ಇಂತಹ ದೂರುಗಳ ಸಿ–ವಿಜಿಲ್ ನೇರವಾಗಿ ಪರಿಶೀಲಿಸುತ್ತಿದೆ. ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸುವವರನ್ನು ಪತ್ತೆಹಚ್ಚಲು ಜಿಲ್ಲೆಯ ವಿವಿಧೆಡೆಗಳಲ್ಲಾಗಿ 29 ಸಿಸಿ , ಟಿವಿ ಕ್ಯಾಮರಾಗಳನ್ನು ಸ್ಥಾಪಿಸಲಾಗಿದೆ. ಇದರ ಎಲ್ಲಾ ದೃಶ್ಯಗಳು ಸಿ–ವಿಜಿಲ್ ಕಂಟ್ರೋಲ್ ರೂಮ್‌ಗೆ ನೇರವಾಗಿ ಲಭಿಸುತ್ತಿದೆ. ಸಿ–ವಿಜಿಲ್ ಕಂಟ್ರೋಲ್ ರೂಮ್‌ನ ಉಸ್ತುವಾರಿ ಹೊಣೆಗಾರಿಕೆಯನ್ನು ಎಡಿಎಂ ಕೆ.ವಿ.ಶ್ರುತಿಯವರಿಗೆ ವಹಿಸಿಕೊಡಲಾಗಿದೆ. ಇದರ ತಾಂತ್ರಿಕ ನಿರ್ವಹಣೆಯ ಹೊಣೆಗಾರಿಕೆಯನ್ನು ಜಿಲ್ಲಾ ಇನ್‌ಫರ್ ಮ್ಯಾಟಿಕ್ ಆಫೀಸರ್ ಕೆ. ಲೀನಾ ಅವರಿಗೆ ವಹಿಸಿಕೊಡಲಾಗಿದೆ. ರಾಜ್ಯದಲ್ಲಿ ಒಟ್ಟಾರೆಯಾಗಿ ವಿವಿಧ ಜಿಲ್ಲೆಗಳ ಸಿ–ವಿಜಿಲ್ ಕಂಟ್ರೋಲ್ ರೂಮ್‌ಗಳಿಗೆ ಶುಕ್ರವಾರ ತನಕ 4585 ದೂರುಗಳು ಲಭಿಸಿವೆ.

ಯಶಸ್ವಿನಿ ಆರೋಗ್ಯ ವಿಮೆ: ನೋಂದಣಿ, ನವೀಕರಣಕ್ಕೆ ಮಾ.30ಕೊನೆಯ ದಿನ

ಮಂಗಳೂರು : ರಾಜ್ಯದ ಸಹಕಾರಿಗಳು ಮತ್ತು ಅವರ ಕುಟುಂಬದವರಿಗಾಗಿ ಇರುವ ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯಡಿ ಸಹಕಾರಿ ಸಂಘದಲ್ಲಿ ನೋಂದಾವಣೆ ಅಥವಾ ನವೀಕರಣ ಮಾಡಿಸಿಕೊಳ್ಳಲು ಮಾ.30 ಅಂತಿಮ ದಿನಾಂಕ ಎಂಬುದಾಗಿ ತಿಳಿಸಲಾಗಿದೆ. ಜ.3ರಿಂದ ನೋಂದಣಿ ಆರಂಭಗೊಂಡಿದ್ದು, ಯೋಜನೆಯಡಿ ಚಿಕಿತ್ಸಾ ಸೌಲಭ್ಯ 2026ರ ಜ.4ರಿಂದ 2027ರ ಮಾ.31ರವರೆಗೆ ಇರಲಿದೆ.ಸಹಕಾರ ಸಂಘಗಳ, ಸಹಕಾರಿ ಸ್ವ–ಸಹಾಯ ಗುಂಪುಗಳ ಸದಸ್ಯರು, ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು, ಸಹಕಾರಿ ನೇಕಾರರು, ಮಾಸಿಕ 30ಸಾವಿರ ರೂ.ಮತ್ತು ಅದಕ್ಕಿಂತ ಕಡಿಮೆ ಒಟ್ಟು ವೇತನ ಪಡೆಯುತ್ತಿರುವ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಡಿ ನೋಂದಣಿಯಾಗಿ ಕಾರ್ಯನಿರ್ವಹಿಸುತ್ತಿರುವ ರಾಜ್ಯದ ಸಹಕಾರ ಸಂಘಗಳ ನೌಕರರಿಗೂ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅವಕಾಶವಿದೆ. ಗ್ರಾಮೀಣ ಸಹಕಾರ ಸಂಘಗಳ /ಸಹಕಾರಿ ಸ್ವಸಹಾಯ ಗುಂಪುಗಳ ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ 500ರೂ.ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ 100ರೂ.ನಂತೆ ಪಾವತಿಸಬೇಕಿದೆ.ಪರಿಶಿಷ್ಟ ಜಾತಿ–ಪಂಗಡದವರ ಸದಸ್ಯರ ಸದಸ್ಯತ್ವದ ವಂತಿಗೆಯನ್ನು ಸರಕಾರವೇ ಭರಿಸುತ್ತದೆ.ನಿಮ್ಮ ಸಹಕಾರಿ ಸಂಘಗಳನ್ನು ಈ ಬಗ್ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟನೆ ತಿಳಿಸಿದೆ.

ಈ ಯೋಜನೆಯಡಿ ಒಂದು ವಿಶಿಷ್ಟ ಚಿಕಿತ್ಸಾ ಯೋಜನೆಯಾಗಿದ್ದು, ಇದರಡಿ ಫಲಾನುಭವಿ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸಾ ಗರಿಷ್ಠ ಮಿತಿ 5ಲ.ರೂ.ಗಳಿಗೆ ನಿಗದಿಪಡಿಸಲಾಗಿದೆ.ನವಜಾತ ಶಿಶುವಿನಿಂದ ಹಿಡಿದು ವೃದ್ಧರವರೆಗೆ ಸದಸ್ಯತ್ವ ಪಡೆಯಲು ಅವಕಾಶವಿದೆ.ಪ್ರಧಾನ ಅರ್ಜಿದಾರರು ಸಂಘದ ಸದಸ್ಯರಾಗಿದ್ದರೆ ಸಾಕಾಗುತ್ತದೆ.ಸರಕಾರಿ ಆಸ್ಪತ್ರೆಗಳು ಮತ್ತು ಯೋಜನೆಯಡಿ ಗುರುತಿಸಲ್ಪಟ್ಟಿರುವ ವರ್ಕ್ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ –ಶಸ್ತ್ರ ಚಿಕಿತ್ಸಾ ಸೌಲಭ್ಯ ಪಡೆಯಲು ಅವಕಾಶವಿದೆ ಎಂದು ಪ್ರಕಟನೆ ತಿಳಿಸಿದೆ.

ನೀರಿಗೆ ಬಿದ್ದು ಸಾವು

ಬಂಟ್ವಾಳ : ಕೈ, ಕಾಲು ಮುಖ ತೊಳೆಯಲೆಂದು ನೇತ್ರಾವತಿ ನದಿ ತೀರಕ್ಕೆ ಹೋದ ವ್ಯಕ್ತಿಯೋರ್ವರು ನೀರಿಗೆ ಬಿದ್ದು ಮೃತಪಟ್ಟ ಘಟನೆ ಪುದು ಗ್ರಾಮದಲ್ಲಿ ಸಂಭವಿಸಿದೆ. ಮೃತರನ್ನು ಪುದು ಗ್ರಾಮದ ನಿವಾಸಿ ಉಮೇಶ್ ಎಂದು ಗುರುತಿಸಲಾಗಿದೆ. ಈ ಬಗ್ಗೆ ಮೃತರ ಪುತ್ರಿ ಕೃತಿಕ ಪೊಲೀಸರಿಗೆ ನೀಡಿದ ದೂರಿನಂತೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು–ಬೈಕ್‌ಗಳ ನಡುವೆ ಅಪಘಾತ: ಸವಾರರಿಬ್ಬರ ಸಾವು

ಮಡಿಕೇರಿ: ಕಾರು ಮತ್ತು ಎರಡು ಬೈಕ್‌ಗಳ ನಡುವೆ ನಡೆದ ಭೀಕರ ಅಪಘಾತದಲ್ಲಿ ಬೈಕ್ ಸವಾರರಿಬ್ಬರು ಸಾವಿಗೀಡಾಗಿದ್ದಾರೆ. ಗೋಣಿಕೊಪ್ಪ –ತಿತಿಮತಿ ರಸ್ತೆಯಲ್ಲಿ ಸಂಭವಿಸಿದ ದುರಂತದಲ್ಲಿ ನಂಜನಗೂಡು ನಿವಾಸಿ ಶಿವ ಕುಮಾರ್ (25) ಹಾಗೂ ಕೇರಳ ಪಾಲಕ್ಕಾಡ್ ನಿವಾಸಿ ಮೊಹಮ್ಮದ್ ಶಿಹಾಬ್ (27) ಸಾವಿಗೀಡಾಗಿದ್ದಾರೆ. ಅಪಘಾತದ ತೀವ್ರತೆಗೆ ಮೂರು ವಾಹನಗಳೂ ತೀವ್ರ ಜಖಂಗೊಂಡಿದ್ದು, ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಾಣಿಜ್ಯ ಬಳಕೆಯ ಎಲ್‌ಪಿಜಿ ಪೂರೈಕೆಯಲ್ಲಿ ಆಗಿರುವ ವ್ಯತ್ಯಯದಿಂದ ಮಂಗಳೂರು ನಗರದಲ್ಲಿ ಕೆಲವೊಂದು ಹೊಟೇಲ್‌ಗಳು ಕಟ್ಟಿಗೆ ಒಲೆಯತ್ತ ಒಲವು ತೋರಿದ್ದು, ಹೊಟೇಲೊಂದರಲ್ಲಿ ತಿಂಡಿ ತಯಾರಿ ಚಿತ್ರದಲ್ಲಿ ಕಾಣಬಹುದು.

ವಿಧಾನಸಭೆ ಚುನಾವಣೆ: ಕಾಸರಗೋಡು ಜಿಲ್ಲೆಯಲ್ಲೀಗ 28 ನಾಮಪತ್ರಗಳು ಸಲ್ಲಿಕೆ

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಯ ಅಂಗವಾಗಿ ಕಾಸರಗೋಡು ಜಿಲ್ಲೆಯಲ್ಲಿ ಶನಿವಾರ ಒಟ್ಟು 28 ನಾಮಪತ್ರಗಳು ಸಲ್ಲಿಕೆಯಾದವು. ತೃಕ್ಕರಿಪುರ ವಿಧಾನಸಭಾ ಕ್ಷೇತ್ರದಲ್ಲಿ ಆರು, ಉದುಮ ಕ್ಷೇತ್ರದಲ್ಲಿ ಏಳು, ಕಾಞಂಗಾಡು ಕ್ಷೇತ್ರದಲ್ಲಿ ಆರು, ಮಂಜೇಶ್ವರ ಕ್ಷೇತ್ರದಲ್ಲಿ ಎಂಟು ಮತ್ತು ಕಾಸರಗೋಡು ಕ್ಷೇತ್ರದಲ್ಲಿ ಒಂದು ನಾಮಪತ್ರ ಸಲ್ಲಿಕೆಯಾಗಿದ್ದವು. ವಿಧಾನಸಭಾ ಚುನಾವಣೆಯ ಭಾಗವಾಗಿ ತೃಕ್ಕರಿಪುರ ಕ್ಷೇತ್ರದಲ್ಲಿ ವಿವಿಧ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ಸಿಪಿಎಂ ಅಭ್ಯರ್ಥಿ ವಿಪಿಪಿ ಮುಸ್ತಫಾ ಮೂರು ನಾಮಪತ್ರಗಳು ಮತ್ತು ಸಾಬು ಅಬ್ರಹಾಂ ತಲಾ ಒಂದು ನಾಮಪತ್ರ ಸಲ್ಲಿಸಿದರು. ಟ್ವೆಂಟಿ ಟ್ವೆಂಟಿ ಅಭ್ಯರ್ಥಿ ರವಿ ಕುಳಂಗರ ಎರಡು ಸೆಟ್ ನಾಮಪತ್ರಗಳನ್ನು ಸಲ್ಲಿಸಿದರು. ಉದುಮ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ಸಿಪಿಎಂ ಅಭ್ಯರ್ಥಿ ಸಿ.ಎಚ್.ಕುಂಞಂಬು ಮೂರು ಮತ್ತು ಬಾಲನ್ ತಲಾ ಎರಡು ನಾಮಪತ್ರ ಸಲ್ಲಿಸಿದರು. ಕಾಞಂಗಾಡು ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಸಲ್ಲಿಸಿದರು. ಬಿಜೆಪಿ ಅಭ್ಯರ್ಥಿ ಎಂ.ಬಲರಾಜ್ ಮತ್ತು ವೇಣುಗೋಪಾಲ್ ಕೆ.ಕೆ. ಎರಡು ಸೆಟ್ ನಾಮಪತ್ರಗಳನ್ನು ಸಲ್ಲಿಸಿದರು. ಸಿಪಿಐ ಅಭ್ಯರ್ಥಿ ಗೋವಿಂದನ್ ಪಳ್ಳಿಕಾಪಿಲ್ ಮತ್ತು ಬಿಎಸ್‌ಪಿ ಅಭ್ಯರ್ಥಿ ವಿಜಯಕುಮಾರ್ ಬಿ. ನಾಮಪತ್ರ ಸಲ್ಲಿಸಿದರು. ಮಂಜೇಶ್ವರ ಕ್ಷೇತ್ರದಲ್ಲಿ ವಿವಿಧ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಸಲ್ಲಿಸಿದರು. ಸಿಪಿಎಂ ಅಭ್ಯರ್ಥಿ ಕೆ.ಆರ್.ಜಯಾನಂದ ಮತ್ತು ವಿಠಲ ರೈ ತಲಾ ಎರಡು ಸೆಟ್ ನಾಮಪತ್ರಗಳನ್ನು ಸಲ್ಲಿಸಿದರು. ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಎರಡು ಸೆಟ್ ನಾಮಪತ್ರಗಳನ್ನು ಮತ್ತು ಸ್ವತಂತ್ರ ಅಭ್ಯರ್ಥಿ ಅಬ್ದುಲ್ಲ ಕೆ. ಎರಡು ಸೆಟ್ ನಾಮಪತ್ರಗಳನ್ನು ಸಲ್ಲಿಸಿದರು. ಕಾಸರಗೋಡು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಶನಿವಾರ ಚುನಾವಣಾಧಿಕಾರಿಯ ಮುಂದೆ ತಮ್ಮ ನಾಮಪತ್ರಗಳನ್ನು ಸಲ್ಲಿಸಿದರು.

ಮನವಿಗೂ ಇಲ್ಲ ಸ್ಪಂದನೆ । ಅಧಿಕಾರಿಗಳ ಗಾಢ ಮೌನ । ಪಾಪಿ ಕೆಲಸಕ್ಕೆ ಕಡಿವಾಣವೇ ಇಲ್ಲವೇ?

ಜೀವನದಿ ಒಡಲಿಗೇ ಕೊಳಚೆ ನೀರು!

ದಿಗಂತ ವಿಶೇಷ

ಬಂಟ್ವಾಳ: ಮಂಗಳೂರು ಹಾಗೂ ಬಂಟ್ವಾಳದ ಜನತೆಗೆ ಕುಡಿಯುವ ನೀರು ಪೂರೈಸುತ್ತಿರುವ ಜಿಲ್ಲೆಯ ಜೀವ ನದಿ ನೇತ್ರಾವತಿ ನದಿಯ ಒಡಲಿಗೆ ಬಂಟ್ವಾಳ ಸುತ್ತಮುತ್ತ ಕೊಳಚೆ ನೀರು ಸೇರುತ್ತಿರುವುದನ್ನು ಇನ್ನೂ ಕೂಡ ಸಂಬಂಧಿಸಿದ ಅಧಿಕಾರಿ ವರ್ಗಕ್ಕೆ ಸಾಧ್ಯವಾಗದಿರುವುದು ನಾಚಿಕೆಗೇಡಿನ ಸಂಗತಿ ಎಂಬುದನ್ನು ಹೇಳದೆ ವಿಧಿಯಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಜನತೆಗೆ ಕುಡಿಯುವ ನೀರು ಸರಬರಾಜು ಆಗಲಿರುವ ನೇತ್ರಾವತಿ ನದಿ ನೀರು ಕೊರತೆಯಾದಲ್ಲಿ ಜಲ ಮರುಪೂರಣ ಮಾಡುವ ವ್ಯವಸ್ಥೆಯೆಂದು ತಿಳಿದುಕೊಂಡಿದ್ದರೆ ಅದು ತಪ್ಪು. ಈ ಚಿತ್ರ ಪಾಣೆಮಂಗಳೂರು ಮಾಸ್ತಿಕಟ್ಟೆಯ ಬಳಿ ನದಿ ಸಮೀಪದ ಖಾಸಗಿ ಜಾಗದ ತ್ಯಾಜ್ಯ ನೀರನ್ನು ನೇರವಾಗಿ ನದಿಗೆ ಬಿಡಲೆಂದು ಅಳವಡಿಸಿರುವ ಪೈಪ್, ಇದು ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿಯ ಒಂದು ತಾಜಾ ಉದಾಹರಣೆ,ಬಂಟ್ವಾಳ ಪುರಸಭಾ ವ್ಯಾಪ್ತಿಯಲ್ಲಿ ಇಂತಹ ದೃಶ್ಯ ಸಾಕಷ್ಟು ಕಡೆಗಳಲ್ಲಿ ಕಾಣ ಸಿಗುತ್ತದೆ.

ಕನಿಷ್ಠ ಜ್ಞಾನ ಕೂಡಾ ಇಲ್ಲವಾಯಿತೇ?

ಪವಿತ್ರ ನದಿ ನೇತ್ರಾವತಿ ನದಿಗೆ ಕೊಳಚೆ ನೀರು ಹರಿಯಬಿಡುವ ಮೂಲಕ ನದಿನೀರನ್ನು ಕಲುಷಿತಗೊಳಿಸುತ್ತಾರೆಂದರೆ ಇವರಿಗೆ ತಲೆಯಲ್ಲಿ ಮೆದುಳೇಇಲ್ಲ,ಅವರುಕೂಡ ಇದೇನೇತ್ರಾವತಿಯ ನೀರನ್ನು ಕುಡಿಯಲು ಬಳಸುತ್ತಾರೆಂಬ ಕನಿಷ್ಠ ಜ್ಞಾನ ಇಲ್ಲದಿರುವುದು ಸೋಜಿಗವೇ. ಇಂತಹವರ ವಿರುದ್ಧ ಇದುವರೆಗೂ ಪುರಸಭೆಯಲ್ಲಿದ್ದ ಚುನಾಯಿತ ಆಡಳಿತವರ್ಗ ಮತ್ತು ಈಗಿನ ಅಧಿಕಾರಿ ವರ್ಗ ಯಾರದೋ ಒತ್ತಡಕ್ಕೆ ಮಣಿದು ಮುಲಾಜಿಲ್ಲದೆ ಕ್ರಮ ಕೈಗೊಳ್ಳದಿರುವುದೇ ಇದು ಪುನರಾವರ್ತನೆಯಾಗಲು ಕಾರಣವಾಗಿದೆ ಎಂಬ ಆರೋಪವು ಕೇಳಿಬಂದಿದೆ. ನೇತ್ರಾವತಿ ನದಿಗೆ ಬಂಟ್ವಾಳ ಸುತ್ತಮುತ್ತ ಕೊಳಚೆ ನೀರು ಸೇರುತ್ತಿರುವುದು ಪ್ರತಿ ಪುರಸಭೆ ಸಹಿತ ವಿಧಾನಸಭೆ ಚುನಾವಣೆ ಸಂದರ್ಭ ಪ್ರಚಾರದ ವಸ್ತುವಾಗಿರುತ್ತದೆ. ಈ ಕುರಿತು ಸಾಕಷ್ಟು ಆರೋಪ, ಪ್ರತ್ಯಾರೋಪ ಚರ್ಚೆಗಳು ನಡೆಯುತ್ತಲೆ ಇವೆ.



ಸಮಸ್ಯೆ ಇನ್ನೂ ಬಗೆಹರಿದಿಲ್ಲ..

ಹೊಸದಿಗಂತ ಸಹಿತ ಮಾಧ್ಯಮಗಳು ಹಲವುಬಾರಿ ಸಚಿತ್ರವರದಿ ಪ್ರಕಟಿಸಿದಾಗ ಒಮ್ಮೆ ಎಚ್ಚೆತ್ತಂತೆ ಮಾಡುವ ಆಡಳಿತ ಮತ್ತೆ ಮೌನಕ್ಕೆ ಜಾರುತ್ತದೆ. 2025ರಲ್ಲಿ ಈ ಕುರಿತು ವಿಸ್ತಾರವಾದ ವರದಿ ಪ್ರಕಟಿಸಲಾಗಿತ್ತು, ಈ ವರದಿ ಗಮನಿಸಿದ ಮಂಗಳೂರಿನ ಜಾಗೃತ ಹಿರಿಯ ನಾಗರಿಕರು, ಸ್ಥಳ ಸಮೀಕ್ಷೆ ಮಾಡಿ ಮಂಗಳೂರಿನಲ್ಲಿ ಸಂಬಂಧಪಟ್ಟ ಉನ್ನತಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಈ ವಿಚಾರದಲ್ಲಿ ಆಡಳಿತ ಮೌನಕ್ಕೆ ಶರಣಾಗುವುದು ಜನರ ಆರೋಗ್ಯ ದೃಷ್ಟಿಯಿಂದ ಹಿತಕರವಲ್ಲ ಎಂದು ಸಲಹೆ ನೀಡಿದ್ದ ಮನವಿ ಅಲ್ಲೇ ಬಾಕಿಯಾಗಿದೆ.ಇಲ್ಲಿ ನೇತ್ರಾವತಿ ನದಿಗೆ ಕೊಳಚೆ ನೀರು ಸೇರುವ ಪರಿಸ್ಥಿತಿ ಇಂದಿಗೂ ಹಾಗೇ ಮುಂದುವರಿದಿದೆ. ಕೇವಲ ಮನೆಗಳ ಕೊಳಚೆ ನೀರು ಮಾತ್ರವಲ್ಲ, ವಿವಿಧ ವಸತಿ ಸಂಕೀರ್ಣ ,ವಾಣಿಜ್ಯ ಸಂಕೀರ್ಣ, ಮಾಂಸದಂಗಡಿಗಳ ತ್ಯಾಜ್ಯ ನೀರು ಸಹಿತ ಪುರಸಭಾ ವ್ಯಾಪ್ತಿಯ 15ಕ್ಕೂ ಹೆಚ್ಚು ಕಡೆ ನೇತ್ರಾವತಿ ನೀರಿನ ಒಡಲಿಗೆ ನೇರ ಸೇರುತ್ತದೆ.



60 ಕೋ. ರೂ.ಬಿಡುಗಡೆ

ಬಂಟ್ವಾಳ ಪುರಸಭಾ ವ್ಯಾಪ್ತಿಯಲ್ಲಿ ಸಮಗ್ರ ಒಳಚರಂಡಿ ಯೋಜನೆ (ಯುಜಿಡಿ)ಗೆ ಪುರಸಭೆಗೆ 60 ಕೋ.ರೂ. ಅನುದಾನ ಬಿಡುಗಡೆಯಾಗಿದ್ದು, ಜಾಗದ ಸಮಸ್ಯೆಯಿಂದಾಗಿ ಅನುಷ್ಠಾನಕ್ಕೆ ಕೊಂಚ ವಿಳಂಬವಾಗಿದ್ದು,ಶೀಘ್ರವೇ ಜಮೀನಿನ ಸಮಸ್ಯೆ ಇತ್ಯರ್ಥವಾಗಲಿದ್ದು, ಬಳಿಕ ಯೋಜನೆಗೆ ಅನುಷ್ಠಾನಕ್ಕೆ ವೇಗ ಸಿಗಲಿದೆ.

■ ರಾಜೇಶ್ ನ್ಯಾಕ್ ಉಳಿಪಾಡಿ
ಶಾಸಕರು, ಬಂಟ್ವಾಳ

ಒಳಚರಂಡಿ ವ್ಯವಸ್ಥೆಯೇ ಇಲ್ಲ

ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲದೆ ಇರುವುದು ಈ ಸಮಸ್ಯೆಗೆ ಮುಖ್ಯ ಕಾರಣವಾಗಿದೆ. ದಿನನಿತ್ಯ ಸುಮಾರು 10 ಸಾವಿರಕ್ಕೂ ಅಧಿಕ ಮನೆಗಳ ಕೊಳಚೆ ನೀರು ನದಿಯ ಒಡಲು ಸೇರುತ್ತಿದೆ.

ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ)ಗಳ ನಿರ್ಮಾಣಕ್ಕೆ ಜಾಗದ ವಿವಾದ ಅಂತಿಮಗೊಳ್ಳದೇ ಇರುವುದರಿಂದ ಒಳಚರಂಡಿ ವ್ಯವಸ್ಥೆ ಅನುಷ್ಠಾನ ಸಾಧ್ಯವಾಗಿಲ್ಲ. ಹಲವು ವರ್ಷಗಳ ಹಿಂದೆ ಪೈಪ್‌ಲೈನ್ ಅಳವಡಿಸಿ ಅಲ್ಲಲ್ಲಿ ಮ್ಯಾನ್ ಹೋಲ್‌ಗಳನ್ನು ಮಾಡಿದ್ದರೂ ವ್ಯರ್ಥವಾಗಿದ್ದು, ಅದು ಎಲ್ಲಿದೆ ಎಂದು ಕಾಮಗಾರಿ ಮಾಡಿದವರೇ ಹುಡುಕಿಕೊಡಬೇಕಾಗಿದೆ.

ಬಂಟ್ವಾಳ ಪುರಸಭೆ ವ್ಯಾಪ್ತಿಗೆ ಕುಡಿಯುವ ನೀರು ಪೂರೈಸಲು ನೀರೆತ್ತುವ ಜಾಗಗಳಲ್ಲೇ ಕೊಳಚೆ ನೀರು ನದಿಗೆ ಸೇರುತ್ತಿದೆ. ಜಕ್ರಿಬೆಟ್ಟು ಡ್ಯಾಂನಲ್ಲಿದ್ದ ನೀರು ಸಂಗ್ರಹದಲ್ಲೇ ಸ್ನಾನ, ಶೌಚಾದಿಗಳನ್ನು ವಲಸೆ ಕಾರ್ಮಿಕರ ತಂಡ ಮಾಡುತ್ತಿದ್ದರೆ, ಅಲ್ಲೇ ಪಕ್ಕದಲ್ಲಿ ಕಾಲುವೆಯಿಂದ ಹೆಪ್ಪುಗಟ್ಟಿದ ಕೊಳಚೆ ನೀರು ಕಾಣಸುತ್ತಿತ್ತು. ಬಂಟ್ವಾಳ ಬಸ್ತಿಪಡ್ಪು ಬಳಿಯೂ ಕಾಲುವೆ ಯಿಂದ ಬಿರು ಬೇಸಿಗೆಯಲ್ಲೂ ಕೊಳಚೆ ನೀರು ನದಿಗೆ ಪ್ರವೇಶಿಸುತ್ತಿದ್ದರೆ, ನದಿ ದಡದ ಉದ್ದಕ್ಕೂ ಪೈಪ್ ನದಿಗೆ ಇಟ್ಟು, ತ್ಯಾಜ್ಯಗಳೆಲ್ಲಾ ಕುಡಿಯುವ ನೀರು ಸೇರುವಂತಹ ಸನ್ನಿವೇಶ ಸೃಷ್ಟಿಯಾಗಿದೆ.

ಬಂಟ್ವಾಳ ಆಸುಪಾಸಿನ ಪ್ರದೇಶಗಳನ್ನು ಸಂಪೂರ್ಣ ಒಳಚರಂಡಿ ವ್ಯವಸ್ಥೆಗೆ ಒಳಪಡಿಸುವುದು ಅಥವಾ ದೊಡ್ಡದೊಡ್ಡ ಇಂಗುಗುಂಡಿಗಳನ್ನು ಮಾಡಿ ಕೊಳಚೆ ನೀರು ಮತ್ತು ತ್ಯಾಜ್ಯಗಳನ್ನು ಅದಕ್ಕೆ ಬಿಡುವುದು, ಜತೆಗೆ ನೇತ್ರಾವತಿ ನದಿ ನೀರು ಕಲುಷಿತವಾಗದಂತೆ ನೋಡುವುದು ಸದ್ಯದ ಮಟ್ಟಿಗೆ ಇರುವ ಪರಿಹಾರ.

ವಸತಿ ಸಮುಚ್ಚಯಗಳು ತಮ್ಮಲ್ಲೇ ಎಸ್‌ಟಿಪಿ ಗಳನ್ನು ಮಾಡಿ ಕೊಳಚೆಯನ್ನು ಶುದ್ಧೀಕರಿಸಿಯೇ ಹೊರಗೆ ಬಿಡಬೇಕು ಎಂಬ ನಿಯಮವಿದ್ದರೂ, ಬಂಟ್ವಾಳ ನಗರ ವ್ಯಾಪ್ತಿಯ ಬಹುತೇಕ ವಸತಿ ಸಮುಚ್ಚಯಗಳು ಎಷ್ಟು ಪಾಲಿಸುತ್ತಿದ್ದಾರೆ ಎಂಬ ಕುರಿತು ಪುರಸಭೆ ಸರ್ವೆ ಮಾಡಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಪರಿಸರ ಇಲಾಖೆ ನೇತ್ರಾವತಿ ನದಿ ನೀರಿನ ಸ್ಯಾಂಪಲ್ ಪಡೆದು ಪರೀಕ್ಷೆಗೊಳಪಡಿಸಿದ್ದು,ಈ ನೀರನ್ನು ನೇರವಾಗಿ ಕುಡಿಯಲು ಯೋಗ್ಯವಲ್ಲ ಎಂಬ ವರದಿ ನೀಡಿದೆ ಎಂಬ ಮಾಹಿತಿ ಇದೆ.

ಅಪ್ರಾಪ್ತರ ದ್ವಿಚಕ್ರ ಚಾಲನೆ: ಹೆತ್ತವರ ವಿರುದ್ಧ ಪ್ರಕರಣ

ಕುಂಬಳೆ: ಪ್ರಾಯಪೂರ್ತಿಯಾಗದವರಿಗೆ ದ್ವಿಚಕ್ರ ವಾಹನಗಳನ್ನು ಚಲಾಯಿಸಲು ನೀಡಿದ ಹೆತ್ತವರ ವಿರುದ್ಧ ಕುಂಬಳೆ ಪೊಲೀಸರು ಎರಡು ಕೇಸು ದಾಖಲಿಸಿದ್ದಾರೆ. ವಾಹನಗಳನ್ನು ಕಸ್ಟಡಿಗೆ ಪಡೆಯಲಾಗಿದೆ.

ಕುಂಬಳೆ ಪೊಲೀಸ್ ಠಾಣೆ ವ್ಯಾಪ್ತಿಯ ಕಯ್ಯಾರು – ಮಂಡೆಕಾಪು, ಮಂಗಲ್ಪಾಡಿಯ ಇಚ್ಚಂಗೋಡು ಎಂಬೆಡೆಗಳಿಂದ ಪೊಲೀಸರು ಅಪ್ರಾಪ್ತ ಚಾಲಕರನ್ನು ಸೆರೆ ಹಿಡಿದು ವಾಹನಗಳನ್ನು ವಶಪಡಿಸಿದ್ದಾರೆ. ಇಚ್ಚಂಗೋಡು ಎಲ್‌ಪಿ ಶಾಲೆ ಬಳಿ ಅಪಾಯಕರ ರೀತಿ ಬೈಕ್ ಚಲಾಯಿಸುತ್ತಿದ್ದ ಅಪ್ರಾಪ್ತನನ್ನು ಪ್ರಶ್ನಿಸಿದಾಗ ತಾಯಿ ಬೈಕ್ ನೀಡಿರುವುದಾಗಿ ಬಾಲಕ ಪೊಲೀಸರಿಗೆ ತಿಳಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಬೈಕ್‌ನ್ನು ಕಸ್ಟಡಿಗೆ ತೆಗೆದ ಬಳಿಕ ತಾಯಿಯ ವಿರುದ್ಧ ಪೊಲೀಸರು ಕೇಸು ದಾಖಲಿಸಿದ್ದಾರೆ. ಅಲ್ಲದೆ ಬಾಲಕನಿಗೆ ನೋಟೀಸು ನೀಡಲಾಗಿದೆ.

ಇನ್ನೊಂದು ಘಟನೆಯಲ್ಲಿ ಮಂಡೆಕಾಪುನಲ್ಲಿ ಬಾಲಕ ಸ್ಕೂಟರ್ ಚಲಾಯಿಸಿದಾಗ ಸೆರೆ ಹಿಡಿಯಲಾಗಿದೆ. ಯಾರು ವಾಹನ ನೀಡಿದ್ದೆಂದು ಕೇಳಿದಾಗ ತಂದೆ ಎಂದು ಬಾಲಕ ತಿಳಿಸಿದ್ದು, ಇದರಿಂದ ಸ್ಕೂಟರ್‌ನ್ನು ಕಸ್ಟಡಿಗೆ ತೆಗೆದು ಪೊಲೀಸರು ಬಾಲಕನ ತಂದೆ ವಿರುದ್ಧ ಕೇಸು ದಾಖಲಿಸಿಕೊಂಡಿದ್ದಾರೆ.

ಕಲ್ಲಡ್ಕದ ಯುವ ಉದ್ಯಮಿ ಸುಳ್ಯದ ಹೋಮ್ ಸ್ಟೇಯಲ್ಲಿ ನಿಗೂಢ ಸಾವು

ಬಂಟ್ವಾಳ/ಸುಳ್ಯ: ತಾಲೂಕಿನಕಲ್ಲಡ್ಕದಲ್ಲಿ ಅಲ್ಯೂಮಿನಿಯಂ ಫ್ಯಾಬ್ರಿಕೇಶನ್ ಉದ್ಯಮ ನಡೆಸುತ್ತಿದ್ದ ಯುವಕನೊಬ್ಬ ಸಂಪಾಜೆ ಸಮೀಪದ ಗೂನಡ್ಕದ ಲಾಡ್ಜ್ ಒಂದರ ಕೊಠಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ.

ಪಾಣೆಮಂಗಳೂರಿಗೆ ಸಮೀಪದ ಬೊಂಡಾಲ ಶಾಂತಿಗುಡ್ಡೆ ನಿವಾಸಿ, ನಾರಾಯಣ ಕುಲಾಲ್ ಅವರ ಪುತ್ರ ತಿಲಕರಾಜ್ (28) ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಪತ್ತೆಯಾದ ಉದ್ಯಮಿಯಾಗಿದ್ದಾರೆ.



ಇವರು ಮಾರ್ಚ್ 19ರಂದು ಅನಂತಾಡಿಯಲ್ಲಿ ಮನೆಯೊಂದರ ಅಲ್ಯೂಮಿನಿಯಂ ಫ್ಯಾಬ್ರಿಕೇಶನ್ ಕೆಲಸಕ್ಕೆ ಬೇಕಾದ ಸಾಮಾಗ್ರಿಗಳನ್ನು ಹಾಕಿ ಬಂದಿದ್ದು,ಮರುದಿನ ಮಾ. 20 ರ ಸಂಜೆಯಿಂದ ಮನೆಯವರ ಸಂಪರ್ಕಕ್ಕೆ ಸಿಗದೆ ನಾಪತ್ತೆಯಾಗಿದ್ದರು. ತಿಲಕರಾಜ್ ಅವರು ಶುಕ್ರವಾರ ಸಂಜೆ ಸುಳ್ಯದಲ್ಲಿ ಕೆಲಸ ಇದೆ ಎಂದು ಹೇಳಿ ತೆರಳಿದ್ದು,ಕಲ್ಲಡ್ಕದಿಂದ ಮಡಿಕೇರಿ ರಸ್ತೆಯ ಮೂಲಕ ತನ್ನ ಕಾರಿನಲ್ಲಿ ಪ್ರಯಾಣಿಸಿದ್ದಾರೆ, ಸುಳ್ಯದ ಆರಂತೋಡು ಪಯಸ್ವಿನಿ ಹೋಮ್ ಸ್ಟೇ ಯಲ್ಲಿ ಬಾಡಿಗೆಗೆ ರೂಮ್ ಪಡೆದಿದ್ದರು. ಬೆಳಗ್ಗೆ ರೂಮ್‌ನ ಬಾಗಿಲು ತೆರೆಯದಿದ್ದಾಗ ಅನುಮಾನಗೊಂಡ ಲಾಡ್ಜ್ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಸ್ಥಳಕ್ಕಾಗಮಿಸಿ ಬಾಗಿಲು ತೆರೆದಾಗ ತಿಲಕ್ ನೇಣು ಬಿಗಿದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಯುವ ಉದ್ಯಮಿಯಾಗಿದ್ದ ತಿಲಕ್ ಅವರು ಅವಿವಾಹಿತರಾಗಿದ್ದಾರೆ. ಇವರ ಆತ್ಮಹತ್ಯೆಗೆ ಸ್ಪಷ್ಟ ಕಾರಣ ತಿಳಿದು ಬಂದಿಲ್ಲ, ಸುಳ್ಯ ಪೊಲೀಸರು ಕೇಸು ದಾಖಲಿಸಿ ತನಿಖೆ ಮುಂದುವರಿಸಿದ್ದಾರೆ.

ಗೆಳೆಯನಿಗೆ ಲೊಕೇಶನ್ ಕೂಡ ಕಳುಹಿಸಿದ್ದರು...

ಕಲ್ಲಡ್ಕದಿಂದ ಮಡಿಕೇರಿ ರಸ್ತೆಯ ಮೂಲಕ ತನ್ನ ಕಾರಿನಲ್ಲಿ ಪ್ರಯಾಣಿಸಿದ್ದಾರೆ, ಸುಳ್ಯದ ಆರಂತೋಡು ಪಯಸ್ವಿನಿ ಹೋಮ್ ಸ್ಟೇ ಯಲ್ಲಿ ಬಾಡಿಗೆಗೆ ರೂಮ್ ಪಡೆದಿದ್ದ ತಿಲಕ್‌ರಾಜ್, ಬಳಿಕ ಅಲ್ಲೇ ಚಹಾ ಸೇವಿಸಿ ರೂಮ್ ಗೆ ತೆರಳಿ ಮಧ್ಯರಾತ್ರಿ ವರೆಗೂ ಆತ್ಮೀಯ ಸ್ನೇಹಿತನ ಮೊಬೈಲ್ ಗೆ ವಾಯ್ಸ್ ಮೇಸೇಜ್ ಮೂಲಕ ಅನೇಕ ವಿಚಾರಗಳನ್ನು ಪ್ರಸ್ತಾವಿಸಿದ್ದಾನೆನ್ನಲಾಗಿದೆ. ಜೊತೆಗೆ ಅಲ್ಲಿಯ ಲೊಕೇಶನ್ ಕೂಡ ಕಳುಹಿಸಿದ್ದ ಎನ್ನಲಾಗಿದೆ. ಆದರೆ ಸ್ನೇಹಿತ ಮಾತ್ರ ಎಲ್ಲಾ ಸಂದೇಶವನ್ನು ಶನಿವಾರ ಬೆಳಿಗ್ಗೆ ಗಮನಿಸಿದ್ದಾನೆ. ಅಷ್ಟರಲ್ಲಿ ತಿಲಕ್ ಅದೇ ರೂಮ್ ನಲ್ಲಿ ನೇಣಿಗೆ ಶರಣಾಗಿದ್ದಾರೆ.

ಬಂಗ್ರಕೂಳೂರಿನಲ್ಲೂ ಪ್ರೆಶರ್ ಸಮಸ್ಯೆ । ರಾಜಕಾಲುವೆ ಹೂಳೆತ್ತದೆ ಕೃತಕ ನೆರೆ ಭೀತಿ

ಪೈಪ್‌ಲೈನ್ ಕೊನೆಯ ಸ್ಥಳಕ್ಕೂ ನೀರು ಬರಲಿ

▸ ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಪೈಪ್‌ಲೈನ್‌ನಲ್ಲಿ ನೀರು ಬರುತ್ತಿದೆ. ಎಲ್ಲೂ ಸೋರಿಕೆ ಇಲ್ಲ. ಆದರೆ, ಪ್ರೆಶರ್ ಕಡಿಮೆ. ಇದರಿಂದಾಗಿ ಪೈಪ್‌ಲೈನ್‌ನ ಕೊನೆಯ ಸ್ಥಳಗಳಿಗೆ 1–2 ಗಂಟೆ ಮಾತ್ರ ನೀರು ಬರುತ್ತಿದೆ. ಕೆಲವೊಮ್ಮೆ ಎಂಡ್ ಪಾಯಿಂಟ್‌ಗಳಿಗೆ ನೀರು ತಲುಪುವುದೇ ಇಲ್ಲ...

ಇದು ಬಂಗ್ರಕೂಳೂರು ವಾರ್ಡ್ ನಿವಾಸಿಗಳ ಗೋಳು. ಈ ವಾರ್ಡ್‌ನ ದಂಬೇಲ್, ಪಿಂಟೋ ಕಾಟೇಜ್, ಫಲ್ಗುಣಿನಗರ, ಶಾಂತಿಲೇನ್ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಇದೆ. ಬಂಗ್ರಕೂಳೂರು ವಾರ್ಡ್‌ಗೆ ಚಿಲಿಂಬಿ ಟ್ಯಾಂಕ್‌ನಿಂದ ಶಾಂತಿಲೇನ್, ದಂಬೇಲ್, ಶೇಡಿಗುರಿ ಪ್ರದೇಶಗಳಿಗೆ, ಕೊಟ್ಟಾರ ಚೌಕಿಯಿಂದ ಗ್ರ್ಯಾವಿಟಿ ಲೈನ್ ಮೂಲಕ ಕೋಡಿಕಲ್ 10ನೇ ಕ್ರಾಸ್‌ವರೆಗೆ ಹಾಗೂ ಪಂಪಿಂಗ್ ಲೈನ್ ಮೂಲಕ ಕೋಡಿಕಲ್ 2ನೇ ಕ್ರಾಸ್ ಪ್ರದೇಶಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ. ಚಿಲಿಂಬಿಯ 5 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್‌ಗೆ ರಾತ್ರಿ ನೀರು ತುಂಬಿಸಿ ಬೆಳಿಗ್ಗೆ 7.30ಕ್ಕೆ ಪೈಪ್‌ಲೈನ್‌ಗೆ ಬಿಡಲಾಗುತ್ತಿದೆ. 10.30ರ ವೇಳೆಗೆ ಟ್ಯಾಂಕ್ ಖಾಲಿಯಾಗುತ್ತದೆ. ಇದರಿಂದಾಗಿ ದಂಬೇಲ್ ಪ್ರದೇಶಕ್ಕೆ ನೀರು ತಲುಪುತ್ತಿಲ್ಲ. ಪ್ರೆಶರ್ ಇಲ್ಲದೆ ನೀರಿನ ಹರಿವು ಕಡಿಮೆಯಾಗಿ ಇಲ್ಲಿನ ಜನರಿಗೆ ಪ್ರತಿದಿನ ಕಡಿಮೆ ಪ್ರಮಾಣದಲ್ಲಿ ನೀರು ಪೂರೈಕೆಯಾಗುತ್ತಿದೆ. ಪೈಪ್‌ಲೈನ್‌ನ ಕೊನೆಯ ಸ್ಥಳಗಳಿಗೂ ನೀರು ತಲುಪುವಂತೆ ನೋಡಿಕೊಳ್ಳಬೇಕು ಎಂಬುದು ಸ್ಥಳೀಯರ ಆಗ್ರಹವಾಗಿದೆ.

ಚಿತ್ರ: ರಾಜೇಶ್ ಶೆಟ್ಟಿ ಬ್ಲಾಲ್‌ಬಾಗ್



ವಾರ್ಡ್ ನಂಬರ್
ಬಂಗ್ರಕೂಳೂರು 16

ಕೊಟ್ಟಾರ ಚೌಕಿಯ ರಾಜಕಾಲುವೆಯಲ್ಲಿ ಹೂಳು ತುಂಬಿಕೊಂಡಿದೆ

ಸಮಾನವಾಗಿ ನೀರು ಹಂಚಿಕೆ ಮಾಡಿ

ಶೇಡಿಗುರಿ, ದಂಬೆಲ್, ಪಿಂಟೋ ಕಾಟೇಜ್ ಮುಂತಾದ ಸ್ಥಳಗಳಿಗೆ ಪೈಪ್‌ಲೈನ್‌ನಲ್ಲಿ ಸಮರ್ಪಕವಾಗಿ ನೀರು ಪೂರೈಕೆಯಾಗದ ಹಿನ್ನೆಲೆಯಲ್ಲಿ ಇಲ್ಲಿ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದೆ. ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ 10 ವಾರ್ಡ್‌ಗೆ ಒಬ್ಬರಿಗೆ ಟ್ಯಾಂಕರ್ ನೀರು ಪೂರೈಸುವ ಟೆಂಡರ್ ನೀಡಲಾಗಿದೆ. ಒಬ್ಬನಲ್ಲಿ 2–3 ಟ್ಯಾಂಕರ್ ಮಾತ್ರ ಇದೆ. ಟೆಂಡರ್ ವಹಿಸಿಕೊಂಡಾತ ದಿನಕ್ಕೆ 7–8 ಟ್ಯಾಂಕರ್ ನೀರು ಪೂರೈಸುತ್ತಿದ್ದಾರೆ. ಜನರಿಗೆ ಆವಶ್ಯಕತೆ ಇರುವಷ್ಟು ನೀರು ಪೂರೈಕೆ ಟ್ಯಾಂಕರ್ ಮೂಲಕವೂ ಆಗುತ್ತಿಲ್ಲ. ಮನಪಾ ಇಂಜಿನಿಯರ್‌ಗಳು ನೀರು ಪೂರೈಕೆಯಲ್ಲಿ ಏಕರೂಪತೆ ಕಾಯ್ದುಕೊಂಡು ಎಲ್ಲ ಪ್ರದೇಶಗಳಿಗೆ ಸಮನಾಗಿ ನೀರು ಹಂಚಿಕೆ ಮಾಡಬೇಕು. ನಮಗೆ ಟ್ಯಾಂಕರ್ ನೀರು ಬೇಡ. ಪೈಪ್‌ಲೈನ್‌ನಲ್ಲೇ ನೀರು ಒದಗಿಸಿ ಎನ್ನುವುದು ಸ್ಥಳೀಯರ ಒತ್ತಾಯ.


ಎಂಡ್ ಪಾಯಿಂಟ್‌ಗಳಿಗೆ ನೀರಿನ ಪ್ರೆಶರ್ ಇಲ್ಲ

ಕೊಟ್ಟಾರ ಚೌಕಿಯ ಗ್ರ್ಯಾವಿಟಿ ಲೈನ್‌ನಲ್ಲೂ ಆರಂಭಿಕ ಪ್ರದೇಶಗಳಿಗೆ ಬೇಕಾದಷ್ಟು ನೀರು ಸಿಗುತ್ತಿದೆ. ಎಂಡ್ ಪಾಯಿಂಟ್‌ಗಳಿಗೆ ಪ್ರೆಶರ್ ಇಲ್ಲದೆ ಎಲ್ಲ ಕಡೆಗೂ ನೀರು ತಲುಪುತ್ತಿಲ್ಲ. ಪಂಪಿಂಗ್ ಲೈನ್‌ನಲ್ಲೂ ಕೊನೆಯ ಸ್ಥಳಗಳಿಗೆ ನೀರು ಬರುತ್ತಿಲ್ಲ ಎಂದು ಸ್ಥಳೀಯರು ಹೇಳುತ್ತಿದ್ದಾರೆ. ಈ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಮೂಲಕ 40 ಲಕ್ಷ ಲೀಟರ್ ಸಾಮರ್ಥ್ಯದ ಹೊಸ ನೀರಿನ ಟ್ಯಾಂಕ್ ನಿರ್ಮಾಣವಾಗಿದ್ದು, ಸಂಪರ್ಕ ಇನ್ನಷ್ಟೇ ಆಗಬೇಕಿದೆ. ತುಂಬೆ ಹಾಗೂ ಮುಖ್ಯ ಟ್ಯಾಂಕ್‌ನಿಂದ ಸರಿಯಾಗಿ ನೀರು ಒದಗಿಸದ ಹೊರತು ಈ ಹೊಸ ಟ್ಯಾಂಕ್ ಕೂಡಾ ಪ್ರಯೋಜನಕ್ಕೆ ಬರಲಾರದು. ಜಲಸಿರಿ ಕಾಮಗಾರಿಗಳು ಶೇ.80ರಷ್ಟು ಪೂರ್ಣಗೊಂಡಿವೆ. ಜಲಸಿರಿ ಪೈಪ್‌ಲೈನ್ ಅಳವಡಿಕೆಗೆ ಮಣ್ಣು ಅಗೆದು ಗುಂಡಿ ಮುಚ್ಚಿಲ್ಲ. ಅರ್ಧ ಕಾಮಗಾರಿ ನಡೆಸಿ ಬಿಟ್ಟುಬಿಡಲಾಗಿದೆ. ಇದರಿಂದ ಇಲ್ಲಿನ ನಿವಾಸಿಗಳು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದು ಸ್ಥಳೀಯರ ಆರೋಪ.

ರಾಜಕಾಲುವೆ ಹೂಳು ತೆಗೆದಿಲ್ಲ

ಬಂಗ್ರಕೂಳೂರು ವಾರ್ಡ್‌ನಲ್ಲಿ ರಾಜಕಾಲುವೆ ಹಾದುಹೋಗುತ್ತಿದ್ದು, ಮನಪಾ ವತಿಯಿಂದ ಈ ಬಾರಿ ಹೂಳೆತ್ತುವ ಕಾರ್ಯ ಆಗಿಲ್ಲ. ರಾಜಕಾಲುವೆ ಪೊದೆಗಳಿಂದ ತುಂಬಿಕೊಂಡಿದೆ. ಇದರಿಂದಾಗಿ ಮುಂದಿನ ಮಳೆಗಾಲದಲ್ಲಿ ಕೃತಕ ನೆರೆಯ ಭೀತಿ ಎದುರಾಗಿದೆ. ಸಾಮಾನ್ಯವಾಗಿ ಫೆಬ್ರವರಿ ತಿಂಗಳಿನಲ್ಲಿ ರಾಜಕಾಲುವೆ ಹೂಳೆತ್ತುವ ಬಗ್ಗೆ ನಿರ್ಧಾರಗೊಂಡು ಮಾರ್ಚ್‌ನಲ್ಲಿ ಕೆಲಸ ನಡೆಯುತ್ತದೆ. ಆದರೆ, ಈ ಬಾರಿ ಮಾರ್ಚ್ ಅಂತ್ಯಕ್ಕೆ ಬಂದರೂ ಹೂಳೆತ್ತುವ ಕಾಮಗಾರಿ ಪ್ರಕ್ರಿಯೆಯೇ ಆರಂಭಗೊಂಡಿಲ್ಲ. ಕೊಟ್ಟಾರ ಚೌಕಿ, ಸಾಲ್ಕನೇ ಮೈಲ್‌ನಿಂದ ದಂಬೆಲ್‌ವರೆಗೆ ರಾಜಕಾಲುವೆಯ ಹೂಳು ತೆಗೆಯುವ ಕೆಲಸ ಆಗಲೇಬೇಕು ಎಂಬುದು ಸ್ಥಳೀಯರ ಆಗ್ರಹ.

ಮಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳ, ಇಂಜಿನಿಯರ್‌ಗಳ ಅಸಮರ್ಪಕ ಕಾರ್ಯ ನಿರ್ವಹಣೆಯಿಂದಲೇ ನೀರಿನ ಸಮಸ್ಯೆ ಉಂಟಾಗುತ್ತಿದೆ. ಪೈಪ್ ಲೈನ್‌ನಲ್ಲಿ ನೀರಿನ ಪ್ರೆಶರ್ ಕಡಿಮೆ ಇರುವ ಕುರಿತು 100 ಬಾರಿ ಹೇಳಿದರೂ ಸಮಸ್ಯೆಯನ್ನು ಅವರು ಒಪ್ಪಿಕೊಳ್ಳುತ್ತಿಲ್ಲ. ಬಂಗ್ರಕೂಳೂರು ವಾರ್ಡ್‌ನ ನೀರಿನ ಪೈಪ್‌ಲೈನ್‌ಗಳಲ್ಲಿ ಸೋರಿಕೆ ಇಲ್ಲ. ಆದರೆ, ಪ್ರೆಶರ್ ಕಡಿಮೆ ಇದೆ. ದಂಬೆಲ್ ಪ್ರದೇಶಕ್ಕೆ ಎರಡು ದಿನಕ್ಕೊಮ್ಮೆ ನೀರು ಸಿಗುತ್ತಿದೆ. ಮಳೆಗಾಲದಲ್ಲಿ ಕೃತಕ ನೆರೆ ತಡೆಯಲು ಮನಪಾ ವತಿಯಿಂದ ಇನ್ನಾದರೂ ರಾಜಕಾಲುವೆಗಳ ಹೂಳೆತ್ತುವ ಕಾರ್ಯ ನಡೆಸಬೇಕು.



■ ಕಿರಣ್ ಕುಮಾರ್ ಕೋಡಿಕಲ್
ಬಂಗ್ರಕೂಳೂರು ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

ಮನಪಾ ಅಧಿಕಾರಿಗಳ ಬೇಜವಾಬ್ದಾರಿಯಿಂದಲೇ ಬಂಗ್ರಕೂಳೂರು ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಉಂಟಾಗಿದೆ. ಕಳೆದ 10 ವರ್ಷಗಳಲ್ಲಿ ನೀರಿನ ಸಂಪರ್ಕ, ಜನಸಂಖ್ಯೆ ಹೆಚ್ಚಾಗಿದೆ. ಆದರೆ, ಪೂರೈಕೆಯಾಗುವ ನೀರಿನ ಪ್ರಮಾಣ ಇಳಿಮುಖವಾಗಿದೆ. ಇದರಿಂದಾಗಿ ಪ್ರೆಶರ್ ಕಡಿಮೆಯಾಗಿ ಶಾಂತಿಲೇನ್ ಮುಂತಾದ ಪೈಪ್ ಲೈನ್‌ನ ಕೊನೆಯ ಸ್ಥಳಗಳಿಗೆ ನೀರು ತಲುಪುತ್ತಿಲ್ಲ. ನೀರಿನ ಸಮಸ್ಯೆ ಬಗ್ಗೆ ಅಧಿಕಾರಿಗಳಿಗೆ ಕರೆ ಮಾಡಿದರೆ ಸ್ಪಂದನೆ ಇಲ್ಲ. ಜಲಸಿರಿ ಯೋಜನೆ ಕಾಮಗಾರಿಯನ್ನೂ ಸಂಬಂಧಿಸಿದ ಅಧಿಕಾರಿಗಳು ಮೇಲ್ವಿಚಾರಣೆ ಮಾಡುತ್ತಿಲ್ಲ. ಟ್ಯಾಂಕರ್ ಮೂಲಕ ದಿನಕ್ಕೆ 40 ಮನೆಗಳಿಗಷ್ಟೇ ನೀರು ಪೂರೈಕೆ ಸಾಧ್ಯವಾಗುತ್ತಿದೆ. ಮನಪಾ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ನೀರಿನ ಸಮಸ್ಯೆ ಪರಿಹರಿಸಬೇಕು.

■ ನವನೀತ್ ಕೋಟ್ಯಾನ್
ದಂಬೆಲ್, ಸ್ಥಳೀಯರು.

ನಾಳೆ ವಾರ್ಡ್ -17
ದೇರೆಬೈಲ್ ಉತ್ತರ ಪರಿಸರದ ಸ್ಥಿತಿಗತಿ

ಆಟೋಗ್ಯಾಸ್ ಪಂಪಿನ ಸಿಬ್ಬಂದಿಗೆ ಹಲ್ಲೆ

ಆರೋಪಿಯ ಸೆರೆ

• **ಬಂಟ್ವಾಳ:** ಪಾಣೆಮಂಗಳೂರು ಸಮೀಪದ ಮೆಲ್ಕಾರ್-ಗುಡ್ಡೆ ಅಂಗಡಿ ಆಟೋ ಗ್ಯಾಸ್ ಪಂಪಿಗೆ ಬಂದ ಆಟೋ ರಿಕ್ಷಾ ಚಾಲಕನೋರ್ವ ಪಂಪಿನಸಿಬ್ಬಂದಿಗೆಅವಾಚ್ಯಶಬ್ದಗಳಿಂದನಿಂದಿಸಿ ಹಲ್ಲೆಗೈದ ಘಟನೆ ನಡೆದಿದ್ದು, ಈ ಸಂಬಂಧ ಬಂಟ್ವಾಳ ನಗರ ಠಾಣಾ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಸಜಿಪಮೂಡ ಗ್ರಾಮದ ಅಫ್ರೀರುಫ್ (28) ಬಂಧಿತ ಆರೋಪಿಯಾಗಿದ್ದಾನೆ.



ಈ ಬಗ್ಗೆ ಪಂಪಿನ ಮ್ಯಾನೇಜರ್ ಕುನಲ್ ಭುಕ್ಷ್ಮಿಯಾ ಅವರು ನೀಡಿದ ದೂರಿನನ್ವಯ ಬಂಟ್ವಾಳ ನಗರ ಠಾಣೆಯಲ್ಲಿ ಕೇಸು ದಾಖಲಾಗಿದೆ. ಬೊಗೋಡಿ ಎಂಬಲ್ಲಿರುವ ಗ್ಯಾಸ್ ಪಂಪಿನಲ್ಲಿ ಸಂಜೆ ಆಟೋ ರಿಕ್ಷಾವನ್ನು ಚಲಾಯಿಸಿಕೊಂಡು ಬಂದ ಆರೋಪಿ, ಆಟೋ ಚಾಲಕ ಅಫ್ರೀರುಫ್ ಗ್ಯಾಸ್ ಪಂಪ್ ಏಜೆನ್ಸಿಯ ಒಳಗೆ ಪ್ರವೇಶಿಸಿ ಕಚೇರಿ ಸಿಬ್ಬಂದಿ ಅಶ್ವಿನ್ ಎಂಬವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದಾನೆ.

ನಂತರ ಹೊರಬಂದು ಗ್ಯಾಸ್ ಪಂಪ್ ಏಜೆನ್ಸಿಯ ಸೊತ್ತುಗಳಿಗೆ ಹಾನಿ ಮಾಡಿದ್ದು, ಸುಮಾರು 48 ಸಾವಿರ ರೂಪಾಯಿಗಳಷ್ಟು ನಷ್ಟ ಉಂಟುಮಾಡಿದ್ದಾನೆ ಎಂದು ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಘಟನೆಯ ವೀಡಿಯೋ ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿದ್ದು, ಆರೋಪಿ ಗ್ಯಾಸ್ ಪಂಪಿನ ಅಂಗಳದಲ್ಲಿ ರೌಡಿಯಂತೆ ವರ್ತಿಸುತ್ತಿದ್ದು, ಈ ಸಂದರ್ಭ ಸ್ಥಳಕ್ಕೆ ಬಂದ ಬೀಟ್ ಪೊಲೀಸ್ ಸಿಬ್ಬಂದಿ ಪ್ರವೀಣ್ ಅವರು ಆರೋಪಿಯನ್ನು ಎತ್ತಿಕೊಂಡು ಬಂಧಿಸುವ ದೃಶ್ಯ ಸೆರೆಯಾಗಿದೆ.

ಯುಪಿಎಸ್‌ಸಿ ಪರೀಕ್ಷಾರ್ಥಿಗಳಿಗೆ ಪ್ರೋತ್ಸಾಹ: ಸಚಿವ



• **ಬೆಂಗಳೂರು:** ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದ ಅಭ್ಯರ್ಥಿಗಳು ಯುಪಿಎಸ್ಸಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದು, ಇದು ಉತ್ತಮ ಬೆಳವಣಿಗೆಯಾಗಿದೆ. ಗ್ರಾಮೀಣ ಪ್ರದೇಶದವರಿಗೆ ಮತ್ತಷ್ಟು ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಹೇಳಿದ್ದಾರೆ.

ಇಂಡಿಯಾ ಫಾರ್ ಐಎಎಸ್ ಅಕಾಡೆಮಿ ವತಿಯಿಂದ ಸೋಮವಾರ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಆಯೋಜಿಸಿದ್ದ 2025-26 ರ ಯುಪಿಎಸ್ಸಿ ಪರೀಕ್ಷೆಯಲ್ಲಿ ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಲ್ಲಿ ಆಯ್ಕೆಯಾದ ರಾಜ್ಯದ 19 ಸಾಧಕರನ್ನು ಅಭಿನಂದಿಸಿ ಮಾತನಾಡಿದ ಅವರು, ನಾಗರಿಕ ಸೇವೆ ಅತ್ಯಂತ ಶ್ರೇಷ್ಠ ಮತ್ತು ಪರಮೋಚ್ಚ ಅವಕಾಶವಾಗಿದೆ. ಪ್ರಧಾನಿ ನೇತೃತ್ವದಲ್ಲಿ ಕೈಗೊಂಡ ತೀರ್ಮಾನವನ್ನು ಆದೇಶದ ಮೂಲಕ ಜಾರಿ ಮಾಡುವವರು ಅಧಿಕಾರಿಗಳು. ಅಧಿಕಾರಿಗಳಿಗೆ ಸಂವಿಧಾನ ಅಷ್ಟೊಂದು ಪರಮಾಧಿಕಾರ ನೀಡಿದೆ.

ನಾಗರಿಕ ಸೇವೆಯಿಂದ ಬಹಳಷ್ಟು ಜನ ಉತ್ತಮ ಕೆಲಸ ಮಾಡಿದ್ದಾರೆ ಎಂದರು. ಅಧಿಕಾರಿಗಳು ಸಾಮಾನ್ಯ ಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡಬೇಕು. ಜನ ಸಾಮಾನ್ಯರಿಗೆ ಸೇವೆ ಸಲ್ಲಿಸಲು ನಿಮಗೆ ಆಕಾಶವೇ ಮಿತಿಯಾಗಿದೆ. ತಾಳ್ಮೆಯಿಂದ, ವಿವೇಚನೆಯಿಂದ ಕೆಲಸ ಮಾಡಬೇಕು. ಉತ್ತಮ ವಿಧಾನಗಳನ್ನು ಅಳವಡಿಸಿಕೊಂಡರೆ ಉತ್ತಮ ಕೆಲಸ ಮಾಡಲು ನೆರವಾಗಲಿದೆ ಎಂದು ಕಿವಿ ಮಾತು ಹೇಳಿದರು. ಕಾರ್ಯಕ್ರಮದಲ್ಲಿ ಸಂಸ್ಥೆ ಅಧ್ಯಕ್ಷ ಡಾ.ಸಿ.ಎಸ್ ಕೇದಾರ್, ಉಪಾಧ್ಯಕ್ಷ ಡಾ.ಜಿ.ಎನ್ ಶ್ರೀ ಕಂಠಯ್ಯ, ಶ್ರೀ ನಿವಾಸ್ ಪಿ.ಸಿ ಇದ್ದರು.

ಇರಾನ್ ಮೇಲಿನ ತೈಲ ನಿರ್ಬಂಧ ಸಡಿಲಿಸಿದ ಅಮೆರಿಕ

ಪುಟ ೧➡ ಚೀನಾದ ಸ್ವತಂತ್ರ ಸಂಸ್ಕರಣಾಗಾರಗಳಲ್ಲದೆ, ಇರಾನ್ ತೈಲದ ಪ್ರಮುಖ ಗ್ರಾಹಕರಾದ ಭಾರತ, ಜಪಾನ್ ಮತ್ತು ದಕ್ಷಿಣ ಕೊರಿಯಾ ಈಗ ಈ ಪೂರೈಕೆಯನ್ನು ಪಡೆಯುವ ಸಾಧ್ಯತೆಯಿದೆ. ಉತ್ತರ ಕೊರಿಯಾ, ಕ್ಯೂಬಾ ಮತ್ತು ಕ್ರಿಮಿಯಾವನ್ನು ಈ ಪಟ್ಟಿಯಿಂದ ಹೊರಗಿಡಲಾಗಿದೆ. ಈ ಮಾರಾಟದಿಂದ ಬರುವ ಆದಾಯವನ್ನು ಪಡೆಯಲು ಇರಾನ್‌ಗೆ ಕಟ್ಟುನಿಟ್ಟಿನ ನಿರ್ಬಂಧಗಳನ್ನು ವಿಧಿಸಲಾಗಿದೆ ಎಂದು ತಿಳಿದುಬಂದಿದೆ. ಅಮೆರಿಕದ ಬಂದರುಗಳ ನಡುವೆ ಇಂಧನ ಸಾಗಿಸಲು ವಿದೇಶಿ ಹಡಗುಗಳಿಗೆ ಅನುವು ಮಾಡಿಕೊಡಲು 'ಜೋನ್ಸ್ ಕಾಯ್ದೆ'ಯನ್ನೂ 60 ದಿನಗಳ ಕಾಲ ಸಡಿಲಿಸಲಾಗಿದೆ.

ಹೆಚ್ಚುವರಿ ತೈಲ ಲಭ್ಯತೆ ನಿರಾಕರಿಸಿದ ಇರಾನ್

ಪುಟ ೧➡ ಮಾರ್ಚ್ 20ರ ಮೊದಲು ಹಡಗುಗಳಲ್ಲಿ ತುಂಬಲಾದ ಇರಾನ್ ಮೂಲದ ಕಚ್ಚಾ ತೈಲದ ಮಾರಾಟಕ್ಕೆ ಅಮೆರಿಕದ ಖಜಾನೆ ಇಲಾಖೆ ತಾತ್ಕಾಲಿಕ ಅನುಮತಿ ನೀಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಚೀನಾ ಅಗ್ಗದ ದರದಲ್ಲಿ ಸಂಗ್ರಹಿಸಿಟ್ಟಿರುವ ತೈಲ ಪೂರೈಕೆಯನ್ನು ಮುಕ್ತಗೊಳಿಸುವ ಮೂಲಕ ಜಾಗತಿಕ ಇಂಧನ ಬೆಲೆಗಳನ್ನು ಸ್ಥಿರಗೊಳಿಸುವ ತಂತ್ರ ಇದಾಗಿದೆ ಎಂದು ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಬಣ್ಣಿಸಿದ್ದರು.

ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

• **ಬೆಂಗಳೂರು:** ಎಂಬಿಎ, ಎಂಸಿಎ, ಎಂಇ, ಎಂ.ಟೆಕ್, ಎಂ.ಆರ್ಕಿಟೆಕ್ಚರ್ ಕೋರ್ಸ್ (ಪಿಜಿಸಿಇಟಿ-2026) ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು, ಮಾ.23 ರಿಂದ ಏ. 8ರ ಒಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಶುಲ್ಕ ಪಾವತಿಗೆ ಏ.10 ಕೊನೆ ದಿನ. ವಿವಿಧ ಕೋರ್ಸ್‌ಗಳ ಲಿಖಿತ ಪರೀಕ್ಷೆ ಮೇ 23 ಮತ್ತು 24 ರಂದು ನಡೆಸಲಾಗುವುದು ಎಂದು ಹೇಳಿದ್ದಾರೆ.

ದಿನ ಭವಿಷ್ಯ

ಮೇಷ
ಯಶ ಸಾಧಿಸಲು ತಾಳ್ಮೆ ಅವಶ್ಯ. ದುಡುಕಿನ ನಡೆ ಬೇಡ. ಆರ್ಥಿಕ ಹಿನ್ನಡೆ ಬಾಧಿಸಬಹುದು. ಮನೆಯವರ ಸಂಗದಲ್ಲಿ ಸಮಾಧಾನ.

ವೃಷಭ
ದಿನವಿಡೀ ಕೆಲಸ. ವಿರಾಮ ಸಿಗದು. ಖಾಸಗಿ ವಿಚಾರದಲ್ಲಿ ಪ್ರತಿಕೂಲ ಬೆಳವಣಿಗೆ. ಅದನ್ನು ನಾಜೂಕಿನಿಂದ ಸರಿಪಡಿಸಿ. ಬಂಧು ಜತೆ ವಿರಸ.

ಮಿಥುನ
ನಿಮ್ಮ ಪಾಲಿಗೆ ಶುಭಕರ ಬೆಳವಣಿಗೆ. ಕ್ಲಿಷ್ಟವಾಗಿದ್ದ ಪರಿಸ್ಥಿತಿ ತಿಳಿಯಾಗಲಿದೆ. ಅನಿರೀಕ್ಷಿತ ದಿಕ್ಕಿನಿಂದ ಬೆಂಬಲ. ಆರ್ಥಿಕ ಉನ್ನತಿ.

ಕಟಕ
ಇತರರ ಜತೆ ವ್ಯವಹಾರದಲ್ಲಿ ಇಂದು ಎಚ್ಚರದಿಂದಿರಿ. ಮೋಸ ಹೋಗುವ ಸಾಧ್ಯತೆ. ಭಾವನಾತ್ಮಕ ಏರುಪೇರು ಉಂಟಾದೀತು.

ಸಿಂಹ
ದಿನವಿಡೀ ಏನೇನೋ ಅಡ್ಡಿಗಳು. ಮಹತ್ವದ ಕೆಲಸ ಮುಂದೂಡಿ. ದೊಡ್ಡ ಸಮಸ್ಯೆಗೆ ಸರಳ ಪರಿಹಾರವಿದೆ, ಅತ್ತ ಗಮನ ಹರಿಸಿರಿ.

ಕನ್ಯಾ
ಯಶಸ್ವೀ ದಿನ. ಮೆಚ್ಚಿನ ಹವ್ಯಾಸದಲ್ಲಿ ಆನಂದ ಪಡೆಯುವಿರಿ. ಆರೋಗ್ಯ ಸಮಸ್ಯೆ ನಿವಾರಣೆ. ಕೌಟುಂಬಿಕ ಚಿಂತೆ ಪರಿಹಾರ.

ತುಲಾ
ಕೆಲ ಸಮಯದಿಂದ ಕಾಡುತ್ತಿದ್ದ ಸಮಸ್ಯೆಗೆ ಪರಿಹಾರ ಸಿಗಲಿದೆ. ಸೂಕ್ತ ನೆರವೂ ಸಿಗಲಿದೆ. ಮನೆಯಲ್ಲಿ ವಾಗ್ವಾದಕ್ಕೆ ಆಸ್ಪದ ನೀಡಬೇಡಿ.

ವೃಶ್ಚಿಕ
ಇಂದು ಅತೃಪ್ತಿ ತರುವ ಬೆಳವಣಿಗೆಯೇ ಹೆಚ್ಚು. ಬಂದುದನ್ನು ಸಮಾಧಾನದಿಂದ ಸ್ವೀಕರಿಸಿ. ದುಡುಕಿನ ವರ್ತನೆ ತೋರದಿರಿ.

ಧನು
ಕೆಲದಿನಗಳ ಕಷ್ಟದ ಬಳಿಕ ಖುಷಿ ತರುವ ಹೊಸ ಬೆಳವಣಿಗೆ. ಕೈಗೊಂಡ ನಿರ್ಧಾರದಲ್ಲಿ ಯಶಸ್ಸು. ಆರ್ಥಿಕ ಸ್ಥಿತಿ ಸಮಾಧಾನಕರ.

ಮಕರ
ಸಮಸ್ಯೆಯೊಂದು ಮನಃಶಾಂತಿ ಕೆಡಿಸಲಿದೆ. ಅದರ ಪರಿಹಾರವೂ ಕಷ್ಟವೆನಿಸುವುದು. ಆತುರ ಬೇಡ. ಕಾದುನೋಡುವ ತಂತ್ರ ಅನುಸರಿಸಿ.

ಕುಂಭ
ಪ್ರತಿಕೂಲ ಪರಿಸ್ಥಿತಿ ಎದುರಿಸಿದರೂ ಅದನ್ನು ನಿಮ್ಮ ಪರವಾಗಿ ಬದಲಿಸಿಕೊಳ್ಳಿ. ಕೌಟುಂಬಿಕ ಸಾಮರಸ್ಯ ಕೆಡದಂತೆ ನೋಡಿಕೊಳ್ಳಿ.

ಮೀನ
ನೆಗೆಟಿವ್ ಚಿಂತನೆ ಬಾಧಿಸಲಿದೆ. ಸಂಗಾತಿ ಜತೆ ಜಗಳಕ್ಕೆ ಆಸ್ಪದ ನೀಡದಿರಿ. ಹೊಂದಾಣಿಕೆ ಬದುಕಿಗೊಳಿತು. ಮಕ್ಕಳ ಸಾಧನೆಯ ತೃಪ್ತಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 2,8,0,1

ಶಕಾವತಾರ ಕಾಫಿಟೇಬಲ್ ಪುಸ್ತಕ ಲೋಕಾರ್ಪಣೆ

ಶಿವಾಜಿ ಶ್ರೇಷ್ಠ ಆಡಳಿತಗಾರ

• **ಬೆಳಗಾವಿ:** ವಿಕ್ರಮ ವಾರಪತ್ರಿಕೆ ಹೊರ ತಂದಿರುವ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ರೋಮಾಂಚಕ ಹಾಗೂ ಸ್ಫೂರ್ತಿದಾಯಕ ಬದುಕು ಮತ್ತು ಸಾಧನೆಗಳ ಕುರಿತಾಗಿ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಹೊರ ತರಲಾಗಿರುವ ಶಕಾವತಾರ ವಿಶೇಷ ಕಾಫಿ ಟೇಬಲ್ ಪುಸ್ತಕ ಶನಿವಾರ ಸಂಜೆ

ಕೆ.ಎಲ್.ಇಯ ಡಾ.ಬಿ.ಎಸ್.ಜಿರಗೆ ಸಭಾಭವನದಲ್ಲಿ ನಡೆದ ಸುಂದರ ಸಮಾರಂಭದಲ್ಲಿ ಲೋಕಾರ್ಪಣೆಗೊಂಡಿತು. ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ಆರ್‌ಎಸ್‌ಎಸ್ ಅಖಿಲ ಭಾರತೀಯ ಸಹ ವ್ಯವಸ್ಥಾ ಪ್ರಮುಖರಾದ ಅನಿಲ್ ಓಕ್ ಛತ್ರಪತಿ ಶಿವಾಜಿ ಅವರ ಜೀವನ, ಯುದ್ಧ ಕೌಶಲ್ಯ, ಆಡಳಿತ ನಿರ್ವಹಣೆ, ಅರ್ಥಶಾಸ್ತ್ರ, ಧರ್ಮ ಸ್ಥಾಪನೆಯಲ್ಲಿ ಅವರ ಪಾತ್ರದ ಕುರಿತಾಗಿ ಸುದೀರ್ಘ ಮಾತನಾಡಿದರು.

ಶಿವಾಜಿ ಅವರ ಯುದ್ಧ ನೀತಿ ಅತಿ ಶ್ರೇಷ್ಠವಾಗಿತ್ತು. ದಾಳಿಯೇ ಅತಿದೊಡ್ಡ ರಕ್ಷಣಾ ತಂತ್ರ ಎಂದು ಅವರು ನಂಬಿದ್ದರು. ಅವರ ಅರ್ಥ ನೀತಿಯೂ ಶ್ರೇಷ್ಠವಾಗಿತ್ತು. ಆಡಳಿತ ಶೈಲಿ ಮಾದರಿಯದ್ದು. ಶಿವಾಜಿಯನ್ನು ಭಾರತದ ನೌಕಾಸೇನೆಯ ಸೃಷ್ಟಿ ಕರ್ತ ಎನ್ನಲಾಗುತ್ತದೆ. ವಾಣಿಜ್ಯ ನೌಕಾದಳದ ಸೃಷ್ಟಿ ಕರ್ತರೂ ಹೌದು. ಇಂದಿಗೂ ನೌಕಾದಳದವರು ಶಿವಾಜಿಯನ್ನು ಫಾದರ್ ಆಫ್ ನೌಕಾಸೇನಾ ಎಂದು ನಂಬುತ್ತಾರೆ ಎಂದು ಅನಿಲ್ ಓಕ್ ವರ್ಣಿಸಿದರು. ಬೆಂಗಳೂರಿನ ಗವಿಪುರಂನ ಶ್ರೀ ಗೋಸಾಯಿ ಮಹಾ ಸಂಸ್ಥಾನ ಮಠದ ಪ.ಪೂ ಜಗದ್ಗುರು ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತಿ



ದೇಶದ ಕಠಿಣ ಪರಿಸ್ಥಿತಿಯಲ್ಲಿ ಶಿವಾಜಿ ಮಹಾರಾಜರ ಅವತಾರ ಆಗಿತ್ತು. ಧರ್ಮ ವಿರೋಧಿ, ಜನ ವಿರೋಧಿ ಜನರನ್ನು ದಮನಿಸಿ ಧರ್ಮ ರಕ್ಷಿಸಿದ ಕೀರ್ತಿ ಶಿವಾಜಿ ಅವರದ್ದು. ಶಿವಾಜಿ ನಮ್ಮ ರಾಷ್ಟ್ರಪುರುಷ
■ ಮಂಜುನಾಥ ಭಾರತಿ ಸ್ವಾಮೀಜಿ

ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತ ಮಾಜಿ ರಾಜ್ಯಸಭಾ ಸದಸ್ಯರಾದ ಪ್ರಭಾಕರ ಕೋರೆ, ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾದ ಮಂಗೇಶ್ ಭೇಂಡೆ ಉಪಸ್ಥಿತರಿದ್ದರು. ಆರ್‌ಎಸ್‌ಎಸ್ ಕರ್ನಾಟಕ ಉತ್ತರದ ಪ್ರಾಂತ ಕಾರ್ಯಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ಪ್ರಾಸ್ತಾವಿಕ ಮಾತನಾಡಿದರು.

ವಿಕ್ರಮ ಸಂಪಾದಕ ರಮೇಶ ದೊಡ್ಡಾಪುರ ಸ್ವಾಗತಿಸಿ ಪರಿಚಯಿಸಿದರು. ಜ್ಞಾನಭಾರತಿ ಪ್ರಕಾಶನದ ನಿರ್ದೇಶಕ ದು.ಗು.ಲಕ್ಷ್ಮಣ ಮಾತನಾಡಿ, ಶಿವಾಜಿ ಕಾಫಿಟೇಬಲ್ ಬುಕ್ ಕುರಿತಾಗಿ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಶ್ರೀಗಳಿಗೆ ಪ್ರಭಾಕರ ಕೋರೆ, ಅರವಿಂದರಾವ್ ದೇಶಪಾಂಡೆ ಅವರನ್ನು ದು.ಗು. ಲಕ್ಷ್ಮಣ ಸನ್ಮಾನಿಸಿದರು. ಮಂಗೇಶ ಭೇಂಡೆ, ಅನಿಲ್ ಓಕ್ ಅವರನ್ನು ಪ್ರಭಾಕರ ಕೋರೆ ಸನ್ಮಾನಿಸಿದರು. ದು.ಗು.ಲಕ್ಷ್ಮಣ ಅವರನ್ನು ನಾ.ನಾಗರಾಜ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಲೇಖಕರಿಗೆ ಅತಿಥಿಗಳು ಸನ್ಮಾನಿಸಿ ಗೌರವಿಸಿದರು.

ಹೊಸ ದಿಗಂತ ಹುಬ್ಬಳ್ಳಿ ಬ್ಯೂರೋ ಹೆಡ್ ವಿಠ್ಠಲದಾಸ ಕಾಮತ್ ವಂದಿಸಿದರು. ಮಾನಸಿ ಗೋಖಲೆ ಕಾರ್ಯಕ್ರಮ ನಿರ್ವಹಿಸಿದರು. ಪ್ರಾರಂಭದಲ್ಲಿ ಭರತನಾಟ್ಯ, ಸ್ವಾಗತ ಗೀತೆ, ಶಿವಾಜಿ ಕುರಿತಾದ ಕಿರುಚಿತ್ರ ಪ್ರದರ್ಶನ ನಡೆಯಿತು. ಕೊನೆಯಲ್ಲಿ ಚೈತ್ರಾ ಹೆಗಡೆ ವಂದೇ ಮಾತರಂ ಗೀತೆ ಹಾಡಿದರು.

ಬಗೆಹರಿಯದ ಕೈ ಟಿಕೆಟ್ ಗೊಂದಲ

ಪುಟ ೧➡ ಇನ್ನೊಂದೆಡೆ ಈ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಆಡಳಿತ ವಿರೋಧಿ ಅಲೆ ಇದೆ ಎಂದು ಸಾಬೀತುಪಡಿಸಿ, ಹೈಕಮಾಂಡ್‌ನಿಂದ ಭೇಷ್ ಎನ್ನಿಸಿಕೊಂಡು ವಿಶ್ವಾಸ ಉಳಿಸಿಕೊಳ್ಳಬೇಕೆಂಬ ಶತಪ್ರಯತ್ನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇದ್ದಾರೆ. ಬಾಗಲಕೋಟೆ ಕ್ಷೇತ್ರಕ್ಕಿಂತ ದಾವಣಗೆರೆ ಕ್ಷೇತ್ರದ ಟಿಕೆಟ್ ಘೋಷಣೆಯೇ ಕಾಂಗ್ರೆಸ್‌ಗೆ ಸಮಸ್ಯೆಯಾಗಿದೆ, ಇಲ್ಲಿ ಶಾಮನೂರು ಕುಟುಂಬವನ್ನು ಬಿಡುವಂತಿಲ್ಲ, ಮುಸ್ಲಿಂ ನಾಯಕರ ಬೇಡಿಕೆಯನ್ನು ತಳ್ಳಿ ಹಾಕುವಂತಿಲ್ಲ.

ಮುಸ್ಲಿಂ ಸಮುದಾಯದ ಸಚಿವರು ಮತ್ತು ಶಾಸಕರು ಟಿಕೆಟ್ ಬೇಕೆ, ಬೇಕು ಎಂದು ಬೇಡಿಕೆ ಇಟ್ಟಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಶಾಮನೂರು ಕುಟುಂಬದ ಸಚಿವ ಎಸ್.ಎಸ್ ಮಲ್ಲಿಕಾರ್ಜುನ ಪುತ್ರ ನಾಮಪತ್ರ ಸಲ್ಲಿದ್ದಾರೆ. ಈ ಬಗ್ಗೆಯೂ ಹೈಕಮಾಂಡ್ ಗಮನಕ್ಕೆ ತರಲಾಗಿದೆ. ಲಿಂಗಾಯತ ನಾಯಕರು ಶಾಮನೂರು ಕುಟುಂಬಕ್ಕೆ ಬೆಂಬಲ ಸೂಚಿಸಿರುವುದು ಪಕ್ಷದಲ್ಲಿ ಗೊಂದಲ ಇದೆ ಎಂದು ಸ್ಪಷ್ಟಪಡಿಸಿದೆ.

ಸುರ್ಜೇವಾಲಾ ನೇತೃತ್ವದಲ್ಲಿ ಮಹತ್ವದ ಸಭೆ: ಟಿಕೆಟ್ ಹಂಚಿಕೆ ಸಂಬಂಧ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ರಾಜ್ಯ ನಾಯಕರ ಜೊತೆ ಮಹತ್ವದ ಸಭೆ ನಡೆಸಿದ್ದು, ಈ ಸಭೆಯಲ್ಲಿ ಕಾಂಗ್ರೆಸ್ ನಾಯಕ, ಸಚಿವ ಜಮೀರ್ ಅಹ್ಮದ್ ಸೇರಿದಂತೆ ಹಲವು ಮುಸ್ಲಿಂ ನಾಯಕರು ರಾಜೀನಾಮೆ ಅಸ್ತ್ರ ಪ್ರಯೋಗಿಸಿದ್ದಾರೆ ಎಂದು ಹೇಳಲಾಗಿದೆ.



ಕಾಂಗ್ರೆಸ್ ಒಂದೇ ಸಮುದಾಯವನ್ನು ನೆಚ್ಚಿಕೊಂಡಿಲ್ಲ. ಎರಡೂ ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲುವ ವಿಶ್ವಾಸವಿದೆ. ಟಿಕೆಟ್ ಹಂಚಿಕೆಯನ್ನು ಅಂತಿಮವಾಗಿ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ.
■ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಜಮೀರ್ ಅಹ್ಮದ್ ಅವರು ದಾವಣಗೆರೆಯಲ್ಲಿ ಮುಸಲ್ಮಾನ್ ಬಂಧುಗಳಿಗೇ ಟಿಕೆಟ್ ಕೊಡಬೇಕು. ಇಲ್ಲವಾದರೆ ರಾಜೀನಾಮೆ ಕೊಡುವ ಬೆದರಿಕೆ ಒಡ್ಡಿದ್ದಾರೆ. ಇದಕ್ಕೆ ಕಾಂಗ್ರೆಸ್ ಯಾವುದೇ ಸೊಪ್ಪು ಹಾಕಿಲ್ಲ. ಇದು ಕಾಂಗ್ರೆಸ್ ಅಲ್ಪಸಂಖ್ಯಾತರ ಮೇಲಿನ ಪ್ರೀತಿ ತೋರಿಸುತ್ತದೆ.
■ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ವಿಪಕ್ಷ ನಾಯಕ

ಭಾನುವಾರ ಬೆಳಗ್ಗೆ ಟಿಕೆಟ್ ಘೋಷಣೆ ಆಗುತ್ತೆ. ಸೋಮವಾರದವರೆಗೆ ನಾಮಪತ್ರ ಸಲ್ಲಿಕೆಗೆ ಸಮಯವಿದೆ ಎಂದರು.

ಭಯೋತ್ಪಾದನೆಯಲ್ಲಿ ಪಾಕಿಸ್ತಾನ ನಂ.1

• **ಇಸ್ಲಾಮಾಬಾದ್:** ಒಂದು ಕಾಲದಲ್ಲಿ ತಾನೇ ಅನ್ನ ಹಾಕಿ, ಸಲಹಿ, ಪೊರೆದು ಪೋಷಿಸಿದ ಉಗ್ರವಾದವೇ ಪಾಕಿಸ್ತಾನಕ್ಕೆ ಮುಳ್ಳಾಗಿದೆ.

ಏಕೆ ಪಾಕ್ ಮತ್ತೆ ಅಗ್ರ ಸ್ಥಾನಕ್ಕೆ?
- ಅಫ್ಘಾನ್ ಗಡಿ ಅಸ್ಥಿರತೆ
- ಟಿಟಿಪಿ ಪುನರುತ್ಥಾನ
- ಬಲೂಚ್ ಉಗ್ರ ಚಟುವಟಿಕೆ
- ಭದ್ರತಾ ವೈಫಲ್ಯ
- ಪ್ರಾದೇಶಿಕ ರಾಜಕೀಯ ಅಶಾಂತಿ

ಜಾಗತಿಕ ಭಯೋತ್ಪಾದನಾ ಸೂಚ್ಯಂಕ 2026ರಲ್ಲಿ ಪಾಕಿಸ್ತಾನವೇ ಅತ್ಯಂತ ಹೆಚ್ಚು ಉಗ್ರ ಬಾಧಿತ ದೇಶವಾಗಿ ಹೊರ ಹೊಮ್ಮಿದ್ದು, ತಾನು ಬೆಂಬಲಿಸಿದವರಿಂದಲೇ ಏಟು ತಿನ್ನುತ್ತಿದೆ. ಇದುವರೆಗೆ ಪಾಕಿಸ್ತಾನವನ್ನು ಉಗ್ರ ಪೋಷಕ ದೇಶವೆಂದೇ ಕರೆಯಲಾಗುತ್ತಿತ್ತು. ಇದರಿಂದ ನೆರೆ ಹೊರೆಯ ದೇಶಗಳಿಗೆ ಹೆಚ್ಚು ಹಾನಿಯಾ ಗುತ್ತಿತ್ತೇ ವಿನಃ ತನಗೆ ಏನೂ ಆಗುತ್ತಿ ರಲಿಲ್ಲ. ಆದರೆ, ಈಗ ನೆರೆಯ ದೇಶಗಳ ಭದ್ರತಾ ಸ್ಥಿತಿ, ರಾಜಕೀಯ ಗಟ್ಟಿತನದಿಂದಾಗಿ ಪಾಕ್ ಪ್ರಾಯೋಜಿತ ಉಗ್ರರು, ತಮ್ಮ ದೇಶದ ಒಳಗೇ ದಾಳಿ ನಡೆಸಿ ಜನರನ್ನು ಕೊಲ್ಲುತ್ತಿದ್ದಾರೆ. ತೆಹ್ರೀಕ್-ಇ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ), ಬಲೂಚ್‌ನ ಪ್ರತ್ಯೇಕ ಹೋರಾಟಗಾರರ ಜಾಲ ಮತ್ತು ಅಫ್ಘಾನ್ ಗಡಿ ಅಸ್ಥಿರತೆ ಪರಿಣಾಮವಾಗಿ ಪಾಕ್ ಈ ಪಟ್ಟಿಯಲ್ಲಿ ಅಗ್ರ ಸ್ಥಾನ ಪಡೆದಿದೆ. ಅಂದರೆ, 2025ರಲ್ಲಿ ಪಾಕಿಸ್ತಾನದಲ್ಲಿ ಉಗ್ರ ದಾಳಿಗಳ ತೀವ್ರತೆ ಏರಿಕೆಯಾಗಿದ್ದು, ಅದು ಉಗ್ರತೆ ಯಿಂದ ಅತ್ಯಂತ ಹೆಚ್ಚು ಬಾಧಿತ ದೇಶಗಳ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಿದೆ.

ಜಾಗತಿಕ ಉಗ್ರಸೂಚ್ಯಂಕ 2026

ಅಂಶ	ವಿವರ
ಅತ್ಯಂತ ಬಾಧಿತ ದೇಶ	ಪಾಕಿಸ್ತಾನ
ಪಾಕಿಸ್ತಾನದ ಅಂಕ	8.574
ಪಾಕ್ ಉಗ್ರ ಸಾವು	1,139
ಪಾಕ್ ಗಾಯಾಳುಗಳು	1,595
ಪಾಕ್ ಉಗ್ರ ಘಟನೆಗಳು	1,045
ಜಾಗತಿಕ ಉಗ್ರ ಸಾವು	5,582
ಹಿಂದಿನ ವರ್ಷ	7,714
ಜಾಗತಿಕ ಇಳಿಕೆ	ಸುಮಾರು 28%
ಜಾಗತಿಕ ದಾಳಿಗಳ ಇಳಿಕೆ	ಸುಮಾರು 22%
ಟಿಟಿಪಿ ದಾಳಿಗಳು	481ರಿಂದ 595ಕ್ಕೆ
ಟಿಟಿಪಿ ಏರಿಕೆ	24%
ಬುರ್ಕಿನಾ ಫಾಸೋಗೆ	2ನೇ ಸ್ಥಾನ

ಚಾಮುಂಡೇಶ್ವರಿಗೆ ನಮೋ ಭಕ್ತಿನಮನ

ಪುಟ ೧➡ ಇದರೊಂದಿಗೆ ಕನ್ನಡ ಭಕ್ತಿಗೀತೆಯ ಯೂಟ್ಯೂಬ್ ಲಿಂಕ್ ಹಂಚಿಕೊಂಡಿದ್ದರು. ಇದೇ ವೇಳೆ ಡಾ.ರಾಜ್‌ಕುಮಾರ್ ಹ್ಯಾಶ್‌ಟ್ಯಾಗ್ ಸಹ ಎಕ್ಸ್‌ನಲ್ಲಿ ಟ್ರೆಂಡ್ ಆಗಿದೆ. ಕನ್ನಡ ಭಕ್ತಿಗೀತೆಯನ್ನು ಎಕ್ಸ್ ಪೋಸ್ಟ್‌ನಲ್ಲಿ ಹಂಚಿಕೊಳ್ಳುವ ವೇಳೆ ಸಂದೇಶವನ್ನು ಹಿಂದಿಯಲ್ಲಿ ಬರೆದಿರುವ ಮೋದಿ ಭಕ್ತಿಗೆ ಯಾವುದೇ ಭಾಷೆಯ ವ್ಯತ್ಯಾಸ ಇರುವುದಿಲ್ಲ ಎಂಬ ಸಂದೇಶ ಸಾರಿದ್ದಾರೆ. ಹಲವು ಬಾರಿ ಬಸವಣ್ಣನವರು ಸೇರಿ ಕನ್ನಡ ಸಾಂಸ್ಕೃತಿಕ, ಆಧ್ಯಾತ್ಮಿಕ ಪರಂಪರೆಯನ್ನು ಕೊಂಡಾಡಿರುವ ಮೋದಿ ಕರುನಾಡಿನ ನಾಡದೇವತೆ ಮೇಲಿನ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಿದ್ದಾರೆ.

ಶಕ್ತಿ ಉಪಾಸನೆ ಮಹತ್ವ: ಚಾಮುಂಡೇಶ್ವರಿ ಅಮ್ಮನವರ ಕನ್ನಡ ಭಕ್ತಿಗೀತೆ ಹಂಚಿಕೊಳ್ಳುವ ಮೂಲಕ ದೇಶದ ಆಧ್ಯಾತ್ಮಿಕ ಪರಂಪರೆ ಮತ್ತು ಶಕ್ತಿ ಉಪಾಸನೆಯ ಮಹತ್ವವನ್ನು ಮೋದಿ ತಿಳಿಸಿಕೊಟ್ಟಿದ್ದಾರೆ. ಹಾಡಿನಲ್ಲಿ ಚಾಮುಂಡೇಶ್ವರಿ ದೇವಿಯ ಶಕ್ತಿ, ಮಹಿಮೆ ಮತ್ತು ಕರುಣೆಯನ್ನು ಕೊಂಡಾಡುತ್ತದೆ. ಈ ಹಾಡಿನಲ್ಲಿ ದೇವಿಯನ್ನು ಜಗಜ್ಜನನಿ (ವಿಶ್ವಮಾತೆ) ಎಂದು ಕರೆಯಲಾಗಿದೆ.

ಡಾ.ರಾಜ್ ಚಿತ್ರದ ಗೀತೆ!: 1970ರಲ್ಲಿ ಬಿಡುಗಡೆಯಾದ ಡಾ.ರಾಜಕುಮಾರ್ ಅಭಿನಯದ ಶ್ರೀಕೃಷ್ಣದೇವರಾಯ ಚಿತ್ರದ ಗೀತೆ ಇದಾಗಿದ್ದು, ಕನ್ನಡದ ಅತ್ಯಂತ ಜನಪ್ರಿಯ ದೇವಿ ಹಾಡುಗಳಲ್ಲಿ ಇದೂ ಒಂದಾಗಿದೆ. ಚೈತ್ರ ನವರಾತ್ರಿ ಸಂದರ್ಭ ನಾಡದೇವತೆ ಶ್ರೀಚಾಮುಂಡೇಶ್ವರಿ ಆರಾಧಿಸುವ ಮೂಲಕ ಮೋದಿ ಕನ್ನಡ ಕುಲದ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಶ್ರೀಮಂತಿಕೆಯನ್ನು ಜಗತ್ತಿಗೆ ಸಾರುವ ಕೆಲಸ ಮಾಡಿದ್ದಾರೆ. ಅಲ್ಲದೆ ಕನ್ನಡಿಗರ ಆರಾಧ್ಯ ದೈವ ಡಾ.ರಾಜ್ ಅಭಿನಯದ ಚಿತ್ರದ ಹಾಡನ್ನು ಮೋದಿ ಪೋಸ್ಟ್ ಮಾಡಿದ್ದು, ಕನ್ನಡಿಗರ ಮನಸ್ಸು ಗೆದ್ದಿದ್ದಾರೆ.

ಸಂಸದ ಯದುವೀರ್ ಕೃತಜ್ಞತೆ: ಕನ್ನಡ ಭಕ್ತಿಗೀತೆ ಹಂಚಿಕೊಂಡ ಮೋದಿಯವರಿಗೆ ಬಿಜೆಪಿ ಸಂಸದ ಯದುವೀರ್ ಒಡೆಯರ್ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದ್ದಾರೆ. ತಾಯಿ ಚಾಮುಂಡೇಶ್ವರಿ ಕುರಿತ ಅಮೋಘವಾದ ಗೀತೆ ಹಂಚಿಕೊಂಡ ಪ್ರಧಾನಿಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಎಂದು ಹೇಳಿದ್ದಾರೆ.

ಗೋರಕ್ಷಕ ಬಾಬಾ ಹತ್ಯೆಗೆ ಆಕ್ರೋಶ

ಪುಟ ೧➡ ತನಿಖೆ ಜಾರಿಯಲ್ಲಿದೆ ಎಂದು ಮಥುರಾದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಶ್ಲೋಕ್ ಕುಮಾರ್ ಹೇಳಿದ್ದಾರೆ.

ಗೋಶಾಲೆಯಲ್ಲಿ ಅಂತಿಮ ದರ್ಶನ: ಬಾಬಾ ಪಾರ್ಥಿವ ಶರೀರವನ್ನು ಸ್ಥಳೀಯ ಗೋರಕ್ಷಕರು ಬರ್ಸಾನಾದ ಗೋಶಾಲೆಗೆ ಸ್ಥಳಾಂತರಿಸಿದ್ದು, ಸಾರ್ವಜನಿಕರು ಮತ್ತು ಭಕ್ತರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ರಸ್ತೆ ಅಪಘಾತವಲ್ಲ, ಹತ್ಯೆ: ಶನಿವಾರ ಮುಂಜಾನೆ 4 ಗಂಟೆಯ ವೇಳೆ ಮಥುರಾದ ನವೀಪುರ ಗ್ರಾಮದಲ್ಲಿ ಗೋರಕ್ಷಕ ಚಂದ್ರಶೇಖರ್ ಅವರ ಹತ್ಯೆ ನಡೆದಿದೆ. ಇದರಿಂದ ಸ್ಥಳೀಯರು, ಬಾಬಾ ಬೆಂಬಲಿಗರು ಮತ್ತು ಸ್ಥಳೀಯ ಗೋರಕ್ಷಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ಇದು ಅಪಘಾತವಲ್ಲ. ಇದು ಗೋವುಗಳ ಕಳ್ಳಸಾಗಾಣಿಕೆಗಾರರು ನಡೆಸಿದ ಹತ್ಯೆಯೆಂದು ಆರೋಪಿಸಿದ್ದಾರೆ.

ಕಾಂಗ್ರೆಸ್-ರಾಹುಲ್ ಬಿಜೆಪಿಯ ಬಿ-ಟೀಮ್: ಕೇರಳ ಸಿಎಂ ಪಿಣರಾಯಿ

• **ತಿರುವನಂತಪುರಂ:** ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು,ಕಾಂಗ್ರೆಸ್ ಬಿಜೆಪಿಯ ಬಿ-ಟೀಮ್ ಎಂದು ಆರೋಪಿಸಿದ್ದಾರೆ.

ಕೇಂದ್ರ ತನಿಖಾ ಸಂಸ್ಥೆಗಳು ದೇಶದ ಇತರ ವಿರೋಧ ಪಕ್ಷದ ನಾಯಕರನ್ನು ಗುರಿಯಾಗಿಸುತ್ತಿವೆ, ಆದರೆ ಕೇರಳ ಮುಖ್ಯಮಂತ್ರಿಯನ್ನು ವಿಚಾರಣೆಗೆ ಕರೆದಿಲ್ಲ ಎಂಬ ರಾಹುಲ್ ಗಾಂಧಿಯವರ ಅವರ ಇತ್ತೀಚಿನ ಹೇಳಿಕೆಗೆ ಪ್ರತಿಕ್ರಿಯೆ ನೀಡಿದರು.ಕಾಂಗ್ರೆಸ್ ಮತ್ತು ಅದರ ನಾಯಕರು ಬಿಜೆಪಿಗೆ ಪರೋಕ್ಷವಾಗಿ ಸಹಕಾರ ನೀಡುತ್ತಿದ್ದಾರೆ. ಕಾಂಗ್ರೆಸ್ ಬಿಜೆಪಿಯ ಬಿ ಟೀಮ್ ಎಂದು ಆರೋಪಿಸಿದ್ದಾರೆ.

ಕಾಂಗ್ರೆಸ್ ತುಷ್ಟೀಕರಣ ರಾಜಕೀಯ ಮಾಡುತ್ತಿದ್ದು, ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದದಲ್ಲಿ ತೊಡಗಿರುವ ಗುಂಪುಗಳ ಬೆಂಬಲವನ್ನು ಪಡೆಯಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು.ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮಾಡುತ್ತಿರುವ ಆರೋಪಗಳು ಅಸತ್ಯವಾಗಿದ್ದು, ಏ. 9ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯ ಮೇಲೆ ಇದರಿಂದ ಯಾವುದೇ ಪರಿಣಾಮ ಇರುವುದಿಲ್ಲ ಎಂದರು.

ಭಕ್ತರ ಸಾಲಲ್ಲಿ ನಿಂತು ತಿರುಮಲ ದರ್ಶನ ಪಡೆದ ಸಿಎಂ ನಾಯ್ಡು

ಪುಟ ೧➡ ಈ ವೇಳೆ ಟಿಟಿಡಿಯ ಹಲವು ಅಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಹಾಗೂ ಶಾಸಕರು ಅವರ ಜತೆಯಲ್ಲಿದ್ದರು. ಈ ಅಭ್ಯಾಸವನ್ನು ಹಲವು ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದಾರೆ. ಸಾಮಾನ್ಯ ಭಕ್ತನಂತೆ ದರ್ಶನಕ್ಕೆ ಹೋಗುವ ಹಾದಿಯಲ್ಲಿ ಅವರು ಚಂದ್ರಬಾಬು ನಾಯ್ಡು ಅವರು ತಿರುಮಲ ತಿರುಪತಿ ದೇವಸ್ಥಾನಗಳು (ಟಿಟಿಡಿ) ಮಾಡಿದ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಭಕ್ತರು ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನಿಸಿದರು. ಅವರು ಸರತಿ ಸಾಲಿನಲ್ಲಿ ಪ್ರಸಾದ ವಿತರಣೆ, ಕುಡಿಯುವ ನೀರು ಮತ್ತು ನೈರ್ಮಲ್ಯದಂತಹ ಸೌಲಭ್ಯಗಳನ್ನು ಪರಿಶೀಲಿಸಿದರು. ತಿರುಪತಿ ಮತ್ತು ತಿರುಮಲದಲ್ಲಿ ಯಾತ್ರಿಕರ ವಸತಿ ಸೌಕರ್ಯಗಳನ್ನು ತಕ್ಷಣವೇ ಸುಧಾರಿಸುವಂತೆ ಮುಖ್ಯಮಂತ್ರಿ ನಾರಾ ಚಂದ್ರಬಾಬು ನಾಯ್ಡು ಶುಕ್ರವಾರ ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.

ಉಪನ್ಯಾಸಕರಿಂದ ಅರ್ಜಿ

• **ಬೆಂಗಳೂರು:** ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ 2025-26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಎಂ.ಟೆಕ್ ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಶಿಕ್ಷಣಶಾಸ್ತ್ರ ವಿಷಯವನ್ನು ಬೋಧಿಸಲು ಅತಿಥಿ ಉಪನ್ಯಾಸಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಎಂ.ಇಡಿ ಪದವಿ ಅಥವಾ ಶಿಕ್ಷಣ ವಿಷಯದಲ್ಲಿ ಪಿಎಚ್‌ಡಿ ಹೊಂದಿರಬೇಕು. ಎನ್.ಇ.ಟಿ, ಎಸ್.ಎಲ್.ಇ.ಟಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ನೇಮಕಾತಿಯು ಎಐಸಿಟಿಇ / ಯುಜಿಸಿ ನಿಯಮಗಳಿಗನುಸಾರವಾಗಿ ಇರುತ್ತದೆ. ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿಯನ್ನು ವಿವಿ ವೆಬ್‌ಸೈಟ್ www.uvce.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಕುಲಸಚಿವರ ಕಚೇರಿ, ಯುವಿಸಿಇ, ಕೆ.ಆರ್. ವೃತ್ತ, ಬೆಂಗಳೂರು ವಿಳಾಸಕ್ಕೆ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮಾ.23ರಂದು ಕೊನೆಯ ದಿನಾಂಕವಾಗಿದೆ. ಸಂದರ್ಶನದ ದಿನಾಂಕವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಅಥವಾ ಅರ್ಹ ಅಭ್ಯರ್ಥಿಗಳಿಗೆ ನೇರವಾಗಿ ತಿಳಿಸಲಾಗುವುದು ಎಂದು ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ, ಕುಲಸಚಿವರು (ಪ್ರಭಾರ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೀರ್ಥಹಳ್ಳಿ: ಮಂಗನ ಕಾಯಿಲೆಗೆ ಮಹಿಳೆ ಬಲಿ

ಪುಟ ೧➡ ಈ ಮೊದಲು ಕಟಗಾರು ಆಸ್ಪತ್ರೆ ವ್ಯಾಪ್ತಿಯ ಹೊನ್ನೇಕೇರಿಯ ಯುವಕ ಕೆಎಫ್‌ಡಿ ಸೋಂಕಿನಿಂದ ಸಾವಿಗೀಡಾಗಿದ್ದ. ತಾಲೂಕಿನಲ್ಲಿ 29 ಪ್ರಕರಣ ದಾಖಲಾಗಿದ್ದು, ಜನವರಿಯಿಂದ ಈವರೆಗೆ ಇಬ್ಬರು ಮೃತಪಟ್ಟಿದ್ದಾರೆ. ಪ್ರಸ್ತುತ ಸರ್ಕಾರಿ ಜೆಸಿ ಆಸ್ಪತ್ರೆಯಲ್ಲಿ 5 ಮತ್ತು ಮಣಿಪಾಲ ಆಸ್ಪತ್ರೆಯಲ್ಲಿ ಮೂವರು ಸೋಂಕಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಾಲೂಕು ವೈದ್ಯಾಧಿಕಾರಿ ಡಾ. ಅನಿಕೇತನ್ ತಿಳಿಸಿದ್ದಾರೆ.

ಜೆಸಿ ಆಸ್ಪತ್ರೆಯಲ್ಲಿ 5 ರೋಗಿಗಳಿದ್ದು, ಗುಣಮುಖರಾಗಿ ಮನೆಗೆ ಹೋಗಿದ್ದ ಇಬ್ಬರು ಮತ್ತೆ ಜ್ವರ ಮರುಕಳಿಸಿದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಜೆಸಿ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಅರವಿಂದ್ ತಿಳಿಸಿದ್ದಾರೆ.

ಎಐ ನ್ಯಾಯಾಂಗ ಆಳಬಾರದು: ಸಿಜೆಐ

ಪುಟ ೧➡ ತೀರ್ಪು ಪ್ರಕಟಿಸುವಿಕೆಯ ಹಂತದ ಮೇಲೆ ಎಐ ಸಾಧನಗಳಿಗೆ ಹಿಡಿತ ಸಾಧಿಸಲು ಆಸ್ಪದ ಮಾಡಿಕೊಟ್ಟರೆ ಪಾರದರ್ಶಕವಲ್ಲದ ಹಾಗೂ ಉತ್ತರದಾಯಿಯಲ್ಲದ ವ್ಯವಸ್ಥೆ ನಿರ್ಮಾಣವಾಗಲು ನಾವು ಅವಕಾಶ ಮಾಡಿ ಕೊಟ್ಟಂತಾಗುತ್ತದೆ ಎಂದು ಎಚ್ಚರಿಸಿದರು. ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮಾತನಾಡಿ, ನ್ಯಾಯಾಂಗ ವ್ಯವಸ್ಥೆಯನ್ನು ಎಐ ಪ್ರವೇಶಿಸಿರುವ ಈ ಸಂದರ್ಭದಲ್ಲಿ, ಮನುಷ್ಯನ ನಿರ್ಧಾರ ತಳೆಯುವ ಶಕ್ತಿಗೆ ಎಐ ಸಹಾಯಕನಂತೆ ವರ್ತಿಸುತ್ತಿದೆಯೇ ಅಥವಾ ಮನುಷ್ಯನ ಉಪಸ್ಥಿತಿಯ ಅಗತ್ಯವೇ ಇಲ್ಲದ ಪರ್ಯಾಯದಂತೆ ಗೋಚರಿಸುತ್ತಿದೆಯೇ, ಇದು ಜನರಿಗೆ ನ್ಯಾಯಿಕ ವ್ಯವಸ್ಥೆಯನ್ನು ಇನಷ್ಟು ಸುಲಭವಾಗಿ ಲಭ್ಯವಾಗಿಸುತ್ತದೆಯೇ ಅಥವಾ, ಹೊಸ ಸ್ವರೂಪದ ಅಸಮಾನತೆ ಗಳನ್ನು ಹಾಗೂ ಅಪಾರದರ್ಶಕತೆಯನ್ನು ಉಂಟು ಮಾಡುತ್ತದೆಯೇ? ಎನ್ನುವ ಪ್ರಶ್ನೆಗಳು ಈಗ ಎದುರಾಗಿವೆ ಎಂದರು. ನ್ಯಾಯಾಂಗ ಸ್ವಾತಂತ್ರ್ಯ, ಪಾರದರ್ಶಕತೆ ಹಾಗೂ ಕಾನೂನುಬದ್ಧತೆಯ ಅಂಶಗಳು ಈಗ ಅತ್ಯಂತ ಪ್ರಮುಖವಾಗಿ ಪರಿಣಮಿಸಿವೆ. ನ್ಯಾಯಾಂಗ ಪ್ರಕ್ರಿಯೆಗಳಲ್ಲಿ ಎಐ ಬಳಕೆಯು ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ತತ್ವಗಳು ಹಾಗೂ ಸೂಕ್ತ ರಕ್ಷಣೆಗಳೊಂದಿಗೆ ನಿರ್ದೇಶಿತವಾಗಬೇಕು. ವಕೀಲರು ಕೂಡ ಎಐ ಟೂಲ್‌ಗಳ ಮಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ನ್ಯಾಯಾಂಗ ವ್ಯವಸ್ಥೆಯ ಪ್ರಧಾನ ಘಟಕಗಳಾದ ಪ್ರಾಮಾಣಿಕತೆ ಮತ್ತು ಜವಾಬ್ದಾರಿಗಳು ಅಬಾಧಿತವಾಗಿ ಮುಂದುವರಿಯಬೇಕು ಎಂದರು.

ನ್ಯಾಯಾಂಗ ಸುಧಾರಣಾ ಆಯೋಗ ರಚಿಸಿ

ನ್ಯಾಯಾಲಯಗಳಲ್ಲಿ ಹೆಚ್ಚುತ್ತಿರುವ ಬಾಕಿ ಪ್ರಕರಣಗಳನ್ನು ಕಡಿಮೆ ಮಾಡಲು ನ್ಯಾಯಾಂಗ ಸುಧಾರಣಾ ಆಯೋಗ ರಚಿಸಬೇಕು. ಒಬ್ಬ ವಕೀಲ ಅಥವಾ ವಕೀಲರು ವಿಚಾರಣೆ ಮುಂದೂಡಿಕೆ ಮತ್ತು ಮುಂದೂಡಿಕೆಯನ್ನು ಇಷ್ಟಪಡುತ್ತಾರೆ. ಏಕೆಂದರೆ ಅವರು ವಿಚಾರಣೆಯ ಪ್ರತಿ ಹಾಜರಾತಿಯಿಂದ ಪ್ರಯೋಜನ ಪಡೆಯುತ್ತಾರೆ. ಸರ್ಕಾರಿ ಇಲಾಖೆಯು ಸೋಲನ್ನು ಒಪ್ಪಿಕೊಳ್ಳುವ ಬದಲು ಮೇಲ್ಮನವಿ ಸಲ್ಲಿಸುವ ಮೂಲಕ ಅಧಿಕಾರಶಾಹಿ ಅಪಾಯವನ್ನು ಕಡಿಮೆ ಮಾಡುತ್ತದೆ ಎಂದು ಸುಪ್ರೀಂ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಹೇಳಿದರು.

ಎಐನಿಂದ ಸ್ಥಳೀಯ ಭಾಷೆಗೆ ಅನುವಾದ: ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ ಅಧ್ಯಕ್ಷ ಪ್ರಶಾಂತ್ ಕುಮಾರ್ ಮಾತನಾಡಿ, ಎಐ ತಂತ್ರಜ್ಞಾನದಿಂದಾಗಿ ನ್ಯಾಯಾಲಯದ ತೀರ್ಪುಗಳನ್ನು ತ್ವರಿತವಾಗಿ ಸ್ಥಳೀಯ ಭಾಷೆಗಳಿಗೆ ಅನುವಾದ ಮಾಡುವುದು ಸಾಧ್ಯವಾಗುತ್ತಿದ್ದು, ಇದರಿಂದಾಗಿ ಸುಪ್ರೀಂ ಕೋರ್ಟಿನ ತೀರ್ಪುಗಳನ್ನು ಆಸಕ್ತಿಯಿರುವ ಹಳ್ಳಿಯ ಜನರೂ ಓದಬಹುದಾಗಿದೆ. ಇದು ವಕೀಲರಿಗೆ ತಮ್ಮ ಕಕ್ಷಿದಾರರೊಂದಿಗೆ ವ್ಯವಹರಿಸಲು ಅನುಕೂಲ ಕಲ್ಪಿಸಲಿದೆ ಎಂದರು.

ಸುಪ್ರೀಂ ಕೋರ್ಟ್‌ನ ನಿ.ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ, ಯುಐಎ ಇಂಡಿಯಾ ಅಧ್ಯಕ್ಷ ಎ.ಕೆ. ಗಂಗೂಲಿ ಉಪಸ್ಥಿತರಿದ್ದರು.

ಮನುಷ್ಯರದೇ ನಿರ್ಣಾಯಕ ಪಾತ್ರವಿರಲಿ: ನ್ಯಾಯಾಂಗ ಪ್ರಕ್ರಿಯೆಯ ಅಂತಿಮ ಘಟ್ಟವಾದ ತೀರ್ಪು ಪ್ರಕಟಿಸುವಿಕೆಯಲ್ಲಿ ಮನುಷ್ಯರೇ ನಿರ್ಣಾಯಕ ಪಾತ್ರ ವಹಿಸುವಂತಿರಬೇಕು. ಅಂದರೆ, ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರುಗಳೇ ತರ್ಕ ಶಕ್ತಿ ಹಾಗೂ ಅನುಭವಗಳ ವಿಶ್ಲೇಷಣೆಯ ಬೆಳಕಿನಲ್ಲಿ ತೀರ್ಪುಗಳನ್ನು ಪ್ರಕಟಿಸಬೇಕು. ನ್ಯಾಯಾಂಗ ವ್ಯವಸ್ಥೆಯಲ್ಲಿ ಎಐ ತರುವ ಪ್ರಯೋಜನಗಳು ಮಾರ್ಗಗಳಾಗಿ ಮಾತ್ರವೇ ಬಳಕೆಯಾಗಬೇಕು. ಆದರೆ, ಯಾವ ದಿಕ್ಕಿನತ್ತ ಸಾಗಬೇಕು ಎಂಬ ದಿಕ್ಸೂಚಿಯ ಪಾತ್ರವನ್ನು ಮನುಷ್ಯನ ಬುದ್ಧಿಯೇ ನಿರ್ಧರಿಸಬೇಕು ಎಂದು ನ್ಯಾ.ಸೂರ್ಯಕಾಂತ್ ಅಭಿಪ್ರಾಯಪಟ್ಟರು.

ವ್ಯಕ್ತಿತ್ವ ಪರೀಕ್ಷೆ ಮುಂದೂಡಿಕೆ

• **ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗವು 2023-24ನೇ ಸಾಲಿನ ಗ್ರೂಪ್ 'ಎ' ಮತ್ತು 'ಬಿ' ವೃಂದದ ಒಟ್ಟು 384 ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳಿಗೆ ಸಂಬಂಧಿಸಿದಂತೆ ನಡೆಸಲು ಉದ್ದೇಶಿಸಿದ್ದ ವ್ಯಕ್ತಿತ್ವ ಪರೀಕ್ಷೆಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಸದ್ಯಕ್ಕೆ ಮುಂದೂಡಲಾಗಿದೆ ಎಂದು ಆಯೋಗ ತಿಳಿಸಿದೆ.

ಕಳೆದ ಮಾ.10 ರಂದು ಆಯೋಗದ ಜಾಲತಾಣದಲ್ಲಿ ಪ್ರಕಟಿಸಲಾಗಿದ್ದ ವೇಳಾಪಟ್ಟಿಯಂತೆ, ಅರ್ಹ ಅಭ್ಯರ್ಥಿಗಳಿಗೆ ಮಾ.23 ರಿಂದ ಮೇ 4 ರವರೆಗೆ ವ್ಯಕ್ತಿತ್ವ ಪರೀಕ್ಷೆ ಹಾಗೂ ಮೂಲ ದಾಖಲೆಗಳ ಪರಿಶೀಲನೆಯನ್ನು ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಅನಿವಾರ್ಯ ಆಡಳಿತಾತ್ಮಕ ಕಾರಣಗಳಿಂದಾಗಿ ಈ ವೇಳಾಪಟ್ಟಿಯನ್ನು ಈಗ ಹಿಂಪಡೆಯಲಾಗಿದೆ. ವ್ಯಕ್ತಿತ್ವ ಪರೀಕ್ಷೆಯ ಪರಿಷ್ಕೃತ ದಿನಾಂಕಗಳು ಮತ್ತು ಸಮಯದ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ಆಯೋಗದ ವೆಬ್‌ಸೈಟ್‌ನಲ್ಲಿ ಶೀಘ್ರವಾಗಿ ಪ್ರಕಟಿಸಲಾಗುವುದು ಎಂದು ಆಯೋಗದ ಕಾರ್ಯದರ್ಶಿ ಜ್ಯೋತಿ ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಇಂಗಿತ

ಮುಸಲ್ಮಾನರ ವಿರೋಧಿಗಳಲ್ಲ

ಬೆಂಗಳೂರು: ಬಿಜೆಪಿ ಬಗ್ಗೆ ಮುಸ್ಲಿಮರಿಗೆ ಬೇಸರ ಇರಬಹುದು, ಆದರೆ ನಾವು ಮುಸಲ್ಮಾನರ ವಿರೋಧಿಗಳಲ್ಲ, ಕಾಂಗ್ರೆಸ್ ಅವರ ತಲೆಯಲ್ಲಿ ಬಿಟ್ಟ ಹುಳಗಳು ಇನ್ನೂ ಸತ್ತಿಲ್ಲ ಎಂದ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಶನಿವಾರ ರಾಜ್ಯ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜತಗೆ ಮಾತನಾಡಿ, ಅವರು ನಮಗೆ ಮತ ಕೊಡುವುದು ಬೇಕಿಲ್ಲ. ಅದು ಅವರಿಗೆ ಬಿಟ್ಟ ವಿಷಯ, ನಾವು ಇಡೀ ದೇಶದಲ್ಲಿ



ಅಧಿಕಾರದಲ್ಲಿದ್ದೇವೆ ಎಂದರು. ದೇಶವನ್ನಾಳುವ ಮೋದಿ ಅವರು ದೊಡ್ಡ ಸಮುದಾಯದವರಲ್ಲ, ಅವರು ಕೂಡ ಹಿಂದುಳಿದವರೇ. ಯಾವ ರೀತಿ ಸಿದ್ದರಾಮಯ್ಯನವರು ನಾನು ಅಹಿಂದ ಎಂದು ಅಂದುಕೊಳ್ಳುತ್ತಾರೋ ಅದೇ ರೀತಿ ಮೋದಿ ಅವರು ಅಹಿಂದವೇ ಎಂದು ಹೇಳಿದರು.

ಹಿಂದೆ ಕಾಂಗ್ರೆಸ್ಸಿನಲ್ಲಿ ಮಂಡ್ಯ ಹೊರತುಪಡಿಸಿ ಇತರ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಮುಸಲ್ಮಾನ್ ಬಂಧುಗಳಿಗೇ ಟಿಕೆಟ್ ಕೊಡುತ್ತಿದ್ದರು. ಈಗ ಎಲ್ಲ ಕಡೆಯಲ್ಲಿ ಅವರಿಗೆ ಕಾಂಗ್ರೆಸ್ ಕೊಕ್ ಕೊಡುತ್ತ ಬಂದಿದೆ. ಮುಸಲ್ಮಾನರು ನಮ್ಮ ಗುಲಾಮರು, ಅವರಿಗೆ ಟಿಕೆಟ್ ಕೊಡದಿದ್ದರೂ ಬಿಜೆಪಿಯನ್ನು ತೋರಿಸಿದರೆ ಸಾಕು, ಬಾಲ ಮುದುರಿಕೊಂಡು ಬಂದು ನಮಗೆ ಮತ ಕೊಡುತ್ತಾರೆಂಬ ಪ್ರವೃತ್ತಿಯನ್ನು ಕಾಂಗ್ರೆಸ್ ಬೆಳೆಸಿಕೊಂಡಿದೆ ಎಂದು ಟೀಕಿಸಿದರು.

ಮುಸಲ್ಮಾನರಲ್ಲೂ ಕೆಲವು ಮುಖಂಡರಿದ್ದಾರೆ. ಅವರು ಕೊನೆವರೆಗೆ ಕೇಳಿ ನೋಡುತ್ತಾರೆ. ಆಗಲಿಲ್ಲ ಎಂದರೆ ಬಾಲ ಮುದುರಿಕೊಂಡು ಬಂದು ಬಿದ್ದಿರ್ತಾರೆ ಎಂಬ ಕಾಂಗ್ರೆಸ್ ಅನಿಸಿಕೆಯಂತೆ ಬಾಲ ಮುದುರಿಕೊಂಡು ಹೋಗಿ ಇರುತ್ತಾರೆ. ಅದೇ ಕಾರಣದಿಂದ ಕಾಂಗ್ರೆಸ್ ಮಾಡುವುದೂ ಸರಿ ಇದೆ, ಇವರು ಮಾಡುವುದೂ ಹಾಗೇ ಇದೆ ಎಂದರು. ಮಲ್ಲಿಕಾರ್ಜುನ್ ಸಚಿವರು, ಪತ್ನಿ ಸಂಸದೆ. ಮಗನಿಗೆ ಒಂದು ಅವಕಾಶ ಕೊಡಿಸಬೇಕು ಎಂದು ಕಾಂಗ್ರೆಸ್‌ಗೆ ಸವಾಲು ಹಾಕಿ ಅವರು ನಾಮಪತ್ರ ಸಲ್ಲಿಸಿದ್ದಾರೆ. ಈಗ ಕಾಂಗ್ರೆಸ್ ಅನಿವಾರ್ಯವಾಗಿ ಅವರಿಗೆ ಟಿಕೆಟ್ ಕೊಡಬೇಕಾಗಬಹುದು ಎಂದರು.

ನೃತ್ಯ ಪ್ರದರ್ಶನ



ಮಂಗಳೂರಿನ ಆಳ್ವಾಸ್ ಕಾಲೇಜಿನಲ್ಲಿ ಶನಿವಾರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾವಿದರಿಂದ ನೃತ್ಯ ಪ್ರದರ್ಶನ.

ಮಸೀದಿ ಅಕ್ರಮ ನಿರ್ಮಾಣ: 24ಕ್ಕೆ ತಿಪಟೂರು ಬಂದ್‌ಗೆ ಬಿಜೆಪಿ ಕರೆ

ತಿಪಟೂರು: ನಗರದಲ್ಲಿ ಅನ್ಯಕೋಮಿನ ನಡುವೆ ಎರಡು ಪ್ರತ್ಯೇಕ ಘಟನೆಗಳು ನಡೆದ ಹಿನ್ನೆಲೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು ಹಿಂದುಪರ ಕಾರ್ಯಕರ್ತರು ಮತ್ತು ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದ್ದಾರೆ.

ರಂಜಾನ್ ಆಚರಣೆಯ ದಿನದಂದೇ ಎರಡು ಪ್ರತ್ಯೇಕ ಘಟನೆಗಳು ನಡೆದಿದ್ದು, ನಗರದ ಮಾವಿನತೋಪಿನಲ್ಲಿ ಅಕ್ರಮವಾಗಿ ಮಸೀದಿ ನಿರ್ಮಾಣ ಮಾಡಿರುವ ಬಗ್ಗೆ ಹಾಗೂ ಜಾನುವಾರು ಅಕ್ರಮ ಸಾಗಣೆ ಮಾಡುತ್ತಿದ್ದ ಪ್ರಕರಣ ಸಂಬಂಧ ಹಿನ್ನೆಲೆಯಲ್ಲಿ ಮಾ.24ರಂದು ತಿಪಟೂರು ಬಂದ್‌ಗೆ ಕರೆ ನೀಡಲಾಗಿದೆ.

ಮಾವಿನತೋಪಿನಲ್ಲಿ ಮಸೀದಿ ನಿರ್ಮಾಣ ವಿವಾದ: ತಿಪಟೂರು ನಗರಸಭೆಯ ವಾರ್ಡ್ ನಂ.5ರ ಮಾವಿನತೋಪಿನ ಸರ್ವೆ ನಂ.366ರಲ್ಲಿ 2004ರಲ್ಲಿ ಅಂಜುಮನ್ ಶಾಲೆಗೆ ನೀಡಲಾಗಿದ್ದ ಸ್ಥಳದಲ್ಲಿ ಅಕ್ರಮವಾಗಿ ಮಸೀದಿ ನಿರ್ಮಾಣ ಮಾಡಲಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಶುಕ್ರವಾರ ರಾತ್ರಿ ಈ ವಿಚಾರವಾಗಿ ಎರಡು ಸಮುದಾಯಗಳ ನಡುವೆ ವಾಗ್ವಾದ ನಡೆದು ಉದ್ವಿಗ್ನತೆ ಉಂಟಾಯಿತು.

ಶನಿವಾರ ಬೆಳಗ್ಗೆ ಕೆಲವು ಸಂಘಟನೆಗಳ ಕಾರ್ಯಕರ್ತರು ಅಕ್ರಮ ಮಸೀದಿ ನಿರ್ಮಾಣ ನಡೆಯಬಾರದು ಎಂದು ಪಟ್ಟುಹಿಡಿದ ಹಿನ್ನೆಲೆ ಪರಿಸ್ಥಿತಿ ಮತ್ತಷ್ಟು ತೀವ್ರಗೊಂಡಿತು. ಪರಿಸ್ಥಿತಿ ಗಂಭೀರವಾಗುತ್ತಿದ್ದಂತೆ ನಗರ ಪೊಲೀಸ್ ಠಾಣೆಯ ಅಧಿಕಾರಿ ರವಿಕುಮಾರ್ ನೇತೃತ್ವದಲ್ಲಿ ಸ್ಥಳಕ್ಕೆ ಪೊಲೀಸರು ತೆರಳಿ ಶಾಂತಿ ಕಾಪಾಡಿದರು.

ಕಸಾಯಿಖಾನೆಗೆ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದರೆಂದು ಆರೋಪಿಸಿ ಒಂದು ವಾಹನವನ್ನು ಬಜರಂಗದಳದ ಕಾರ್ಯಕರ್ತರು ತಡೆದು ತಪಾಸಣೆ ನಡೆಸಿದ ವೇಳೆ ಬಜರಂಗದಳದ ಕಾರ್ಯಕರ್ತರ ಮೇಲೆ ಮುಸ್ಲಿಂ ಗುಂಪೊಂದು ಧಾವಿಸಿ ಹಲ್ಲೆ ನಡೆಸಿದ ಪರಿಣಾಮ ಕೆಲವರು ಗಾಯಗೊಂಡಿದ್ದು ಗಾಯಾಳುಗಳನ್ನು ತಿಪಟೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರುಸುದ್ದಿ

ಮಾ.25ರಂದು ವಿಧಾನಸೌಧದ ಮುಖ್ಯದ್ವಾರ ಉದ್ಘಾಟನೆ

ಮಂಗಳೂರು: ವಿಧಾನಸೌಧದ ಮುಖ್ಯ ದ್ವಾರವನ್ನು ಮಾ.25 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಈ ಪ್ರವೇಶ ದ್ವಾರವು ಕರ್ನಾಟಕ ಶೈಲಿಯ ಅತ್ಯಂತ ಸುಂದರವಾದ ಕೆತ್ತನೆಗಳನ್ನು ಹೊಂದಿದ್ದು, ಅರಣ್ಯ ಅಭಿವೃದ್ಧಿ ನಿಗಮ ಮತ್ತು ಲೋಕೋಪಯೋಗಿ ಇಲಾಖೆ ಮೂಲಕ ಅಭಿವೃದ್ಧಿಪಡಿಸಲಾಗಿದೆ. ವಿಧಾನಸೌಧದ ಭವ್ಯ ಮೆಟ್ಟಿಲುಗಳ ಬಳಿ ಮತ್ತು ಹೈಕೋರ್ಟ್ ಪೀಠ ಕಡೆಯಿಂದ ಪ್ರವೇಶ ದ್ವಾರಗಳನ್ನು ಅಭಿವೃದ್ಧಿಪಡಿಸಲು ಲೋಕೋಪಯೋಗಿ ಇಲಾಖೆಯಿಂದ ಟೆಂಡರ್ ಕರೆಯಲಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ವಿಧಾನಸೌಧಕ್ಕೆ ಭಾಗಶಃ ವಿದ್ಯುತ್ ಪೂರೈಸುವ ಸೌರ ಫಲಕಗಳನ್ನೂ ಮಾ. 25 ರಂದು ಉದ್ಘಾಟಿಸಲಾಗುವುದು ಎಂದು ರಾಜ್ಯ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಮಂಗಳೂರಿನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ವಿಧಾನಸೌಧದ ಆವರಣದಲ್ಲಿರುವ ಬೀದಿ ನಾಯಿಗಳಿಗೆ ಶ್ವಾನ ಆಶ್ರಯ ತಾಣ ನಿರ್ಮಿಸುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ನಾವು ನಮ್ಮ ಅಭಿಪ್ರಾಯ ಮತ್ತು ಯೋಜನೆಗಳನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಿದ್ದೇವೆ. ಈ ಬಗ್ಗೆ ಸರಕಾರವೇ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದು ಹೇಳಿದರು.

ಅಮಾನತುಗೊಂಡ ಚಾಲಕನಿಂದ ಬಸ್ ಕಳ್ಳತನ!

ಯಾದಗಿರಿ: ಕರ್ತವ್ಯ ಲೋಪದಿಂದ ನೌಕರಿಯಿಂದ ವಜಾಗೊಂಡಿರುವ ಕೆಕೆಆರ್‌ಟಿಸಿ ಚಾಲಕ ಕಂ ನಿರ್ವಾಹಕನೊಬ್ಬ ಬಸ್ ಅನ್ನೆ ಕಳವುಗೈದ ಘಟನೆ ಯಾದಗಿರಿ ತಾಲೂಕಿನ ಸೈದಾಪುರದಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಕಳೆದ ಮಾ.19ರಂದು ಈ ಘಟನೆ ನಡೆದಿದೆ. ಸೇವೆಯಿಂದ ವಜಾಗೊಂಡಿರುವ ಚಾಲಕ ಕಂ ನಿರ್ವಾಹಕನಾಗಿದ್ದ ಮಹಿಪಾಲರೆಡ್ಡಿ ಎಂಬುವವನೇ ಈ ಕೃತ್ಯ ಎಸಗಿದ್ದಾನೆ. ಸೈದಾಪುರ ಬಸ್ ನಿಲ್ದಾಣದಿಂದ ಬಸ್ ಕಳ್ಳತನ ಮಾಡಿ ತೆಗೆದುಕೊಂಡು ಹೋಗುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಲ್ಯಾಣ ಕರ್ನಾಟಕ ಸಾರಿಗೆ ನಿಗಮಕ್ಕೆ ಸೇರಿದ ಬಸ್ ಇದಾಗಿದೆ. ಈ ಹಿಂದೆ ಕೂಡಾ ಒಂದೆರಡು ಸಲ ಕರ್ತವ್ಯ ಲೋಪ ಹಿನ್ನಲೆ ಅಮಾನತು ಮಾಡಲಾಗಿತ್ತು. ತನ್ನ ಊರಾದ ರಾಚನಳ್ಳಿಗೆ ಹೋಗಲು ಯಾವುದೇ ವಾಹನಗಳು ಇಲ್ಲದಕ್ಕೆ, ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ ಬಸ್ ಚಾಲನೆ ಮಾಡಿಕೊಂಡು ಕದ್ದೊಯ್ದಿ ದ್ದಾನೆ. ಬಸ್ ಕಳ್ಳತನ ಮಾಡಿ ಊರಿನ ದೇವಸ್ಥಾನ ಮುಂಭಾಗ ದಲ್ಲಿ ನಿಲ್ಲಿಸಲಾಗಿದೆ. ಸೈದಾಪುರ ಪೊಲೀಸ್ ಠಾಣೆಯಲ್ಲಿ ಇತನ ವಿರುದ್ಧ ಕೇಸ್ ದಾಖಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಆತ್ಮಹತ್ಯೆ

ಪಾವಗಡ: ಸಮಾಜಕಲ್ಯಾಣಇಲಾಖೆಯತಾಲೂಕು ಸಹಾಯ ನಿರ್ದೇಶಕ ಮಲ್ಲಿಕಾರ್ಜುನ್(60) ಕಚೇರಿಯಲ್ಲೇ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿರುವಘಟನೆ ಪಾವಗಡ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ನಡೆದಿದೆ. ಮೂಲತಃ ಪಾವಗಡತಾಲೂಕಿನ ಗುಂಡಾರ್ಲಹಳ್ಳಿ ಗ್ರಾಮಕ್ಕೆ ಸೇರಿದ ಮಲ್ಲಿಕಾರ್ಜುನ್, ಪಟ್ಟಣದ ಸಮಾಜಕಲ್ಯಾಣಇಲಾಖೆಯಲ್ಲಿ ಕಳೆದ 3 ವರ್ಷಗಳಿಂದ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು. ಈ ತಿಂಗಳ ಮಾ.31ಕ್ಕೆ ನಿವೃತ್ತರಾಗಲಿದ್ದರು, ಕಚೇರಿಯಲ್ಲಿ ಆತ್ಮಹತ್ಯೆಗೂ ಮುನ್ನ ನನ್ನ ಸಾವಿಗೆ ಮೇಲಾಧಿಕಾರಿ ಜೆಂಟಿ ನಿರ್ದೇಶಕ ಕೃಷ್ಣಪ್ಪನ ಕಿರುಕುಳವೇ ಕಾರಣ ಎಂದು ವಿಡಿಯೋ ಮಾಡಿ ಸಿಬ್ಬಂದಿಗೆ ಶೇರ್ ಮಾಡಿದ್ದಾರೆ. ಘಟನೆ ತಿಳಿದು ಪಾವಗಡ ಪೊಲೀಸರು ಹಾಗೂ ಸಮಾಜಕಲ್ಯಾಣ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಠಾಣೆಯಲ್ಲಿ ದೂರು ದಾಖಲಾಗಿದೆ.

ನೀರಾನೆ ದಾಳಿಯಿಂದ ಪಶುವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಸಾವಿನ ಪ್ರಕರಣ

ಕುಟುಂಬಸ್ಥರ ಅನುಮಾನ

ಶಿವಮೊಗ್ಗ: ಇಲ್ಲಿನ ಸಿಂಹಧಾಮದಲ್ಲಿನ ನೀರಾನೆ ದಾಳಿಗೆ ಒಳಗಾಗಿ ಮೃತಪಟ್ಟ ಡಾ. ಸಮೀಕ್ಷಾ ರೆಡ್ಡಿ ಅವರ ಸಾವಿನ ಪ್ರಕರಣ ಜಟಿಲವಾಗುತ್ತಿದ್ದು, ತಡ ರಾತ್ರಿ 11.30ರ ಸುಮಾರಿಗೆ ಅವರನ್ನು ಯಾರಾದರೂ ಕಳಿಸಿದ್ದರೆ? ಅಥವಾ ಸ್ವಯಂಪ್ರೇರಿತವಾಗಿ ಹೋಗಿದ್ದರೆ? ಎಂಬ ಅನುಮಾನ ಇಲಾಖೆ ವಲಯದಲ್ಲಿಯೇ ವ್ಯಕ್ತವಾಗಿದೆ.



ಯಾವುದೇ ವನ್ಯ ಪ್ರಾಣಿಗಳಿಗೆ ಚಿಕಿತ್ಸೆ ನೀಡಲು ತೆರಳುವಾಗ ಒಬ್ಬರು ಇಬ್ಬರು ಹೋಗುವಂತಿಲ್ಲ. ಆ ಪ್ರಾಣಿಗೆ ಸಂಬಂಧಿಸಿದ ಕೇರ್‌ಟೇಕರ್ ನಿಂದ ಹಿಡಿದು, ಸಂಬಂಧಿಸಿದ ಫಾರೆಸ್ಟರ್, ವೈದ್ಯರ ಸಹಾಯಕರು, ಅರವಳಿಗೆ ತಜ್ಞರು, ಅಟೆಂಡರ್ ಇರಬೇಕು. ಆದರೆ ಇಲ್ಲಿ ಇವರ ಯಾರ ಪಾತ್ರವೂ ಇಲ್ಲ.

ನೀರಾನೆ (ಹಿಪ್ಪೋಪಟಾಮಸ್) ದೈತ್ಯ ಕಾಯದ ಪ್ರಾಣಿ. ಕಾಡುಕೋಣ, ಆನೆ, ಘೇಂಡಾ ಮೃಗಗಳ ರೀತಿಯೇ ಇರುವ ಹಾಗೂ ಸ್ವಭಾವದಲ್ಲೂ ಅದೇ ರೀತಿ ಇರುವ ಪ್ರಾಣಿ. ಈ ಪ್ರಾಣಿ ಇಲ್ಲಿಯ ಪರಿಸರದ್ದೇ ಅಲ್ಲ. ಆದರೆ ಮನುಷ್ಯ ಪಳಗಿಸಿದ ಮಾತ್ರಕ್ಕೆ ಈ ವಾತಾವರಣಕ್ಕೆ ಹೊಂದಿಕೊಂಡಿರುವ ಪ್ರಾಣಿ. ಅದರಲ್ಲೂ ಟ್ರೈನಿ ವೈದ್ಯಗೆ ಇದರ ಸ್ವಭಾವ ಗೊತ್ತಿರಲಿಕ್ಕಿಲ್ಲ. ಪ್ರತಿದಿನ ಸಂಜೆ 5 ಗಂಟೆ ಮೇಲೆ ಇಡೀ ಸಫಾರಿ ಬಂದ್ ಆಗುತ್ತದೆ. ಪ್ರವಾಸಿಗರು ಯಾರೂ ಇರುವುದಿಲ್ಲ. ಸಿಬ್ಬಂದಿ ಮಾತ್ರ ಇರುತ್ತಾರೆ. ಇರುವ ಸಿಬ್ಬಂದಿಗಳೂ ಕೂಡ ರಾತ್ರಿ ಗಸ್ತು ಮಾಡುವುದು, ಪ್ರಾಣಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕಿದೆ. ಅದರಲ್ಲೂ ಗರ್ಭಾವಸ್ಥೆಯಲ್ಲಿರುವ ಪ್ರಾಣಿಗಳ ಮೇಲೆ ಹೆಚ್ಚಿನ ನಿಗಾ ಇಡಲಾಗುತ್ತದೆ.

ಹಂಸಿಣಿಯ (ನೀರಾನೆ) ಕೇರ್ ಟೇಕರ್ ಪವನ್ ಸಂಜೆ 6 ಗಂಟೆಗೆ ಬೀಗ ಹಾಕಿಕೊಂಡು ತಾನು ಹೋಗಿರುವುದಾಗಿ ಈಗಾಗಲೇ ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದಾರೆ. ತರಬೇತಿ ವೈದ್ಯೆ ಸಮೀಕ್ಷಾ ಹೋಗಿರುವುದು ತಮ್ಮ ಗಮನಕ್ಕೆ ಬಂದಿಲ್ಲ. ತಮ್ಮ ಫೋನ್ ಸ್ವಿಚ್ ಆಫ್ ಆಗಿತ್ತು ಎಂದು ಹೇಳಿದ್ದಾರೆ.

ಕೇರ್ ಟೇಕರ್ ಸಂಬಂಧಿಸಿದ ಪ್ರಾಣಿಯ ಕೇಜ್‌ನ ಲಾಕ್ ಓಪನ್ ಮಾಡಿ ಕೊಟ್ಟ ಬಳಿಕವೇ ಚಿಕಿತ್ಸೆ ನೀಡುವುದು ನಿಯಮ. ಇದಕ್ಕೆ ಬೇಕಾದ ಮುಂಜಾಗ್ರತೆ ತೆಗೆದುಕೊಳ್ಳಬೇಕಿತ್ತು. ಯಾವುದೇ ವನ್ಯ ಪ್ರಾಣಿ ಮರಿ ಹಾಕುವ ಸಮಯದಲ್ಲಿ ನಿಗಾ ಇಡಬಹುದೇ ವಿನಃ ಚಿಕಿತ್ಸೆ ನೀಡಿ ಸುಖ ಪ್ರಸವ ಮಾಡಿಸುವುದು ವನ್ಯ ಪ್ರಾಣಿಗಳ ವಿಚಾರದಲ್ಲಿ ಕಷ್ಟವೆನ್ನಲಾಗುತ್ತದೆ. ಆದರೂ ಸಮೀಕ್ಷಾ ಉಷ್ಣತೆ ಚೆಕ್ ಮಾಡಲು ಮುಂದಾಗಿದ್ದರು ಎನ್ನಲಾಗಿದೆ.



ಅನುಮಾನಗಳಿವೆ - ತನಿಖೆಯಾಗಲಿ

ವೈದ್ಯೆಯ ಸಂಬಂಧಿಕರು ಕೂಡ ಈ ಸಂಬಂಧ ಮಾಧ್ಯಮಗಳಲ್ಲಿ ಮಾತನಾಡಿದ್ದು, ಸಮೀಕ್ಷಾ ಮೃತಪಟ್ಟಿರುವ ಕಾರಣ ವಿವಾದ ಸೃಷ್ಟಿಸಲಾಗುತ್ತಿದೆ. ಆಕೆ ಈಗ ಇಲ್ಲ ಎಂಬ ಕಾರಣದಿಂದ ಈಗ ಏನೇನೋ ಹೇಳುತ್ತಿದ್ದಾರೆ. ಚಿಕಿತ್ಸೆ ನೀಡಲು ಕಳಿಸಿದವರು ಈಗ ಬಾಯಿ ಬಿಡುತ್ತಿಲ್ಲ. ಹಾಗಿದ್ದರೆ ಕೇಜ್‌ನ ಬೀಗ ತೆಗೆದವರಾರು? ಬೀಗ ತೆಗೆಯಲು ಅನುಮತಿ ನೀಡಿದವರಾರು? ಇದೆಲ್ಲವೂ ಪ್ರಶ್ನಾರ್ಹವಾಗಿದೆ. ಈ ಸಂಬಂಧ ಸೂಕ್ತ ತನಿಖೆ ನಡೆಯಬೇಕೆಂದು ಆಗ್ರಹಿಸಿದ್ದಾರೆ.

ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರ ಭೇಟಿ: ತನಿಖೆ

ಶಿವಮೊಗ್ಗ: ಘಟನೆಯ ಹಿನ್ನೆಲೆಯಲ್ಲಿ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಕೆ.ರಂಗಸ್ವಾಮಿ ತ್ಯಾವರೆಕೊಪ್ಪ ಸಿಂಹಧಾಮಕ್ಕೆ ಶನಿವಾರ ಭೇಟಿ ನೀಡಿ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ನಂತರ ಮಾತನಾಡಿ, ತರಬೇತಿ ಪಶುವೈದ್ಯೆ ಡಾ. ಸಮೀಕ್ಷಾ ರಾತ್ರಿ ಏಕಾಂಗಿಯಾಗಿ ಮೃಗಾಲಯದ ನೀರಾನೆ ಆರೋಗ್ಯ ತಪಾಸಣೆಗೆ ಮುಂದಾಗಿದ್ದು ಏಕೆ? ಆಕೆಗೆ ಯಾರು ಅಂತಹ ಆದೇಶ ನೀಡಿದ್ದರೆಂಬುದನ್ನು ಪತ್ತೆ ಮಾಡಲು ಸೂಕ್ತ ತನಿಖೆ ನಡೆಸುವುದಾಗಿ ಹೇಳಿದರು. ಸರ್ಕಾರ ಏನೇ ಪರಿಹಾರ ನೀಡಿದರೂ ಪಾಲಕರ ಶೋಕ ತಣಿಸಲು ಸಾಧ್ಯವಿಲ್ಲ. ಯುವ ವೈದ್ಯೆಯ ಸಾವು ದುರದೃಷ್ಟಕರ. ಅರಣ್ಯ ಸಚಿವರು ಇಲಾಖಾ ತನಿಖೆಗೆ ಸೂಚಿಸಿದ್ದಾರೆ. ಪೊಲೀಸ್ ತನಿಖೆಯೂ ನಡೆಯುತ್ತಿದೆ. ನಿಜಾಂಶ ತಿಳಿಯಲಿದೆ. ಮಾರ್ಗ ಸೂಚಿ ಉಲ್ಲಂಘಿಸಿದವರಿಗೆ ಶಿಕ್ಷೆ ನಿಶ್ಚಿತ ಎಂದರು. ಇಬ್ಬರು ಸಿಬ್ಬಂದಿಯೊಂದಿಗೆ ಡಾ. ಸಮೀಕ್ಷಾ ಪರೀಕ್ಷೆಗೆ ತೆರಳಿದ್ದರು ಎಂಬ ಮಾಹಿತಿಯನ್ನು ಅಧಿಕಾರಿಗಳು ನೀಡಿದ್ದರು. ಸಿಸಿ ಕ್ಯಾಮರವನ್ನು ಪೊಲೀಸರು ಕೊಂಡೊಯ್ದಿದ್ದಾರೆ. ಮಾರ್ಗಸೂಚಿ ಉಲ್ಲಂಘನೆಯಾಗಿದೆಯೇ? ಎಂಬುದನ್ನು ಗಮನಿಸಲಾಗುವುದು ಎಂದು ಹೇಳಿದ್ದ.

ಸ್ವಯಂಪ್ರೇರಿತವಾಗಿ ಬಿಡುಗಡೆ ಇಲ್ಲ: ಹೈ

ಬೆಂಗಳೂರು: ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಅಪರಾಧಿಯು 20 ವರ್ಷ ಜೈಲು ಶಿಕ್ಷೆ ಪೂರೈಸಿದ ಬಳಿಕ ಸ್ವಯಂ ಪ್ರೇರಿತವಾಗಿ ಬಿಡುಗಡೆ ಮಾಡುವ



ಯಾವುದೇ ತೆರನಾದ ಕಾನೂನಾತ್ಮಕ ಹಕ್ಕಿಲ್ಲ ಎಂದು ಕರ್ನಾಟಕ ಹೈಕೋರ್ಟ್ ತೀರ್ಪಿತ್ತಿದೆ.

ಮೈಸೂರು ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ನಗರದ ಕೋರಮಂಗಲ ಮೂಲದ ಕಿಶನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ.ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ವಜಾಗೊಳಿಸಿದೆ. ಕ್ಷಮಾದಾನ ಅಥವಾ ಅವಧಿಗೂ ಮುನ್ನ ಅಪರಾಧಿಯನ್ನು ಬಿಡುಗಡೆ ಮಾಡುವ ಪ್ರಶ್ನೆಯು ಶಾಸನಬದ್ಧ ನಿಬಂಧನೆ ಮತ್ತು ನೀತಿಯ ಅಡಿ ಸೂಕ್ತ ಸರ್ಕಾರಕ್ಕೆ ಮಾತ್ರ ಇದೆ ಎಂದು ನ್ಯಾಯಾಲಯ ತಿಳಿಸಿದೆ.

ಅಪರಾಧಿಯು 20 ವರ್ಷ ಶಿಕ್ಷೆ ಪೂರೈಸಿದ ಬಳಿಕ ಜೀವಾವಧಿ ಶಿಕ್ಷೆಗೆ ಗುರಿಯಾದವನನ್ನು ಬಿಡುಗಡೆ ಮಾಡಬಹುದಾಗಿ ಐಪಿಸಿ ಸೆಕ್ಷನ್ 57 ಹೇಳುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಕಾನೂನಿನ ಅಡಿ ಪರಿವರ್ತನೆ, ಕ್ಷಮಾದಾನ ಸಿಗದ ಹೊರತು ಜೈಲು ಶಿಕ್ಷೆಯನ್ನು ಸೀಮಿತಗೊಳಿಸುವ ನಿರ್ದಿಷ್ಟ ನ್ಯಾಯಾಂಗ ನಿರ್ದೇಶನದ ಗೈರಿನ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ವಿಧಿಸಿರುವ ಜೀವಾವಧಿ ಶಿಕ್ಷೆಯನ್ನು ಬದುಕಿರುವವರೆಗಿನ ಶಿಕ್ಷೆ ಎಂದು ಪರಿಗಣಿಸಬೇಕಾಗುತ್ತದೆ ಎಂದೂ ಪೀಠ ಹೇಳಿದೆ.

ಅಪರಾಧಿ ಕಿಶನ್ ಜೈಲಿನಲ್ಲಿ 20 ವರ್ಷ ಕಳೆದಿರುವುದರಿಂದ ಸರ್ಕಾರಕ್ಕೆ ಕ್ಷಮಾದಾನ ಕೋರಿಕೆ ಸಲ್ಲಿಸಲು ಅರ್ಹರಾಗಿದ್ದಾರೆ. ಸರ್ಕಾರ ಕ್ಷಮಾದಾನ ನೀತಿ ಮತ್ತು ಸೂಕ್ತ ಶಾಸನಬದ್ಧ ನಿಬಂಧನೆಗಳ ಅಡಿ ಕ್ಷಮಾದಾನ ಕೋರಬಹುದಾಗಿದೆ. ಇಂತಹ ಅರ್ಜಿ ಸಲ್ಲಿಸಿದರೆ ಶಿಕ್ಷೆ ಪರಿಶೀಲನಾ ಮಂಡಳಿಯು ಪ್ರಕರಣದ ಆಧಾರದ ಮೇಲೆ ಅಪರಾಧಿಯು ಶಿಕ್ಷೆ ಅನುಭವಿಸಿರುವ ಅವಧಿ, ಅರ್ಜಿದಾರನ ನಡತೆ, ಅಪರಾಧದ ಸ್ವರೂಪ, ಸಂತ್ರಸ್ತರ ಹಿತಾಸಕ್ತಿ, ಅನ್ವಯಿಸುವ ನೀತಿಯನ್ನು ಪರಿಗಣಿಸಿ ನಿರ್ಧರಿಸಬಹುದು ಎಂದು ಹೇಳಿದೆ.

ಪ್ರಕರಣದ ಹಿನ್ನೆಲೆ

ಇಬ್ಬರು ಮಕ್ಕಳನ್ನು ಅಪಹರಿಸಿ ಕೊಲೆ ಮಾಡಿದ ಪ್ರಕರಣದಲ್ಲಿ ಅರ್ಜಿದಾರ ಕಿಶನ್ ಸೇರಿ ಮೂವರಿಗೆ ಬೆಂಗಳೂರಿನ ಸತ್ರ ನ್ಯಾಯಾಲಯವು ಮರಣದಂಡನೆ ವಿಧಿಸಿತ್ತು. ಈ ಪ್ರಕರಣದ ಮೇಲ್ಮನವಿ ಪ್ರಕ್ರಿಯೆಯು 2013 ರಲ್ಲಿ ಪೂರ್ಣಗೊಂಡಿದ್ದು, ಹೈಕೋರ್ಟ್‌ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿತ್ತು. ಐಪಿಸಿ ಸೆಕ್ಷನ್ 57ರ ಅಡಿ 14 ವರ್ಷ ಜೈಲು ಶಿಕ್ಷೆ ಪೂರ್ಣಗೊಂಡ ಬಳಿಕ ಶಿಕ್ಷೆಯ ಅವಧಿಯಲ್ಲಿ ಯಾವುದೇ ಕಡಿತ ಇರುವುದಿಲ್ಲ ಎಂಬ ಸ್ಪಷ್ಟ ನಿರ್ದೇಶನವನ್ನೂ ನ್ಯಾಯಾಲಯ ನೀಡಿತ್ತು. 2025 ರ ಜ. 15 ರಂದು 20 ವರ್ಷ ಶಿಕ್ಷೆ ಪೂರೈಸಿದ್ದ ಕಿಶನ್, ಐಪಿಸಿ ಸೆಕ್ಷನ್ 57ರ ಅಡಿ ಕ್ಷಮಾದಾನಕ್ಕೆ ಅರ್ಹವಾಗಿರುವುದರಿಂದ ಬಿಡುಗಡೆ ಮಾಡುವಂತೆ ಕೋರಿದ್ದರು.

ಶ್ರೀನಿವಾಸ ದಾಸಕರಿಯಪ್ಪರಿಂದ 5.76 ಕೋಟಿ ರೂ. ಚರಾಸ್ತಿ ಘೋಷಣೆ

ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ. ಶ್ರೀನಿವಾಸ ದಾಸಕರಿಯಪ್ಪ ಒಟ್ಟು 5.76 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ಸ್ಥಿರ ಮತ್ತು ಚರಾಸ್ತಿ ಘೋಷಿಸಿಕೊಂಡಿದ್ದಾರೆ.



ಚುನಾವಣಾಧಿಕಾರಿಗೆ ನಾಮಪತ್ರದೊಂದಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಅವರು ತಮ್ಮ ಹೆಸರಿನಲ್ಲಿ 34.79 ಲಕ್ಷ ರೂ. ಮೌಲ್ಯದ ಚರಾಸ್ತಿ ಹಾಗೂ 5.41 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಇರುವುದಾಗಿ ಘೋಷಿಸಿದ್ದಾರೆ. ಸ್ಥಿರಾಸ್ತಿಯಲ್ಲಿ 1.13 ಕೋಟಿ ರೂ. ಮೌಲ್ಯದ ಪಿತ್ರಾರ್ಜಿತ ಕೃಷಿ ಭೂಮಿ ಹಾಗೂ 4.27 ಕೋಟಿ ರೂ. ಮೌಲ್ಯದ ಸ್ವಯಾರ್ಜಿತ ಆಸ್ತಿಗಳು ಸೇರಿವೆ. ಕೈಯಲ್ಲಿ 3.60 ಲಕ್ಷ ರೂ. ನಗದು ಇದ್ದು, ತುಂಬಿಗೆರೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 2.96 ಲಕ್ಷ ರೂ. ಸಾಲ ಇರುವುದಾಗಿ ಅಫಿಡವಿಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಸಮರ್ಥ್ 4.25 ಕೋಟಿ ರೂ. ಶ್ರೀಮಂತ

ಪಕ್ಷೇತರ ಮತ್ತು ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಸಮರ್ಥ್ ಶಾಮನೂರು 4.25 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ಸ್ಥಿರ ಮತ್ತು ಚರ ಆಸ್ತಿ ಹೊಂದಿರುವುದಾಗಿ ಘೋಷಿಸಿಕೊಂಡಿದ್ದಾರೆ.

27 ವರ್ಷದ ಯುವ ಉದ್ಯಮಿ ಸಮರ್ಥ್‌ಗೆ 2.17 ಕೋಟಿ ಮೌಲ್ಯದ ಚರ ಆಸ್ತಿ ಹಾಗೂ 2.08 ಕೋಟಿ ಮೌಲ್ಯದ ಕೃಷಿ ಭೂಮಿ ಸೇರಿದಂತೆ ಸ್ಥಿರ ಆಸ್ತಿ ಇದೆ. ಸಮರ್ಥ್ ಹೆಸರಿನಲ್ಲಿ 8.35 ಲಕ್ಷ ರೂ. ನಗದು ಹಣವಿದ್ದು, ವಿವಿಧ ಬ್ಯಾಂಕ್ ಖಾತೆಗಳಲ್ಲಿ ಹೂಡಿಕೆ ಹಾಗೂ 14.45 ಲಕ್ಷ ಮೌಲ್ಯದ ಚಿನ್ನಾಭರಣ ಹೊಂದಿದ್ದಾರೆ.

ದಾವಣಗೆರೆ ತಾಲೂಕಿನ ಆನೆಕೊಂಡ ಮತ್ತು ಬೇತೂರು ಗ್ರಾಮಗಳಲ್ಲಿ ಒಟ್ಟು 6 ಎಕರೆ 14 ಗುಂಟೆ ಕೃಷಿ ಭೂಮಿ ಹೊಂದಿದ್ದಾರೆ. ಆಸ್ತಿಯ ಜೊತೆಗೆ ಸಮರ್ಥ್ ಹೆಸರಿನಲ್ಲಿ ಒಟ್ಟು 3.52 ಕೋಟಿ ಮೊತ್ತದ ಸಾಲ ಹಾಗೂ ಹೊಣೆಗಾರಿಕೆಗಳಿವೆ ಎಂದು ಅಫಿಡವಿಟ್‌ನಲ್ಲಿ ಉಲ್ಲೇಖಿಸಲಾಗಿದೆ. 2024–25ನೇ ಸಾಲಿನ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಅವರು 96.05 ಲಕ್ಷ ರೂ. ವಾರ್ಷಿಕ ಆದಾಯ ತೋರಿಸಿದ್ದಾರೆ.

ಬಸ್ ಟಿಕೆಟ್ ದರ ಹೆಚ್ಚಿಸಲ್ಲ: ರಾಮಲಿಂಗಾರೆಡ್ಡಿ

ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗಿದ್ದರೂ ರಾಜ್ಯದಲ್ಲಿ ಬಸ್ ಟಿಕೆಟ್ ದರವನ್ನು ಹೆಚ್ಚಿಸುವುದಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮಧ್ಯಪ್ರಾಚ್ಯ ಯುದ್ಧದ ಪರಿಣಾಮವಾಗಿ ಡೀಸೆಲ್ ದರಗಳು ಏರಿಕೆಯಾಗಿದ್ದು, ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಡೀಸೆಲ್ ಖರೀದಿ ಮಾಡುತ್ತಿರುವುದರಿಂದ ವೆಚ್ಚದ ಒತ್ತಡ ಹೆಚ್ಚಾಗಿದೆ. ಆದರೂ, ಈ ಭಾರವನ್ನು ಪ್ರಯಾಣಿಕರ ಮೇಲೆ ಹಾಕುವ ಉದ್ದೇಶ ಇಲ್ಲ ಎಂದರು. ಯುದ್ಧದ ಪರಿಣಾಮವಾಗಿ ಇಂಧನ ದರಗಳಲ್ಲಿ ಏರಿಕೆ ಆಗಿದೆ. ಡೀಸೆಲ್ ದರ ಏರಿಕೆಯಿಂದ ಖರ್ಚು ಹೆಚ್ಚಾಗಿದೆ. ಆದರೆ ಯಾವುದೇ ಕಾರಣಕ್ಕೂ ಬಸ್ ಟಿಕೆಟ್ ದರ ಏರಿಕೆ ಮಾಡುವುದಿಲ್ಲ. ಯುದ್ಧ ನಿಂತರೆ ಬೆಲೆಗಳು ತಾನಾಗಿಯೇ ಕಡಿಮೆಯಾಗುತ್ತವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೋರಮಂಗಲದಲ್ಲಿ ಬಯೋ ಗ್ಯಾಸ್: ಕೋರಮಂಗಲದ ನಿವಾಸಿಗಳಿಂದ ಸಂಗ್ರಹಿಸಿದ ಸಂಪೂರ್ಣ ಹಸಿ ಕಸವನ್ನು ಬಳಸಿಕೊಂಡು ಕಾರ್ಯನಿರ್ವಹಿಸುತ್ತಿರುವ, ಬೆಂಗಳೂರಿನ ಮೊದಲ ಬಯೋ ಗ್ಯಾಸ್ ಪ್ಲಾಂಟ್ (2018 ರಲ್ಲಿ ಪ್ರಾರಂಭವಾದ 8 ಟನ್ ಸಾಮರ್ಥ್ಯದ ಘಟಕ) ಇದರೊಂದಿಗೆ, ಹೆಚ್ಚುವರಿಯಾಗಿ ನಿರ್ಮಿಸಲಾದ ದಿನಕ್ಕೆ 5 ಟನ್ ಸಾಮರ್ಥ್ಯದ ಜೈವಿಕ ಅನಿಲ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಕೋರಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಮೊಟ್ಟಮೊದಲ ಬಾರಿಗೆ ಬಯೋ ಗ್ಯಾಸ್ ಆರಂಭವಾಗಿದ್ದಕ್ಕೆ ಹಾಗೂ ಅದರ ಲಾಭವನ್ನು ಹತ್ತಿರದ ಹೋಟೇಲ್‌ಗಳು ಪಡೆದುಕೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ. ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲೂ ಬಯೋಗ್ಯಾಸ್ ಉತ್ಪದನಾ ಘಟಕ ಶುರುಮಾಡಿದರೆ, ಗ್ಯಾಸ್ ಸಮಸ್ಯೆ ಜತೆ ಕಸದ ಸಮಸ್ಯೆ ಕೂಡ ಮುಕ್ತಿ ಸಿಗಲಿದೆ ಎಂದರು.



ಡಾ.ಸಮೀಕ್ಷಾ ಅವರ ಆತ್ಮಕ್ಕೆ ಶಾಂತಿ ಸಿಗಲಿ

ಮೂಕಪ್ರಾಣಿಗಳ ನೋವಿಗೆ ಸ್ಪಂದಿಸಲೆಂದೇ ಪಶುವೈದ್ಯಕೀಯ ವೃತ್ತಿ ಆಯ್ದುಕೊಂಡಿದ್ದ ಆನೇಕಲ್ಲ ಹೆಮ್ಮೆಯ ಪುತ್ರಿ ಡಾ.ಸಮೀಕ್ಷಾ ರೆಡ್ಡಿ ಅವರ ನಿಧನದ ಸುದ್ದಿ ತಿಳಿದು ಅತೀವ ದುಃಖವಾಯಿತು. ಗರ್ಭಿಣಿ ನೀರಾನೆಯ ಜೀವ ಉಳಿಸಲು ಹೋದಾಗ ಸಂಭವಿಸಿದ ದುರಂತ ನಿಜಕ್ಕೂ ವಿಧಿಯ ಕ್ರೂರ ಆಟವಾಗಿದೆ. ತನ್ನ 27ನೇ ವಯಸ್ಸಿನಲ್ಲೇ ಸಮಾಜಕ್ಕೆ ಮಾದರಿಯಾಗಿದ್ದ ಈ ಚೇತನ ಅಕಾಲಿಕವಾಗಿ ಮೃತಪಟ್ಟಿರುವುದು. ಸಕಲವಾರ ಗ್ರಾಮಕ್ಕೆ ಮತ್ತು ಇಡೀ ನಮ್ಮ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದ್ದು, ಡಾ.ಸಮೀಕ್ಷಾ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಎಂದು ಹೇಳಿದ್ದಾರೆ.

ನಕಲಿ ಸಿಬಿಐ ಡೈರೆಕ್ಟರ್‌ನಿಂದ ಬಹುಕೋಟಿ ವಂಚನೆ ಪ್ರಕರಣ

ವೃದ್ಧನಿಗೆ ₹15.45 ಕೋಟಿ ಪಂಗನಾಮ

ಬೆಳಗಾವಿ: ಸಿಬಿಐ ಡೈರೆಕ್ಟರ್ ಹೆಸರಿನಲ್ಲಿ ನಗರದ ವೃದ್ಧ ನಾಗರಿಕರೊಬ್ಬರಿಗೆ ಕರೆ ಮಾಡಿದ ಆನ್‌ಲೈನ್ ಅಪರಾಧಿಗಳು ಬರೋಬ್ಬರಿ 15.45ಕೋಟಿ ರೂ.ಗಳನ್ನು ಆರ್‌ಟಿಜಿಎಸ್ ಮೂಲಕ ಲಪಟಾಯಿಸಿರುವ ಮಾಹಿತಿ ತಡವಾಗಿ ಹೊರಬಿದ್ದಿದೆ.

ಕೇಂದ್ರ ತನಿಖಾ ದಳದ ನಿರ್ದೇಶಕ ಕೆ.ಸುಬ್ರಹ್ಮಣ್ಯಂ ಎಂದು ಹೇಳಿಕೊಂಡು ನಗರದ ಹಿರಿಯ ನಾಗರಿಕರಾದ ಇಲ್ಲಿನ ಟಿಳಕವಾಡಿ ಆಗರಕರ ರಸ್ತೆಯ ಅಜಿತ ಗೋಪಾಲಕೃಷ್ಣ ಸರಾಫ್ (81) ಎಂಬುವವರಿಗೆ ಕಳೆದ ಫೆ.5ರಂದು ಕರೆ ಮಾಡಿ ಬ್ಲ್ಯಾಕ್ ಮೇಲ್ ಮಾಡಿ ಹೆದರಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಫೆಬ್ರವರಿ 5ರ ಬೆಳಗ್ಗೆ ಸಿಬಿಐ ಕಚೇರಿಯಿಂದ ಫೋನ್ ಮಾಡುತ್ತಿರುವುದಾಗಿ ವಂಚನೆಗೊಳಗಾದ ಅಜಿತ ಗೋಪಾಲಕೃಷ್ಣ ಸರಾಫ್ ಎಂಬುವವರ ಮೊಬೈಲ್‌ಗೆ ಕರೆ ಮಾಡಿ ನಿಮ್ಮ ಬಳಿ ಎರಡು ಸಿಮ್ ಕಾರ್ಡ್ ಆಕ್ಟೀವ್ ಇವೆ.

ಅವುಗಳಿಂದ ಜೆಟ್ ಏರವೇಸ್ ಸಿಇಓ ನರೇಶ್ ಗೋಯಲ್ ಅವರಿಗೆ ಕರೆ ಮಾಡಿ ಸಂಪರ್ಕ ಹೊಂದಿದ್ದೀರಿ ಎಂದು ಕಥೆ ಕಟ್ಟಿ ಹೆದರಿಸಿದ್ದು, ಸದ್ಯ ನರೇಶನನ್ನು ಬಂಧಿಸಲಾಗಿದ್ದು ನೀವು ನರೇಶನೊಂದಿಗೆ ಮನಿಲಾಂಡ್‌ರಿಂಗ್‌ನಲ್ಲಿ ತೊಡಗಿ 25 ಲಕ್ಷ ಹಣ ಕೆನರಾ ಬ್ಯಾಂಕ್ ಕೊಟ್ಟು 5ಲಕ್ಷ ಕಮಿಷನ್ ಪಡೆದಿದ್ದೀರಿ ಎಂದು ದೂರುದಾರರಿಗೆ ಹೆದರಿಸಿದ್ದಾರೆ.

ಸಿಬಿಐ ಹೆಸರಿನಲ್ಲಿ ಆನ್‌ಲೈನ್ ವಂಚನೆ

ಆನ್‌ಲೈನ್ ಅಪರಾಧಿಗಳು ದೂರುದಾರರ ಎಫ್‌ಡಿ ಹಣ ಹಾಗೂ ಷೇರುಗಳ ಬಗ್ಗೆ ಮಾಹಿತಿ ಪಡೆದು ದೂರುದಾರರು ಮೋತಿಲಾಲ ಓಸ್ವಾಲ್ ಕಂಪನಿಯಲ್ಲಿ ಹೊಂದಿದ್ದ ಹೂಡಿಕೆ ಷೇರುಗಳನ್ನು ಮಾರಿಸಿ ವಂಚನೆಗೊಳಗಾದ ದೂರುದಾರನಿಂದ 15.45ಕೋಟಿ ಹಣವನ್ನು ಆರ್‌ಟಿಜಿಎಸ್ ಮೂಲಕ ಫೆ.7ರಂದು ಮತ್ತು ಮಾ.9ರವರೆಗೆ ಲಪಟಾಯಿಸಿದ್ದಾರೆ.

ಸಿಬಿಐ ನಿರ್ದೇಶಕ, ಕೆ.ಸುಬ್ರಹ್ಮಣ್ಯಂ, ಸಿಬಿಐ ಚೀಫ್ ಶಿವಾ ಸುಬ್ರಹ್ಮಣ್ಯ ಹಾಗೂ ಆರ್‌ಬಿಐ ವೀಚಕ್ಷಣಾಧಿಕಾರಿ ಜಾರ್ಜ್ ಮ್ಯಾಥ್ಯೂ ಹೆಸರಿನ ವಂಚಕರು ಬೃಹತ್ ಹಣಕಾಸಿನ ಅಪರಾಧ ಎಸಗಿರುವುದ ಬೆಳಗಾವಿ ಪೊಲೀಸರ ನಿದ್ದೆಗೆಡಿಸಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆ 2008ರ 66ಡಿ, 66ಸಿ, ಬಿಎನ್‌ಎಸ್ 2023ರ 318(4), 319(2) ರ ಅಡಿ ಪ್ರಕರಣ ಮಾ.18ರಂದು ನಗರದ ಟಿಳಕವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಳಗಾವಿ ಸಿಇಎನ್ ಠಾಣೆ ಪೊಲೀಸ್ ಇನ್ಸಪೆಕ್ಟರ್ ಶ್ರೀಶೈಲ್ ಗಾಬಿ ಅವರು ತನಿಖೆ ಮುಂದುವರಿಸಿದ್ದಾರೆ.

ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ರಾಮ್ ಪ್ರಸಾತ್ ಮನೋಹರ್ ಹೇಳಿಕೆ

ನವೀಕರಿಸುವ ವಿದ್ಯುತ್ ಬಳಕೆಯಲ್ಲಿ ಮುಂಚೂಣಿ

ಹೊಸದಿಲ್ಲಿ /ಬೆಂಗಳೂರು: ಭವಿಷ್ಯದ ವಿದ್ಯುತ್ ಅಗತ್ಯತೆಗಳಿಗೆ ಸಜ್ಜಾಗಿರುವ ಗ್ರಿಡ್ ನಿರ್ಮಾಣ, ಭೌಗೋಳಿಕ ಸವಾಲುಗಳು ಹಾಗೂ ಸಪ್ಲೇ ಚೈನ್ ನಿರ್ವಹಣೆಯನ್ನು ಕರ್ನಾಟಕ ಅತ್ಯಂತ ಯಶಸ್ವಿಯಾಗಿ ನಿಭಾಯಿಸುತ್ತಿದೆ. ರಾಜ್ಯ ನವೀಕರಿಸಬಹುದಾದ ವಿದ್ಯುತ್ ಬಳಕೆಯಲ್ಲಿ ಮುಂಚೂಣಿಯಲ್ಲಿದೆ. ಇದನ್ನು ಇನ್ನಷ್ಟು ವಿಸ್ತರಿಸುವ ನಿಟ್ಟಿನಲ್ಲಿ ಹಲವಾರು ಹೊಸ ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ವ್ಯವಸ್ಥಾಪಕ ನಿರ್ದೇಶಕ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಹೊಸದಿಲ್ಲಿಯಲ್ಲಿ ನಡೆದ ಪ್ರತಿಷ್ಠಿತ ಭಾರತ್ ಎಲೆಕ್ಟ್ರಿಕ್ ಸಿಟಿ ಸಮ್ಮಿಟ್–2026 ರಲ್ಲಿ ಭಾಗವಹಿಸಿ ಮಾತನಾಡಿ, ಕರ್ನಾಟಕ ರಾಜ್ಯದ ಒಟ್ಟು 31,000 ಮೆ.ವ್ಯಾ ವಿದ್ಯುತ್ ಸಾಮರ್ಥ್ಯದಲ್ಲಿ ಸರಿಸುಮಾರು 21,000 ಮೆ.ವ್ಯಾ (ಶೇ.57ರಷ್ಟು) ವಿದ್ಯುತ್ ಅನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಪಡೆಯಲಾಗುತ್ತಿದೆ. ಹೆಚ್ಚಿನ ಬಿಸಿಲಿನಿಂದಾಗಿ ಉತ್ತರ ಕರ್ನಾಟಕವು ನವೀಕರಿಸಬಹುದಾದ ವಿದ್ಯುತ್ ಉತ್ಪಾದನೆಯ ಕೇಂದ್ರವಾಗಿದ್ದರೆ, ವಿದ್ಯುತ್ ಬೇಡಿಕೆಯ ಬಹುಪಾಲು ದಕ್ಷಿಣ ಭಾಗಗಳಲ್ಲಿ (ಬೆಂಗಳೂರು) ಕೇಂದ್ರೀಕೃತವಾಗಿದೆ. ಈ ಭೌಗೋಳಿಕ ಸವಾಲನ್ನು ನಿಭಾಯಿಸಲು ಕೆಪಿಟಿಸಿಎಲ್ ಈಗಾಗಲೇ 7,000 ಮೆ.ವ್ಯಾ ಸಾಮರ್ಥ್ಯವನ್ನು ನಿರ್ವಹಿಸುವ ಗ್ರೀನ್ ಎನರ್ಜಿ ಕಾರಿಡಾರ್‌ನ 1 ಮತ್ತು 2ನೇ ಹಂತಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ ಎಂದು ತಿಳಿಸಿದ್ದಾರೆ.



19 ಗಿ.ವ್ಯಾ ಬೃಹತ್ ಕಾರಿಡಾರ್ ಯೋಜನೆ: ಈ ಎರಡೂ ಹಂತಗಳ ಯಶಸ್ಸಿನ ಹಿನ್ನಲೆಯಲ್ಲಿ, ರಾಜ್ಯದ ವಿದ್ಯುತ್ ಪ್ರಸರಣ ಜಾಲವನ್ನು ಮತ್ತಷ್ಟು ಬಲಪಡಿಸಲಾಗುತ್ತಿದೆ. ಮುಂಬರುವ ವರ್ಷಗಳಲ್ಲಿ, ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ವಿದ್ಯುತ್ ಒದಗಿಸಲು ನಾವು 19 ಗಿಗಾವ್ಯಾಟ್ ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆಯನ್ನು ರೂಪಿಸುತ್ತಿದ್ದೇವೆ. ಈ ಮಹತ್ವಾಕಾಂಕ್ಷೆಯ ಯೋಜನೆಯು ಮೂರು 765 ಕೆ.ವಿ ಸ್ಟೇಷನ್‌ಗಳು, ಇಪ್ಪತ್ತನಾಲ್ಕು 400 ಕೆ.ವಿ ಸಬ್‌ಸ್ಟೇಷನ್‌ಗಳು, ಸುಮಾರು 500 ಸರ್ಕ್ಯೂಟ್ ಕಿಲೋ ಮೀಟರ್ ಪ್ರಸರಣ ಮಾರ್ಗಗಳ ಸ್ಥಾಪನೆಯನ್ನು ಒಳಗೊಂಡಿರಲಿದೆ, ಎಂದು ವಿವರಿಸಿದ್ದಾರೆ. ಕೆಪಿಟಿಸಿಎಲ್ ಪ್ರಸ್ತುತ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ಸ್ ಮತ್ತು ಪಂಪ್ಡ್ ಸ್ಟೋರೇಜ್ ಹೈಡ್ರೋ ಗಳತ್ತ ಹೆಚ್ಚಿನ ಗಮನ ಹರಿಸುತ್ತಿದೆ. ಇದು ಪೀಕ್ ಲೋಡ್ ನಿರ್ವಹಣೆಯ ವೆಚ್ಚವನ್ನು ಗಣನೀಯವಾಗಿ ಇಳಿಸುತ್ತದೆ ಎಂದರು.

> ವಿದ್ಯುತ್ ಉಪಕರಣಗಳನ್ನು ಉತ್ಪಾದಿಸುವ ಸ್ಥಳೀಯ ತಯಾರಕರಿಗೆ ನಾವು ಹೆಚ್ಚಿನ ಪ್ರೋತ್ಸಾಹವನ್ನು ನೀಡುವ ನಿಟ್ಟಿನಲ್ಲಿ ಅಗತ್ಯ ನೀತಿ ರೂಪಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದೇವೆ.
>
> ■ ಡಾ. ರಾಮ್ ಪ್ರಸಾತ್ ಮನೋಹರ್, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ



ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ದುರ್ಲಭವಾದ ಚತುರ್ಭದ್ರಗಳು ಯಾವುವು?

▸ಉ. ಪ್ರಿಯವಾದ ಮಾತಿನಿಂದ ಕೂಡಿದ ದಾನ, ಗರ್ವರಹಿತವಾದ ಜ್ಞಾನ, ಕ್ಷಮಾದಿಂದ ಕೂಡಿದ ಶೌರ್ಯ ಮತ್ತು ತ್ಯಾಗದಿಂದ ಕೂಡಿದ ವಿತ್ತ.

ಈ ಹಿಂದಿನ ಪ್ರಶ್ನೋತ್ತರದಲ್ಲಿ ಚತುರ್ಭದ್ರ ಅಂದರೆ ಯಾವುದು?' ಎಂಬ ವಿಷಯವನ್ನು ವಿವರಿಸಲಾಗಿತ್ತು. ನಾಲ್ಕು ಪುರುಷಾರ್ಥಗಳೇ ಚತುರ್ಭದ್ರಗಳು ಎಂಬ ವಿವರಣೆ ಅಲ್ಲಿತ್ತು. ಇದಕ್ಕೂ ಮುಂದುವರಿದ ಪ್ರಶ್ನೆ ಇದಾಗಿದೆ. ದುರ್ಲಭವಾದ ಚತುರ್ಭದ್ರಗಳು ಯಾವುವು? ಎಂದು. ಅಂದರೆ ಇಲ್ಲಿ ಹೇಳಿದ ನಾಲ್ಕು ಸಂಗತಿಗಳು ನಾಲ್ಕು ಪುರುಷಾರ್ಥಗಳನ್ನು ಪಡೆಯಲು ಅತ್ಯಂತ ಸಹಕಾರಿಗಳು ಎಂಬುದು ಎರಡು ಪ್ರಶ್ನೋತ್ತರಗಳನ್ನು ಗಮನಿಸಿದಾಗ ತಿಳಿದುಬರುವ ಅಂಶವಾಗಿದೆ. ಹಾಗಾಗಿ ಈ ಉತ್ತರದಲ್ಲಿ ಚತುರ್ಭದ್ರವನ್ನು ಸಾಧಿಸಲು ಬೇಕಾದ ದುರ್ಲಭವಾದ ಚತುರ್ಭದ್ರಗಳು ಯಾವುವು? ಎಂಬುದನ್ನು ತಿಳಿಯಬೇಕಾದ ಸಂದರ್ಭವಿದೆ.

ದಾನ ಮಾಡಬೇಕು. ಆದರೆ ದಾನವನ್ನು ಮಾಡುವಾಗ ಪ್ರಿಯವಾದ ಮಾತಿನಿಂದ ದಾನ ಮಾಡಬೇಕು. ಅಂದರೆ ದಾನವನ್ನು ಕೊಡುವ ಸಂದರ್ಭದಲ್ಲಿ ಸ್ವೀಕರಿಸುವವರ ಮನಸ್ಸು ಮೃದುವಾಗಿರಬೇಕು; ಅಂತಹ ಮನಸ್ಸನ್ನು ನಿರ್ಮಿಸಬೇಕು; ಅಂತಹ ಮನಸ್ಸನ್ನು ನಿರ್ಮಿಸಲು ಇರುವ ಉತ್ತಮ ಸಾಧನವೇ ಪ್ರಿಯವಾದ ಮಾತು. ಪ್ರಿಯವಾದ ಮಾತಿನಿಂದ ದಾನ ಮಾಡಿದಾಗ ದಾನಕ್ಕೆ ಹೆಚ್ಚಿನ ಮಹತ್ವ ಬರುತ್ತದೆ ಎಂಬುದು ಇದರ ಅರ್ಥ. ಜ್ಞಾನವು ಗರ್ವದಿಂದ ರಹಿತವಾದಾಗ ಶೋಭಿಸುತ್ತದೆ. ಇದಕ್ಕೆ ಸಂಬಂಧಪಟ್ಟ ಒಂದು ಸುಭಾಷಿತ ಹೀಗಿದೆ – ವಿದ್ಯಾ ವಿನಯೇನ ಶೋಭತೇ' ಎಂಬುದಾಗಿ. ವಿನಯ ಎಂದರೆ ಗರ್ವ ಇಲ್ಲದಿರುವುದು. ಜ್ಞಾನವು ಎತ್ತರದಲ್ಲಿರುವ ವಿಷಯ. ಅದು ನಮ್ಮಲ್ಲಿಗೆ ಬರಬೇಕಾದರೆ ಬಾಗುವಿಕೆ ಅತ್ಯಂತ ಅನಿವಾರ್ಯ. ಈ ಬಾಗುವಿಕೆಯೇ ವಿನಯ ಎಂಬುದಾಗಿ ಕರೆಸಿಕೊಳ್ಳುತ್ತದೆ. ಹಾಗಾಗಿ ಜ್ಞಾನದ ಹರಿವು ವಿನಯದಲ್ಲಿ ನೆಲೆನಿಲ್ಲುತ್ತದೆ. ವಿನಯವಂತಿಕೆ ಜ್ಞಾನವನ್ನು ಇನ್ನಷ್ಟು ಪರಿಶೋಧಿಸುತ್ತದೆ.ಶೌರ್ಯ ಎಂಬುದು ಬಹಳ ದೊಡ್ಡ ಗುಣ. ಅದು ಶರೀರ, ಇಂದ್ರಿಯ, ಮನಸ್ಸು ಇವುಗಳು ಬಲಿಷ್ಠವಾದಾಗ ರೂಪಿತಗೊಳ್ಳುವ ಒಂದು ವಿಶೇಷಗುಣ. ಈ ಗುಣವು ಪರಿಪೂರ್ಣವಾಗಬೇಕಾದರೆ ಅದಕ್ಕೆ ಕ್ಷಮಾ ಎಂಬ ಗುಣವು ಬೇಕು. ಸಹನೆ ಎಂಬುದು ಇದರ ಅರ್ಥ. ಶೌರ್ಯದಿಂದ ಕೂಡಿರುವ ವ್ಯಕ್ತಿಯು ಬಲಹೀನನಾದವನ ಮೇಲೆ ತನ್ನ ಬಲವನ್ನು ಪ್ರಯೋಗಿಸಬಾರದು; ಅದಕ್ಕೆ ಅವನಿಗೆ ಸಹನೆ ಅಥವಾ ಕ್ಷಮೆ ಎಂಬ ಗುಣ ಅತ್ಯಂತ ಅವಶ್ಯಕ. ಯಾರ ಮೇಲೆ ಬಲಪ್ರಯೋಗವನ್ನು ಮಾಡಬೇಕು? ಯಾರ ಮೇಲೆ ಬಲಪ್ರಯೋಗವನ್ನು ಮಾಡಬಾರದು? ಎಂಬ ವಿವೇಕವನ್ನು ಕ್ಷಮಾ ಗುಣವು ಶೌರ್ಯ ಇದ್ದವನಿಗೆ ಕಲಿಸುತ್ತದೆ.

ಮನುಷ್ಯನು ಧನವನ್ನು ಸಂಪಾದನೆ ಮಾಡಬೇಕಾದದ್ದು ಅತ್ಯಂತ ಅನಿವಾರ್ಯ. ಧನವಿಲ್ಲದಿದ್ದರೆ ಅವನ ಜೀವನ ಸಾರ್ಥಕವಲ್ಲ. ಧನವಿಲ್ಲದ ಜೀವನ ಉಸಿರಿಲ್ಲದ ಶವದಂತೆ. ಆದರೆ ಸಂಪಾದನೆ ಮಾಡಿದ ಧನವು ಉಳಿಯಬೇಕಾದರೆ ಅದು ತ್ಯಾಗದಿಂದ ಮಾತ್ರ ಸಾಧ್ಯ. ಅದಕ್ಕೆ ದಾಸರು ಹೇಳುವುದು ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ ಎಂಬುದಾಗಿ. ಇಟ್ಟು ಇಟ್ಟು ಧನವು ಹಾಳಾಗುತ್ತದೆ. ನಿಂತ ನೀರು ಕೆಡುತ್ತದೆ. ಹರಿಯುವ ನೀರು ಶುದ್ಧವಾಗಿರುತ್ತದೆ. ಸಂಪಾದಿಸಿದ ವಿತ್ತವು ತ್ಯಾಗದಿಂದ ಶುದ್ಧವಾಗುತ್ತದೆ. ಮತ್ತಷ್ಟು ಶುದ್ಧವಾದ ಧನ – ಸಂಪತ್ತು ಅವನನ್ನು ಸೇರಿಕೊಳ್ಳುತ್ತದೆ. ಹಾಗಾಗಿ ತ್ಯಾಗದಿಂದ ಕೂಡಿದ ಧನವು ಆ ವ್ಯಕ್ತಿಯಲ್ಲಿ ವ್ಯಕ್ತಿತ್ವವನ್ನು ರೂಪಿಸುತ್ತದೆ. ಹೀಗೆ ದಾನ, ಜ್ಞಾನ, ಶೌರ್ಯ ಮತ್ತು ಧನ ಈ ನಾಲ್ಕು ಸಂಪತ್ತುಗಳು ಉಳಿಯಬೇಕಾದರೆ ಏನು ಮಾಡಬೇಕು ಎಂಬ ಉತ್ತರ ಈ ಪ್ರಶ್ನೋತ್ತರದಲ್ಲಿ ಇದೆ ಎಂಬುದನ್ನು ನಾವು ಗಮನಿಸಬೇಕು.



ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಜರಾಸಂಧನೊಂದಿಗೆ ಮಾತಿನ ಚಕಮಕಿ

ಜರಾಸಂಧನು ಹೀಗಂದನು: ಸ್ನಾತಕವ್ರತವನ್ನು ಮುಗಿಸಿ ಬಂದ ವಿಪ್ರರು ವೇಷವಿರೋಧಿಯಾದ ಆಚಾರವುಳ್ಳವರಾಗಿ ಹೊರಗೆ ತೋರುವಂತೆ ಹೀಗೆ ಮಾಲಾಧಾರಣ –ಚಂದನ–ಲೇಪನಗಳನ್ನು ಮಾಡಿಕೊಳ್ಳುವುದಿಲ್ಲ. ಇದು ಎಲ್ಲರಿಗೂ ತಿಳಿದಿರುವಂತಹುದೇ ಸರಿ. ಆದರೆ ತಾವುಗಳು ಪುಷ್ಪಮಾಲೆಗಳನ್ನು ಧರಿಸಿದ್ದೀರಿ. ಅಷ್ಟೇ ಅಲ್ಲ. ತಮ್ಮ ತೋಳುಗಳಲ್ಲಿ ಬಿಲ್ಲಿನ ಹುರಿಯ ಚಿಹ್ನೆಗಳಿವೆ. ಹಾಗಿರಲು ನಿಜವಾಗಿ ನೀವು ಯಾರು? ಕ್ಷತ್ರಿಯರಿಗೆ ಸಲ್ಲುವ ಓಜಸ್ಸನ್ನು ಹೊಂದಿದ್ದೀರಿ. ಆದರೆ ಬ್ರಾಹ್ಮಣರೆಂದು ಹೇಳಿಕೊಳ್ಳುತ್ತಿದ್ದೀರಿ. ಬೇರೆ ಬೇರೆ ಬಣ್ಣಗಳನ್ನು ಹೊಂದಿರುವ ವಸ್ತ್ರಗಳನ್ನು ಧರಿಸಿರುವಿರಿ. ಹೊರಗೆ ಮಾಲ್ಯಾನುಲೇಪನಗಳನ್ನು – ಎಂದರೆ ಹಾರಚಂದನಗಳನ್ನು ಧರಿಸಿರುವಿರಿ. ನೀವು ಯಾರೆಂಬುದನ್ನು ಸತ್ಯವಾಗಿ ಹೇಳಿರಿ. ರಾಜರಿಗೆ ಶೋಭಿಸತಕ್ಕದ್ದು ಸತ್ಯವೇ ಸರಿ. ಅಷ್ಟೇ ಅಲ್ಲ. ಬರುವಾಗ ಚೈತ್ಯಪರ್ವತದ ಶಿಖರಗಳನ್ನು ಒಡೆದುಹಾಕಿದ್ದೀರಿ. ಅದು ರಾಜಾಪಚಾರವಲ್ಲವೇ? ಅದಕ್ಕಾಗಿ ನಿಮ್ಮಲ್ಲಿ ಭಯವಿರಬೇಡವೇ? ಛದ್ಮವೇಷವನ್ನು ಧರಿಸಿರುವಿರಲ್ಲದೆ ಅದ್ವಾರದಿಂದ ಪ್ರವೇಶಮಾಡಿದ್ದೀರಿ! ಯಾವ ಕಾರಣಕ್ಕಾಗಿ? ಮಾತನಾಡಿ.

ಬ್ರಾಹ್ಮಣರಾದವರಿಗಂತೂ ತಮ್ಮ ಮಾತಿನಲ್ಲೇ ವೀರ್ಯವೆಂಬುದು ನೆಲೆಗೊಂಡಿರುವುದು. ನಿಮ್ಮ ಕರ್ಮವು ವಿಲಿಂಗಸ್ಥವಾದದ್ದು. ಅರ್ಥಾತ್, ನಿಮ್ಮ ಬಾಹ್ಯ ಚಿಹ್ನಗಳಿಗೆ ಹೊಂದತಕ್ಕದ್ದಲ್ಲ; ವಾಸ್ತವವಾಗಿ ಅದಕ್ಕೆ ವಿರುದ್ಧವಾದದ್ದೇ ಸರಿ! ಇರಲಿ. ಒಟ್ಟಿನಲ್ಲಿ ನಿಮ್ಮ ಧ್ಯೇಯವೇನು? ನನ್ನ ಬಳಿಗೇನೋ ಬಂದಿದ್ದೀರಿ. ಆದರೆ ವಿಧ್ಯುಕ್ತವಾಗಿ ನಾವು ನಿಮಗೆ ಅರ್ಪಿಸಿದ ಆದರವನ್ನು ಸ್ವೀಕರಿಸದೆಯೇ ನಿಂತಿದ್ದೀರಿ. ಇದಕ್ಕೆ ಕಾರಣವೇನು? ನಮ್ಮಲ್ಲಿಗೆ ನೀವು ಬರುವುದರ ಹಿಂದಿನ ಉದ್ದೇಶವಾದರೂ ಏನಾಗಿದೆ? ಜರಾಸಂಧನು ಹೀಗೆ ನುಡಿಯಲಾಗಿ, ಮಹಮನಸ್ಕನಾದ ಕೃಷ್ಣನು ಉತ್ತರವಿತ್ತನು. ವಾಕ್ಯವಿಶಾರದನಾದ ಆತನ ಮಾತು ಸ್ನಿಗ್ಧವೂ ಗಂಭೀರವೂ ಆಗಿದ್ದಿತು. ಕೃಷ್ಣನು ಹೀಗೆ ಹೇಳಿದನು: ರಾಜನೇ, ನಮ್ಮನ್ನು ನೀನು ಸ್ನಾತಕ ಬ್ರಾಹ್ಮಣರೆಂದೇ ಭಾವಿಸಿಕೋ, ಪರವಾಯಿಲ್ಲ. ಆದರೆ ಸ್ನಾತಕ ವ್ರತಿಗಳೆಂದರೆ ಬ್ರಾಹ್ಮಣರು ಮಾತ್ರವಲ್ಲದೆ, ಕ್ಷತ್ರಿಯರೂ ವೈಶ್ಯರೂ ಆಗಬಹುದಷ್ಟೆ. ಸ್ನಾತಕರೆನಿಸಿಕೊಂಡವರಿಗೆಲ್ಲಾ ಅನ್ವಯಿಸುವ ಸಾಮಾನ್ಯ ನಿಯಮಗಳೂ ಇವೆ. ಜೊತೆಗೆ ವಿಶೇಷ ನಿಯಮಗಳೂ ಇರುತ್ತವೆಯಷ್ಟೆ? ವಿಶೇಷ ನಿಯಮಗಳನ್ನು ಸತತವಾಗಿ ಅನುಸರಿಸತಕ್ಕ ಕ್ಷತ್ರಿಯನು ಯಾರುಂಟೋ ಆತನು ಲಕ್ಷ್ಮಿಯನ್ನು ಹೊಂದುವನೇ ಸರಿ. ಯಾರು ಪುಷ್ಪ ಧಾರಣೆಯನ್ನು ಮಾಡುವರೋ ಅವರಲ್ಲಿ ಲಕ್ಷ್ಮಿಯು ನೆಲಸುವಳು. ಆ ಕಾರಣಕ್ಕಾಗಿಯೇ ನಾವು ಪುಷ್ಪವಂತರಾಗಿದ್ದೇವೆ. ಕ್ಷತ್ರಿಯನೆಂದರೆ ಬಾಹುವೀರ್ಯವುಳ್ಳವನು. ಕ್ಷತ್ರಿಯನು ಅದೆಷ್ಟು ಬಾಹುವೀರ್ಯವುಳ್ಳವನೋ ಅಷ್ಟೊಂದು ವಾಕ್ಯವೀರ್ಯವುಳ್ಳವನಲ್ಲ. ಎಂದೇ ಓ ಬೃಹದ್ರಥಪುತ್ರನಾದ ಜರಾಸಂಧನೇ, ಕ್ಷತ್ರಿಯನ ಮಾತಿನಲ್ಲಿ ದಾರ್ಷ್ಟ್ಯವು ಹೆಚ್ಚಿರುವುದಿಲ್ಲ. ಸೃಷ್ಟಿಮಾಡುವಾಗ ಬ್ರಹ್ಮನು ಕ್ಷತ್ರಿಯರ ಬಲವೆಂಬುದನ್ನು ಅವರ ತೋಳುಗಳಲ್ಲಿಯೇ ತುಂಬಿಸಿಟ್ಟಿರುವನು. ಅದನ್ನು ನೀ ನೋಡಬಯಸುವೆಯಾದರೆ, ಓ ರಾಜನೇ, ಇಂದು ನಿಸ್ಸಂಶಯವಾಗಿಯೂ ನೋಡುವೆ. ಇದರಲ್ಲಿ ಸಂಶಯವೇ ಇಲ್ಲ. ಮಿತ್ರಗೃಹವನ್ನು ಪ್ರವೇಶಿಸುವಾಗ ದ್ವಾರದ ಮೂಲಕ ಪ್ರವೇಶಿಸತಕ್ಕದ್ದು; ಆದರೆ ಶತ್ರುಗೃಹವನ್ನು ಪ್ರವೇಶಿಸುವಾಗ ಅದ್ವಾರದ ಮೂಲಕವೇ ಪ್ರವೇಶಿಸತಕ್ಕದ್ದು. ಇದು ಧೀರರ ನಡೆ. ಹೀಗಿರುವುವು ಶತ್ರು–ಮಿತ್ರರುಗಳ ದ್ವಾರಗಳು ಎಂಬುದಾಗಿ ಧರ್ಮ ದೃಷ್ಟಿಯಿಂದ ಹೇಳಲಾಗಿದೆ. ನಮ್ಮ ಕೆಲಸದ ಮೇರೆಗೇ ನಾವು ನಿನ್ನ ಮನೆಗೆ ಬಂದಿರುವುದು. ಶತ್ರುವಿನಿಂದ ನಾವು ಆದರ ಸತ್ಕಾರಗಳನ್ನು ಸ್ವೀಕರಿಸುವವರಲ್ಲ. ಇದುವೇ ನಮ್ಮ ಶಾಶ್ವತ ವ್ರತವಾಗಿದೆ ಎಂದನು ಶ್ರೀಕೃಷ್ಣ

ಸುಧಾರಣೆಯಾಗದ ಕೆಪಿಎಸ್‌ಸಿ

ತನ್ನ ಹಿಂದಿನ ತಪ್ಪುಗಳನ್ನು ತಿದ್ದಿಕೊಳ್ಳದೆ, ಅಭ್ಯರ್ಥಿಗಳ ಕನಸುಗಳೊಂದಿಗೆ ಚೆಲ್ಲಾಟವಾಡುತ್ತಿರುವ ಕೆಪಿಎಸ್ಸಿಯು ಕೆಟ್ಟ ಕಾರಣಗಳಿಗಾಗಿಯೇ ಸದಾ ಸುದ್ದಿಯಲ್ಲಿರುತ್ತದೆ. ಕೆಪಿಎಸ್ಸಿಯಲ್ಲಿ ಪಾರದರ್ಶಕತೆ ತಂದು ಸುಧಾರಣೆಗೊಳಿಸುವ ನಿಟ್ಟಿನಲ್ಲಿ ಯುಪಿಎಸ್ಸಿಯ ಮಾಜಿ ಅಧ್ಯಕ್ಷ ಪಿ.ಸಿ. ಹೋಟಾ ಸಮಿತಿಯು 2013ರ ಆಗಸ್ಟ್ನಲ್ಲೇ ಮಾಡಿರುವ ಶಿಫಾರಸ್ಸುಗಳನ್ನು, ಅಂದಿನಿಂದ ಇಂದಿನವರೆಗೆ ಸರಕಾರಗಳಾವುವೂ ಗಂಭೀರವಾಗಿ ಪರಿಗಣಿಸಿ ಜಾರಿಗೆ ತರದೆ, ಕೇವಲ 'ರಾಜಕಾರಣ' ಮಾಡಿಕೊಂಡೇ ಬಂದಿವೆ. ಕೆಪಿಎಸ್ಸಿ ಸುಧಾರಣೆಯನ್ನೇನೂ ಕಾಣಲಿಲ್ಲ. ಅಕ್ರಮ, ಅವ್ಯವಹಾರ,

ಪತ್ರ ಮಿತ್ರ

ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಮುಂದುವರಿದವೇ ಹೊರತು ನಿಲ್ಲಲಿಲ್ಲ. ಉಚ್ಚ ನ್ಯಾಯಾಲಯವು 2011ನೇ ಸಾಲಿನ ಕೆಪಿಎಸ್ಸಿಯ ಪತ್ರಾಂಕಿತ ಅಧಿಕಾರಿಗಳ ಆಯ್ಕೆ ಪಟ್ಟಿ ರದ್ದುಪಡಿಸಿದರೂ, 2022ರಲ್ಲಿ ಕಾಯ್ದೆಯೊಂದನ್ನು ಜಾರಿಗೆ ತರುವ ಮೂಲಕ, ಸರ್ಕಾರವೇ 'ಅಕ್ರಮ' ಪಟ್ಟಿಗೆ ಅಧಿಕೃತವಾಗಿ 'ಸಕ್ರಮ'ದ ಮುದ್ರೆಯೊತ್ತಿಬಿಡುತ್ತದೆ. ಕಾಣದ ಕೈಗಳ ಒತ್ತಡಕ್ಕೆ ಮಣಿದು ಕೆಪಿಎಸ್ಸಿಯ ನಾಲ್ಕು ಕಾರ್ಯದರ್ಶಿಗಳು ವರ್ಗಾವಣೆಗೊಂಡರೂ, ಪರೀಕ್ಷೆಗಳಲ್ಲಿನ ಲೋಪಕ್ಕೆ ನಿಯಂತ್ರಕರೇ ಕಾರಣರೆಂದು ಶಾಸಕರೇ ವಿಧಾನ ಸಭೆಯಲ್ಲಿ ಆಪಾದಿಸಿದರೂ, ನಾಲ್ಕು ವರ್ಷಗಳಿಂದ ಆ ಹುದ್ದೆಯಲ್ಲೇ ಮುಂದುವರೆದಿರುವ ಅವರನ್ನು ಕದಲಿಸಲಾಗದಿರುವುದು, ಕೆಪಿಎಸ್ಸಿಯಲ್ಲಿ ಎಲ್ಲವೂ ಸರಿಯಿಲ್ಲ ಮತ್ತು ಕಾಣದ ಕೈಗಳು ಅದನ್ನು ನಿಯಂತ್ರಿಸುತ್ತಿವೆ ಎಂಬುದಕ್ಕೆ ತಾಜಾ ಉದಾಹರಣೆ.

–ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಬಾಯ್ ಮಾತು

ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com



'ವರ್ಲ್ಡ್ ಓರಲ್ ಹೆಲ್ತ್ ಡೇ' ಡಾಕ್ಟರ್ ಪಾಂಡುವಿಗೆ ಶುರುವಾಗಿದ್ದೇ ವಿಚಿತ್ರವಾಗಿ.

"ಬಾಯಿಯ ಆರೋಗ್ಯ ನೋಡಿಕೊಳ್ಳಿ" ಎಂದರು ಡಾಕ್ಟರ್.

"ಮೀನಾಬಾಯಿಯದೇ? ಅವಳು ನನ್ನ ಅಸಿಸ್ಟೆಂಟ್ ಡಾಕ್ಟ್ರೇ. ಅವಳ ಕಡೆ ಗಮನ ಕೊಟ್ಟಿದ್ದಕ್ಕೇ ಮನೆಯ ಆರೋಗ್ಯ ಹಾಳಾಗಿರೋದು" ಎಂದ ಸೀನು.

"ಬಾಯ್ಕಡೆ ಹೆಚ್ಚಿನ ಗಮನ ಕೊಡಿ" ಎಂದರು ನೆಕ್ಸ್ಟ್ ಪೇಷೆಂಟ್‌ಗೆ.

"ಶೂರ್ ಡಾಕ್ಟ್ರೇ. ಸ್ವಲ್ಪ ನಮ್ಮ ಪೇರೆಂಟ್ಸ್‌ಗೂ ಹೇಳ್ಬಿಡಿ. ನಾನು ಡೇಟಿಂಗ್ ಹೋಗ್ತೀನೀಂದ್ರೆ ಅವರು ಬಿಪಿ ಕೌಂಟಿಂಗ್ ಏರಿಸ್ಕೋತಾರೆ" ಎಂದಳು ಶಮ್ಮಿ.

"ನಿಮ್ಮ ಮೌತ್ ಕಡೆ ಸ್ವಲ್ಪ ಅಟೆನ್ಷನ್ ಕೊಡಿ," ಪಾಂಡು ಮಧ್ಯವಯಸ್ಕರಿಗೆ ನುಡಿದರು.

"ನೋ ಪ್ರಾಬ್ಲಂ ಡಾಕ್ಟರ್. ಇಂಶೂರೆನ್ಸ್ ಮಾಡ್ಸಿದೀನಿ, ವಿಲ್ ಬರ್ದಿದೀನಿ. ಮೌತ್ (ಸಾವು) ಯಾವಾಗ ಬಂದರೂ ವೆಲ್ಕಂ ಮಾಡಕ್ಕೆ ಸಿದ್ಧ" ಎಂದರವರು.

'ಬಾಯಿಯ ಸ್ವಾಸ್ಥ್ಯವನ್ನು ನೋಡಿಕೊಳ್ಳಿ' ಎಂದು ಹೇಳುವುದೇ ಇಷ್ಟು ಕಷ್ಟವಾಗಿರುವಾಗ ಅದರ ಸ್ವಾಸ್ಥ್ಯವೇನು ಸುಲಭದ ಮಾತೇ? ನನಗಂತೂ ನನ್ನ ಮೌತು ಪಾರ್ಟ್ ಬೈ ಪಾರ್ಟ್ ತೊಂದರೆ ಕೊಡುತ್ತಲೇ ಇರುತ್ತದೆ.

ಮೌತ್ ಟ್ರಬಲ್ ಶುರುವಾಗುವುದು ತೊಟ್ಟಿಲಲ್ಲಿರುವ ಕಾಲದಿಂದಲೇ ಎನಿಸುತ್ತದೆ. ಮಗುವಿಗೆ ಅದು ತೊಂದರೆ ಎನಿಸದಿದ್ದರೂ, ಕಿಟ್ ಕಿಟ್ ಕಿಟಾರ್ ಎಂದೋ, ಛಿಟ್ ಛಿಟ್ ಛಿಟಾರ್ ಎಂದೋ ಮಲಗಿದ್ದಲ್ಲಿಂದಲೇ ಕಂಠಸಿರಿಯ ನಾದವನ್ನು ಮನೆಯ ಮೂಲೆಮೂಲೆಗೂ ತಲುಪಿಸಿದ ಕೂಡಲೆ ಹಿರಿಕಿರಿಕಿರಿಯರು "ಸುಮ್ನಿರೋ ಬಾಯ್ಮಾಡ್ಬೇಡ" ಎಂದು ಪ್ರೀತಿಯಿಂದ ಗದರುತ್ತಾರೆ. ಕಂಠದ ತಪ್ಪನ್ನು ತನ್ನದಾಗಿಸಿಕೊಂಡ ಬಾಯಿಯ ಮೊದಲ ಕಷ್ಟ ಶುರುವಾಗುವುದು ಕಕ್ಕುವಿಕೆಯು ಮೊದಲಾದಾಗ. ಜೇಡವು ತನ್ನ ಬಾಯಿಯಿಂದ ಹೊರಡಿಸಿದ ಜೊಲ್ಲು ಯಾವುದಾದರೂ ವಸ್ತುವನ್ನು ತಲುಪುವವರೆಗೆ ಬೆಳೆಯುವಂತೆಯೇ, ಮಗುವಿನ ಜೊಲ್ಲೂ ಮಗುವಿನದೇ ಮಂಡಿಯನ್ನೋ, ಅಂಗಿಯನ್ನೋ ಅಥವಾ ಎತ್ತಿಕೊಂಡವರ ಭುಜವನ್ನೋ ಮುಟ್ಟುವ ವರೆಗೆ ಬೆಳೆದು 'ಜೊಲ್ಲುಸೇತುವೆ'ಯನ್ನು ನಿರ್ಮಿಸುತ್ತದೆ. ಆಗಾಗ್ಗೆ ಒಸರುವ ಜೊಲ್ಲನ್ನು ಒರೆಸುವುದರಿಂದ ಕಪೋಲಕ್ಕೆ ಗುಲಾಬಿಯ ರಂಗು ಮೂಡುತ್ತದೆ.

ಮೌತ್ ಟ್ರಬಲ್‌ನಲ್ಲಿ ಮೂರು ವಿಧಗಳಿವೆ – ತುಟಿಗಳದು, ನಾಲಿಗೆಯದು ಮತ್ತು ಹಲ್ಲಿನದು. ನಾಲಿಗೆಯದರಲ್ಲಿ ಮತ್ತೆರಡು ವಿಧಗಳು – ಫಿಸಿಕಲ್ ಮತ್ತು ವರ್ಬಲ್.

ಮೊದಲಿಗೆ ತುಟಿಗಳ ತೊಂದರೆಗಳನ್ನು ಗಮನಿಸೋಣ. ಇವುಗಳು ಒಬ್ಬೊಬ್ಬರಿಗೆ ಒಂದೊಂದು ವಿಧದಲ್ಲಿ ಇರುತ್ತವೆಂದು ಕವಿಗಳು ನುಡಿಯುತ್ತಾರೆ. "ಅಳುವ ಕಂದನ ತುಟಿಯು ಹವಳದ ಕುಡಿಹಂಗ" ಎಂದು ಜನಪದರು ಹಾಡಿದ್ದಾರೆ. 'ಹವಳ ಬೆಲೆ ಬಾಳುತ್ತದೆ. ಅದಕ್ಕೆ ವಿಮೆ ಮಾಡಿಸಿ' ಎನ್ನುತ್ತಾ ವಿಮಾ ಏಜೆಂಟನೊಬ್ಬನು ಮೆಟರ್ನಿಟಿ ಹೋಂನ ಮುಂದೆಯೇ ಝಂಡಾ ಹೂಡಿದ್ದಾನಂತೆ. ಅವನನ್ನು ತಟಾಯಿಸಿಕೊಂಡು ಬರುವುದೇ ಕಷ್ಟವಂತೆ.

"ಅಧರಂ ಮಧುರಂ" ಎನ್ನುತ್ತದೆ ಸುಭಾಷಿತ. "ರಂ ಎಂದ ಮೇಲೆ ಅದು ಮಧುವೇ" ಎಂದು ಕುಡುಕರು 'ಮಧುರಂ' ಅದನ್ನು ವಿಶ್ಲೇಷಿಸುತ್ತಾ, 'ಮೊದಲ ಪದವು 'ಅಧಾ ರಂ' ಎಂದಾಗಬೇಕು. ಹಾಫ್ ಬಾಟಲ್ ರಂ ಸಾಕಷ್ಟು ಕಿಕ್ ಕೊಡತ್ತೆ' ಎಂದೂ ನುಡಿದಿದ್ದಾರೆ. ಇವುಗಳ ಮೇಲೆ ಸತ್ಯವು ಮನೆ ಮಾಡಿರುತ್ತದೆ ಎನ್ನುವುದಕ್ಕೆ 'ಹೋಟೋಂಪೇ ಸಚ್ಚಾಯೀ ರೆಹತೀ ಹೈ' ಹಾಡೇ ಸಾಕ್ಷಿ. ಸತ್ಯಕ್ಕಿಂತಲೂ ಟ್ರಬಲ್ ಉಂಟೇ ಜಗದೊಳ್! ತುಟಿಗಳಲ್ಲಿರುವ ಸತ್ಯವನ್ನು ನಾಲಿಗೆಯು ಹೊತ್ತು ನುಡಿದರೆ ಎದೆನೋವು ಖಚಿತ ಎನ್ನಲು 'ಇದ್ದಿದ್ದಿದ್ದಂಗ್ ಹೇಳಿದ್ರೆ ಎದ್ಬಂದೆದೆಗೊದ್ರಂತೆ' ಎಂಬ ಗಾದೆಯೇ ಇದೆ.

"ನಮ್ಮ ತುಟಿಗಳು ಹೆಚ್ಚೆಂದರೆ ಸೀಳಿಯಾವು, ಧೂಮಪಾನದಿಂದ ಕಪ್ಪಾದಾವು. ಇತರ ತುಟಿಗಳಿಂದಲೇ ನಮಗೆ ತೊಂದರೆ" ಎಂದ ರೋಮಿಯೋ ರಂಗಣ್ಣ.

"ಇತರ ತುಟಿಗಳೆಂದರೆ?"

"ಸಿನಿಮಾ ನಟಿಯರ ಕ್ಲೋಸಪ್‌ನಲ್ಲಿ ಕಾಣುವ ಅರೆಬಿರಿದ ತುಟಿಗಳು; ಕಾಲೇಜ್ ಕನ್ಯೆಯರ ಬಿಂಬಾಧರಗಳು, ಆ ತುಟಿಗಳು ಹೊರಡಿಸುವ ಪಿಸುಮಾತುಗಳು; ಇವೆಲ್ಲವೂ ಹುಡುಗರು ಇನ್‌ಸೋಮ್ನಿಯಾದಿಂದ ಬಳಲಲು ಕಾರಣವಾಗಿವೆ" ರಂಗಣ್ಣ ಉವಾಚ. ತುಟಿಸೀಳು, ಸೀಳುತುಟಿ, ತುಟಿಪುಡಿ (ಒಣಗಿದ ಚರ್ಮವು ಪುಡಿಯಾಗಿ ಉದುರುವುದು) ಇವಕ್ಕೆಲ್ಲ ವೈದ್ಯರಲ್ಲಿ ಪರಿಹಾರವಿದೆ. ಆದರೆ ಪ್ರೇಮವೆಂಬ 'ಅದುರುಹೃದಯರೋಗ'ವನ್ನು ಹರಡುವ 'ತುಟಿವೈರಸ್' ಅನ್ನು ನಿಯಂತ್ರಿಸಲು ಸುಂದರಾಧರೆ ಪ್ರೇಯಸಿಯಾಗುವುದೊಂದೇ ಔಷಧಿಯಂತೆ.

ತುಟಿಗಳನ್ನು ದಾಟಿಕೊಂಡು ನಾಲಿಗೆಯ ಸಾಮ್ರಾಜ್ಯಕ್ಕೆ ಬರೋಣ. 'ನಾಲಿಗೆಗೆ ಪಲ್ಯ ಮತ್ತು ಚಹಾ ಎರಡೂ ಬಹಳ ಪ್ರಿಯ. ಆದ್ದರಿಂದಲೇ 'ಜಿಹ್ವಾ ಚಾಪಲ್ಯ' ಎಂಬ ಪದಪುಂಜವು ಮೂಡಿರುವುದು' ಎಂದು 'ಪದಾರ್ಥ ಚಿಂತಾಗ್ರಣಿ'ಯೊಬ್ಬರು 'ನನ್ನ ಪ್ರಕಾರ' ಎಂಬ ವೆಬ್‌ಸೈಟಲ್ಲಿ ಬರೆದಿದ್ದಾರೆ. 'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ' ಎಂದು ದಾಸರು ಹೇಳಿದ್ದಾರೆ. ಆದರೆ "ನೀಚ ಎನ್ನುವುದು ಉಚ್ಚ ಎನ್ನುವುದಕ್ಕೆ ವಿರುದ್ಧ ಪದ. ನೀಚ ಎಂದರೆ ಕೆಳಗೆ ಎಂದರ್ಥ. ಬಾಯಿಯಲ್ಲಿ ಮೇಲೆ ಅಂಗುಳವೂ, ಕೆಳಗೆ ನಾಲಿಗೆಯೂ ಇರಬೇಕಾದ್ದು ಸರಿಯಾದ ಕ್ರಮ. ದಾಸರು ಹೇಳಿದರೆಂದು ಬಾಯಿಯ ಮೇಲ್ಭಾಗದಿಂದ ನಾಲಿಗೆಯು ಅಲುಗಾಡುತ್ತಿದ್ದರೆ ಚೆನ್ನವೂ ಅಲ್ಲ, ಕೆಲಸಕ್ಕೂ ಬಾರದು. 'ನೀಚೇ' ಇರುವವರದು 'ಊಂಚಾ' ಬುದ್ಧಿ ಆಗುವುದು ಸಾಧ್ಯವೇ?" ಎಂದು ನಾಲಿಗೆಪ್ರಿಯರ ಒಕ್ಕೂಟವು ಪ್ರಶ್ನಿಸಿದೆಯಂತೆ.

ನಾಲಿಗೆಯು ನುಡಿಯುವಾಗ ಪಾಂಡವರ ಬಗ್ಗೆಯೂ, ಕೃಷ್ಣನ ಬಗ್ಗೆಯೂ ಒಳ್ಳೆಯ ನುಡಿಗಳನ್ನೇ ಆಡಿದರೂ ಅದಕ್ಕೆ ನಿಜಕ್ಕೂ ಕೌರವರ ಮೇಲೆಯೇ ಹೆಚ್ಚು ಪ್ರೀತಿ. ಆದ್ದರಿಂದಲೇ ಆಗಾಗ್ಗೆ ನಾಲಿಗೆಯ ಮೇಲೆ 'ಕುರು'ಗಳು ಬಂದು ಆಶ್ರಯ ಪಡೆಯುವುದು. (ನಾನಂತೂ ದೊಡ್ಡ ಕುರುವನ್ನು 'ದುರ್ಯೋಧನ' ಎಂದೂ, ಕಾಣದ ಜಾಗದಲ್ಲಾದ ಕುರುವನ್ನು 'ಧೃತರಾಷ್ಟ್ರ' ಎಂದೂ ಕರೆಯುತ್ತೇನೆ.) ಬಂದಂತಹ ಕುರುಗಳಿಗೆ ಜೇನುತುಪ್ಪ ಸವರಿ, ಅಲೋವೆರಾದಿಂದ ಅಭಿಷೇಕ ಮಾಡಿ, ಬೆಚ್ಚನೆಯ ನೀರಿಗೆ ಉಪ್ಪು ಬೆರೆಸಿದ ಪಾನಕವನ್ನು ನೀಡಿ ಸತ್ಕರಿಸಿ, ವಾರ–ಎರಡುವಾರ ಆತಿಥ್ಯ ನೀಡಿದ ಮೇಲೆಯೇ ನಾಲಿಗೆಯು ಕುರುವಿಗೆ ಬೀಳ್ಕೊಡುವುದು ಸಾಮಾನ್ಯ ಸಂಪ್ರದಾಯ. 'ನಾಲಿಗೆಯದು ಕುಡುಕರ ನಡಿಗೆ. ಆದ್ದರಿಂದಲೇ ಆಗಾಗ್ಗೆ ತಪ್ಪುತ್ತಿರುತ್ತದೆ' ಎಂದು ಕೆಲವರು ನುಡಿದರೆ, 'ನಾಲಿಗೆ ಇರುವುದೇ ಒದ್ದೆ ಜಾಗದಲ್ಲಿ. ಒದ್ದೆ ಇರುವಲ್ಲಿ ಜಾರಿಕೆ ಸಹಜ' ಎಂದು ಸಮರ್ಥಿಸಿಕೊಳ್ಳುವವರೂ ಇದ್ದಾರೆ.

ಮಾಸ್ಟರ್ ಹಿರಣ್ಣಯ್ಯನವರಿಗೆ ನಾಲಿಗೆಯ ಮಹತ್ವದ ಮೇಲೆ ಅಪರಿಮಿತ ಗೌರವ. ತತ್ಕಾರಣವೇ ನಾಲಿಗೆಯ ಬಗ್ಗೆ ಆಗಾಗ್ಗೆ ಉಲ್ಲೇಖಿಸುತ್ತಿದ್ದರು. 'ಮೂರಿಂಚು ನಾಲಿಗೆ ಆರಡಿ ಮನುಷ್ಯನನ್ನು ಅಲ್ಲಾಡಿಸಿ ಕೆಡವಿಬಿಡುತ್ತದೆ', 'ನಾಯಿಯನ್ನು ಯಾರು ಬೇಕಾದರೂ ಸಾಕಬಹುದು. ನಾಲಿಗೆಯನ್ನು ಸಾಕಬೇಕು. ನಾಯಿಯನ್ನು ಸಾಕಿದರೆ ಮನೆಯನ್ನು ಕಾಯುತ್ತದೆ. ನಾಲಿಗೆಯನ್ನು ಸಾಕಿದರೆ ಮನೆತನವನ್ನೇ ಕಾಯುತ್ತದೆ' ಎನ್ನುತ್ತಿದ್ದರವರು. ಅವರು ಮಂಡಿಸುತ್ತಿದ್ದ 'ನಾಲಿಗೆ ಮತ್ತು ಹಲ್ಲುಗಳ ನಡುವಿನ ಸಂಭಾಷಣೆ'ಯೊಂದು ಹೀಗಿದೆ:

"ನೀನು ಒಂಟಿ. ನಾವು ಮೂವತ್ತೆರಡು. ಇದು ಪ್ರಜಾಪ್ರಭುತ್ವದ ಕಾಲ. ನಾವು ಹೇಳಿದಂತೆ ನೀನು ಕೇಳಿಕೊಂಡಿರಬೇಕು" ಎಂದವು ಹಲ್ಲುಗಳು.

"ಸಂಖ್ಯೆ ಕಟ್ಕೊಂಡೇನ್ಮಾಡ್ತೀರೀ! ಪ್ರಭಾವ ಮುಖ್ಯ. ನಾನೇನಾದರೂ ಆಡಬಾರದ ಜಾಗದಲ್ಲಿ ಆಡಬಾರದ ಒಂದೇ ಒಂದು ಮಾತನ್ನು ಆಡಿಬಿಟ್ಟರೆ ನಿಮ್ಮ ಸಂಖ್ಯಾಬಲವಾದ ಮೂವತ್ತೆರಡನ್ನೂ ಜನರು ಉದುರಿಸಿ ಹೊರಗಿಟ್ಟುಬಿಡುತ್ತಾರೆ" ಎಂದಿತು ನಾಲಿಗೆ!

ನಾಲಿಗೆ, ತುಟಿಗಳದು ಅದರ ಮಾಲಿಕರಿಗಷ್ಟೇ ತೊಂದರೆ ನೀಡುವ ಜಾಯಮಾನವಾದರೆ ಹಲ್ಲುಗಳು ಪರರಿಗೂ ಸಂಕಟ ನೀಡಬಲ್ಲವು. ಬಂದ ಸಂಬಳದ ಕೊಂಚ ಅಂಶವನ್ನು 'ಸೇವಿಂಗ್ಸ್ ಬ್ಯಾಂಕ್'ನಲ್ಲಿ ಡಿಪಾಸಿಟ್ ಮಾಡುವ ಮಂದಿಯಂತೆಯೇ ಹಲ್ಲುಗಳೂ ಬಾಯಿಗೆ ಸಂದ ಆಹಾರದಲ್ಲಿ ಕೆಲವನ್ನು ತಮ್ಮ ಸಂದಿಗಳಲ್ಲಿ ಡಿಪಾಸಿಟ್ ಮಾಡಿಕೊಳ್ಳುತ್ತವೆ. ಅವನ್ನು ದಿನಕ್ಕೆರಡು ಬಾರಿ ಬ್ರಷ್ಷು, ಪೇಸ್ಟು, ಮೌತ್‌ವಾಷ್‌ಗಳ ಮೂಲಕ ಖಾಲಿ ಮಾಡದಿದ್ದರೆ ಅದೇ ಡಿಪಾಸಿಟ್ಟುಗಳೇ 'ಫಿಕ್ಸೆಡ್ ಡಿಪಾಸಿಟ್'ಗಳಾಗಿಬಿಡುತ್ತವೆ. ಅಂತಹ ಡಿಪಾಸಿಟ್‌ಗಳಿಗೆ 'ಬಾಯಿ ಬ್ಯಾಂಕ್'ನ ಸಹಕಾರದಿಂದ 'ಬ್ಯಾಡ್ ಬ್ರೆತ್' ಎಂಬ ಬಡ್ಡಿಯನ್ನೂ ಕಂತಿನಲ್ಲಿ ಹೊರಬಿಡುತ್ತವೆ. ಈ ಬಡ್ಡಿಗಳೇ ಬಾಯಿಯ ಬಳಿ ಬಂದ ಇತರ ಮೂತಿಗಳು 'ಹೇಳೆನೋ ಹರಿ ತಾಳೆನೋ; ಹುಳ್ಕು ದಂತದೊಳೆದ್ದು ಹೊಟ್ಟೆ ತೊಳ್ಸೋ ವಿಷ್ವಾನ; ಹೇಳೆನೋ ಹರಿ ತೇಳೆನೋ' ಎಂದು ಒಳಗೊಳಗೇ ನರಳುವಂತಾಗಿಸಿ, 'ಪರಕಷ್ಟಪ್ರದಾಯಕ'ವಾಗುತ್ತವೆ.

ದಂತರೋಗದ ಬಗ್ಗೆ ಇನ್ನೊಂದು ಲೇಖನವನ್ನೇ ಬರೆಯುವೆ. ಸದ್ಯದಲ್ಲಿ ಓರಲ್ ಹೆಲ್ತಿನ ಓವರಾಲ್ ಲುಕ್ಕಿಗಷ್ಟೇ ಈ ಲೇಖನವನ್ನು ಸೀಮಿತಗೊಳಿಸುವೆ. ನನಗೆ ಅತ್ಯಂತ ಕಷ್ಟ ನೀಡುವ 'ಓರಲ್ ಟ್ರಬಲ್' ಎಂದರೆ ಕೊರೆವಣಿಗೆ. ಕೇಳುಗರ ಕಿವಿಗಳನ್ನು ಅಪ್ಪಳಿಸಿ, ನಾಸ್ತಿಕರೂ 'ಪಾರುಗಾಣಿಸೈ ಪ್ರಭುವೆ' ಎನ್ನುವಂತೆ ಕೊರೆಯುವ ಡ್ರಿಲ್ಲಿಂಗ್ ಮಾಸ್ಟರ್‌ಗಳಿಂದ ಪಾರು ಮಾಡಲು ಒಂದು 'ಆಡಿಯೆನ್ಸ್ ವ್ಯಾಕ್ಸಿನ್' ಅತ್ಯಗತ್ಯ. 'ಓರಲ್ ಹೆಲ್ತ್ ದಿನ'ದಂದು ಮೆಡಿಕಲ್ ಮಂದಿ ಈ ಅತಿಘೋರ ಕರ್ಣಕಠೋರ 'ಭಾಷಣರೋಗ'ಕ್ಕೂ ಒಂದು ಮದ್ದು ಕಂಡುಹಿಡಿಯಲೆಂದು ಆಶಿಸೋಣ.

ಅಲ್ಲಿಯವರೆಗೆ, ವಿಶ್ ಯೂ 'ಗುಡ್ ಬಾಯ್!'

ಕೃತಕ ಬುದ್ಧಿಮತ್ತೆಯು ಪ್ರಯೋಜನಕಾರಿಯಾದಂತೆಯೆ ಅಪಾಯಕಾರಿಯೂ ಆಗಬಲ್ಲುದು. ಆದರೆ ಎಐ ಬೆಳವಣಿಗೆ ತಡೆಯುವ ಶಕ್ತಿ ನಮ್ಮಲ್ಲಿಲ್ಲ. ಬದಲಾಗಿ ಅದರ ಅಪಾಯ ತಡೆಯುವ ನಿಟ್ಟಿನಲ್ಲಿ ಎಚ್ಚರ ವಹಿಸುವುದು ಮುಖ್ಯ.

ಎಐ ಕ್ರಾಂತಿ ಮತ್ತು ಸೈಬರ್ ಸುರಕ್ಷತೆಯ ಸಮರ

▸ ಡಾ. ಅನಂತ ಪ್ರಭು

ಅಲನ್ ಟೂರಿಂಗ್ 1950ರಲ್ಲಿ ತಮ್ಮ 'ಕಂಪ್ಯೂಟಿಂಗ್ ಮೆಶಿನರಿ ಇಂಟೆಲಿಜೆನ್ಸ್' ಪ್ರಬಂಧದಲ್ಲಿ ಒಂದು ಪ್ರಶ್ನೆ ಕೇಳಿದ್ದರು – ಯಂತ್ರಗಳು ಚಿಂತಿಸಬಲ್ಲವೆ? ಇದನ್ನು ಪರೀಕ್ಷಿಸಲು ಅವರು 'ಟೂರಿಂಗ್ ಟೆಸ್ಟ್' ಎಂಬ ಪ್ರಯೋಗ ನಡೆಸಿದ್ದರು. ಯಂತ್ರವು ಕೂಡಾ ಮನುಷ್ಯನಂತೆಯೇ ವ್ಯವಹರಿಸಬಲ್ಲುದೆ ಹಾಗೂ ಯಂತ್ರ ಮತ್ತು ಮನುಷ್ಯನ ನಡುವೆ ವ್ಯತ್ಯಾಸ ಗೊತ್ತಾಗದ ರೀತಿಯಲ್ಲಿ ವರ್ತಿಸಬಲ್ಲುದೆ ಎಂಬುದನ್ನು ಕಂಡುಕೊಳ್ಳುವುದು ಅವರ ಉದ್ದೇಶವಾಗಿತ್ತು. ಕೆಲ ವರ್ಷಗಳ ಬಳಿಕ ಅಂದರೆ 1956ರಲ್ಲಿ ಸಂಶೋಧನಾ ಸಮ್ಮೇಳನವೊಂದರಲ್ಲಿ ಕೃತಕ ಬುದ್ಧಿಮತ್ತೆ (ಎಐ) ಪದ ಬಳಕೆಗೆ ಬಂದಿತು. ಅಂದು ಸೈದ್ಧಾಂತಿಕ ಚರ್ಚೆಯಾಗಿ ಆರಂಭವಾದ ಕೃತಕ ಬುದ್ಧಿಮತ್ತೆ ವಿಷಯವು ಈಗ ನಮ್ಮ ಕಾಲದ ಅತ್ಯಂತ ಶಕ್ತಿಶಾಲಿ ತಂತ್ರಜ್ಞಾನ ಕ್ರಾಂತಿಯಾಗಿ ಬೆಳೆದು ನಿಂತಿದೆ. ಕೃತಕ ಬುದ್ಧಿಮತ್ತೆಯು ಇತ್ತೀಚಿನ ವಿದ್ಯಮಾನವೆಂಬಂತೆ ಕಂಡುಬರಬಹುದಾದರೂ ಅದರ ಮೂಲವು ದಶಕಗಳ ಹಿಂದೆಯೇ ಇದೆ.

ಕೃತಕ ಬುದ್ಧಿಮತ್ತೆ ವರ್ತಿಸುವ ರೀತಿ

ಕೃತಕ ಬುದ್ಧಿಮತ್ತೆಯನ್ನು ಉದಾಹರಣೆಯೊಂದರ ಮೂಲಕ ಅರ್ಥ ಮಾಡಿಕೊಳ್ಳೋಣ. ವಿಶ್ವದಲ್ಲಿ 336 ಬಗೆಯ ನಾಯಿ ತಳಿಗಳಿವೆ. ನಾವೆಲ್ಲರೂ ಬಹುತೇಕವಾಗಿ 30ರಿಂದ 40 ತಳಿಗಳನ್ನಷ್ಟೇ ನೋಡಿರಬಹುದು. ಈಗ ನೀವೊಂದು ರಸ್ತೆಯಲ್ಲಿ ಸಾಗುತ್ತಿರುವಾಗ ಹಠಾತ್ತನೆ ನಿಮ್ಮ ಮುಂದೆ ಈ ವರೆಗೆ ನೋಡಿರದ ಪ್ರಾಣಿಯೊಂದು ಓಡುತ್ತಾ ಬಂತೆಂದುಕೊಳ್ಳೋಣ. ಆ ತಳಿಯನ್ನು ನೀವು ಈ ವರೆಗೆಗೆ ನೋಡಿರದಿದ್ದರೂ ಒಂದೇ ಕ್ಷಣದಲ್ಲಿ ಅದು ನಾಯಿ ಎಂಬುದಾಗಿ ನೀವು ಅರಿತುಕೊಳ್ಳುತ್ತೀರಿ. ನಿಮ್ಮ ಮನಸ್ಸು ಅದನ್ನು ನಾಯಿಯೆಂದು ಅದರ ಕೆಲವು ಗುಣಲಕ್ಷಣಗಳಿಂದಲೇ ತೀರ್ಮಾನಿಸಿಬಿಡುತ್ತದೆ. ಅದರ ಬಾಲ, ಅದರ ಚಲನ, ಅದು ವರ್ತಿಸುವ ರೀತಿ ಇವೆಲ್ಲವೂ ನಿಮ್ಮ ಅನುಭವದ ಆಧಾರದಲ್ಲಿ ಅದನ್ನು ನಾಯಿ ಎಂದು ತೀರ್ಮಾನಿಸುತ್ತದೆ. ಇಷ್ಟು ಕ್ಷಿಪ್ರವಾಗಿ ಈ ತೀರ್ಮಾನಕ್ಕೆ ಬರುವುದನ್ನು ಬುದ್ಧಿಮತ್ತೆ ಎನ್ನುತ್ತೇವೆ.


ನೀವೀಗ ಕಂಪ್ಯೂಟರ್ ಪ್ರೋಗ್ರಾಂ ಒಂದನ್ನು ಬರೆಯುತ್ತಿದ್ದೀರಿ ಎಂದುಕೊಳ್ಳೋಣ. ನೀವು ಅದಕ್ಕೆ 30 ನಾಯಿ ತಳಿಗಳ ಚಿತ್ರಗಳನ್ನು ಫೀಡ್ ಮಾಡಿ 31ನೇ ತಳಿಯ ಚಿತ್ರವೊಂದನ್ನು ಅದಕ್ಕೆ ತೋರಿಸುತ್ತೀರಿ. ಹಳೆಯ ಪ್ರೋಗ್ರಾಂ ವ್ಯವಸ್ಥೆಯಲ್ಲಿ ಕಂಪ್ಯೂಟರ್ ಅದನ್ನು ಪತ್ತೆ ಹಚ್ಚಲು ವಿಫಲವಾಗುತ್ತದೆ. ಆದರ ಕುರಿತಂತೆ ನಿಮ್ಮ ಪ್ರೋಗ್ರಾಂನಲ್ಲಿ ವಿವರಗಳನ್ನು ನೀಡದ ಹೊರತು ಅದಕ್ಕೆ ಅದನ್ನು ಗುರುತು ಹಿಡಿಯಲು ಸಾಧ್ಯವಾಗದು. ಸಾಂಪ್ರದಾಯಿಕ ಕಂಪ್ಯೂಟರ್‌ಗಳು ನಾವು ಅದಕ್ಕೆ ಏನನ್ನು ಫೀಡ್ ಮಾಡಿರುತ್ತೇವೆಯೋ ಅಷ್ಟನ್ನೇ ಯೋಚಿಸುತ್ತದೆ. ಅದು ಕೇವಲ ಸೂಚನೆಯಷ್ಟೇ ಪಾಲಿಸುತ್ತದೆ. ತನ್ನ ಪ್ರೋಗ್ರಾಂನಿಂದ ಹೊರತಾಗಿ ತನ್ನದೇ ಆದ ಸ್ವಂತ ನಿರ್ಧಾರ ತಾಳಲು ಅದು ಹೋಗುವುದಿಲ್ಲ. ಕೃತಕ ಬುದ್ಧಿಮತ್ತೆಯು ಈ ಅಂತರವನ್ನು ತುಂಬಲು ಯತ್ನಿಸುತ್ತದೆ. ಯಂತ್ರಕ್ಕೆ ಪ್ರತಿಯೊಂದು ಹೆಜ್ಜೆಯ ಸೂಚನೆಯನ್ನು ನೀಡುವ ಬದಲಾಗಿ ಅದುವೇ ಪೂರ್ವ ನಿದರ್ಶನಗಳಿಂದ ಕಲಿಯುವಂತೆ ಮಾಡಲಾಗುತ್ತದೆ. ನಾವು ಅದಕ್ಕೆ ಡೇಟಾವನ್ನು ನೀಡುತ್ತೇವೆ. ಅದುವೇ ಅದರಲ್ಲಿ ನಿರ್ದಿಷ್ಟ ಪ್ಯಾಟರ್ನ್ ಕಂಡುಕೊಳ್ಳುತ್ತದೆ.

ತಂತ್ರಜ್ಞಾನವು ನಾವು ಕಲ್ಪಿಸಿಕೊಳ್ಳುವುದಕ್ಕಿಂತಲೂ ವೇಗವಾಗಿ ಬೆಳೆಯುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಕೃತಕ ಬುದ್ಧಿಮತ್ತೆ ಕುರಿತು ಹೆದರುವ ಸಮಯ ಇದಲ್ಲ. ಅದನ್ನು ಅರ್ಥ ಮಾಡಿಕೊಂಡು ಹೊಣೆಗಾರಿಕೆಯಿಂದ ಬಳಸಿಕೊಳ್ಳುವುದೇ ನಮ್ಮ ಮುಂದಿರುವ ಸವಾಲು. ಇನ್ನು ಮುಂದಕ್ಕೆ ಎಐ ಮತ್ತು ಸೈಬರ್ ಸೆಕ್ಯುರಿಟಿಯು ನಮ್ಮ ಖಾಸಗಿ ಭದ್ರತೆ, ನಮ್ಮ ಆರ್ಥಿಕ ಸುರಕ್ಷತೆ ಮತ್ತು ರಾಷ್ಟ್ರೀಯ ಸ್ಥಿರತೆಯನ್ನು ನಿರ್ಧರಿಸಬಲ್ಲುದು. ಸ್ಮಾರ್ಟ್ ಯಂತ್ರಗಳು ಮುಂದಕ್ಕೆ ಬರಲಿರುವುದು ಖಂಡಿತವಾಗಿದೆ. ಅವು ತಮ್ಮ ಆಂತರಿಕ ವ್ಯವಸ್ಥೆಯನ್ನು ಕಾಲಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬಲ್ಲವು. ತಾವು ಹಿಂದೆ ನೋಡಿದ ವಿಷಯಕ್ಕೆ ಸಂಬಂಧಿಸಿದ ಹೊಸ ವಿಷಯಗಳನ್ನು ಕಂಡುಕೊಳ್ಳಬಲ್ಲವು. ಸರಳವಾಗಿ ಹೇಳಬೇಕೆಂದರೆ ಕೃತಕ ಬುದ್ಧಿಮತ್ತೆ ಎಂದರೆ ಯಂತ್ರಗಳು ಸುಮ್ಮನೆ ಆದೇಶಗಳನ್ನು ಪಾಲಿಸುವ ಬದಲಾಗಿ ತಮ್ಮ ಅನುಭವದಿಂದ ಪಾಠ ಕಲಿಯುವಂತೆ ಮಾಡುವುದು.

ಆಧುನಿಕ ಕೃತಕ ಬುದ್ಧಿಮತ್ತೆಯ ಹಿಂದಿರುವ ಪ್ರಮುಖ ತಂತ್ರಜ್ಞಾನವೆಂದರೆ ನರವ್ಯೂಹ ಜಾಲಗಳು. ಇದು ನಮ್ಮ ಮೆದುಳಿನಲ್ಲಿರುವ ನ್ಯೂರಾನ್‌ಗಳಿಂದ ಪ್ರೇರಿತವಾಗಿದೆ. ಡೇಟಾ ಸಂಗ್ರಹವನ್ನು ಬಳಸಿಕೊಂಡು ಅವು ಮುಖಗಳನ್ನು ಗುರುತಿಸಬಲ್ಲವು, ಭಾಷೆಯನ್ನು ತರ್ಜುಮೆ ಮಾಡಬಲ್ಲವು, ವಂಚನೆಯನ್ನು ಗುರುತಿಸಬಲ್ಲವು, ವೈದ್ಯರಿಗೆ ರೋಗ ಪತ್ತೆ ಹಚ್ಚಲು ನೆರವೀಯಬಲ್ಲವು.

ಜನರೇಟಿವ್ ಎಐ

ಈಗ ನಾವು ಬಳಸುತ್ತಿರುವ ಕೃತಕ ಬುದ್ಧಿಮತ್ತೆ ಸರಳವಾದುದು. ಅದು ನಿರ್ದಿಷ್ಟ ಕೆಲಸವನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಡುತ್ತದೆ. ಉದಾಹರಣೆಗೆ ಸ್ಪಾಮ್ ಫಿಲ್ಟರ್ ಅನವಶ್ಯ ಇಮೇಲ್‌ಗಳನ್ನೆಲ್ಲಾ ಗುರುತಿಸುತ್ತದೆ. ನೇವಿಗೇಷನ್ ಆ್ಯಪ್ ಟ್ರಾಫಿಕ್‌ನ್ನು ಊಹಿಸುತ್ತದೆ. ಬ್ಯಾಂಕಿಂಗ್ ವ್ಯವಸ್ಥೆಯು ಶಂಕಾಸ್ಪದ ಹಣದ ವಿನಿಮಯವನ್ನು ಗುರುತಿಸುತ್ತದೆ.ನಂತರ ಬಂದುದು ಜನರೇಟಿವ್ ಕೃತಕ ಬುದ್ಧಿಮತ್ತೆ.



ಭಾರತ ಸರಕಾರವು ಈಗ ಎಐಯನ್ನು ಹೊಣೆಯರಿತು, ಸುರಕ್ಷಿತವಾಗಿ ಮತ್ತು ನೈತಿಕವಾಗಿ ಬಳಸುವಂತೆ ಮಾಡುವ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣಿಗರಿಗೆ ಹಲವಾರು ನಿಯಮ ನಿಬಂಧನೆಗಳನ್ನು ಹೇರಿರುವುದು ಗಮನಾರ್ಹವಾಗಿದೆ.

ಚಾಟ್ ಜಿಪಿಟಿಯಂತಹ ಎಐ ವ್ಯವಸ್ಥೆ ಪ್ರಬಂಧ ಬರೆಯಬಲ್ಲದು. ಪ್ರಶ್ನೆಗಳಿಗೆ ಉತ್ತರಿಸಬಲ್ಲದು. ಸಂಭಾಷಣೆಯನ್ನು ಮುಂದುವರಿಸಬಲ್ಲದು. ಇಮೇಜ್ ಜನರೇಟ್‌ಗಳು ಸರಳ ವಿವರಣೆ ಯಿಂದಲೇ ದೊಡ್ಡ ಚಿತ್ರವನ್ನು ಬಿಡಿಸಬಲ್ಲವು. ಅಪಾರ ಪ್ರಮಾಣದ ಡೇಟಾಗಳನ್ನು ಆಧರಿಸಿ ಇವುಗಳಿಗೆ ತರಬೇತಿ ಕೊಡಲಾಗಿದೆ. ಅವು ಭಾಷೆ ಮತ್ತು ದ್ರಾಶ್ಯಿಕ ವಿಷಯದಲ್ಲಿ ಹುದುಗಿರುವ ಅಂಶಗಳನ್ನು ಗ್ರಹಿಸಬಲ್ಲವು.

ಅದರ ನಂತರದ ಪರಿಕಲ್ಪನೆ ಸೂಪರ್ ಎಐ. ಇದು ಎಲ್ಲಾ ವಿಧದಲ್ಲೂ ಮನುಷ್ಯನನ್ನು ಮೀರಿಸಬಲ್ಲ ಸೈದ್ಧಾಂತಿಕ ಕೃತಕ ಬುದ್ಧಿಮತ್ತೆ. ಸದ್ಯಕ್ಕೆ ಇದು ಕಲ್ಪನೆ ಮತ್ತು ಸಂಶೋಧನೆಯ ಸ್ಥಿತಿಯಲ್ಲಿದೆಯಷ್ಟೆ. ಆದರೆ ಇದು ನೈತಿಕತೆ ಮತ್ತು ಆಡಳಿತದ ಕುರಿತಂತೆ ಗಂಭೀರ ಪ್ರಶ್ನೆಗಳನ್ನೆತ್ತಿರುವುದು ನಿಜ.

ಸೈಬರ್ ಅಪರಾಧದಲ್ಲಿ ಎಐ ಬಳಕೆ

ಈಗ ಎಐ ಜನರ ಜೀವನದಲ್ಲಿ ಬಹಳಷ್ಟು ಬಳಕೆಯಾಗುತ್ತಿದೆ. ನಾವು ಗ್ರಹಿಸಿದ್ದಕ್ಕಿಂತಲೂ ಹೆಚ್ಚು ಎಐ ಜತೆ ವ್ಯವಹರಿಸುತ್ತೇವೆ. ರೈತರು ಮಣ್ಣಿನ ಫಲವತ್ತತೆ ಮತ್ತು ಬೆಳೆಯ ಆರೋಗ್ಯ ತಿಳಿಯಲು ಎಐ ಸಾಧನಗಳನ್ನು ಬಳಸುತ್ತಾರೆ. ಉದ್ಯಮಿಯೊಬ್ಬ ವಿಡಿಯೋ ಕಾಲ್ ಮಾಡುತ್ತಿದ್ದಾನೆಂದುಕೊಳ್ಳಿ. ಸ್ಕ್ರೀನ್‌ನಲ್ಲಿ ಕಾಣುವ ವ್ಯಕ್ತಿ ಫೈನಾನ್ಸ್ ಮ್ಯಾನೇಜರ್‌ನಂತೆಯೇ ಕಂಡುಬರಬಹುದು. ಧ್ವನಿಯೂ ಆತನನ್ನೇ ಹೋಲಬಹುದು. ತಕ್ಷಣವೇ ಹಣವನ್ನು ವರ್ಗಾಯಿಸ ಬೇಕೆಂಬ ಬೇಡಿಕೆ ಆತನಿಂದ ಬರಬಹುದು. ಉದ್ಯಮಿ ಯಾವುದೇ ಅನುಮಾನವಿಲ್ಲದೆ ಹಣ ವರ್ಗಾಯಿಸುತ್ತಾನೆ. ಬಳಿಕ ಆತನಿಗೆ ತನ್ನ ಫೈನಾನ್ಸ್ ಮ್ಯಾನೇಜರ್ ಬೇರೆಲ್ಲೋ ಇದ್ದಾನೆಂದು ತಿಳಿದುಬರುತ್ತದೆ. ಅಷ್ಟರಲ್ಲಾಗಲೆ ಅವನ ಹಣ ಹೋಗಿರುತ್ತದೆ. ಆ ವಿಡಿಯೋವನ್ನು ಡೀಪ್ ಫೇಕ್ ತಂತ್ರಜ್ಞಾನದಿಂದ ಸೃಷ್ಟಿಸಲಾಗಿರುತ್ತದೆ.

ಇದು ಸೈಬರ್ ಅಪರಾಧದ ನೂತನ ಅವತಾರ. ಮುಕ್ತ ಎಐ ಸಾಧನಗಳಿಂದ ಯಾರೂ ಬೇಕಾದರೂ ಏನನ್ನೂ ಸೃಷ್ಟಿಸಬಹುದಾದ ಪರಿಸ್ಥಿತಿ ಏರ್ಪಟ್ಟಿದೆ. ಈ ಮುಕ್ತ ಅವಕಾಶವು ಅಪರಾಧಿಗಳಿಗೆ ಅಪರಾಧ ವೆಸಗಲೂ ಅನುವು ಕಲ್ಪಿಸುತ್ತದೆ. ಈಗ ತಂತ್ರಜ್ಞಾನದ ಕುರಿತಂತೆ ಅಲ್ಪಜ್ಞಾನವುಳ್ಳವನೂ ಎಐ ಮಾರ್ಗದರ್ಶನದ ಮೂಲಕ ಸಂಕೀರ್ಣ ಹಾಗೂ ಆಧುನಿಕ ಸೈಬರ್ ದಾಳಿಗಳನ್ನು ನಡೆಸಬಹುದಾಗಿದೆ. ಭವಿಷ್ಯದತ್ತ ನೋಡುವುದಾದರೆ ಸೈಬರ್ ಬೆದರಿಕೆಯು ಇನ್ನು ಮುಂದೆ ಹೆಚ್ಚೆಚ್ಚು ವ್ಯಕ್ತಿಗತವಾಗಬಹುದು. ಎಐ ವ್ಯಕ್ತಿಯೊಬ್ಬನ ಕುರಿತಂತೆ ಸಾಕಷ್ಟು ಖಾಸಗಿ ಮಾಹಿತಿಗಳನ್ನು ಸಂಗ್ರಹಿಸಬಲ್ಲದು. ಹಾಗೂ ಆತನನ್ನು ವಂಚಿಸಲು ಪೂರಕವಾದ ಸಂದೇಶಗಳನ್ನು ಕಳಿಸಬಲ್ಲದು. ಧ್ವನಿ ಅನುಕರಣಾ ತಂತ್ರಜ್ಞಾನದಿಂದಾಗಿ ಯಾರದೇ ಧ್ವನಿಯನ್ನು ಈಗ ನಕಲು ಮಾಡಬಹುದಾಗಿದೆ. ನಿಮ್ಮ ವಾಸ್ತವಿಕ ಮಾಹಿತಿಗಳನ್ನೊಳಗೊಂಡ ನಕಲಿ ಸಂದೇಶವೊಂದು ಬಂದರೆ ಅದು ಸಾಚಾ ಎಂದೇ ಕಂಡುಬರುತ್ತದೆ. ಈ ಮೂಲಕ ವಂಚಕರು ಮಾನಸಿಕ ಒತ್ತಡ ಹೇರಿ ನಿಮ್ಮನ್ನು ಏಮಾರಿಸುತ್ತಾರೆ.

ಪಾರದರ್ಶಕತೆ ಮತ್ತು ದಾಯಿತ್ವ

ಎಐ ಈಗ ರಾಷ್ಟ್ರೀಯ ಆಯಾಮವನ್ನೂ ಪಡೆದಿದೆ. ವಿವಿಧ ರಾಷ್ಟ್ರಗಳು ಎಐ ಕುರಿತಂತೆ ಹೆಚ್ಚೆಚ್ಚು ಸಂಶೋಧನೆ ನಡೆಸಿ ಅದನ್ನು ತಮ್ಮ ಲಾಭಕ್ಕೆ ಬಳಸಲು ಯೋಚಿಸುತ್ತಿವೆ. ಎಐ ಆಧಾರಿತ ನಿಗಾ ವ್ಯವಸ್ಥೆ, ಸ್ವಯಂಚಾಲಿತ ವ್ಯವಸ್ಥೆ, ಸೈಬರ್ ಸಮರ ಸಾಮರ್ಥ್ಯ ಮುಂತಾದವು ದೇಶದ ಭದ್ರತೆಗೆ ಮತ್ತು ರಾಷ್ಟ್ರೀಯ ವ್ಯೂಹಾತ್ಮಕ ರಣತಂತ್ರಕ್ಕೆ ಮಹತ್ವದ್ದಾಗಿದೆ.

ಡಿಜಿಟಲ್ ಚಿತ್ರಣವನ್ನು ಎಐ ಮರುರೂಪಿಸುತ್ತಿದೆ. ಜನರೇಟಿವ್ ಎಐ ಪ್ರೇರಿತವಾದ ಅಪಪ್ರಚಾರವು ದೊಡ್ಡ ಮಟ್ಟದಲ್ಲಿ ಜನಾಭಿಪ್ರಾಯವನ್ನು ರೂಪಿಸಬಲ್ಲುದು. ಡಿಜಿಟಲ್ ಸಮರಾಂಗಣವು ಈಗ ಕೇವಲ ಸೈನಿಕರನ್ನು ಒಳಗೊಂಡಿರುವುದಲ್ಲ, ಅಲ್ಗರಿಥಮ್ ಮತ್ತು ನರೇಟಿವ್‌ಗಳನ್ನೂ ಒಳಗೊಂಡಿದೆ. ಇಂತಹ ಬೆಳವಣಿಗೆಯ ಸಂದರ್ಭದಲ್ಲಿ ನೈತಿಕತೆಯೆಂಬುದು ಅತ್ಯಂತ ಪ್ರಮುಖ ವಿಷಯವಾಗುತ್ತದೆ. ತಪ್ಪು ಮಾಹಿತಿಯ ಕಾರಣದಿಂದಾಗಿ ಎಐ ವ್ಯವಸ್ಥೆಯು ಗ್ರಾಹಕನೊಬ್ಬನಿಗೆ ಸಾಲ ನೀಡಲು ನಿರಾಕರಿಸಿದರೆ ಅದಕ್ಕೆ ಯಾರು ಹೊಣೆ? ಮುಖ ಗುರುತು ಹಿಡಿಯುವ ವ್ಯವಸ್ಥೆಯು ತಪ್ಪಾಗಿ ಯಾರನ್ನಾದರೂ ಗುರುತಿಸಿದರೆ ಅದಕ್ಕೆ ಯಾರು ಹೊಣೆ? ಎಐ ವ್ಯವಸ್ಥೆಯು ತನಗೆ ನೀಡಿದ ಮಾಹಿತಿಯನ್ನು ಆಧರಿಸಿಯೇ ವರ್ತಿಸುತ್ತದೆ. ಅದಕ್ಕೆ ನೀಡಿದ ಮಾಹಿತಿಯಲ್ಲಿಯೇ ಪೂರ್ವಗ್ರಹಪೀಡಿತ ತಪ್ಪುಗಳಿದ್ದರೆ ಅದರ ಪರಿಣಾಮ ಗಂಭೀರವಾದೀತು. ಆದ್ದರಿಂದಲೇ ಎಐ ಕಾರ್ಯಾಚರಣೆಯಲ್ಲಿ ಪಾರದರ್ಶಕತೆ, ವಿವರಣೆ ಮತ್ತು ದಾಯಿತ್ವವಿರಬೇಕು ಎಂದು ಹೇಳುವುದು. ನಾವು ಈ ವ್ಯವಸ್ಥೆಯನ್ನು ನಿಗೂಢ 'ಬ್ಲಾಕ್‌ಬಾಕ್ಸ್'ನಂತೆ ಪರಿಗಣಿಸಲಾಗುವುದಿಲ್ಲ.

ಉದ್ಯೋಗದ ವಿಷಯವನ್ನೂ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಎಐ ಒಂದೇ ದಿನ ಉದ್ಯೋಗವಕಾಶಗಳನ್ನು ಕಿತ್ತು ಹಾಕುವುದಿಲ್ಲ. ಅದು ಉದ್ಯೋಗದ ಸ್ವರೂಪ ಬದಲಿಸುತ್ತದಷ್ಟೆ. ಪುನರಪಿ ಮಾನಸಿಕ ಕೆಲಸಗಳು ಕಡಿಮೆಯಾಗಬಹುದು. ಕ್ರಿಯಾಶೀಲ ಉದ್ಯೋಗಗಳು ಹೆಚ್ಚಬಹುದು. ಭವಿಷ್ಯದ ಉದ್ಯೋಗಶಕ್ತಿಯು ಎಐ ಜತೆಗೆ ಸಮನ್ವಯ ಸಾಧಿಸಿಕೊಂಡು ಹೋಗಬೇಕೇ ಹೊರತು ಸ್ಪರ್ಧಿಸಬಾರದು. ಪರಿಸ್ಥಿತಿಗೆ ಹೊಂದಿಕೊಳ್ಳುವುದು ಮತ್ತು ನಿರಂತರ ಕಲಿಕೆ ವೃತ್ತಿಪರ ಯಶಸ್ಸಿಗೆ ಮಾನದಂಡ. ಜನರು ಎಐ ಸಾಧನಗಳನ್ನು ಉಪಯೋಗಿಸುವುದಷ್ಟೇ ಅಲ್ಲದೆ, ಅವುಗಳ ಮಿತಿಯನ್ನೂ ಅರಿತುಕೊಳ್ಳಬೇಕು. ಆಟೋಮೇಟೆಡ್ ಫಲಿತಾಂಶಗಳನ್ನು ಪರಾಮರ್ಶಿಸುವ, ಪ್ರಶ್ನಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಅಲ್ಗರಿಥಮ್ ನಿರ್ಧಾರಗಳ ಮೇಲೆ ಕುರುಡು ನಂಬಿಕೆ ಅಪಾಯಕಾರಿಯಾದೀತು.

ಸುರಕ್ಷತಾ ವ್ಯವಸ್ಥೆ

ಇದೀಗ ಭದ್ರತೆಯ ಕುರಿತು ಗಮನಹರಿಸೋಣ. ಪ್ರತಿಯೊಂದು ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿಯೂ ಭದ್ರತಾ ಸಾಫ್ಟ್‌ವೇರ್ ಅಳವಡಿಸುವುದು ಮತ್ತು ಅದನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡುವುದು ಅತ್ಯಗತ್ಯ. ಕಂಪ್ಯೂಟರ್ ವ್ಯವಸ್ಥೆಯನ್ನು ಕೂಡಾ ಸಕಾಲದಲ್ಲಿ ಅಪ್‌ಡೇಟ್ ಮಾಡುತ್ತಲೇ ಇರಬೇಕಾಗುತ್ತದೆ. ಸಾರ್ವಜನಿಕ ವೈಫೈ ಜಾಲವನ್ನು ಬಳಸುವಾಗ ಹೆಚ್ಚು ಎಚ್ಚರಿಕೆ ವಹಿಸಬೇಕು. ಮುಖ್ಯವಾಗಿ ಹಣಕಾಸು ವ್ಯವಹಾರ ನಡೆಸುವಾಗ ಸಾರ್ವಜನಿಕ ವೈಫೈ ಬಳಸದಿರುವುದೇ ಸೂಕ್ತ. ಪ್ರತಿಯೊಂದು ಡಿವೈಸಿಗೂ ಕಠಿಣ ಪಾಸ್‌ವರ್ಡ್ ಇಟ್ಟುಕೊಳ್ಳಬೇಕು.

ಭಾರತದ ನಾಗರಿಕರಿಗೆ ಹಲವಾರು ರಕ್ಷಣಾ ವ್ಯವಸ್ಥೆಯ ಅವಕಾಶವಿದೆ. ರಾಷ್ಟ್ರೀಯ ಸೈಬರ್ ಕ್ರೈಂ ಹೆಲ್ಪ್‌ಲೈನ್ 1930 ಆರ್ಥಿಕ ವಂಚನೆಯ ಕುರಿತು ಗಮನಹರಿಸುತ್ತದೆ.

ವಂಚನೆ ನಡೆದ ತಕ್ಷಣವೇ ದೂರು ನೀಡುವುದರಿಂದ ಬಹಳಷ್ಟು ಬಾರಿ ಹಣದ ವಂಚನೆಯನ್ನು ತಡೆಯಬಹುದು. ಆನ್‌ಲೈನ್‌ನಲ್ಲೇ ದೂರು ಸಲ್ಲಿಸಲೂ ಅವಕಾಶಗಳಿವೆ. ಸಂಚಾರ್ ಸಾಥಿ ಆ್ಯಪ್ ಜನರಿಗೆ ತಮಗೆ ಬಂದ ಕರೆಗಳ ಮಾಹಿತಿ ನೀಡುತ್ತದೆ ಹಾಗೂ ಫೋನ್‌ಗಳು ಕಳೆದುಹೋದರೆ ಅಥವಾ ಕಳವಾದರೆ ಅವುಗಳು ಕಾರ್ಯಾಚರಿಸದಂತೆ ಬ್ಲಾಕ್ ಮಾಡುತ್ತದೆ.

ಡೇಟಾ ಕಳ್ಳತನ ಕೂಡಾ ಅತ್ಯಂತ ಗಂಭೀರ ಅಪಾಯ. ವಿಶ್ವಾದ್ಯಂತ ದೊಡ್ಡ ದೊಡ್ಡ ಸಂಘಟನೆಗಳು, ಕಂಪೆನಿಗಳು ಇಂತಹ ಅಪಾಯ ಎದುರಿಸಿವೆ. ಇದರಿಂದಾಗಿ ಕೋಟ್ಯಂತರ ಬಳಕೆದಾರರ ದಾಖಲೆಗಳು ಬಹಿರಂಗವಾದುದಿದೆ. ಎಐ ಒಂದು ಮ್ಯಾಜಿಕ್ ಅಲ್ಲ. ಅದು ಒಂದು ರೀತಿಯಲ್ಲಿ ಉತ್ಕೃಷ್ಟ ಮಟ್ಟದಲ್ಲಿ ನಡೆಯುವ ಡೇಟಾ ಮತ್ತು ಗಣಿತದ ವ್ಯವಹಾರ. ಬ್ಯಾಂಕ್‌ಗಳು ಇದೇ ಎಐಯನ್ನು ತಮ್ಮ ಭದ್ರತೆಗೂ ಬಳಸಿಕೊಳ್ಳುತ್ತವೆ. ಹಣದ ಸಂಶಯಾಸ್ಪದ ವಿನಿಮಯ ನಡೆದ ಕೂಡಲೇ ಬ್ಯಾಂಕ್‌ಗಳಿಗೆ ಅರಿವಾಗುವಲ್ಲೂ ಎಐ ಕೊಡುಗೆಯಿದೆ.

ಜನರ ಅರಿವಿಗಿಂತ ಹೆಚ್ಚು ವೇಗದಲ್ಲಿ ತಂತ್ರಜ್ಞಾನವು ಅಭಿವೃದ್ಧಿಯಾಗುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಸವಾಲಿರುವುದು ಎಐ ಕುರಿತಂತೆ ಭೀತಿಪಡುವುದರಲ್ಲಲ್ಲ. ಅದಕ್ಕಿಂತಲೂ ಅದನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಜವಾಬ್ದಾರಿಯುತವಾಗಿ ಬಳಸಿಕೊಳ್ಳುವಲ್ಲಿ. ಮುಂದಿನ ದಿನಗಳಲ್ಲಿ ಎಐ ಹೆಚ್ಚೆಚ್ಚು ಪ್ರಗತಿ ಸಾಧಿಸಿದಂತೆಯೇ ಸೈಬರ್ ಸೆಕ್ಯೂರಿಟಿ ನಮ್ಮ ವೈಯಕ್ತಿಕ ಭದ್ರತೆ, ನಮ್ಮ ಆರ್ಥಿಕತೆ ಮತ್ತು ನಮ್ಮ ರಾಷ್ಟ್ರೀಯ ಸ್ಥಿರತೆಯ ವಿಷಯವನ್ನೂ ಒಳಗೊಳ್ಳಲಿದೆ. ಒಟ್ಟಿನಲ್ಲಿ ಸ್ಮಾರ್ಟ್ ಯಂತ್ರಗಳ ಆವಿಷ್ಕಾರಗಳನ್ನು ತಡೆಯಲಾಗದು. ಅದು ಅನಿವಾರ್ಯ ಪ್ರಕ್ರಿಯೆ. ಪ್ರಶ್ನೆಯಿರುವುದು ನಾವು ಕುಶಲ ಡಿಜಿಟಲ್ ನಾಗರಿಕರಾಗಬಲ್ಲೆವೆ ಎಂಬ ಕುರಿತು.

ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪ | ಅಮೆರಿಕ–ಬ್ರಿಟನ್ ಜಂಟಿ ಸೇನಾನೆಲೆ ಮೇಲೆ ದಾಳಿಗೆ ಯತ್ನ

ವಿಶ್ವದ ಗಮನಸೆಳೆದ ಇರಾನ್ ಕ್ಷಿಪಣಿಗಳ ದೂರ ಸಾಮರ್ಥ್ಯ | ಇರಾನ್ ಕ್ಷಿಪಣಿಗಳ ಘೋಷಿತ ಸಾಮರ್ಥ್ಯ 2,000 ಕಿ.ಮೀ.

4,000 ಕಿ.ಮೀ. ದೂರ ಇರಾನ್ ಕ್ಷಿಪಣಿ ದಾಳಿ!

• ಹೊಸದಿಲ್ಲಿ: ಅಮೆರಿಕ ಮತ್ತು ಬ್ರಿಟನ್ ಜಂಟಿ ಸೇನಾನೆಲೆಯಾದ ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪದ ಮೇಲೆ ಇರಾನ್ ಎರಡು ಮಧ್ಯಂತರ-ಶ್ರೇಣಿಯ ಕ್ಷಿಪಣಿಗಳಿಂದ ದಾಳಿ ನಡೆಸಿದ್ದು, ಇರಾನ್ ಕ್ಷಿಪಣಿಗಳ ಅಘೋಷಿತ ದೂರ ಸಾಮರ್ಥ್ಯವು ವಿಶ್ವದ ಗಮನಸೆಳೆದಿದೆ.

ತನ್ನಲ್ಲಿ ಕೇವಲ 2,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳಷ್ಟೇ ಇವೆಯೆಂದು ಘೋಷಿಸಿಕೊಂಡ ಇರಾನ್, 4,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳನ್ನು ಬಹುಶಃ ರಹಸ್ಯವಾಗಿಟ್ಟಿತ್ತು. ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪವು ಇರಾನ್‌ನಿಂದ 4,000 ಕಿ.ಮೀ. ದೂರದಲ್ಲಿದೆ.

ಇರಾನ್ ಕಳುಹಿಸಿದ ಎರಡು ಕ್ಷಿಪಣಿಗಳಲ್ಲಿ ಒಂದು ವಿಫಲವಾಗಿದ್ದು, ಇನ್ನೊಂದು ಕ್ಷಿಪಣಿಯನ್ನು ಹೊಡೆದುರುಳಿಸಲಾಗಿದೆ. ಎರಡನೇ ಕ್ಷಿಪಣಿ ಗುರಿ ಮುಟ್ಟುವಲ್ಲಿ ಯಶಸ್ವಿಯಾಗಿದ್ದರಿಂದ ಇರಾನ್ ಕ್ಷಿಪಣಿಗಳ ದೂರ ಸಾಮರ್ಥ್ಯ ಬಯಲಾಗಿದೆ. ಎರಡೂ ಕ್ಷಿಪಣಿಗಳು ವಿಫಲವಾಗಿದ್ದರೆ ಇದು ತಿಳಿಯುತ್ತಿರಲಿಲ್ಲ.

ಪರಿಣಾಮವೇನು?: ಇರಾನ್ ಕ್ಷಿಪಣಿಗಳು ಹಿಂದು ಮಹಾಸಾಗರ ಮತ್ತು ದಕ್ಷಿಣ ಯುರೋಪ್ ತಲುಪುವ ಸಾಮರ್ಥ್ಯವನ್ನೂ ಹೊಂದಿರುವುದು ಬಹಿರಂಗವಾಗಿದೆ. ಇರಾನ್ ಕ್ಷಿಪಣಿಗಳ ಬಗ್ಗೆ ನೆರೆಯ ಗಲ್ಫ್ ರಾಷ್ಟ್ರಗಳು ಮತ್ತು ಇಸ್ರೇಲ್ ತಮ್ಮ ವಾಯು ರಕ್ಷಣಾ ವ್ಯವಸ್ಥೆ ಸಾಮರ್ಥ್ಯ ಕುರಿತು ಅವಲೋಕನ ನಡೆಸುವ ಅಗತ್ಯ ಎದೆ. ಮಧ್ಯಪ್ರಾಚ್ಯ ಯುದ್ಧವು ಹಿಂದು ಮಹಾಸಾಗರವನ್ನು ಪ್ರವೇಶಿಸಿದೆ.

ಡೀಗೋ ಗಾರ್ಸಿಯಾದಲ್ಲಿ ಏನಿದೆ?: ಹಿಂದು ಮಹಾಸಾಗರದಲ್ಲಿರುವ ಈ ದ್ವೀಪವು ಅಮೆರಿಕದ ಹೆವಿ ಬಾಂಬರ್ ಮತ್ತು ಕಣ್ಗಾವಲು ವಿಮಾನಗಳ ನೆಲೆಯಾಗಿದೆ. ಮಧ್ಯಪ್ರಾಚ್ಯದಲ್ಲಿ ಯಾವುದೇ ಸೇನಾ ಕಾರ್ಯಾಚರಣೆ ನಡೆಸಲು ಈ ಸೇನಾನೆಲೆಯನ್ನು ಅಮೆರಿಕ ಬಳಸುತ್ತದೆ. ಬಿ–52 ಬಾಂಬರ್ಸ್, ಅಣ್ವಸ್ತ್ರ ಸಾಮರ್ಥ್ಯದ ಸಬ್‌ಮೆರೀನ್‌ಗಳು ಮತ್ತು ಇತರ ಯುದ್ಧ ವಿಮಾನಗಳಿಗೆ ಇದು ನೆಲೆಯಾಗಿದೆ. ಇದು ಪ್ರವಾಸಿ ತಾಣವಲ್ಲ, ಸೇನಾ ಸಿಬ್ಬಂದಿಗೆ ಮಾತ್ರ ಪ್ರವೇಶವಿದೆ.

ಪ್ರಾದೇಶಿಕ ದಾಳಿಗಳು ಮತ್ತು ಭದ್ರತೆ

ಇರಾಕ್‌ನ ಬಾಗ್ದಾದ್‌ನಲ್ಲಿರುವ ರಾಷ್ಟ್ರೀಯ ಗುಪ್ತಚರ ಸಂಸ್ಥೆಯ ಪ್ರಧಾನ ಕಚೇರಿಯ ಮೇಲೆ ಡ್ರೋನ್ ದಾಳಿ ನಡೆದಿದೆ. ಇದೇ ವೇಳೆ, ಸೌದಿ ಅರೇಬಿಯಾ ತನ್ನ ತೈಲ ಸಮೃದ್ಧ ಪೂರ್ವ ವಲಯದಲ್ಲಿ ಎರಡೇ ಗಂಟೆಗಳಲ್ಲಿ 20 ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ವರದಿ ಮಾಡಿದೆ. ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್, ಪ್ರಾದೇಶಿಕ ಏಕತೆಗೆ ಕರೆ ನೀಡಿದ್ದು, ಭಿನ್ನಾಭಿಪ್ರಾಯಗಳಿಂದ ಇಸ್ರೇಲ್‌ಗೆ ಮಾತ್ರ ಲಾಭವಾಗುತ್ತದೆ, ಎಂದು ತಿಳಿಸಿದ್ದಾರೆ. ಪವಿತ್ರ ನಗರ ಕೋಮ್‌ನಲ್ಲಿ ಇಸ್ರೇಲ್ ದಾಳಿಗೆ ಬಲಿಯಾದ ಗುಪ್ತಚರ ಸಚಿವ ಇಸ್ಮಾಯಿಲ್ ಖತೀಬ್ ಮತ್ತು ರೆವಲ್ಯೂಷನರಿ ಗಾರ್ಡ್ ವಕ್ತಾರ ಅಲಿ ಮೊಹಮ್ಮದ್ ನೈನಿ ಅಂತ್ಯಕ್ರಿಯೆ ಶನಿವಾರ ನಡೆದಿದೆ.

ರಾಜತಾಂತ್ರಿಕ ಮಾತುಕತೆಗಳು: ಇಂಧನ ಸಾಗಾಣಿಕಾ ಮಾರ್ಗಗಳನ್ನು ಸುರಕ್ಷಿತಗೊಳಿಸಲು ದಕ್ಷಿಣ ಕೊರಿಯಾ ಟೆಹ್ರಾನ್‌ನೊಂದಿಗೆ ವಿವಿಧ ಹಂತದ ಮಾತುಕತೆಗಳನ್ನು ಆರಂಭಿಸಿದೆ. ಹಾರ್ಮುಜ್ ಜಲಸಂಧಿಯ ಮೂಲಕ ಜಪಾನಿನ ಹಡಗುಗಳ ಸಂಚಾರಕ್ಕೆ ಅನುವು ಮಾಡಿಕೊಡುವ ಬಗ್ಗೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ನೀಡಿದ ಹೇಳಿಕೆಯ ಬೆನ್ನಲ್ಲೇ ಈ ಮಾತುಕತೆ ನಡೆಯುತ್ತಿದೆ.

913 ಪ್ರಜೆಗಳು ಭಾರತಕ್ಕೆ ವಾಪಸ್

ಇರಾನ್‌ನಲ್ಲಿ ಸಿಲುಕಿರುವ 913 ಭಾರತೀಯ ಪ್ರಜೆಗಳು ನೆರೆಯ ದೇಶಗಳ ಮೂಲಕ ಭೂ ಮಾರ್ಗಗಳ ಮೂಲಕ ಭಾರತಕ್ಕೆ ಮರಳಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಭಾರತೀಯ ರಾಯಭಾರ ಕಚೇರಿಗಳ ಸಹಾಯದಿಂದ ಸ್ಥಳಾಂತರಿಸುವ ಪ್ರಕ್ರಿಯೆಯು ಮುಂದುವರೆದಿದೆ ಎಂದು ಹೇಳಿದೆ.



ಭಾರತಕ್ಕೆ ಬರಲಿವೆ ಇನ್ನೂ 2 ಎಲ್‌ಪಿಜಿ ಹಡಗುಗಳು

ಹೊಸದಿಲ್ಲಿ: ಇನ್ನೂ ಎರಡು ಭಾರತೀಯ ಎಲ್‌ಪಿಜಿ ಕ್ಯಾರಿಯರ್ ಹಡಗುಗಳು ಹಾರ್ಮುಜ್ ಜಲಸಂಧಿ ದಾಟಿ ಸ್ವದೇಶಕ್ಕೆ ಮರಳುವ ಸಿದ್ಧತೆಯಲ್ಲಿವೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) ಶಾರ್ಜಾದಲ್ಲಿ ಲಂಗರು ಹಾಕಿರುವ ಭಾರತ್ ಪೆಟ್ರೋಲಿಯಂನ ಪೈನ್ ಗ್ಯಾಸ್ ಮತ್ತು ಇಂಡಿಯನ್ ಆಯಿಲ್‌ನ ಜಗ್ ವಸಂತ್ ಹಡಗುಗಳು ಶೀಘ್ರ ಭಾರತಕ್ಕೆ ಮರಳಲಿವೆ. ಹಾರ್ಮುಜ್ ಜಲಸಂಧಿಯನ್ನು ಹಲವು ರಾಷ್ಟ್ರಗಳಿಗೆ ಮುಚ್ಚಲಾಗಿದ್ದು, ಭಾರತೀಯ ಮತ್ತು ಭಾರತದ ರಾಷ್ಟ್ರಧ್ವಜವುಳ್ಳ ಇತರ ಹಡಗುಗಳಿಗೆ ಹಾರ್ಮುಜ್ ದಾಟಲು ಇರಾನ್ ಅವಕಾಶ ನೀಡುತ್ತಿದೆ. ಮಾ.2ರಂದೇ ಹಾರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿತ್ತು. ಆದರೆ ಕಳೆದ ವಾರವೂ ಭಾರತೀಯ ಹಡಗುಗಳಿಗೆ ಇರಾನ್ ಜಲಸಂಧಿಯಲ್ಲಿ ಹಾದುಹೋಗಲು ಅವಕಾಶ ನೀಡಿದೆ.

ಭಾರತದ 22 ಹಡಗುಗಳು ಗಲ್ಫ್‌ನಲ್ಲಿವೆ. ಈ ಹಡಗುಗಳ ಸುರಕ್ಷತೆ ಖಚಿತಪಡಿಸಲು ಪ್ರಧಾನಿ ನರೇಂದ್ರ ಮೋದಿಯವರು ವಿಶ್ವ ನಾಯಕನರ ಜತೆ ಸಂಪರ್ಕದಲ್ಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಶುಕ್ರವಾರ ಹೇಳಿದ್ದರು.

22 ದೇಶಗಳಿಂದ ಖಂಡನೆ

ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ವಿಧಿಸಿರುವ ದಿಗ್ಬಂಧನವನ್ನು ಜಗತ್ತಿನ ಸುಮಾರು 22ಕ್ಕೂ ಹೆಚ್ಚು ದೇಶಗಳು ಖಂಡಿಸಿವೆ. ಈ ಜಲಸಂಧಿಯನ್ನು ಮುಕ್ತಮಾಡಬೇಕು, ಎಲ್ಲ ದೇಶಗಳ ತೈಲ ಟ್ಯಾಂಕರ್‌ಗಳ ಓಡಾಟಕ್ಕೆ ಅವಕಾಶ ನೀಡಬೇಕು ಎಂದು ಈ ದೇಶಗಳು ಆಗ್ರಹಿಸಿವೆ. ಹಾರ್ಮುಜ್ ಸಂಧಿಯಲ್ಲಿನ ತೈಲ ಹಡಗುಗಳ ಸರಾಗ ಓಡಾಟಕ್ಕೆ ಅನುವಾಗುವಂತೆ ನ್ಯಾಟೋ ದೇಶಗಳು ಮತ್ತು ಯುರೋಪ್ ದೇಶಗಳು ಭದ್ರತೆ ಒದಗಿಸಬೇಕು ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬೇಡಿಕೆಯನ್ನು ಮೊದಲಿಗೆ ಈ ಎಲ್ಲ ದೇಶಗಳು ತಿರಸ್ಕರಿಸಿದ್ದವು. ಆದರೆ, ಟ್ರಂಪ್ ಆಡಳಿತದ ಮನವೊಲಿಕೆ ಮೇರೆಗೆ ಜಪಾನ್, ಆಸ್ಟ್ರೇಲಿಯಾ, ಇಂಗ್ಲೆಂಡ್ ಸೇರಿದಂತೆ 22ಕ್ಕೂ ಹೆಚ್ಚು ದೇಶಗಳು ಒಪ್ಪಿಗೆ ನೀಡಿವೆ. ಈ ಎಲ್ಲ ದೇಶಗಳು ಹಡಗುಗಳ ಸುರಕ್ಷಿತ ಓಡಾಟಕ್ಕೆ ಅನುವು ಮಾಡಿಕೊಡಲಿವೆ ಎಂದೇ ಹೇಳಲಾಗುತ್ತಿದೆ.

ಹಿಜ್ಬುಲ್ಲಾ ನೆಲೆಗಳ ಮೇಲೆ ದಾಳಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಸೇನಾ ಕಾರ್ಯಾಚರಣೆಗಳನ್ನು ಕಡಿತಗೊಳಿಸುವ ಮುನ್ಸೂಚನೆ ನೀಡುತ್ತಿರುವ ಬೆನ್ನಲ್ಲೇ, ಇರಾನ್ ಜೊತೆಗಿನ ಸಂಘರ್ಷ ತೀವ್ರಗೊಂಡ ಹಿನ್ನೆಲೆಯಲ್ಲಿ ಅಮೆರಿಕ ಹೆಚ್ಚಿನ ಯುದ್ಧನೌಕೆಗಳು ಮತ್ತು ನೌಕಾಪಡೆಗಳನ್ನು ಈ ವಲಯಕ್ಕೆ ನಿಯೋಜಿಸಿದೆ. ಶನಿವಾರ ಮುಂಜಾನೆ ಇಸ್ರೇಲ್ ಸೇನೆ, ಟೆಹ್ರಾನ್ ಮತ್ತು ಬೈರುತ್‌ನ ಹಿಜ್ಬುಲ್ಲಾ ನೆಲೆಗಳ ಮೇಲೆ ಹೊಸದಾಗಿ ದಾಳಿ ನಡೆಸಿದೆ.

ಸಾಮಾನ್ಯ ಸ್ಥಿತಿಗೆ ಕುಂಠಿತವಾಗಿದ್ದ ಎಲ್‌ಪಿಜಿ ಗ್ಯಾಸ್ ಪೂರೈಕೆ

ವಾಣಿಜ್ಯ ಎಲ್ಪಿಜಿ ಹಂಚಿಕೆ ಶೇ.50ಕ್ಕೆ

• ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ನಡೆದ ಮೂರು ವಾರಗಳ ಯುದ್ಧದ ಪರಿಣಾಮವಾಗಿ ಅಸ್ತವ್ಯಸ್ತಗೊಂಡಿದ್ದ ಇಂಧನ ಪೂರೈಕೆ ಪರಿಸ್ಥಿತಿ ಈಗ ಹಂತ ಹಂತವಾಗಿ ಸಾಮಾನ್ಯ ಸ್ಥಿತಿಗೆ ಮರಳುತ್ತಿರುವ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರವು ವಾಣಿಜ್ಯ ಬಳಕೆಯ ಎಲ್‌ಪಿಜಿ ಹಂಚಿಕೆಯನ್ನು ಶೇ.50ಕ್ಕೆ ಹೆಚ್ಚಿಸಿದೆ.

ಈ ಹಿಂದೆ ಗೃಹ ಬಳಕೆಯ ಅಡುಗೆ ಅನಿಲ ಪೂರೈಕೆಗೆ ಆದ್ಯತೆ ನೀಡುವ ಉದ್ದೇಶದಿಂದ ಹೋಟೆಲ್, ರೆಸ್ಟೋರೆಂಟ್ ಸೇರಿದಂತೆ ವಾಣಿಜ್ಯ ಬಳಕೆದಾರರಿಗೆ ಎಲ್‌ಪಿಜಿ ಪೂರೈಕೆಯನ್ನು ಕಡಿತಗೊಳಿಸಲಾಗಿತ್ತು. ಬಳಿಕ ಹಂತ ಹಂತವಾಗಿ ಪೂರೈಕೆ ಪುನರ್ ಸ್ಥಾಪನೆಗೊಂಡು, ಈಗ ಹೆಚ್ಚುವರಿ ಶೇ.20 ಹಂಚಿಕೆಯನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಮಂಜೂರು ಮಾಡಲಾಗಿದೆ.

ಈ ಹೆಚ್ಚುವರಿ ಎಲ್‌ಪಿಜಿ ಹಂಚಿಕೆ ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಕೈಗಾರಿಕಾ ಕ್ಯಾಂಟೀನ್‌ಗಳು, ಆಹಾರ ಸಂಸ್ಕರಣ ಘಟಕಗಳು, ಸಮುದಾಯ ಅಡುಗೆ ಕೇಂದ್ರಗಳು ಮತ್ತು ಸಬ್ಸಿಡಿ ಆಹಾರ ವಿತರಣೆ ಕೇಂದ್ರಗಳಿಗೆ ನೆರವಾಗಲಿದೆ. ಜತೆಗೆ ವಲಸೆ ಕಾರ್ಮಿಕರಿಗೆ ವಿತರಣೆಯ ಮೂಲಕ ಸಹಾಯ ಒದಗಿಸುವುದಕ್ಕೂ ಕ್ರಮ ಕೈಗೊಳ್ಳಲಾಗಿದೆ.

ಆದರೆ, ಈ ಹೆಚ್ಚುವರಿ ಹಂಚಿಕೆ ಪಡೆಯಲು ವಾಣಿಜ್ಯ ಸಂಸ್ಥೆಗಳು ತೈಲ ಕಂಪನಿಗಳಲ್ಲಿ ನೋಂದಣಿ ಮಾಡಿಕೊಂಡು ಪೈಪ್ ನೈಸರ್ಗಿಕ ಅನಿಲ(ಪಿಎನ್‌ಜಿ) ಸಂಪರ್ಕಕ್ಕೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ ಎಂದು ತೈಲ ಕಾರ್ಯದರ್ಶಿಗಳು ರಾಜ್ಯಗಳಿಗೆ ತಿಳಿಸಿರುವ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರದ ಪ್ರಕಾರ, ದೇಶೀಯ ಎಲ್‌ಪಿಜಿ ಪೂರೈಕೆ ಸ್ಥಿರವಾಗಿದ್ದು, ವಿತರಣೆ ಕೇಂದ್ರಗಳಲ್ಲಿ ಯಾವುದೇ ಕೊರತೆ ವರದಿಯಾಗಿಲ್ಲ. ಸಾಮಾನ್ಯವಾಗಿ ಡೆಲಿವರಿ ಪ್ರಕ್ರಿಯೆಗಳು ಮುಂದುವರಿದಿವೆ. ಪ್ಯಾನಿಕ್ ಬುಕ್ಕಿಂಗ್‌ಗಳು ಕಡಿಮೆಯಾಗಿದ್ದು, ಜನರು ಗಾಬರಿಯಾಗದೆ ಮನೆಮಟ್ಟದ ವಿತರಣೆ ಸೇವೆಯನ್ನು ಬಳಸುವಂತೆ ಸಲಹೆ ನೀಡಲಾಗಿದೆ. ಇನ್ನೊಂದೆಡೆ, ಪೂರೈಕೆ ಒತ್ತಡವನ್ನು ಕಡಿಮೆ ಮಾಡಲು ವಾಣಿಜ್ಯ ಬಳಕೆದಾರರನ್ನು ಪೈಪ್ ನೈಸರ್ಗಿಕ ಅನಿಲ ಬಳಕೆಗೆ ಉತ್ತೇಜಿಸಲಾಗುತ್ತಿದೆ. ನಗರ ಅನಿಲ ವಿತರಣಾ ಜಾಲದ ಅನುಮೋದನೆಗಳನ್ನು ವೇಗಗೊಳಿಸಲು ರಾಜ್ಯಗಳಿಗೆ ಸೂಚನೆ ನೀಡಲಾಗಿದೆ. ಸಮಾನಾಂತರವಾಗಿ, ದೇಶದ ಎಲ್ಲಾ ರಿಫೈನರಿಗಳು ಹೆಚ್ಚಿನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಸಮರ್ಪಕವಾಗಿ ಲಭ್ಯವಿದೆ. ಇಂಧನ ಕೊರತೆ ಎಲ್ಲಿಯೂ ವರದಿಯಾಗಿಲ್ಲವೆಂದು ಸರ್ಕಾರ ಸ್ಪಷ್ಟಪಡಿಸಿದೆ.

ನೈಸರ್ಗಿಕ ಅನಿಲ ಪೂರೈಕೆ ಗೃಹ ಬಳಕೆ ಪಿಎನ್‌ಜಿ ಮತ್ತು ಸಿಎನ್‌ಜಿ ಸಾರಿಗೆ ವಿಭಾಗಗಳಿಗೆ ಪೂರ್ಣ ಪ್ರಮಾಣದಲ್ಲಿ ಮುಂದುವರಿದಿದ್ದು, ಕೈಗಾರಿಕಾ ಬಳಕೆದಾರರಿಗೆ ಸದ್ಯಕ್ಕೆ ಸುಮಾರು ಶೇ.80 ಪೂರೈಕೆ ನೀಡಲಾಗುತ್ತಿದೆ.

ಅದರ ಜತೆಗೆ, ದೇಶೀಯ ಎಲ್‌ಪಿಜಿ ಉತ್ಪಾದನೆ ಹೆಚ್ಚಿಸುವುದು, ಬುಕ್ಕಿಂಗ್ ಅವಧಿ ವಿಸ್ತರಣೆ ಮತ್ತು ಪರ್ಯಾಯವಾಗಿ ಸೀಮೆಎಣ್ಣೆ ಹಂಚಿಕೆ ಹೆಚ್ಚಿಸುವ ಕ್ರಮಗಳನ್ನೂ ಸರ್ಕಾರ ಕೈಗೊಂಡಿದೆ.

ಅಕ್ರಮ ಸಂಗ್ರಹಣೆ ಮತ್ತು ಕಳ್ಳಬಜಾರ್ ತಡೆಯಲು ದೇಶಾದ್ಯಂತ 3,500 ಕ್ಕೂ ಹೆಚ್ಚು ದಾಳಿ ನಡೆಸಲಾಗಿದ್ದು, ಸುಮಾರು 1,400 ಎಲ್‌ಪಿಜಿ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಹುತೇಕ ರಾಜ್ಯಗಳು ನಿಯಂತ್ರಣ ಕೊಠಡಿಗಳು ಹಾಗೂ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಗಳನ್ನು ಸ್ಥಾಪಿಸಿವೆ.

ಮುಖ್ಯಾಂಶಗಳು

- **ವಾಣಿಜ್ಯ ಎಲ್‌ಪಿಜಿ ಹಂಚಿಕೆ: ಶೇ.50ಕ್ಕೆ ಏರಿಕೆ**
- **ಹೆಚ್ಚುವರಿ ಹಂಚಿಕೆ:** ಶೇ.20
- **ದಾಳಿ ಸಂಖ್ಯೆ:** 3,500+
- **ವಶಪಡಿಸಿಕೊಂಡ ಸಿಲಿಂಡರ್‌ಗಳು:** 1,400
- **ಕೈಗಾರಿಕಾ ಅನಿಲ ಪೂರೈಕೆ:** ಶೇ.80

ಇರಾನ್ ಅಧ್ಯಕ್ಷರ ಜತೆ ಮೋದಿ ಚರ್ಚೆ

• ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಹೊತ್ತಿಕೊಂಡಿರುವ ಸಂಘರ್ಷ ದಿನೇದಿನೇ ಗಂಭೀರ ತಿರುವು ಪಡೆಯುತ್ತಿರುವ ನಡುವೆ, ಪ್ರಧಾನಿ ನರೇಂದ್ರ ಮೋದಿ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಝೆಶ್ಕಿಯಾನ್ ಅವರೊಂದಿಗೆ ಶನಿವಾರ ದೂರವಾಣಿ ಮಾತುಕತೆ ನಡೆಸಿ, ಪ್ರಮುಖ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ಕಟುವಾಗಿ ಖಂಡಿಸಿದರು. ಜಾಗತಿಕ ಸರಬರಾಜು ಸರಪಳಿ ಕುಸಿಯುವ ಅಪಾಯ ಎದುರಿಸುತ್ತಿರುವ ಹಿನ್ನೆಲೆಯಲ್ಲಿ, ಸಾಗಣೆ ಮಾರ್ಗಗಳು ಯಾವುದೇ ಅಡಚಣೆ ಇಲ್ಲದೆ ತೆರೆದೂ ಸುರಕ್ಷಿತವಾಗಿಯೂ ಇರಬೇಕೆಂದು ಆಗ್ರಹಿಸಿದರು.

ಈದ್ ಹಾಗೂ ನವರೋಜ್ ಹಬ್ಬಗಳ ಶುಭಾಶಯಗಳನ್ನು ತಿಳಿಸಿದ ಮೋದಿ, ಪಶ್ಚಿಮ ಏಷ್ಯಾದಲ್ಲಿ ಶಾಂತಿ, ಸ್ಥಿರತೆ ನೆಲೆಸಬೇಕೆಂಬ ಆಶಯ ವ್ಯಕ್ತಪಡಿಸಿದರೂ, ನೆಲದ ವಾಸ್ತವ ಸ್ಥಿತಿ ಆತಂಕಕಾರಿ ಎಂಬುದನ್ನು ಸ್ಪಷ್ಟಪಡಿಸಿದರು. 'ಮೂಲಸೌಕರ್ಯಗಳ ಮೇಲೆ ದಾಳಿಗಳು ಪ್ರದೇಶದ ಸ್ಥಿರತೆಯನ್ನು ಸಂಪೂರ್ಣವಾಗಿ ಕದಡುತ್ತಿವೆ. ಇದು ಜಾಗತಿಕ ಸರಬರಾಜು ವ್ಯವಸ್ಥೆಗೆ ನೇರ ಹೊಡೆತ,' ಎಂಬ ಸಂದೇಶವನ್ನು ಪ್ರಧಾನಿ ಸ್ಪಷ್ಟವಾಗಿ ನೀಡಿದ್ದಾರೆ. ಸಾಗಣೆ ಮಾರ್ಗಗಳ ಸ್ವಾತಂತ್ರ್ಯಕ್ಕೆ ಯಾವುದೇ ಧಕ್ಕೆಯಾಗಬಾರದು, ಹಡಗು ಸಂಚಾರ ನಿರ್ಬಂಧಿಸುವ ಯಾವುದೇ ಪ್ರಯತ್ನಗಳು ಅಸ್ವೀಕಾರಾರ್ಹವೆಂದು ಅವರು ಪುನರುಚ್ಚರಿಸಿದರು.

- **ಮೂಲಸೌಕರ್ಯಗಳ ಮೇಲಿನ ದಾಳಿಗೆ ಪ್ರಧಾನಿ ಖಂಡನೆ**
- **ಟ್ಯಾಂಕರ್‌ಗಳಿಗೆ ಅನುಮತಿ ನೀಡಿದ್ದಕ್ಕೆ ವಂದನೆ**

ಇರಾನ್‌ನಲ್ಲಿರುವ ಭಾರತೀಯರ ಸುರಕ್ಷೆ ವಿಚಾರದಲ್ಲಿ ನೀಡುತ್ತಿರುವ ಸಹಕಾರವನ್ನು ಮೋದಿ ಮೆಚ್ಚಿದರೂ, ಪ್ರಸ್ತುತ ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸುವ ರೀತಿಯಲ್ಲಿ ಮಾತುಕತೆ ನಡೆದಿರುವುದು ಗಮನಾರ್ಹ.

ಫೆಬ್ರವರಿ 28ರಿಂದ ಉಲ್ಬಣಗೊಂಡಿರುವ ಸಂಘರ್ಷದ ಬಳಿಕ, ಮೋದಿ-ಪೆಝೆಶ್ಕಿಯಾನ್ ನಡುವೆ ಇದು ಎರಡನೇ ನೇರ ಸಂಪರ್ಕ. ಮಾ.12ರಂದು ನಡೆದ ಮಾತುಕತೆಯಲ್ಲಿ, ಇರಾನ್ ಅಧ್ಯಕ್ಷರು ಪ್ರಸ್ತುತ ಪರಿಸ್ಥಿತಿಯ ಬಗ್ಗೆ ವಿವರಿಸಿದ್ದರೆ, ಭಾರತ ತನ್ನ ಸ್ಥಿರ ನಿಲುವಾದ ಸಂವಾದವೇ ಪರಿಹಾರ ಎಂಬುದನ್ನು ಸ್ಪಷ್ಟಪಡಿಸಿತ್ತು. ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ದಾಳಿಯಿಂದ ಪ್ರಾರಂಭವಾದ ಈ ಸಂಘರ್ಷಕ್ಕೆ ಪ್ರತಿಯಾಗಿ ಇರಾನ್ ನಡೆಸಿದ ಪ್ರತಿದಾಳಿ ಈಗ ಸಂಪೂರ್ಣ ಪ್ರದೇಶವನ್ನು ಅಸ್ಥಿರತೆಯ ಅಂಚಿಗೆ ತಳ್ಳಿದೆ.

ಕಿರುಸುದ್ದಿ

ಅಪರಿಚಿತರಿಂದ ಮತ್ತೊಬ್ಬ ಪಾಕ್ ಭಯೋತ್ಪಾದಕನ ಹತ್ಯೆ

• ಲಾಹೋರ್: ಇಲ್ಲಿನ ಮುರಿದ್ಕೆಯಲ್ಲಿರುವ ಲಷ್ಕರ್–ಎ–ತೈಬಾ ಸಂಘಟನೆಯ ಪ್ರಮುಖ ಕೇಂದ್ರ ಮರ್ಕಜ್ ತೈಬಾ ಆವರಣದಲ್ಲೇ ಈದ್ ನಮಾಜಿನ ತಕ್ಷಣ ಉಗ್ರ ಕಮಾಂಡರ್ ಬಿಲಾಲ್ ಆರಿಫ್ ಸಲಾಫಿಯನ್ನು ಹತ್ಯೆ ಮಾಡಲಾಗಿದೆ. ಇಬ್ಬರು ಅಪರಿಚಿತರು ಚೂರಿಯಿಂದ ಇರಿದು, ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ. ಶನಿವಾರ ನಡೆದ ಈದ್ ಸಮೂಹ ನಮಾಜಿನಲ್ಲಿ ಮೌಲಾನಾ ಅಬು ಝುರ್, ಮೌಲಾನಾ ಅಬ್ದುಲ್ ರೆಹಮಾನ್ ಅಬಿದ್ ಸೇರಿದಂತೆ ಸಂಘಟನೆಯ ಹಲವು ಉಗ್ರರು ಭಾಗಿಯಾಗಿದ್ದರು. ನಮಾಜು ಮುಗಿದು ಕೆಲವೇ ಕ್ಷಣಗಳಲ್ಲಿ ಹೊರಬರುತ್ತಿದ್ದ ಸಲಾಫಿ ಮೇಲೆ ಇಬ್ಬರು ದಾಳಿ ನಡೆಸಿದ್ದಾರೆ ಎನ್ನಲಾಗಿದೆ. ಒಬ್ಬನು ಸಮೀಪದಿಂದ ಗುಂಡು ಹಾರಿಸಿದ್ದರೆ, ಮತ್ತೊಬ್ಬ ಮಹಿಳೆ ಚೂರಿಯಿಂದ ಇರಿದು ಕೊಲೆಗೈದಿದ್ದಾಳೆ.

• ಬಿಲಾಲ್ ಆರಿಫ್ ಸಲಾಫಿ ಯಾರು?

2005ರಿಂದ ಲಷ್ಕರ್–ಎ–ತೈಬಾ ಸಂಘಟನೆಯೊಂದಿಗೆ ನಂಟು ಹೊಂದಿದ್ದ ಸಲಾಫಿ, ಹಣ ಸಂಗ್ರಹ, ಜಾಲ ವಿಸ್ತರಣೆ ಮತ್ತು ಕಾರ್ಯಾಚರಣೆ ಸಮನ್ವಯದಲ್ಲಿ ಸಕ್ರಿಯನಾಗಿದ್ದನೆಂದು ಹೇಳಲಾಗುತ್ತಿದೆ.

ಏ.3ಕ್ಕೆ ತಾರಾಗಿರಿ ಸ್ವದೇಶಿ ಯುದ್ಧನೌಕೆ ನಿಯೋಜನೆ

• ಹೊಸದಿಲ್ಲಿ: ಸೂಪರ್‌ಸೋನಿಕ್ ಕ್ಷಿಪಣಿಗಳ ಸಹಿತ ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆ ಹೊಂದಿರುವ ಸ್ವದೇಶಿ ಯುದ್ಧನೌಕೆ ತಾರಾಗಿರಿಯನ್ನು ಏ.3ರಂದು ಭಾರತೀಯ ನೌಕಾಪಡೆಯಲ್ಲಿ ನಿಯೋಜಿಸಲು ಸಕಲ ಸಿದ್ಧತೆಗಳು ನಡೆಯುತ್ತಿವೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ವಿಶಾಖಪಟ್ಟಣದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ತಾರಾಗಿರಿ ನಿಯೋಜನೆ ಕಾರ್ಯಕ್ರಮ ನಡೆಯಲಿದೆ. ನೌಕಾಪಡೆ ಸಂಪೂರ್ಣ ಆತ್ಮನಿರ್ಭರ (ಸ್ವಾವಲಂಬಿ) ಶಕ್ತಿಯಾಗುವತ್ತ ಸಾಗುತ್ತಿದೆ ಎಂಬುದಕ್ಕೆ ಇದು ಬಲವಾದ ಸಾಕ್ಷಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೇಕ್ ಇನ್ ಇಂಡಿಯಾದ ಸ್ಫೂರ್ತಿಯ ಸೆಲೆ: ನೀಲಗಿರಿ (ಪ್ರಾಜೆಕ್ಟ್ 17ಎ) ವರ್ಗದ 4ನೇ ಶಕ್ತಿಶಾಲಿ ಯುದ್ಧನೌಕೆ ತಾರಾಗಿರಿಯೊಂದು ಹಡಗು ಮಾತ್ರವಲ್ಲ; ಇದು 6,670 ಟನ್ ಭಾರದ ಮೇಕ್ ಇನ್ ಇಂಡಿಯಾ ಉಪಕ್ರಮದ ಸ್ಫೂರ್ತಿಯ ಸೆಲೆ ಮತ್ತು ನಮ್ಮ ಸ್ವದೇಶಿ ಹಡಗು ನಿರ್ಮಾಣ ಶಿಪ್‌ಯಾರ್ಡ್‌ಗಳ ಅತ್ಯುನ್ನತ ಇಂಜಿನಿಯರಿಂಗ್ ಸಾಮರ್ಥ್ಯದ ಪ್ರತಿರೂಪ ಎಂದು ನೌಕಾಪಡೆ ವಕ್ತಾರರು ತಿಳಿಸಿದ್ದಾರೆ. ಮಜಗಾನ್ ಡಾಕ್ ಶಿಪ್‌ಬಿಲ್ಡಿಂಗ್ ಲಿಮಿಟೆಡ್ (ಎಂಡಿಎಲ್) ನಿರ್ಮಿಸಿದ ಮೂರನೇ ಹಡಗು ತಾರಾಗಿರಿ (ಯಾರ್ಡ್ 12653) ಅನ್ನು ಕಳೆದ ವರ್ಷ ನ.28ರಂದು ಮುಂಬೈನಲ್ಲಿ ನೌಕಾಪಡೆಗೆ ಹಸ್ತಾಂತರಿಸಲಾಗಿತ್ತು. ಇದರ ಸ್ವದೇಶಿ ವಿನ್ಯಾಸ ಮತ್ತು ನಿರ್ಮಾಣವು ಆತ್ಮನಿರ್ಭರತೆ ಸಾಧಿಸುವತ್ತ ಪ್ರಮುಖ ಮೈಲಿಗಲ್ಲಾಗಿದೆ.

ತಾರಾಗಿರಿಯಲ್ಲಿ ಶೇ.75ರಷ್ಟು ದೇಸಿ ಉಪಕರಣಗಳನ್ನು ಬಳಸಲಾಗಿದೆ. ಇದರಲ್ಲಿ ಸೂಪರ್‌ಸೋನಿಕ್ ಕ್ಷಿಪಣಿಗಳಲ್ಲದೆ, ಸಬ್‌ಮೆರೀನ್ ವಿರೋಧಿ ಅಂಡರ್ ವಾಟರ್ ಕ್ಷಿಪಣಿಗಳನ್ನೂ ಅಳವಡಿಸಲಾಗಿವೆ.

ಡಿಜಿಟಲ್ ಅರೆಸ್ಟ್ ಸೈಬರ್ ವಂಚನೆಗೆ ಕೇಂದ್ರ ಬ್ರೇಕ್

• ಹೊಸದಿಲ್ಲಿ: ದೇಶದಲ್ಲಿ ಹೆಚ್ಚುತ್ತಿರುವ 'ಡಿಜಿಟಲ್ ಅರೆಸ್ಟ್' ಸೈಬರ್ ವಂಚನೆಗೆ ತಡೆ ಹಾಕಲು ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದು, ವಂಚನೆಗೆ ಬಳಸಲಾಗುತ್ತಿರುವ ಡಿವೈಸ್ ಐಡಿಗಳನ್ನು ಬ್ಲಾಕ್ ಮಾಡಲು ವಾಟ್ಸ್‌ಆ್ಯಪ್ ಗೆ ಸರ್ಕಾರ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಈ ಕ್ರಮವು ಗೃಹ ಸಚಿವಾಲಯದ ಸೈಬರ್ ವಿಭಾಗವಾದ ವರದಿ ನಂತರ ಕೈಗೊಳ್ಳಲಾಗಿದೆ. ವರದಿಯಲ್ಲಿ ಡಿಜಿಟಲ್ ಅರೆಸ್ಟ್ ಮಾದರಿಯ ವಂಚನೆ ಪ್ರಕರಣಗಳು ವೇಗವಾಗಿ ಹೆಚ್ಚುತ್ತಿರುವುದಾಗಿ ಎಚ್ಚರಿಸಲಾಗಿದೆ.

ವಂಚಕರು ಹೊಸ ಖಾತೆಗಳನ್ನು ನಿರಂತರವಾಗಿ ಸೃಷ್ಟಿಸಿ ತಮ್ಮ ಚಟುವಟಿಕೆ ಮುಂದುವರಿಸುತ್ತಿರುವ ಹಿನ್ನೆಲೆಯಲ್ಲಿ, ಕೇವಲ ಖಾತೆ ಮಟ್ಟದಲ್ಲಲ್ಲದೆ ಡಿವೈಸ್ ಮಟ್ಟದಲ್ಲೇ ನಿರ್ಬಂಧ ಹೇರಲು ಸರ್ಕಾರ ಚಿಂತನೆ ನಡೆಸಿದೆ. ಜೊತೆಗೆ ವಾಟ್ಸ್‌ಆ್ಯಪ್ ಸೇರಿದಂತೆ ಇತರ ಪ್ಲಾಟ್‌ಫಾರ್ಮ್‌ಗಳಲ್ಲಿ ಹೊಸ ಸುರಕ್ಷತಾ ವೈಶಿಷ್ಟ್ಯಗಳನ್ನು ಪರಿಚಯಿಸುವ ಸಾಧ್ಯತೆಯನ್ನೂ ಪರಿಶೀಲಿಸಲಾಗುತ್ತಿದೆ.

ಇನ್ನೊಂದೆಡೆ, 2021ರ ಐಟಿ ನಿಯಮಗಳಲ್ಲಿ ಅಳಿಸಲಾದ ಖಾತೆಗಳ ಮಾಹಿತಿಯನ್ನು ಕನಿಷ್ಠ 180 ದಿನಗಳವರೆಗೆ ಸಂಗ್ರಹಿಸುವ ಅಗತ್ಯವಿದೆ ಎಂದು ಅಧಿಕಾರಿಗಳು ಒತ್ತಾಯಿಸಿದ್ದಾರೆ. ಇದರಿಂದ ತನಿಖಾ ಸಂಸ್ಥೆಗಳು ಅಗತ್ಯ ಮಾಹಿತಿಯನ್ನು ಸುಲಭವಾಗಿ ಪಡೆಯಲು ನೆರವಾಗುತ್ತದೆ ಎಂಬುದು ಅವರ ಅಭಿಪ್ರಾಯ.

ಅದೇ ವೇಳೆ, ದುಷ್ಪ್ರಯೋಜನೆಗೆ ಬಳಸಲಾಗುತ್ತಿರುವ ನಕಲಿ ಎಪಿಕೆ ಫೈಲ್‌ಗಳು ಮತ್ತು ಅಪ್ಲಿಕೇಶನ್‌ಗಳನ್ನು ಗುರುತಿಸಿ ಬ್ಲಾಕ್ ಮಾಡುವ ದೊಡ್ಡ ಮಟ್ಟದ ಯೋಜನೆಯನ್ನೂ ಸರ್ಕಾರ ರೂಪಿಸುತ್ತಿದೆ.

ರತ್ನಮ್ಮ ಹಿತ್ತಲಿನ ಕೊಳವೆ ಬಾವಿಯಲ್ಲಿ ಅನಿಲ!

• ತಿರುವನಂತಪುರಂ: ಹಾರ್ಮುಜ್ ಜಲಸಂಧಿ ಮುಚ್ಚಿರುವ ಹಿನ್ನೆಲೆ ಜಾಗತಿಕ ಮಟ್ಟದಲ್ಲಿ ಇಂಧನ ಮತ್ತು ಅಡುಗೆ ಅನಿಲ ಪೂರೈಕೆ ವ್ಯತ್ಯಯ ಉಂಟಾಗಿದ್ದು, ಎಲ್‌ಪಿಜಿ ಬೆಲೆ ಏರಿಕೆ ಆತಂಕ ಹೆಚ್ಚಿಸಿದೆ. ಆದರೆ ಕೇರಳದ ರತ್ನಮ್ಮ ಅವರ ಕುಟುಂಬಕ್ಕೆ ಇದ್ಯಾವುದರ ಚಿಂತೆಯಿಲ್ಲ.

ಆಲಪ್ಪುಳದ ಆರಾಟ್ಟುವಳಿ ಗ್ರಾಮದ ರತ್ನಮ್ಮ ಅವರು ಕಳೆದ ಒಂದು ದಶಕದಿಂದಲೂ ಒಂದು ವಿಶಿಷ್ಟ ಹಾಗೂ ಸಂಪೂರ್ಣ ಸ್ಥಳೀಯ ತೈಲ ಮೂಲವನ್ನು ಬಳಸುತ್ತಿದ್ದಾರೆ. ಅವರ ಮನೆ ಹಿಂಭಾಗದ ಕೊಳವೆಬಾವಿಯಿಂದ ಹೊರಹೊಮ್ಮುವ ನೈಸರ್ಗಿಕ ಅನಿಲವನ್ನು ಬಳಸುತ್ತಿದ್ದಾರೆ. ವಾರ್ಷಿಕ 10,000 ರೂ. ಉಳಿತಾಯ ಮಾಡುತ್ತಿದ್ದಾರೆ.

2011ರಲ್ಲಿ ಶುದ್ಧ ಕುಡಿಯುವ ನೀರಿನ ಮೂಲದ ಹುಡುಕಾಟದಲ್ಲಿ ರತ್ನಮ್ಮ ಕುಟುಂಬ ಕೊಳವೆಬಾವಿಯನ್ನು ತೋಡಿಸಿತ್ತು. 75 ಅಡಿ ಆಳದವರೆಗೆ ತೋಡಿದರೂ ಕೇವಲ ಕೆಸರಿನ ನೀರು ಮಾತ್ರ ಸಿಕ್ಕಿತ್ತು. ವೆಚ್ಚ ಹೆಚ್ಚಾದ ಕಾರಣ ಅವರು ಆ ಪ್ರಯತ್ನವನ್ನು ಕೈಬಿಟ್ಟಿದ್ದರು. ಆದರೆ, ನಂತರ ಅಚ್ಚರಿಯ ಘಟನೆ ಸಂಭವಿಸಿದೆ. ಪ್ಲಂಬರ್ ಕೊಳವೆಬಾವಿಯನ್ನು ಮುಚ್ಚಲು ಪ್ರಯತ್ನಿಸಿದ್ದಾಗ, ಹತ್ತಿರದಲ್ಲಿದ್ದ ಒಬ್ಬ ವ್ಯಕ್ತಿ ಬೆಂಕಿಕಡ್ಡಿ ಹಚ್ಚಿದಾಗ ಕೊಳವೆಬಾವಿಯ ಬಾಯಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಮೊದಲಿಗೆ ಆತಂಕ ಉಂಟಾದರೂ, ಅಲ್ಲಿ ಬೆಂಕಿ ಸುಲಭವಾಗಿ ಹೊತ್ತಿ ಉರಿಯುವ ಅನಿಲವಿದೆ ಎಂದು ಕುಟುಂಬಕ್ಕೆ ತಿಳಿಯಿತು. ಪ್ಲಂಬರ್ ಸಹಾಯದಿಂದ ಕೊಳವೆಬಾವಿಯಿಂದ ಅಡುಗೆಮನೆಯ ಒಲೆಗೆ ಪೈಪ್ ಜೋಡಿಸಿದ್ದರು. ಬ್ಲ್ಯಾಕ್ ಕಾಫಿ ಮಾಡುವುದರ ಮೂಲಕ ಅಡುಗೆ ಆರಂಭಿಸಿದ್ದರು.

ಸರ್ಕಾರಿ ಸುಪರ್ದಿಗೆ ಅಲ್ ಫಲಾ ವಿವಿ

• ಹೊಸದಿಲ್ಲಿ: ದಿಲ್ಲಿ ಕೆಂಪು ಕೋಟೆ ಉಗ್ರ ದಾಳಿ ವೇಳೆ ಭಯೋತ್ಪಾದಕರಿಗೆ ದಾಳಿ ನಡೆಸಲು ಸಹಾಯ ಮಾಡಿದ ಹಲವು ವೈಟ್ ಕಾಲರ್ ಟೆರರ್ ಮಾಡ್ಯೂಲ್‌ನ ಅಕ್ರಮ ಬಯಲಿಗೆ ಬಂದ ಬೆನ್ನಲ್ಲೇ ಇದೀಗ ಹರ್ಯಾಣ ಸರ್ಕಾರವು ಫರಿದಾಬಾದ್‌ನಲ್ಲಿರುವ ಅಲ್–ಫಲಾ ವಿಶ್ವವಿದ್ಯಾನಿಲಯವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ವಿಶ್ವವಿದ್ಯಾನಿಲಯದ ಕಾರ್ಯನಿರ್ವಹಣೆಯಲ್ಲಿ ಅಕ್ರಮಗಳನ್ನು ಗುರುತಿಸಿದ ತನಿಖೆ ಬಳಿಕ ಹಿರಿಯ ಐಎಎಸ್ ಅಧಿಕಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸಿದೆ. ಹಿರಿಯ ಐಎಎಸ್ ಅಧಿಕಾರಿ ಅಮಿತ್ ಅಗರವಾಲ್ ಅವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿದ್ದು, ಅವರು ವಿಶ್ವವಿದ್ಯಾಲಯದ ಹಣಕಾಸು ಮತ್ತು ಆಡಳಿತಾತ್ಮಕ ವ್ಯವಹಾರಗಳ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾರೆ. ಜನವರಿಯಲ್ಲಿ, ಇಡಿ ವಿವಿಗೆ ಸೇರಿದ ಸುಮಾರು 140 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿತ್ತು.

ಅಮೆರಿಕ ಧಾರ್ಮಿಕ ಸ್ವಾತಂತ್ರ್ಯ ವರದಿ ವಿರುದ್ಧ ತೀವ್ರ ಆಕ್ರೋಶ | 275 ನಿವೃತ್ತ ನ್ಯಾಯಾಧೀಶರು, ಅಧಿಕಾರಿಗಳ ಜಂಟಿ ಹೇಳಿಕೆ

ಆರ್‌ಎಸ್‌ಎಸ್ ನಿಷೇಧ ಶಿಫಾರಸು ಪೂರ್ವಾಗ್ರಹ ಪೀಡಿತ

• ಹೊಸದಿಲ್ಲಿ: ಅಮೆರಿಕದ ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗ (ಯುಎಸ್ಸಿಐಆರ್‌ಎಫ್) ಇತ್ತೀಚೆಗೆ ಹೊರಡಿಸಿದ ವರದಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ನಿಷೇಧಕ್ಕೆ ಶಿಫಾರಸು ಮಾಡಿರುವ ಕ್ರಮಕ್ಕೆ ಭಾರತದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. 25 ನಿವೃತ್ತ ನ್ಯಾಯಮೂರ್ತಿಗಳು, 119 ನಿವೃತ್ತ ಆಡಳಿತಾಧಿಕಾರಿಗಳು ಹಾಗೂ 131 ನಿವೃತ್ತ ಸೈನಿಕ ಅಧಿಕಾರಿಗಳು ಸೇರಿ ಒಟ್ಟು 275 ಗಣ್ಯರು ಈ ವರದಿಯನ್ನು ಖಂಡಿಸಿ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಈ ವರದಿಯನ್ನು ಅವರು 'ಅತ್ಯಂತ ಪೂರ್ವಾಗ್ರಹಪೂರಿತ ಹಾಗೂ ಬೌದ್ಧಿಕ ದಿವಾಳಿತನದ ಪ್ರತಿಬಿಂಬ' ಎಂದು ವರ್ಣಿಸಿದ್ದಾರೆ. ಆರ್‌ಎಸ್‌ಎಸ್‌ಗೆ ಸಂಬಂಧಿಸಿದ ಭಾರತೀಯರ ಆಸ್ತಿ ಸ್ಥಗಿತಗೊಳಿಸುವುದು, ಸಂಚಾರಕ್ಕೆ ನಿರ್ಬಂಧ ಹೇರುವುದು ಹಾಗೂ ಸಂಘದೊಂದಿಗೆ ಸಂಬಂಧ ಹೊಂದಿದವರ ಮೇಲೆ ಕ್ರಮ ಕೈಗೊಳ್ಳಬೇಕೆಂಬ ಯುಎಸ್ಸಿಐಆರ್‌ಎಫ್ ಶಿಫಾರಸುಗಳು ದುರುದ್ದೇಶಪೂರಿತವಾಗಿವೆ ಎಂದು ಹೇಳಿದ್ದಾರೆ.

ಜಂಟಿ ಹೇಳಿಕೆಯಲ್ಲಿ, ಯುಎಸ್ಸಿಐಆರ್‌ಎಫ್ ವರದಿಗೆ ಕೊಡುಗೆ ನೀಡಿದವರ ಹಿನ್ನೆಲೆಯ ಬಗ್ಗೆ ಅಮೆರಿಕ ಸರ್ಕಾರ ಕಟ್ಟುನಿಟ್ಟಿನ ಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಲಾಗಿದೆ. ಅಮೆರಿಕದ ತೆರಿಗೆದಾರರ ಹಣದಿಂದ ನಡೆಯುವ ಸಂಸ್ಥೆಯೊಂದು, ಭಾರತ ವಿರೋಧಿ ಗುಪ್ತ ಅಜೆಂಡಾ ಹೊಂದಿದ ಹಿತಾಸಕ್ತಿಪರ ಗುಂಪುಗಳಿಗೆ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿರುವುದು ಆತಂಕಕಾರಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ಹೇಳಿಕೆಯಲ್ಲಿ ಯುಎಸ್ಸಿಐಆರ್‌ಎಫ್ ಮೇಲೆ ಮತ್ತೊಂದು ಗಂಭೀರ ಆರೋಪವನ್ನು ಮಾಡಲಾಗಿದೆ. ಭಾರತೀಯ ರಾಜ್ಯ ಸಂಸ್ಥೆಗಳು ಹಾಗೂ ಆರ್‌ಎಸ್‌ಎಸ್‌ನಂತಹ ಸಾಂಸ್ಕೃತಿಕ–ಸಾಮಾಜಿಕ ಸಂಘಟನೆಗಳನ್ನು ಸಮಗ್ರ ಸಂದರ್ಭವಿಲ್ಲದೆ ನಿರಂತರವಾಗಿ ಋಣಾತ್ಮಕ ಬೆಳಕಿನಲ್ಲಿ ಚಿತ್ರಿಸುವ ಪ್ರವೃತ್ತಿ ಈ ಸಂಸ್ಥೆಯಲ್ಲಿ ಕಾಣಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ವಿಮರ್ಶೆ ಅಗತ್ಯವಿದ್ದರೆ ಅದು ದೃಢವಾದ ಸಾಕ್ಷ್ಯಾಧಾರಗಳ ಮೇಲೆ ನಿಲ್ಲಬೇಕೇ ಹೊರತು ಸಾಮಾನ್ಯೀಕರಣಗಳ ಮೇಲೆ ಅಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಭಾರತವು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ದೀರ್ಘಕಾಲದ ನ್ಯಾಯಾಂಗ ವ್ಯವಸ್ಥೆ, ಚುರುಕು ಪ್ರಜಾತಾಂತ್ರಿಕ ಸಂಸ್ಥೆಗಳು ಹಾಗೂ ಸಂಸತ್ತಿನ ಮೇಲ್ವಿಚಾರಣೆ ಇರುವ ಹಿನ್ನೆಲೆಯಲ್ಲಿ ಧಾರ್ಮಿಕ ಹಕ್ಕುಗಳ ಉಲ್ಲಂಘನೆಗಳು ನಿರ್ಲಕ್ಷ್ಯಕ್ಕೆ ಒಳಗಾಗುವ ಅವಕಾಶ ಅತೀ ಕಡಿಮೆ ಎಂದು ಗಣ್ಯರು ಹೇಳಿದ್ದಾರೆ. ಈ ಜಂಟಿ ಹೇಳಿಕೆಗೆ ಸಹಿ ಹಾಕಿದವರಲ್ಲಿ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿಗಳಾದ ಆದರ್ಶ್ ಕುಮಾರ್ ಗೋಯಲ್ ಮತ್ತು ಹೇಮಂತ್ ಗುಪ್ತಾ, ಮಾಜಿ ಮುಖ್ಯ ಚುನಾವಣಾ ಆಯುಕ್ತರಾದ ಓ.ಪಿ. ರಾವತ್ ಹಾಗೂ ಸುನೀಲ್ ಅರೋರಾ, ಮಾಜಿ ವಿದೇಶ ಕಾರ್ಯದರ್ಶಿ ಕನ್ವಲ್ ಸಿಬಲ್, ಮಾಜಿ ಎನ್‌ಐಎ ನಿರ್ದೇಶಕ ಯೋಗೇಶ್ ಚಂದರ್ ಮೋದಿ ಸೇರಿದಂತೆ ಹಲವಾರು ನಿವೃತ್ತ ಐಎಎಸ್, ಐಪಿಎಸ್ ಹಾಗೂ ಸಶಸ್ತ್ರ ಪಡೆ ಅಧಿಕಾರಿಗಳು ಸೇರಿದ್ದಾರೆ.

ಪ್ರಮುಖಾಂಶಗಳು

- 275 ಗಣ್ಯರ ಜಂಟಿ ಹೇಳಿಕೆ, ಯುಎಸ್ಸಿಐಆರ್‌ಎಫ್ ವರದಿಗೆ ತೀವ್ರ ವಿರೋಧ
- 25 ನಿವೃತ್ತ ನ್ಯಾಯಾಧೀಶರು, 119 ನಿವೃತ್ತ ಆಡಳಿತಾಧಿಕಾರಿಗಳು, 131 ನಿವೃತ್ತ ಸೈನಿಕ ಅಧಿಕಾರಿಗಳು
- ಆರ್‌ಎಸ್‌ಎಸ್ ನಿಷೇಧ ಶಿಫಾರಸು 'ದುರುದ್ದೇಶಪೂರಿತ' ಎಂದು ಟೀಕೆ
- ವರದಿ ರಚನೆಗೆ ಕಾರಣಕರ್ತರಾದವರ ಹಿನ್ನೆಲೆ ಪರಿಶೀಲನೆಗೆ ಅಮೆರಿಕ ಸರ್ಕಾರಕ್ಕೆ ಆಗ್ರಹ
- ಭಾರತದ ಪ್ರಜಾಪ್ರಭುತ್ವ ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ಉಲ್ಲೇಖಿಸಿ ವರದಿಯ ವಿಶ್ವಾಸಾರ್ಹತೆಯನ್ನೇ ಪ್ರಶ್ನೆ

ಸಹಿ ಹಾಕಿದ ಪ್ರಮುಖರು

- ನ್ಯಾ.ಆದರ್ಶ್ ಕುಮಾರ್ ಗೋಯಲ್
- ನ್ಯಾ.ಹೇಮಂತ್ ಗುಪ್ತಾ
- ಮಾಜಿ ಮುಖ್ಯ ಚುನಾವಣಾ ಆಯುಕ್ತರು ಓ.ಪಿ. ರಾವತ್, ಸುನೀಲ್ ಅರೋರಾ
- ಮಾಜಿ ವಿದೇಶಾಂಗ ಕಾರ್ಯದರ್ಶಿ ಕನ್ವಲ್ ಸಿಬಲ್
- ಮಾಜಿ ಎನ್‌ಐಎ ನಿರ್ದೇಶಕ ಯೋಗೇಶ್ ಚಂದರ್ ಮೋದಿ

ಯುಎಸ್ಸಿಐಆರ್‌ಎಫ್‌ನ ಉಪಾಧ್ಯಕ್ಷನ ಮೂಲ ಪಾಕ್

ಅಮೆರಿಕದ ಈ ಧಾರ್ಮಿಕ ಸ್ವಾತಂತ್ರ್ಯಗಳ ಸಂಸ್ಥೆಗೂ ಪಾಕಿಸ್ತಾನಕ್ಕೂ ಅವಿನಾಭಾವ ನಂಟಿದೆ. ಹೀಗಾಗಿಯೇ ಈ ಸಂಸ್ಥೆ ರಾ ಮತ್ತು ಆರ್‌ಎಸ್‌ಎಸ್ ಅನ್ನು ಗುರಿಯಾಗಿಸಿಕೊಂಡಿದೆ ಎನ್ನಲಾಗಿದೆ. ಅಂದರೆ, ಈ ಸಂಸ್ಥೆಯ ಉಪಾಧ್ಯಕ್ಷನ ಹೆಸರು ಡಾ.ಆಸಿಫ್ ಮಹಮ್ಮದ್. ಈತ ಪಾಕಿಸ್ತಾನದ ಮೂಲದವನಾಗಿದ್ದು, 1990ರಲ್ಲಿ ಅಮೆರಿಕಕ್ಕೆ ತೆರಳಿದ್ದ. ಈಗ ಈ ಸಂಸ್ಥೆಯ ಉಪಾಧ್ಯಕ್ಷನಾಗಿದ್ದು, ಇಂಥದ್ದೊಂದು ವರದಿ ನೀಡಲು ಕಾರಣವಾಗಿದ್ದಾನೆ ಎಂಬ ಮಾತುಗಳಿವೆ.

ಪಾಕ್‌ನ ಹಿಂದುಗಳು ಎಲ್ಲಿ?

ಭಾರತದ ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಮಾತನಾಡುವವರು, ಪಾಕ್‌ನಲ್ಲಿನ ಹಿಂದುಗಳು ಎಲ್ಲಿ ಹೋದರು ಎಂಬ ಪ್ರಶ್ನೆಯನ್ನೂ ನಿವೃತ್ತ ನ್ಯಾಯಮೂರ್ತಿಗಳು, ಅಧಿಕಾರಿಗಳು ಪ್ರಶ್ನೆ ಮಾಡಿದ್ದಾರೆ. ಸ್ವಾತಂತ್ರ್ಯ ಬಂದಾಗ ಅವಿಭಜಿತ ಪಾಕಿಸ್ತಾನದಲ್ಲಿ ಶೇ.20–22ರಷ್ಟು ಹಿಂದೂಗಳಿದ್ದರು. ಈಗ ಪಾಕ್‌ನಲ್ಲಿ ಶೇ.1.5ರಿಂದ ಶೇ.2ರಷ್ಟಿದ್ದರೆ, ಬಾಂಗ್ಲಾದಲ್ಲಿ ಶೇ.7ರಿಂದ 8ರಷ್ಟಿದ್ದಾರೆ. ಉಳಿದವರು ಎಲ್ಲಿ ಹೋದರು ಎಂದೂ ಪ್ರಶ್ನೆ ಮಾಡಿದ್ದಾರೆ.

ಪ್ರಶಿಕ್ಷಣ ಪೂರ್ವ ಭಾವಿ ಸಭೆ



ಕುಂದಾಪುರ : ಪಕ್ಷದಲ್ಲಿ ವ್ಯಕ್ತಿ ನಿರ್ಮಾಣದಿಂದ ಸಂಘಟನೆ ನಿರ್ಮಾಣ ನಡೆಸಲಾಗುತ್ತಿದೆ. ಕಾರ್ಯಕರ್ತನಲ್ಲಿ ವೈಚಾರಿಕ ಬದ್ಧತೆ ಬೆಳೆಸುವುದು ಪಕ್ಷದ ಕಾರ್ಯವೈಖರಿ ತಿಳಿಸುವುದು ಪ್ರಶಿಕ್ಷಣದ ಉದ್ದೇಶ ಎಂದು ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ಭಾರತೀಯ ಜನತಾ ಪಾರ್ಟಿ ಕುಂದಾಪುರದ ಕಾರ್ಯಾಲಯದಲ್ಲಿ ಶುಕ್ರವಾರ ಪ್ರಶಿಕ್ಷಣ ಪೂರ್ವ ಭಾವಿಯ ಸಭೆಯಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿಜೆಪಿ ಕ್ಷೇತ್ರಾಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ವಹಿಸಿದ್ದರು. ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್ ಸಮಗ್ರ ಕಾರ್ಯಕ್ರಮದ ಬಗ್ಗೆ ವಿವರಿಸಿದರು. ಕುಂದಾಪುರ ಮಂಡಲ ಪ್ರಧಾನ ಕಾರ್ಯದರ್ಶಿ ಸುಧೀರ್ ಕೆ. ಎಸ್., ಮಂಗಳೂರು ನಿಕಟಪೂರ್ವ ಸಹ ಪ್ರಬಾರಿ ರಾಜೇಶ್ ಕಾವೇರಿ, ಪ್ರಶಿಕ್ಷಣ ಸಹ ಸಂಚಾಲಕ ಕಿರಣ್ ಪೂಜಾರಿ ತೆಕ್ಕಟ್ಟೆ, ಜಿಲ್ಲಾ ಕಾರ್ಯದರ್ಶಿಗಳು, ಮಂಡಲದ ಪದಾಧಿಕಾರಿಗಳು, ವಿವಿಧ ಮೋರ್ಚಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಇನ್ನಿತರ ಆಪೇಕ್ಷಿತರು ಪಕ್ಷದ ಹಿರಿಯ ಪ್ರಮುಖರು ಉಪಸ್ಥಿತರಿದ್ದರು.

ಪ್ರಶಿಕ್ಷಣದ ಕುಂದಾಪುರದ ಸಂಚಾಲಕ ಶಂಕರ್ ಅಂಕದಕಟ್ಟೆ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಮಂಡಲ ಉಪಾಧ್ಯಕ್ಷೆ ರೂಪಾ ಬಾಬು ಪೈ ಒಂದೇ ಮಾತರಂ ಗೀತೆಯನ್ನು ಹೇಳಿದರು. ಮಂಡಲ ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ವಕ್ವಾಡಿ ಕಾರ್ಯಕ್ರಮ ನಿರೂಪಿಸಿದರು. ಪ್ರಶಿಕ್ಷಣದ ಸಹ ಸಂಚಾಲಕಿ ಲತಾ ಸುರೇಶ್ ಶೆಟ್ಟಿ ವಂದಿಸಿದರು.

ವಿರೋಧ ಪಕ್ಷದ ಟೀಕೆ ಟಿಪ್ಪಣಿ ಸಕಾರಾತ್ಮಕವಾಗಿ ಸ್ವೀಕರಿಸಿ: ಶಾಸಕ ಪೊನ್ನಣ್ಣರಿಗೆ ಬಿಜೆಪಿ ಕಿವಿಮಾತು

ಮಡಿಕೇರಿ: ವಿರೋಧ ಪಕ್ಷದ ಟೀಕೆ ಟಿಪ್ಪಣಿಗಳನ್ನು ಸಕಾರಾತ್ಮವಾಗಿ ಸ್ವೀಕರಿಸುವ ಮನೋಬಲ ಆಡಳಿತ ಪಕ್ಷದ ಶಾಸಕರಿಗೆ ಇರಬೇಕು ಎಂದು ಕೊಡಗು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ನೆಲ್ಲೀರ ಚಲನ್ ಕಿವಿ ಮಾತು ಹೇಳಿದ್ದಾರೆ.



ವೀರಾಜಪೇಟೆ ಕ್ಷೇತ್ರದ ಶಾಸಕರು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿರೋಧ ಪಕ್ಷ ಬಿಜೆಪಿ ಪ್ರತಿಭಟನೆ ನಡೆಸಬಾರದು ಎಂಬ ಧೋರಣೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವಿರೋಧ ಪಕ್ಷ ತನ್ನ ನಿಲುವನ್ನು ವ್ಯಕ್ತಪಡಿಸಬಾರದು ಎಂಬ ಮನೋಭಾವವನ್ನು ಶಾಸಕರು ಹೊಂದಿರುವುದು ಆರೋಗ್ಯಕರ ಬೆಳವಣಿಗೆಯಲ್ಲ ಎಂದು ಚಲನ್ ಟೀಕಿಸಿದ್ದಾರೆ. ವ್ಯವಸ್ಥೆಯು ಜನಪರವಾದ ನಿಲುವುಗಳನ್ನು ಹೊಂದದೇ ಇದ್ದಾಗ ಅದರ ವಿರುದ್ಧ ಪ್ರತಿಭಟನೆ ಮಾಡುವುದು ಪ್ರತಿಯೊಬ್ಬರ ಹಕ್ಕಾಗಿದೆ. ಈ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದು ಸರಿಯಾದ ನಡೆಯಲ್ಲ ಎಂದಿರುವ ಅವರು, ಈ ಹಿಂದೆ ಸಿದ್ದರಾಮಯ್ಯನವರಿಗೆ ಮೊಟ್ಟೆ ಎಸೆದ ಪ್ರಕರಣದಲ್ಲಿ ತಾವು ರಸ್ತೆಯಲ್ಲಿ ಕುಳಿತು ವಿಚಾರವನ್ನು ವಿರೋಧಿಸಿರುವುದನ್ನು ನೆನವು ಮಾಡಿಕೊಳ್ಳಿ ಎಂದು ಜ್ಞಾಪಿಸಿದ್ದಾರೆ.

ಸಾವಿನ ಮೇಲೆ ರಾಜಕೀಯ ಮಾಡುವ ಅವಶ್ಯಕತೆ ಬಿಜೆಪಿಗೆ ಇಲ್ಲ. ಕಾಂಗ್ರೆಸ್ ಸರ್ಕಾರದ ಬೇಜವಾಬ್ದಾರಿತನದಿಂದ ಸಾರ್ವಜನಿಕರ ಪ್ರಾಣಹಾನಿಯಾದರೆ, ವಿರೋಧ ಪಕ್ಷವಾಗಿ ಬಿಜೆಪಿ ಸುಮ್ಮನಿರುವುದು ಪಕ್ಷಕ್ಕೆ ಶೋಭೆ ತರುವುದಿಲ ಎಂಬ ಅರಿವು ನಮಗೆ ಇರುವುದರಿಂದಲೇ ನಾವು ಪ್ರತಿಭಟನೆ ಮಾಡಿದ್ದೇವೆ ಎಂದು ಅವರು ಸಮರ್ಥಿಸಿಕೊಂಡಿದ್ದಾರೆ.

ಐದು ವರ್ಷ ಬಿಜೆಪಿ ಸರ್ಕಾರ ಇದ್ದಾಗ ಆನೆ ಮಾನವ ಸಂಘರ್ಷ ನಡೆದಿಲ್ಲ ಎಂದು ನಾವು ಹೇಳಿಲ್ಲ. ಆದರೆ ಕಳೆದ 25 ವರ್ಷದಲ್ಲಿ ನಡೆದಿರುವುದಕ್ಕಿಂತ ಹೆಚ್ಚು ಸಾವುನೋವುಗಳು ಈ ಮೂರು ವರ್ಷದಲ್ಲಿ ನಡೆದಿದೆ ಎಂಬುದನ್ನು ನಿಮ್ಮಲ್ಲಿರುವ ದಾಖಲೆಗಳಿಂದ ತಿಳಿದುಕೊಳ್ಳಿ ಎಂದು ಚಲನ್ ಅವರು ಕುಟುಕಿದ್ದಾರೆ.

ಬಿಜೆಪಿ ಅಧಿಕಾರಾವಧಿಯಲ್ಲಿ ಅನುದಾನ ಬಿಡುಗಡೆಯಾಗಿರುವ ಮಾಹಿತಿಯನ್ನು ಮಾಜಿ ಸ್ಪೀಕರ್ ಅವರಿಂದ ಕೇಳುವ ಬದಲು ತಾವು ಒಮ್ಮೆ ಅರಣ್ಯ ಇಲಾಖೆಯಿಂದ ದಾಖಲಾತಿ ಪಡೆದುಕೊಳ್ಳಿ. ವೀರಾಜಪೇಟೆ ಕ್ಷೇತ್ರದಲ್ಲಿ ಆಗಿರುವ ರೈಲ್ವೆ ಬ್ಯಾರಿಕೇಡ್ ಕೆಲಸ ಯಾರ ಅವಧಿಯಲ್ಲಿ ಆಗಿರೋದು ಎಂಬ ಮಾಹಿತಿ ದೊರೆಯಲಿದೆ. ಅಲ್ಲದೆ 2023ರ ಬಜೆಟ್ ನಲ್ಲಿ ಘೋಷಣೆ ಮಾಡಿದ್ದ 150 ಕೋಟಿ ಅನುದಾನ ಸಹ ಕೆ.ಜಿ.ಬೋಪಯ್ಯ ಅವರ ಅವಧಿಯಲ್ಲೇ ಆಗಿರುವುದು. ಆದರೆ ಹಾಲಿ ಶಾಸಕರಾಗಿ 2023 ರ ಬಜೆಟ್'ನಲ್ಲಿ ಘೋಷಣೆ ಆದ ಅನುದಾನವನ್ನು ಅನುಷ್ಠಾನಗೊಳಿಸಲು ನಿಮಗೆ ಏಕೆ ಸಾಧ್ಯವಾಗಲಿಲ್ಲ ಎಂದು ಚಲನ್ ಅವರು ಪ್ರಶ್ನಿಸಿದ್ದಾರೆ.

ಕಳೆದ ವರ್ಷ ಬಿ ಶೆಟ್ಟಿಗೇರಿಯಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕಾಗಿ ಭೂಮಿ ಪೂಜೆ ಮಾಡಿ ವರ್ಷ ಕಳೆದಿದ್ದರೂ, ಕಾಮಗಾರಿ ಪ್ರಾರಂಭವಾಗಿಲ್ಲ. ಕಾರಣ ತಿಳಿಸಿ ಎಂದು ಸವಾಲು ಹಾಕಿದ್ದಾರೆ.

ಮುಂದಿನ ದಿನದಲ್ಲಿ ಆನೆ–ಮಾನವ ಸಂಘರ್ಷವನ್ನು ನಿಲ್ಲಿಸುವ ನಿಟ್ಟಿನಲ್ಲಿ ತಾವು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಇದುವರೆಗೆ ಸಾಂಕೇತಿಕ ಹೋರಾಟ ಮಾಡಿದ್ದ ಬಿಜೆಪಿ ಮುಂದಿನ ದಿನದಲ್ಲಿ ಉಗ್ರ ಹೋರಾಟ ಮಾಡಲಿದೆ. ಅದನ್ನು ಎದುರಿಸಲು ಸಿದ್ದರಾಗಿ ಎಂದು ಎಚ್ಚರಿಸಿದ್ದಾರೆ.

ಧರ್ಮತ್ತಡ್ಕ ಹೈಸ್ಕೂಲ್‌ಗೆ ಬಿಮಾ ಸ್ಕೂಲ್ ಮಾನ್ಯತೆ



ಮಂಜೇಶ್ವರ: ಧರ್ಮತ್ತಡ್ಕ ಶ್ರೀ ದುರ್ಗಾಪರಮೇಶ್ವರಿ ಹೈಸ್ಕೂಲ್‌ಗೆ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ)ದ ಕಾಸರಗೋಡು ಬ್ರಾಂಚ್ ವತಿಯಿಂದ ಬಿಮಾ ಸ್ಕೂಲ್ ಯೋಜನೆಯ ಮಾನ್ಯತೆ ಲಭಿಸಿದೆ. ಇದರ ಅಂಗವಾಗಿ ಎಲ್ ಐಸಿ ನೇತೃತ್ವದಲ್ಲಿ ಶಾಲೆಗೆ ವಾಲ್ ವ್ಯಾನ್‌ಗಳ ಹಸ್ತಾಂತರ ಕಾರ್ಯಕ್ರಮ ಜರಗಿತು.

ಶಾಲಾ ಪ್ರಾಂಶುಪಾಲ ಎನ್. ರಾಮಚಂದ್ರ ಭಟ್, ಶಾಲಾ ಪ್ರಬಂಧಕ ಎನ್.ಶಂಕರನಾ ರಾಯಣ ಭಟ್, ಮುಖ್ಯೋ ಪಾಧ್ಯಾಯ ಶಶಿಕುಮಾರ್ ಉಪಸ್ಥಿತ ರಿದ್ದರು. ಎಲ್‌ಐಸಿ ಕಾಸರಗೋಡು ಬ್ರಾಂಚ್ ಸೀನಿಯರ್ ಮೆನೇಜರ್ ಎಂ.ಪಿ. ಶ್ರೀಜಿತ್, ಮಂಜೇಶ್ವರ ಸ್ಯಾಟಲೈಟ್ ಬ್ರಾಂಚ್ ಮೆನೇಜರ್ ಮನೀಷ ರಾಘವನ್ ಪಿ.ವಿ., ಡೆವಲಪ್‌ಮೆಂಟ್ ಆಫೀಸರ್ ಪ್ರಸಾದ್ ಎಂ.ಎನ್., ಎಲ್ ಐಸಿ ಅಡ್ವೈಸರ್‌ಗಳಾದ ದಿವ್ಯಭಾರತಿ, ಅಶೋಕ ಭಂಡಾರಿ, ಅಶೋಕ ಎನ್., ಆಶಾಲತಾ ಬಿ., ಕೀರ್ತಿ ಆರ್.ಜಿ., ಅಧ್ಯಾಪಿಕೆ ವಿಜೇತ ಸ್ವಾಗತಿಸಿ, ಅಧ್ಯಾಪಿಕೆ ಸೌಮ್ಯಾ, ಅಧ್ಯಾಪಿಕೆ ಶ್ವೇತಾ ಮತ್ತಿತರರಿದ್ದರು.

ಪುತ್ತೂರು ಮಾರುಕಟ್ಟೆ ಧಾರಣೆ

21-03-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 260 - 460	ಹಳೆ ಕರಿಗೋಟು	: 230 - 260
ಚೋಲ್ ಅಡಿಕೆ	: 505 - 530	ಹಸಿ ಕೊಕ್ಕೋ	: 70 - 100
ಡಬಲ್ ಚೋಲ್	: 505 - 530	ಒಣ ಕೊಕ್ಕೋ	: 270 - 300
ಹೊಸ ಪಟೋರ	: 340 - 390	**ಕಾಳುಮೆಣಸು ಧಾರಣೆ**	
ಹಳೆ ಪಟೋರ	: 395 - 405	ಕಾಳುಮೆಣಸು	: 465 - 665
ಹೊಸ ಉಳ್ಳಿ	: 115 - 285	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	: 105 - 285	ಆರ್‌ಎಸ್‌ಎಸ್ 1	- 212.00
ಹೊಸ ಕೋಕಾ	: 315 - 335	ಆರ್‌ಎಸ್‌ಎಸ್ 2	- 197.00
ಹಳೆ ಕೋಕಾ	: 315 - 335	ಸ್ಕ್ರಾಪ್ 1	- 137.00
ಹೊಸ ಕರಿಗೋಟು	: 230 - 260	ಸ್ಕ್ರಾಪ್ 2	- 130.00

ಜೂಜು ರಹಿತ ಕೋಳಿ ಅಂಕಕ್ಕೆ ಅವಕಾಶಕ್ಕೆ ಆಗ್ರಹ
ಮಾ.24: ಬಂಟ್ವಾಳದಲ್ಲಿ ಸಮಾಲೋಚನಾ ಸಭೆ



ಬಂಟ್ವಾಳ: ಜಿಲ್ಲೆಯಲ್ಲಿ ಸಾವಿರಾರು ವರ್ಷಗಳ ಹಿನ್ನೆಲೆ ಹೊಂದಿರುವ ತುಳುನಾಡಿನ ಸಾಂಪ್ರದಾಯಿಕ ಕೋಳಿ ಅಂಕಗಳಿಗೆ ಜೂಜು ರಹಿತವಾಗಿ ನಡೆಸಲು ಅವಕಾಶ ನೀಡಬೇಕು ಎಂದು ಸಾಂಪ್ರದಾಯಿಕ ಆಚರಣಾ ಹಿತ ರಕ್ಷಣಾ ವೇದಿಕೆ ಜಿಲ್ಲಾ ಗೌರವಾಧ್ಯಕ್ಷ ಶಿವಣ್ಣ ಗೌಡ ಇಡ್ಯಾಡಿ ಅಗ್ರಹಿಸಿದ್ದಾರೆ.

ಶನಿವಾರ ಬಂಟ್ವಾಳ ಪ್ರೆಸ್‌ಕ್ಲಬ್‌ನಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಬಗ್ಗೆ ಸಾಂಪ್ರದಾಯಿಕ ಆಚರಣಾ ಹಿತ ರಕ್ಷಣಾ ವೇದಿಕೆಯ ವತಿಯಿಂದ ಮಾ. 24ರಂದು ಬೆಳಿಗ್ಗೆ 9.30ಕ್ಕೆ ಬಂಟ್ವಾಳ ತಾಲೂಕಿನ ವಗ್ಗ ಸಮೃದ್ಧಿ ಸಹಕಾರ ಸೌಧ ಸಭಾಂಗಣದಲ್ಲಿ ಸಮಾಲೋಚನೆ ಆಯೋಜಿಸಲಾಗಿದೆ.ಇದರಲ್ಲಿ ಸಾವಿರಾರು ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಜಿಲ್ಲೆಯಲ್ಲಿ ವಿವಿಧ ಹಲವಾರು ದೈವಸ್ಥಾನ ಗಳ ಜಾತ್ರೆ,ನೇಮೋತ್ಸವದ ಬಳಿಕ ಸಾಂಪ್ರದಾಯಿಕವಾಗಿ ಕೋಳಿ ಅಂಕ ನಡೆಸಲಾಗುತ್ತಿದೆ.ಇದುವರೆಗೆ ಸಂಪ್ರದಾಯಿಕ ಕೋಳಿ ಅಂಕಕ್ಕೆ ಅಡ್ಡಿ ಇರಲಿಲ್ಲ ಆದರೆ ಇದೀಗ ಜೂಜು ರಹಿತ ಸಾಂಪ್ರದಾಯಿಕ ಕೋಳಿ ಅಂಕ ನಡೆಸುವುದಕ್ಕೂ ಪೊಲೀಸ್ ಇಲಾಖೆ ಅಡ್ಡಿಪಡಿಸುವ ಮೂಲಕ ಜನರ ಧಾರ್ಮಿಕ ಭಾವನೆಗೆ ನೋವನ್ನುಂಟು ಮಾಡಿದೆ ಎಂದು ಆರೋಪಿಸಿದರಲ್ಲದೆ ಜೂಜು ರಹಿತ ಕೋಳಿ ಅಂಕಕ್ಕೆ ಪೊಲೀಸ್ ಅಧಿಕಾರಿಗಳ ನಡೆಸುವ ದಾಳಿ ಕಾರ್ಯಾಚರಣೆಯನ್ನು ಖಂಡಿಸಿದರು.

ಈಗಾಗಲೇ ಇಂತಹ ಸಂಪ್ರದಾಯಕ್ಕೆ ಅಡ್ಡಿಪಡಿದವರ ವಿರುದ್ಧ ದೈವಗಳಿಗೆ ಸಾಮೂಹಿಕ ಪ್ರಾರ್ಥನೆ ಮೂಲಕ ದೂರಿಕೊಳ್ಳಲಾಗಿದೆ. ಕುದುರೆ ರೇಸ್, ಕಂಬಳ, ಜಲ್ಲಿಕಟ್ಟು ಬೆಂಬಲಿಸುವ ಸರ್ಕಾರ ಕೋಳಿ ಅಂಕಕ್ಕೆ ಮಾತ್ರ ಯಾಕೆ ಅಡ್ಡಿಪಡಿಸಲಾಗುತ್ತಿದೆ ಎಂದು ಪ್ರಶ್ನಿಸಿರದ ಸಿಎಂ., ಗೃಹಸಚಿವರು ಸಹಿತ ಜಿಲ್ಲೆಯ ಎಲ್ಲಾ ಶಾಸಕರಿಗೂ ಮನವಿ ಸಲ್ಲಿಸಲಾಗಿದೆ ಎಂದು ಅವರು ಹೇಳಿದರು.

ಸುದ್ದಿಗೊಷ್ಟಿಯಲ್ಲಿ ಸಮಿತಿ ಅಧ್ಯಕ್ಷ ಬೆಳ್ಳಿಯಪ್ಪ ಗೌಡ ತಿಮರೆಗುಡ್ಡೆ, ಪ್ರಮುಖರಾದ ಆನಂದ ಪೂಜಾರಿ ಕಡಬ, ಗಂಗಾಧರ ಪೂಜಾರಿ ಕಜೆಕಾರು, ಹರೀಶ ದಾಸ್ ಕಾವಳಕಟ್ಟೆ ಉಪಸ್ಥಿತರಿದ್ದರು.

ವಾಹನ ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಯುವಕ ಸಾವು

ಮೂಡಬಿದಿರೆ: ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಕಾರ್ಕಳದಲ್ಲಿ ಸಂಭವಿಸಿದ್ದ ದ್ವಿಚಕ್ರ ವಾಹನ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಸಾತ್ವಿಕ್ ಕುಲಾಲ್ (21) ಅವರು ಚಿಕಿತ್ಸೆ ಫಲಿಸದೆ ಇಂದು ವಿಧಿವಶರಾದರು.



ಮೂಡಬಿದಿರೆ ತಾಲೂಕಿನ ಪಡುಮಾರ್ನಾಡು ನಿವಾಸಿಗಳಾದ ಶ್ಯಾಮ್ ಅಂಚನ್ ಹಾಗೂ ಜಯಂತಿ ಕುಲಾಲ್ ಅವರ ಪುತ್ರರಾಗಿರುವ ಸಾತ್ವಿಕ್, ಸಿವಿಲ್ ಇಂಜಿನಿಯರಿಂಗ್ ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದರು. ಅಪಘಾತದ ಬಳಿಕ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾ ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ.

ಜ್ಞಾನವರ್ಧನೆ ಜೊತೆಗೆ ಕೌಶಲ್ಯ, ನೈತಿಕ ಮೌಲ್ಯಗಳನ್ನು ಮೈಗೂಡಿಸಿ



ಕುಂದಾಪುರ: ಮಕ್ಕಳ ವರ್ತನೆ ಪರಿವರ್ತನೆ ಶಿಕ್ಷಣದ ಪ್ರಮುಖ ಗುರಿಯಾಗಬೇಕು. ವಿದ್ಯಾರ್ಥಿಗಳಲ್ಲಿ ಜ್ಞಾನವರ್ಧನೆಯ ಜೊತೆಗೆ ಕೌಶಲ್ಯ ಮತ್ತು ನೈತಿಕ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ಕೋಡಿಯ ಹಾಜಿ ಕೆ.ಮೊಹಿದ್ದೀನ್ ಬ್ಯಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಡಾ. ಜಯಶೀಲ ಶೆಟ್ಟಿ ಹೇಳಿದರು.

ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಆಶ್ರಯದಲ್ಲಿ ಬೆಳದಿಂಗಳ ಚಿಂತನ ಉಪನ್ಯಾಸ ಮಾಲಿಕೆ–2ರಲ್ಲಿ "ಬದಲಾದ ಶಿಕ್ಷಣ ವ್ಯವಸ್ಥೆ: ಶಿಕ್ಷಕರಿಗಿರುವ ಸವಾಲುಗಳು" ಎನ್ನುವ ವಿಷಯದ ಕುರಿತು ಕಾಲೇಜಿನ ಮೂಕಾಂಬಿಕಾ ಸಭಾಂಗಣದಲ್ಲಿ ನಡೆದ ಸಿಬ್ಬಂದಿ ಪುನಶ್ಚೇತನ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಇದೇ ಸಂದರ್ಭ ಅವರು ರಾಷ್ಟ್ರೀಯ ಶಿಕ್ಷಣ ನೀತಿ –2020ಯಲ್ಲಿ ಮಾತೃಭಾಷೆಗೆ ನೀಡಿದ ಮಹತ್ವ ಹಾಗೂ ಈ ಶಿಕ್ಷಣ ನೀತಿಯ ಅನನ್ಯತೆಗಳ ಕುರಿತು ತಿಳಿಸಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ.ಉಮೇಶ ಶೆಟ್ಟಿ, ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಹಾಗೂ ಉಪಪ್ರಾಂಶುಪಾಲ ಡಾ. ಚೇತನ ಶೆಟ್ಟಿ ಕೋವಾಡಿ ಸ್ವಾಗತಿಸಿ, ಪ್ರಸ್ತಾವಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರವೀಣಾ ಎಂ.ಪೂಜಾರಿ ಅತಿಥಿಗಳನ್ನು ಪರಿಚಯಿಸಿ, ರೇಷ್ಮಾ ಶೆಟ್ಟಿ ವಂದಿಸಿದರು. ರಕ್ಷಿತಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-747) ಡ್ರಾ ಮಾರ್ಚ್ 15ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
1) KT 889280 (MOOVATTUPUZHA)

Consolation Prize Rs.5,000/-
KN 889280 KO 889280 KP 889280 KR 889280
KS 889280 KU 889280 KV 889280 KW 889280
KX 889280 KY 889280 KZ 889280

2nd Prize Rs.25,00,000/- [25 Lakhs]
1) KR 204035 (KANNUR)

3rd Prize Rs.10,00,000/- [10 Lakhs]
1) KS 210877 (ERNAKULAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0677 1833 2049 2421 3682 4334 4819 4934 5120 5505
6145 6320 6397 6423 6626 6868 6975 9172 9979

5th Prize Rs.2,000/-
1734 1953 3218 3922 6346 7825

6th Prize Rs.1,000/-
0014 1211 1544 1649 1871 1915 2141 2165 2332 2409
3393 3454 3635 4029 4544 4600 4729 5275 5712 6341
7214 7720 8501 8677 9982

7th Prize Rs.500/-
0020 0160 0532 0597 0610 0675 0813 0889 0954 0968
1271 1335 1365 1420 1753 1754 1887 1893 2055 2162
2163 2261 2434 2614 2655 3092 3208 3236 3668 3872
3947 4006 4100 4195 4307 4584 4620 4778 5024 5477
5536 5545 6227 6335 6439 6611 6759 6771 6778 6781
7010 7013 7029 7239 7263 7432 7544 7685 7747 7755
7833 7895 7931 8008 8098 8261 8661 8977 9257 9311
9567 9580 9693 9810 9840 9968

8th Prize Rs.200/-
0001 0021 0231 0548 0594 0721 0751 0837 0945 1067
1073 1141 1181 1342 1382 1728 1740 1752 1997 2225
2238 2334 2428 2465 2547 2555 2738 2870 2930 3046
3107 3201 3203 3512 3533 3656 3694 3757 3800 3826
3946 4160 4219 4298 4301 4505 4542 4628 4846 4975
5160 5790 5804 5865 5895 6171 6252 6521 6533 6541
6623 6899 6958 6982 7092 7110 7403 7562 7587 7602
7684 7865 7869 8179 8283 8325 8555 8629 8704 8749
8802 8829 8894 8983 8996 9106 9422 9447 9537 9546
9703 9729

9th Prize Rs.100/-
0000 0002 0312 0317 0353 0373 0483 0599 0869 0874
0952 1038 1049 1062 1205 1276 1330 1385 1423 1954
1993 2046 2087 2198 2202 2345 2415 2663 2740 2745
2746 2776 2790 2998 3043 3070 3090 3137 3160 3222
3251 3319 3330 3357 3369 3431 3625 3675 3710 3730
3799 3832 3861 3968 4003 4127 4141 4148 4201 4255
4389 4481 4553 4739 4854 4896 5030 5122 5243 5637
5763 5787 5789 5877 5920 6019 6042 6047 6175 6327
6387 6393 6413 6426 6581 6587 6597 6605 6653 6655
6761 6774 6776 6897 6905 6978 7118 7137 7189 7195
7295 7304 7315 7537 7564 7585 7679 7681 7688 7714
7762 7838 7874 7892 7949 8022 8030 8123 8133 8159
8284 8334 8492 8723 8760 8837 8895 8980 9090 9118
9153 9159 9169 9277 9333 9416 9602 9615 9652 9702
9767 9856 9912 9962

ಕಿರು ಸುದ್ದಿ

ಯುವಕ ನಾಪತ್ತೆ

ಉಡುಪಿ: ಹೊಟೇಲ್ ಒಂದರಲ್ಲಿ ಉದ್ಯೋಗ ಮಾಡಿಕೊಂಡಿದ್ದ ಕುಂದಾಪುರ ತಾಲೂಕಿನ ಯಡಮೊಗ್ಗೆ ಗ್ರಾಮದ ಬೀರನಬೈಲು ನಿವಾಸಿ ಪ್ರಶಾಂತ (23) ಎಂಬ ವ್ಯಕ್ತಿಯು 2024 ರ ಮಾರ್ಚ್ 1 ರಂದು ಕೆಲಸಕ್ಕೆಂದು ಹೋದವರು ಮನೆಗೆ ವಾಪಾಸು ಬಾರದೆ ನಾಪತ್ತೆಯಾಗಿರುತ್ತಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಶಂಕರನಾರಾಯಣ ಪೊಲೀಸ್ ಠಾಣೆ ದೂ.ಸಂ: 08259–280299, ಕುಂದಾಪುರ ಠಾಣೆ ದೂ.ಸಂ: 08254–230338, ಎಸ್.ಡಿ.ಪಿ.ಒ: 08254–232338, ಡಿ.ಪಿ.ಒ: 0820–2534777, ರೇಂಜ್: 8242220501 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಶಂಕರನಾರಾಯಣ ಪೊಲೀಸ್ ಠಾಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ವಿಟ್ಲ ಕೇಂದ್ರ ಜುಮಾ ಮಸೀದಿಯಲ್ಲಿ ಈದುಲ್ ಫಿತ್ರ್

ವಿಟ್ಲ: ವಿಟ್ಲ ಕೇಂದ್ರ ಜುಮಾ ಮಸೀದಿಯಲ್ಲಿ ಶುಕ್ರವಾರ ಈದುಲ್ ಫಿತ್ರ್ ಹಬ್ಬವನ್ನು ಆಚರಿಸಲಾಯಿತು. ಮಸೀದಿ ಖತೀಬ್ ಆರೀಫ್ ಬಾಖವಿ ಅವರು ಪ್ರಾರ್ಥನೆಗೆ ನೇತೃತ್ವ ನೀಡಿದರು. ಬಳಿಕ ಅವರು ಈದ್ ಸಂದೇಶ ನೀಡಿ, ಸಾಮರಸ್ಯದಿಂದ ಕೂಡಿ ಬಾಳಿದಾಗ ದೇವರ ರಕ್ಷಣೆ ನಮ್ಮ ಮೇಲಿರುತ್ತದೆ. ಪರಸ್ಪರ ಸೌಹಾರ್ದತೆಯಿಂದ ಬಾಳಬೇಕು. ಜೀವನದಲ್ಲಿ ನಿಯಂತ್ರಣಬೇಕು. ನಿಯಂತ್ರಣ ಮಿತಿ ಮೀರಿದಾಗ ನಮ್ಮ ಜೀವಕ್ಕೆ ಅಪಾಯವಿದೆ. ವಾಹನ ಹಬ್ಬದ ಸಂಭ್ರಮದ ವೇಳೆ ವಾಹನ ಚಾಲನೆ ಮಾಡುವಾಗ ಎಚ್ಚರದಿಂದರಬೇಕು. ಹಬ್ಬವನ್ನು ಅನಿಇಸ್ಲಾಮಿಕ ಮೂಲಕ ಸಂಭ್ರಮಿಸಬಾರದು ಎಂದು ಹೇಳಿದರು. ಬಳಿಕ ಮುಸ್ಲಿಂ ಬಾಂಧವರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಸಮಾಧಾನ ಮಹೋತ್ಸವ ನಡೆಸಲು ಹೈಕೋರ್ಟ್ ಅನುಮತಿ: ಪ್ರಶಾಂತ್ ಜತ್ತನ್ನ

ಉಡುಪಿ: ಘನ ಮೋಹನ್ ಸಿ.ಲಾಝರಸ್ ನೇತೃತ್ವದಲ್ಲಿ ಮಾ. 20ರಿಂದ 22ರವರೆಗೆ ಉಡುಪಿಯ ಮಿಷನ್ ಕಾಂಪೌಂಡಿನಲ್ಲಿ ಆಯೋಜಿಸಿರುವ 'ಸಮಾಧಾನ ಮಹೋತ್ಸವ' ಕಾರ್ಯಕ್ರಮ ನಡೆಸಲು ಹೈಕೋರ್ಟ್ ಅನುಮತಿ ನೀಡಿದೆ ಎಂದು ಭಾರತೀಯ ಕ್ರೈಸ್ತ ಒಕ್ಕೂಟ ಇದರ ರಾಜ್ಯಾಧ್ಯಕ್ಷ ಪ್ರಶಾಂತ್ ಜತ್ತನ್ನ ತಿಳಿಸಿದ್ದಾರೆ. ಮೂರು ದಿನಗಳ ಸಮಾಧಾನ ಮಹೋತ್ಸವ ಕಾರ್ಯಕ್ರಮವನ್ನು ಫೆಲೋಶಿಪ್ ಓಫ್ ಉಡುಪಿ ಚರ್ಚಸ್ ಇದರ ವತಿಯಿಂದ ಆಯೋಜಿಸಲು ನಿರ್ಧರಿಸಲಾಗಿದ್ದು, ಸುಮಾರು ಐದಾರು ತಿಂಗಳುಗಳಿಂದ ಇದಕ್ಕಾಗಿ ಸಂಪೂರ್ಣ ತಯಾರಿಯನ್ನು ಕೂಡ ನಡೆಸಲಾಗಿದೆ. ಇದರಲ್ಲಿ ಮುಖ್ಯ ಪ್ರವಚನಕಾರರಾಗಿ ಘನ ಮೋಹನ್ ಸಿ.ಲಾಝರಸ್ ಅವರು ಆಗಮಿಸಲಿದ್ದಾರೆ. ಅವರು ಉಡುಪಿಗೆ ಈ ಹಿಂದೆ ಕೂಡ ಎರಡು ಬಾರಿ ಪ್ರವಚನಕಾರರಾಗಿ ಆಗಮಿಸಿದ್ದಾರೆ. ಕ್ರೈಸ್ತ ಬಾಂಧವರಿಗೆ ಪ್ರಸ್ತುತ ತಪಸ್ಸು ಕಾಲವಾಗಿದ್ದು ಈ ಸಂದರ್ಭದಲ್ಲಿ ಬಹಳಷ್ಟು ಭಕ್ತಿ ಸಂಜೀವನ ಕೂಟಗಳನ್ನು ಆಯೋಜಿಸಲಾಗುತ್ತದೆ. ಅದೇ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದು ಅಧಿಕಾರಿಗಳಿಗೆ ಕೂಡ 20 ದಿನಗಳ ಮೊದಲೇ ಮಾಹಿತಿ ನೀಡಲಾಗಿತ್ತು. ಕಾರ್ಯಕ್ರಮಕ್ಕೆ ಈಗಾಗಲೇ ಪೂರ್ಣ ತಯಾರಿ ಆಗಿದ್ದು ಯಾವುದೇ ರೀತಿಯ ಸಮಸ್ಯೆ ಆಗಬಾರದು ಎಂಬ ನಿಟ್ಟಿನಲ್ಲಿ ಹೈಕೋರ್ಟ್ ಮೊರೆ ಹೋಗಲಾಗಿತ್ತು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ರಾಮಚಂದ್ರ ಶೆಟ್ಟಿ, ಬೆಜಕಳ, ಪರಾಡಿ ಮನೆ, ನಿಟ್ಟೆ, ಕಾರ್ಕಳ (ತಾ).
2. ಲಕ್ಷ್ಮಿ ನಾರಾಯಣ ಆಳ್ವ, 'ಶಾಂಭವಿ', ನಡ್ವಾಲು, ವೀರಕಂಭ, ವಿಟ್ಲ, ಬಂಟ್ವಾಳ (ತಾ).
3. ತಾರಾನಾಥ ಶೆಟ್ಟಿ, ಹೊಸವಕ್ಲು ಮನೆ, ಕಿಲೆಂಜೂರು, ನಡುಗೋಡು, ಮುಲ್ಕಿ.
4. ಮೂಡುಶೆಡ್ಡೆ ಹತ್ತು ಸಮಸ್ತರು, ಶಾಲಾ ಪದವು, ಶ್ರೀ ಶನೀಶ್ವರ ಕಟ್ಟೆ ಬಳಿ.
5. ಮೂಡುಪೆರಾರ ಮುಂಡೇವು ಹತ್ತು ಸಮಸ್ತರು ವಯಾ ಗಂಜಿಮಠ.
6. ಜಗನ್ನಾಥ್, 'ಕಲ್ಯಾಣಿ', ಕಲ್ಲತ್ತ ಪಡ್ಪು, ಜಪ್ಪು, ಬಂಟರ ಸಂಘದ ಬಳಿ, ಮಂಗಳೂರು (ತಾ).
7. ಗಾಯತ್ರಿ ಮಹಾಬಲ ದೇವಾಡಿಗ, 'ಶ್ರೀ ದೇವಿ ಕೃಪಾ', 5ನೇ ಬ್ಲಾಕ್, ಕೃಷ್ಣಾಪುರ.

ಶ್ರೀ ಧರ್ಮಸ್ಥಳ ಮೇಳ
ತೀರ್ಥಹಳ್ಳಿ ಬಾಳೆಬೈಲಿನಲ್ಲಿ
ಶ್ರೀ ಕೆ. ವಿಠಲ ರಾಯ ಮಲ್ಯ, ರವಿ ಗಾರ್ಮೆಂಟ್ಸ್, ರಥಬೀದಿ, ತೀರ್ಥಹಳ್ಳಿ

ಶ್ರೀ ಸಾಲಿಗ್ರಾಮ ಮೇಳ
ಕುಂಜಾರುಗಿರಿಯಲ್ಲಿ- ಷಣ್ಮುಖಪ್ರಿಯ

ಶ್ರೀ ಹನುಮಗಿರಿ ಮೇಳ
ಬೆಂಗಳೂರಿನಲ್ಲಿ

ಶ್ರೀ ಪೆರ್ಡೂರು ಮೇಳ
ಚಾರ-ಕಾರಾಡಿಯಲ್ಲಿ- ಚದುರಂಗ

ಶ್ರೀ ಪಾವಂಜೆ ಮೇಳ
ರಾಜೀವನಗರ ಶಿಬರೂರು ಅಂಗನವಾಡಿ ಬಳಿಯ ಮೈದಾನದಲ್ಲಿ
ಸಂಪೂರ್ಣ ಶ್ರೀ ಶನೀಶ್ವರ ಮಹಾತ್ಮೆ



ಬಂಟ್ವಾಳ: ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ವಿಟ್ಲ ವಲಯದ ಪೆರುವಾಯಿ ಫಾತಿಮಾ ಮಾತೆಯ ದೇವಾಲಯದ ಸಭಾಭವನದಲ್ಲಿ ವಿಟ್ಲ ವಲಯ ಸ್ತ್ರೀ ಸಂಘಟನೆಯ ಕಾರ್ಯಕ್ರಮವು ನಡೆಸಲಾಯಿತು. ವಿಟ್ಲ ವಲಯ ಧರ್ಮಗುರುಗಳಾದ ಫಾ.ಐವನ್ ಮೈಕಲ್ ರೊಡ್ರಿಗಸ್,ಶಂಬೂರ್ ಚರ್ಚ್ ಧರ್ಮಗುರುಗಳಾದ ಫಾ.ಸಂತೋಷ್ ಡಿ'ಸೋಜಾ,ದೇಲಂತಬೆಟ್ಟು ಚರ್ಚ್ ಧರ್ಮಗುರುಗಳಾದ ಫಾ.ರಿಚಾರ್ಡ್ ಡಿ'ಸೋಜಾ, ಪೆರುವಾಯಿ ಚರ್ಚ್ ಧರ್ಮಗುರುಗಳಾದ ಫಾ. ಸೈಮಾನ್ ಡಿ'ಸೋಜಾ ಮತ್ತು ಸಾಲೆತ್ತೂರು ಚರ್ಚ್ ಧರ್ಮಗುರುಗಳಾದ ಫಾ.ಮನೋಜ್ ಫುರ್ಟಾಡೊ ಇವರು ಮಹಿಳೆಯರಿಗಾಗಿ ಪವಿತ್ರ ಬಲಿಪೂಜೆ ಸಮರ್ಪಿಸಿದರು.

ಅಪ್ರಾಪ್ತ ಬಾಲಕಿ ಜೊತೆ ಅನುಚಿತ ವರ್ತನೆ: ಆರೋಪಿ ಆಟೋ ಚಾಲಕ ಪೊಲೀಸ್ ವಶ

ಮಡಿಕೇರಿ: ಅಪ್ರಾಪ್ತ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ರಿಕ್ಷಾ ಚಾಲಕನನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು ಸಿದ್ದಾಪುರದ ಪಾಲಿಬೆಟ್ಟ ರಸ್ತೆಯಲ್ಲಿ ವಾಸವಿರುವ ಮೊಹಮ್ಮದ್ ಎಂಬವರ ಮಗ ಅನ್ಸಾರ್ (34) ಎಂದು ಗುರುತಿಸಲಾಗಿದೆ.

ಸ್ಪೆಷಲ್ ಕ್ಲಾಸ್‌ಗೆ ತೆರಳಲು ನಿಂತಿದ್ದಳು

ಯುಗಾದಿ ಹಬ್ಬದ ಹಿನ್ನಲೆಯಲ್ಲಿ ಶಾಲೆಗೆ ರಜೆ ಇದ್ದ ಕಾರಣ ಬಾಲಕಿಯು ಸ್ಪೆಷಲ್ ಕ್ಲಾಸ್‌ಗೆ ತೆರಳಲೆಂದು ನೆಲ್ಯಹುದಿಕೇರಿಯಲ್ಲಿ ನಿಂತಿದ್ದಳೆನ್ನಲಾಗಿದೆ. ಈ ಸಂದರ್ಭ ಅಲ್ಲಿಗೆ ಬಂದ ಆಟೋ ಚಾಲಕ ತಾನು ಶಾಲೆ ಕಡೆಗೆ ತೆರಳುವುದಾಗಿ ಹೇಳಿದ ಮೇರೆಗೆ ಬಾಲಕಿ ಆಟೋ ಹತ್ತಿದ್ದಾಳೆ. ಸಿದ್ದಾಪುರದಲ್ಲಿರುವ ತನ್ನ ಶಾಲೆ ತಲುಪುತ್ತಿದ್ದಂತೆ ಆಟೋ ನಿಲ್ಲಿಸುವಂತೆ ಚಾಲಕನಿಗೆ ಹೇಳಿದರೂ, ಆತ ಅಲ್ಲಿ ನಿಲ್ಲಿಸದೆ ಅಮ್ಮತ್ತಿ ಕಡೆಗೆ ವೇಗವಾಗಿ ಆಟೋ ಚಲಾಯಿಸಿ ಅಲ್ಲಿಂದ ಪಾಲಿಬೆಟ್ಟ ಮಾರ್ಗದಲ್ಲಿ ಕರೆದೊಯ್ದು, ನಿರ್ಜನ ಪ್ರದೇಶದಲ್ಲಿ ಆಟೋ ನಿಲ್ಲಿಸಿ ಆಕೆಯೊಂದಿಗೆ ಅಸಭ್ಯವಾಗಿ ವರ್ತಿಸಿ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ.



ಪೋಷಕರಲ್ಲಿ ಅಳಲು ತೋಡಿಕೊಂಡ ಬಾಲಕಿ

ಆಟೋ ಚಾಲಕ ಅಸಭ್ಯವಾಗಿ ವರ್ತಿಸುವ ಸಂದರ್ಭ ಬಾಲಕಿ ಕಿರುಚಿದ್ದು, ಹೆದರಿದ ಚಾಲಕ ಮತ್ತೆ ಸಿದ್ದಾಪುರಕ್ಕೆ ಕರೆತಂದು ಬಿಟ್ಟಿದ್ದಾನೆ ಎಂದು ಬಾಲಕಿ ತನ್ನ ಪೋಷಕರ ಬಳಿ ಅಳಲು ತೋಡಿಕೊಂಡಿದ್ದಾಳೆ. ಈ ಸಂಬಂಧ ಬಾಲಕಿಯ ಪೋಷಕರು ನೀಡಿದ ದೂರಿನನ್ವಯ ಸಿದ್ದಾಪುರ ಪೊಲೀಸರು ಪೋಕ್ಸೋ ಕಾಯ್ದೆ ಹಾಗೂ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಆರೋಪಿ ಯನ್ನು ಬಂಧಿಸಿ, ಆಟೋ ವಶಕ್ಕೆ ಪಡೆದುಕೊಂಡಿದ್ದಾರೆ.

ಮಂತ್ರಾಲಯ ಗುರುರಾಯರ ಮಠದ ಹೆಸರಿನಲ್ಲಿ ನೆರವು ಆಮಿಷ


ವಂಚನೆಗೆ ಹೊಸ ಮುಖ!

ಉಪ್ಪಿನಂಗಡಿ: ಆರೋಗ್ಯ ಸಂಬಂಧಿ ಸಂಕಷ್ಟದಲ್ಲಿದ್ದ ವ್ಯಕ್ತಿಗೆ ಆರ್ಥಿಕ ಸಹಾಯ ಬಯಸಿ ವರದಿ ಪ್ರಕಟವಾದರೆ, ವರದಿಯಲ್ಲಿ ಲಭಿಸಿದ ಸಂಪರ್ಕ ಸಂಖ್ಯೆಯನ್ನು ಬಳಸಿ ಮಂತ್ರಾಲಯದ ಶ್ರೀ ಗುರುರಾಯರ ಮಠದ ಹೆಸರನ್ನು ದುರ್ಬಳಕೆ ಮಾಡಿಕೊಂಡು ವಂಚಿಸಲು ಯತ್ನಿಸಿದ ಘಟನೆಯೊಂದು ವರದಿಯಾಗಿದೆ.

ಏನಿದು ಪ್ರಕರಣ?

ಗೋಳಿತೊಟ್ಟು ಗ್ರಾಮದ ಸುಲ್ತಾಜೆ ಮನೆ ನಿವಾಸಿ ಪ್ರಸಾದ್ ಕೆ.ಪಿ. ಅವರು ಪ್ರಸಕ್ತ ಆರೋಗ್ಯ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿದ್ದು, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು. ಅವರ ಸಮಸ್ಯೆಯನ್ನು ಮುಂದಿರಿಸಿ ಸಹೃದಯಿ ಬಂಧುಗಳ ಆರ್ಥಿಕ ಸಹಕಾರವನ್ನು ಅಪೇಕ್ಷಿಸಿ ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಮನವಿ ಮಾಡಲಾಗಿತ್ತು. ಈ ವೇಳೆ ನೀಡಲಾದ ಪ್ರಸಾದ್ ಅವರ ಪತ್ನಿಯ ಮೊಬೈಲ್ ಸಂಖ್ಯೆಯನ್ನು ಬಳಸಿ ಶುಕ್ರವಾರದಂದು ಅವರಿಗೆಫೋನ್ ಕರೆಬಂದಿದ್ದು, ಕರೆಯಲ್ಲಿ ತಾವು ಮಂತ್ರಾಲಯದ ಶ್ರೀ ರಾಯರ ಮಠದಿಂದ ಮಾತನಾಡುತ್ತಿದ್ದೇವೆ, ನಿಮ್ಮ ಸಮಸ್ಯೆಯ ಬಗ್ಗೆ ತಿಳಿದುಕೊಂಡೆವು. ಮಠದಿಂದ ನಿಮಗೆ ರೂ.3 ಲಕ್ಷ ಆರ್ಥಿಕ ನೆರವು ನೀಡುತ್ತೇವೆ. ಆದರೆ, ಸರಕಾರಿ ನಿಯಮದಂತೆ ಶೇ.10ರಷ್ಟು ತೆರಿಗೆ ಪಾವತಿಸಬೇಕಾಗಿರುವುದರಿಂದ ನೀವು ರೂ.30 ಸಾವಿರ ಮೊತ್ತವನ್ನು ಮೊದಲಾಗಿ ನಮಗೆ ಪಾವತಿಸಬೇಕಾಗುತ್ತದೆ ಎಂದು ತಿಳಿಸಲಾಯಿತು.

ಮಠಕ್ಕೆ ಯಾವುದೇ ವಿದ್ಯುಕ್ತ ಮನವಿ ಸಲ್ಲಿಸದೆ ರೂ.3 ಲಕ್ಷದಷ್ಟು ಮೊತ್ತವನ್ನು ಪಾವತಿ ಮಾಡುವ ವ್ಯವಸ್ಥೆಯ ಬಗ್ಗೆ ಸಂಶಯಿತಳಾದ ಆಕೆ ಈ ವಿಚಾರವನ್ನು ತಕ್ಷಣವೇ ಮಾಧ್ಯಮದ ಪ್ರತಿನಿಧಿಗಳ ಗಮನಕ್ಕೆ ತಂದರು. ಮಾಧ್ಯಮದ ಮಂದಿ ನೀಡಲಾದ ಮೊಬೈಲ್ ಸಂಖ್ಯೆಗೆ ಕರೆ ಮಾಡಿದಾಗಲೂ ತಾನು ಶ್ರೀ ಮಠದಿಂದ ಮಾತನಾಡುತ್ತಿದ್ದೇನೆಂದೂ, ನಾವು ಹಣ ಪಾವತಿಸಿದ ಬಳಿಕ ಕೆಲವರು ತೆರಿಗೆ ಹಣವನ್ನು ನಮಗೆ ವಾಪಾಸು ಕಳುಹಿಸದ ಕಾರಣಕ್ಕೆ ಮುಂಗಡ ಹಣವನ್ನು ನಾವು ಬಯಸಿರುವುದಾಗಿ ತಿಳಿಸಿರುತ್ತಾನೆ.



ಗಮನಹರಿಸಬೇಕಿದೆ ಪೊಲೀಸ್ ಇಲಾಖೆ

ಪ್ರಖ್ಯಾತ ಧಾರ್ಮಿಕ ಕ್ಷೇತ್ರದ ಹೆಸರನ್ನು ದುರ್ಬಳಕೆ ಮಾಡಿಕೊಂಡು, ಸಾಮಾಜಿಕ ಜಾಲತಾಣಗಳಲ್ಲಿ ಅವರ ಸಂಪರ್ಕ ಸಂಖ್ಯೆಯನ್ನು ಧಾರ್ಮಿಕ ಕ್ಷೇತ್ರದ ಸಂಖ್ಯೆಯಂತೆ ಬಿಂಬಿಸಿ, ಆರ್ಥಿಕ ಸಹಕಾರದ ನೆಪದಲ್ಲಿ ಸಂಕಷ್ಟದಲ್ಲಿರುವ ಮಂದಿಯನ್ನು ವಂಚಿಸಲು ಯತ್ನಿಸುವ ದುರುಳರನ್ನು ಪತ್ತೆ ಹಚ್ಚಿ ಕಾನೂನು ಕ್ರಮಕ್ಕೆ ಒಳಪಡಿಸುವ ಬಗ್ಗೆ ಪೊಲೀಸ್ ಇಲಾಖೆ ಗಮನ ಹರಿಸಬೇಕಾಗಿದೆ.

ಈ ರೀತಿ ವ್ಯವಸ್ಥೆ ಇಲ್ಲ ಎಂದ ಮಠ

ಸಂಶಯಿತರಾದ ಮಾಧ್ಯಮದ ಮಂದಿ ಈ ವಿಚಾರದ ಬಗ್ಗೆ ಪೊಲೀಸ್ ಅಧಿಕಾರಿಗಳಿಗೆ ಹಾಗೂ ಮಂತ್ರಾಲಯದ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಿ ಟ್ರೂ ಕಾಲರ್‌ನಲ್ಲಿ ಮೊಬೈಲ್ ಸಂಖ್ಯೆಯನ್ನು ಪರಿಶೀಲಿಸಿದಾಗ ಸದ್ರಿ ಮೊಬೈಲ್ ಸಂಖ್ಯೆ ಸಾಯೀದಾ ತಸ್ಲೀಮ್ ಎಂಬಾಕೆ ಹೆಸರಿನಲ್ಲಿರುವುದು ಕಂಡು ಬಂದಿದೆ. ಮಂತ್ರಾಲಯದ ಅಧಿಕಾರಿಗಳು ಈ ಮೊಬೈಲ್ ಸಂಖ್ಯೆಯಾಗಲಿ, ಈ ರೀತಿಯ ಹಣ ಪಾವತಿಸುವ ವ್ಯವಸ್ಥೆಯಾಗಲಿ ನಮ್ಮಲ್ಲಿ ಇರುವುದಿಲ್ಲವೆಂದು ತಿಳಿಸಿದ್ದು ಸಾರ್ವಜನಿಕರು ಎಚ್ಚರಿಕೆ ವಹಿಸಬೇಕೆಂದು ತಿಳಿಸಿದ್ದಾರೆ.

ತೊಡಿಕಾನ ದೇಗುಲ ಡಾಕ್ಯುಮೆಂಟರಿ ಸಿದ್ಧ



ಸುಳ್ಯ: ಪಶ್ಚಿಮ ಘಟ್ಟಗಳ ಪರ್ವತ, ಮಧ್ಯದಲ್ಲಿ ಹರಡಿ ಕೊಂಡಿರುವ ನದಿಗಳು, ಜನಪದ ಸಂಸ್ಕೃತಿಯ ವೈವಿಧ್ಯತೆಯನ್ನು ಒಳಗೊಂಡಿರುವ, ಅರಣ್ಯಗಳ ನಡುವೆ ಶತಮಾನಗಳಿಂದ ಭಕ್ತಿ ಮತ್ತು ನಂಬಿಕೆಯನ್ನು ಹೊತ್ತಿರುವ ಒಂದು ಸಣ್ಣ ಗ್ರಾಮ ತೊಡಿಕಾನದಲ್ಲಿರುವ ಪುರಾತನ ಪವಿತ್ರ ಸ್ಥಳ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಕುರಿತ ಡಾಕ್ಯುಮೆಂಟರಿ ಬಿಡುಗಡೆ ಶುಕ್ರವಾರ ಪ್ರೆಸ್ ಕ್ಲಬ್‌ನಲ್ಲಿ ನಡೆಯಿತು.

ಭಾರದ್ವಾಜ್ ಶುಭ ಹಾರೈಕೆ

ದೇಗುಲದ ಕುರಿತ ಮಾಹಿತಿಗಳನ್ನು ಹೊತ್ತ ವೀಡಿಯೋ ಚಿತ್ರೀಕರಣದ ಡಾಕ್ಯುಮೆಂಟರಿಯನ್ನು ದೃಷ್ಟಿ ಮೀಡಿಯಾ ನಿರ್ಮಿಸಿದ್ದು ಡಾಕ್ಯುಮೆಂಟರಿಯನ್ನು ಡಿಜಿಟಲ್ ತಾಣಗಳಿಗೆ ತೂಗು ಸೇತುವೆಗಳ ಸರದಾರ ಗಿರೀಶ್ ಭಾರದ್ವಾಜ್ ನೆರವೇರಿಸಿ ಶುಭ ಹಾರೈಸಿದರು.

ವೇದಿಕೆಯಲ್ಲಿ ನಿರ್ದೇಶಕ ಸಂತೋಷ್ ಕೊಡಂಕೇರಿ, ದೃಷ್ಟಿ ಮೀಡಿಯಾ ಅಧ್ಯಕ್ಷ ಬಾಲಕೃಷ್ಣ ಭಟ್ ಕೊಡಂಕೇರಿ, ಸುಧಾಕರ ರೈ, ಡಾ. ಪ್ರಭಾಕರ ಶಿಶಿಲ, ದೇಗುಲ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಕೇಶವ ಕೊಳಲುಮೂಲೆ ಮತ್ತಿತರರು ಉಪಸ್ಥಿತರಿದ್ದರು.

ಬಿ.ಸಿ.ರೋಡ್, ಬಡ್ಡಕಟ್ಟೆಯಲ್ಲಿ ಟ್ರಾಫಿಕ್ ದಟ್ಟಣೆ

ಸಿಬ್ಬಂದಿ ನೇಮಕಕ್ಕೆ ಮನವಿ ಸಲ್ಲಿಕೆ

ಬಂಟ್ವಾಳ: ತಾಲೂಕಿನ ಹೃದಯ ಭಾಗ ಬಿ.ಸಿ.ರೋಡು ಹಾಗೂ ಬಂಟ್ವಾಳ ಬಡ್ಡಕಟ್ಟೆಯಲ್ಲಿ ಟ್ರಾಫಿಕ್ ದಟ್ಟಣೆಯನ್ನು ನಿರ್ವಹಿಸಲು ಸಂಚಾರಿ ಪೊಲೀಸ್ ಸಿಬ್ಬಂದಿಯನ್ನು ನಿಯುಕ್ತಿಗೊಳಿಸುವಂತೆ ಆಗ್ರಹಿಸಿ ರಿಕ್ಷಾ ಚಾಲಕ ಮತ್ತು ಮಾಲಕರ ಒಕ್ಕೂಟದ ಅಧ್ಯಕ್ಷ ವಿಶ್ವನಾಥ್ ಚಂಡ್ತಿಮಾರ್ ರವರ ನೇತೃತ್ವದ ರಿಕ್ಷಾ ಚಾಲಕರ ನಿಯೋಗ ಬಂಟ್ವಾಳ ಉಪವಿಭಾಗದ ಸಹಾಯಕ ಪೊಲೀಸ್ ಅಧೀಕ್ಷಕರಾದ ಯಶುಕುಮಾರ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದೆ.

ಮಂಗಳೂರು – ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಬಿ.ಸಿ.ರೋಡಿನ ಖಾಸಗಿ ಬಸ್ಸು ನಿಲ್ದಾಣದ ಮುಂಭಾಗದಲ್ಲಿ ಹಾಗೂ ಮಂಗಳೂರು ಕಡೆಗೆ ಹೋಗುವ ಸರ್ವಿಸ್ ರಸ್ತೆಯಲ್ಲಿ ಟೆಲಿಕಾಂ ಕಚೇರಿ ಬಳಿ ಬಸ್ಸು ನಿಲುಗಡೆಯಾಗುವ ಪ್ರದೇಶದಲ್ಲಿ ಬಸ್ಸು ಹಾಗೂ ರಿಕ್ಷಾಗಳನ್ನು ನಿಲುಗಡೆಗೊಳಿಸಲಾಗುತ್ತಿದ್ದು, ಇಲ್ಲಿ ಜನ ಸಂದಣಿಯಿಂದಾಗಿಯು ಪ್ರತಿನಿತ್ಯವು ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಕೆಲವೊಂದು ದಿನ ತುರ್ತು ಸಂದರ್ಭದಲ್ಲಿ ಆಂಬ್ಯುಲೆನ್ಸ್ ಸಂಚಾರದ ವೇಳೆಯು ತೊಂದರೆಯಾಗುತ್ತಿದೆಯಲ್ಲದೆ ಖಾಸಗಿ ಬಸ್ ನಿಲ್ದಾಣಕ್ಕಾಗಿ ರಸ್ತೆ ದಾಟುವ ವೇಳೆ ಮಹಿಳೆಯರಿಗೆ ಹಾಗೂ ಎಳೆ ಮಕ್ಕಳಿಗೆ, ಶಾಲಾ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತದೆ. ಹಾಗಾಗಿ ಇಲ್ಲಿ ಟ್ರಾಫಿಕ್ ನಿರ್ವಹಣೆ ಮಾಡಲು ಒರ್ವ ಟ್ರಾಫಿಕ್ ಎಸ್ ಐ ಹಾಗೂ ಪೊಲೀಸ್ ಸಿಬ್ಬಂದಿಯ್ನು ನಿಯುಕ್ತಿಗೊಳಿಸುವ ಅವಶ್ಯಕತೆ ಇರುವುದು ಎಂದು ಮನವಿಯಲ್ಲಿ ವಿವರಿಸಲಾಗಿದೆ.



ಅದೇರೀತಿ ಬಂಟ್ವಾಳ ಮಾರ್ಕೆಟ್ ರಸ್ತೆ- ಬಡ್ಡಕಟ್ಟೆಯಲ್ಲು ವಾಹನ ದಟ್ಟಣೆ ಇರುವುದರಿಂದ ಈ ಪ್ರದೇಶದಲ್ಲಿ ಕೂಡಾ ಒರ್ವ ಟ್ರಾಫಿಕ್ ಪೊಲೀಸ್ ಸಿಬ್ಬಂದಿಯನ್ನು ನಿಯುಕ್ತಿಗೊಳಿಸಿದಲ್ಲಿ ಸಾರ್ವಜನಿಕವಾಗಿ ಅನುಕೂಲವಾಗಲಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.


ಬಡ್ಡಕಟ್ಟೆಯಲ್ಲಿ ಮುಚ್ಚಿದ ಕೊಠಡಿ

ಬಂಟ್ವಾಳ ಮಾರ್ಕೆಟ್ ರಸ್ತೆಯಲ್ಲಿ ದಿನನಿತ್ಯ ಉಂಟಾಗುತ್ತಿದ್ದ ಟ್ರಾಫಿಕ್ ಜಾಂ ಹಿನ್ನಲೆಯಲ್ಲಿ ಬಂಟ್ವಾಳ ಉಪವಿಭಾಗದ ಡಿವೈಎಸ್ಪಿ ವೆಲೆಂಟಿನ್ ಡಿಸೋಜ ಅವರು ಇದ್ದ ಕಾಲ್ಲಿ ಚಾಲಕ, ಮಾಲಕರು, ಸಾರ್ವಜನಿಕರ ಸಭೆ ಕರೆದು ಟ್ರಾಫಿಕ್ ಸಮಸ್ಯೆ ಬಗ್ಗೆ ಸುದೀರ್ಘ ಚರ್ಚೆ ನಡೆದಿತ್ತು. ಈ ಸಂದರ್ಭ ದಲ್ಲಿ ಟ್ರಾಫಿಕ್ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಬಂಟ್ವಾಳ ರಥಬೀದಿ ಹಾಗೂ ಬಡ್ಡಕಟ್ಟೆ ಭಾಗದಲ್ಲಿ ಸಂಚಾರಿ ಸಿಬ್ಬಂದಿಗಳನ್ನು ನಿಯುಕ್ತಿಗೊಳಿಸಿ ಅವರಿಗೆ ಒಂದಷ್ಟು ಹೊತ್ತು ವಿಶ್ರಾಂತಿಗೆ ಬಡ್ಡಕಟ್ಟೆ ವಾಜಪೇಯಿ ಸಂಕೀರ್ಣದಲ್ಲಿ ಕೊಠಡಿಯೊಂದನ್ನು ಕೊಡಿಸಲಾಗಿತ್ತು.

ಡಿವೈಎಸ್ಪಿ ವೆಲೆಂಟಿನ್ ಅವರು ಬಂಟ್ವಾಳ ದಲ್ಲಿ ಇದ್ದಷ್ಟು ಸಮಯ ಸಂಕೀರ್ಣದಲ್ಲಿ ಕೊಠಡಿ ತೆರೆದುಕೊಂಡಿತ್ತು. ಇಬ್ಬರು ಸಂಚಾರಿ ಸಿಬ್ಬಂದಿಗಳು ಕೂಡ ಕರ್ತವ್ಯದಲ್ಲಿದ್ದರು. ಡಿವೈಎಸ್ಪಿ ವೆಲೆಂಟಿನ್ ಅವರು ಬಂಟ್ವಾಳದಿಂದ ವರ್ಗಾವಣೆಗೊಂಡು ತೆರಳಿದ ಬೆನ್ನಲ್ಲೇ ವಾಜಪೇಯಿ ಸಂಕೀರ್ಣದ ಕೊಠಡಿ ಬಾಗಿಲು ತೆರಯಲಿಲ್ಲ, ಪ್ರತಿನಿತ್ಯ ಕರ್ತವ್ಯಕ್ಕೆ ಬರುತ್ತಿದ್ದ ಸಂಚಾರಿ ಸಿಬ್ಬಂದಿಗಳು ಇತ್ತ ತಲೆ ಹಾಕಿಯು ಮಲಗಲಿಲ್ಲ, ಈಗ ದಿನನಿತ್ಯ ಮಾರ್ಕೇಟ್ ರಸ್ತೆಯುದ್ದಕ್ಕೆ ಟ್ರಾಫಿಕ್ ಜಾಮ್ ಆದರೂ ಸಂಚಾರಿ ಪೊಲೀಸರು ಬರುತ್ತಿಲ್ಲ, ತಮಗೆ ಮನಸ್ಸಾದಾಗ ಬಂದು ಒಂದು ಸಂಚಾರಿ ಉಲ್ಲಂಘನೆಯ ವಾಹನಗಳಿಗೆ ಕೇಸ್ ಹಾಕುತ್ತಾರಷ್ಟೇ!

ಕೊಡಂಗಲ್ಲೂರ್ ಶ್ರೀ ಕುರಂಭ ದೇವಸ್ಥಾನದಲ್ಲಿ ಸಂಭ್ರಮ

ಬೆಳ್ಳಾಟಂ, ಹರಕೆ ಸಮರ್ಪಣೆ





ಸುಂಟಿಕೊಪ್ಪ: ಕೊಡಂಗಲ್ಲೂರ್ ಶ್ರೀ ಕುರಂಭ (ಭಗವತಿ) ದೇವಸ್ಥಾನದಲ್ಲಿ ಗುರುವಾರ ವಿಶೇಷ ವಾರ್ಷಿಕ ಮಹಾಪೂಜೆಯೊಂದಿಗೆ ಆರಂಭಗೊಂಡು ರಾತ್ರಿ ಬೆಳ್ಳಾಟಂ ಹಾಗೂ ಶುಕ್ರವಾರ ಬೆಳಿಗ್ಗೆ ಹರಕೆ ಅರ್ಪಣೆಗಳನ್ನು ಭಕ್ತಾದಿಗಳು ಶ್ರದ್ಧಾಭಕ್ತಿಯಿಂದ ಸಮರ್ಪಿಸುವುದರೊಂದಿಗೆ ದೇವಾಲಯದ ವಾರ್ಷಿಕೋತ್ಸವವು ಸಂಪನ್ನಗೊಂಡಿತು.

ಕೊಡಗಂಲ್ಲೂರ್ ಭದ್ರಕಾಳಿ ಶ್ರೀ ಕುರುಂಭ (ಭಗವತಿ) ದೇವಸ್ಥಾನದ 60ನೇ ವಾರ್ಷಿಕೋತ್ಸವದ ಅಂಗವಾಗಿ ದೇವಾಲಯವನ್ನು ಕೆಸರಿ ಬಂಟಿಗ್ಸ್, ಬಣ್ಣ ಬಣ್ಣದ ಹೂ ವಿದ್ಯುತ್ ದೀಪ ಗಳಿಂದ ಸಿಂಗಾರಗೊಳಿಸಲಾಗಿತ್ತು. ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ನೇರಿದ್ದ ವಾರ್ಷಿಕ ಮಹೋತ್ಸವದ ಅಂಗವಾಗಿ ಗುರುವಾದಂದು ಪೂರ್ವಾಹ್ನ 6 ಗಂ.ಗಣಪತಿ ಹೋಮ ನಡೆಯಲಿದ್ದು, ಸಂಜೆ 4. ಗಂ ಶ್ರೀ. ಮುತ್ತಪ್ಪ ದೇವರ ಮಲೆ ಇಳಿಸುವುದು, ಶ್ರೀ.ಗಣಪತಿ ಮತ್ತು ಸುಬ್ರಮಣ್ಯ ಸ್ವಾಮಿ ದೇವರ ಪೂಜೆ, ಮುತ್ತಪ್ಪ ದೇವರ ಬೆಳ್ಳಾಟ ಮತ್ತು ಪೈಗುಂತಿ, 7.30 ಗಂ. ಶ್ರೀ.ಚಾಮುಂಡೇಶ್ವರಿ ದೇವಿ ಪೂಜೆ, ಗುಳಿಗನ ಪೂಜೆ, 8.15 ಗಂ.ಶ್ರೀ. ಭದ್ರಕಾಳಿ ದೇವಿಗೆ ಅರ್ಚನೆ, ನೈವೇಧ್ಯ ಪೂಜೆ, 8.45 ಗಂ ಶ್ರೀ.ದೇವಿ ದರ್ಶನ, 9 ಗಂ.ತಲಪುರಿ ಮೆರವಣಿಗೆ,9.30 ಗಂಟೆಗೆ ವಸೂರಿ ಮಾಲೆ ದೇವರ ಬೆಳ್ಳಾಟಂ, 9.45 ಗಂ.ದೇವಿ ದರ್ಶನ ನಂತರ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಿತು.

ಶುಕ್ರವಾರ ದಂದುಬೆಳಿಗ್ಗೆ 9 ಗಂಟೆಗೆ ದೇವಿಯ ದರ್ಶನ, 10.45 ಗಂ.ದೇವಿಗೆ ಹರಕೆಯ ನಂತರ ದೇವಿಗೆ ಅರ್ಪಣೆಗಳನ್ನು ಭಕ್ತಾದಿಗಳು ನೆರವೇರಿಸಿದರು.

ಮದ್ಯಾಹ್ನ 1 ಗಂಟೆಗೆ ಮಹಾಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗನಡೆದುನೆರೆದಿದ್ದನೂರಾರು ಸಂಖ್ಯೆಯಲ್ಲಿ ನೇರೆದಿದ್ದ ಭಕ್ತರಿಗೆ 2 ದಿನಗಳ ಕಾಲ ದೇವಾಲಯದಲ್ಲಿ ಅನ್ನ ಸಂತರ್ಪಣೆಯನ್ನು ನಡೆಸಲಾಯಿತು

ಸುಂಟಿಕೊಪ್ಪ, ಶ್ರೀದೇವಿ, ಹರದೂರು, ನಾಕೂರು, ಕಂಬಿಬಾಣೆ, ಮತ್ತಿಕಾಡು, ಕೇರಳ ರಾಜ್ಯದ ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪುನೀತರಾದರು.

ದೇವಾಲಯದ ಮುಖ್ಯಸ್ಥರಾದ ಪಿ.ಆರ್. ಶಾಂತ ರಾಮಕೃಷ್ಣ ಪಿ.ಆರ್. ಸುಕುಮಾರ್, ಸುನಿಲ್ ಕುಮಾರ್ ಸೇರಿದಂತೆ ಇತರರು ಇದ್ದರು.

ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಫೊರೆನ್ಸಿಕ್ ಮೆಡಿಸಿನ್ ವಿಭಾಗದ ಸಾರಥ್ಯ

ಪೊಲೀಸ್ ಅಧಿಕಾರಿಗಳಿಗೆ ವಿಶೇಷ ಕಾರ್ಯಾಗಾರ

ಮಂಗಳೂರು: ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಫೊರೆನ್ಸಿಕ್ ಮೆಡಿಸಿನ್ ವಿಭಾಗದ ವತಿಯಿಂದ ಹಾಗೂ ಮಂಗಳೂರು ನಗರ ಪೊಲೀಸ್ ಕಮಿಶನರೇಟ್ ಸಹಭಾಗಿತ್ವದಲ್ಲಿ ಪೊಲೀಸು ಅಧಿಕಾರಿಗಳಿಗೆ ಇತ್ತೀಚೆಗೆ ಕಾಲೇಜಿನಲ್ಲಿ ವೈದ್ಯಕೀಯ– ಕಾನೂನು ಪ್ರಕರಣ ನಿರ್ವಹಣೆಯ ಬಗ್ಗೆ ಕಾರ್ಯಾಗಾರ ಆಯೋಜಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ ಮಂಗಳೂರಿನ ಸಹಾಯಕ ಪೊಲೀಸ್ ಆಯುಕ್ತ ಮಿಥುನ್ ಎಚ್.ಎನ್. ಮಾತನಾಡಿ, ಪೊಲೀಸ್ ಅಧಿಕಾರಿಗಳ ಕಾರ್ಯಕ್ಷಮತೆ ವೃದ್ಧಿಸಲು ಇಂತಹ ಕಾರ್ಯಾಗಾರ ಪೂರಕವಾಗಿದೆ ಎಂದರು.

ಮಾಹೆ ವಿವಿಯ ಮಂಗಳೂರು ಕ್ಯಾಂಪಸ್‌ನ ಸಹ ಕುಲಪತಿ ಡಾ. ದಿಲೀಪ್ ಜಿ.ನಾಯಕ್ ಮಾತನಾಡಿ, ಪೊಲೀಸರಿಗಾಗಿ ಹಮ್ಮಿಕೊಂಡ ಈ ಕಾರ್ಯಾಗಾರ ಅಪರಾಧ ಪತ್ತೆಯ ಕಾರ್ಯದಲ್ಲಿ ಅತ್ಯಂತ ಉಪಯುಕ್ತವಾದುದು ಎಂದರು.



ಅಧ್ಯಕ್ಷತೆ ವಹಿಸಿದ ಕೆಎಂಸಿ ಡೀನ್ ಡಾ. ಬಿ.ಉಣ್ಣಿಕೃಷ್ಣನ್ ಮಾತನಾಡಿ, ಕೆಎಂಸಿ ಸಂಸ್ಥೆಗೂ ಪೊಲೀಸು ಇಲಾಖೆಗೂ ಬಹಳ ದೀರ್ಘ ಕಾಲದ ಬಾಂಧವ್ಯವಿದ್ದು, ಈ ಕಾರ್ಯಾಗಾರವು ಪೊಲೀಸು ಅಧಿಕಾರಿಗಳಿಗೆ ವೈದ್ಯಕೀಯ–ಕಾನೂನು ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಸಹಕಾರಿಯಾಗಿದೆ ಎಂದರು. ಪೊಲೀಸ್ ಅಧಿಕಾರಿ ಗೀತಾ ಕುಲಕರ್ಣಿ, ಡೆಂಟಲ್ ಕಾಲೇಜಿನ ಡೀನ್ ಡಾ. ಅಶಿತಾ ಉಪ್ಪೂರ್, ಕೆಎಂಸಿಯ ಸಹಾಯಕ ಡೀನ್ ಡಾ. ಅಶ್ಫಕ್ ಮೊಹಮ್ಮದ್, ಕೆಎಂಸಿ ಫೊರೆನ್ಸಿಕ್ ಮೆಡಿಸಿನ್ ವಿಭಾಗದ ಪ್ರಾಧ್ಯಾಪಕರಾದ ಡಾ. ಪ್ರದೀಪ್ ರಸ್ತೋಗಿ, ಡಾ. ಸುಜಯ್ ವಿ.ಕೆ., ಡಾ. ಪ್ರನಪ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

» ಪೊಲೀಸ್ ಅಧಿಕಾರಿಗಳ ಕಾರ್ಯಕ್ಷಮತೆ ವೃದ್ಧಿಸಲು ಇಂತಹ ಕಾರ್ಯಾಗಾರ ಪೂರಕವಾಗಿದೆ

» ಪೊಲೀಸರಿಗಾಗಿ ಹಮ್ಮಿಕೊಂಡ ಈ ಕಾರ್ಯಾಗಾರ ಅಪರಾಧ ಪತ್ತೆಯ ಕಾರ್ಯದಲ್ಲಿ ಅತ್ಯಂತ ಉಪಯುಕ್ತ

ಮಂಗಳೂರಿನ ಕೆಎಂಸಿಯ ಫೊರೆನ್ಸಿಕ್ ವಿಭಾಗದ ಮುಖ್ಯಸ್ಥ ಡಾ. ಜಗದೀಶ್ ರಾವ್ ಪಿ.ಪಿ. ಸ್ವಾಗತಿಸಿದರು. ಫೊರೆನ್ಸಿಕ್ ವಿಭಾಗದ ಪ್ರಾಧ್ಯಾಪಕ, ಮಾಜಿ ಸಹಾಯಕ ಡೀನ್ ಡಾ. ಸುರೇಶ್ ಕುಮಾರ್ ಶೆಟ್ಟಿ ವಂದಿಸಿದರು. ಕೃಷ್ಣಯ್ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು. ಈ ಕಾರ್ಯಾಗಾರದಲ್ಲಿ ಒಟ್ಟು 107 ಪೊಲೀಸು ಅಧಿಕಾರಿಗಳು ಹಾಗೂ 3 ಮಂದಿ ಅಪರಾಧ ಪತ್ತೆ ಅಧಿಕಾರಿಗಳು ಭಾಗವಹಿಸಿದ್ದರು.

ಕೋಮು ಪ್ರಚೋದನೆಯ ಪೋಸ್ಟ್: ಯುವತಿಗೆ ಮಧ್ಯಂತರ ಜಾಮೀನು

ಬೆಳ್ತಂಗಡಿ: ಸಾಮಾಜಿಕ ಜಾಲತಾಣದಲ್ಲಿ ಕೋಮು ಪ್ರಚೋದನೆಯ ಪೋಸ್ಟ್ ಹಾಕಿದ ಪ್ರಕರಣದಲ್ಲಿ ಪೊಲೀಸರಿಂದ ಬಂಧಿತಳಾಗಿದ್ದ ಬೆಳ್ತಂಗಡಿ ತಾಲೂಕಿನ ಕರಂಬಾರು ಗ್ರಾಮದ ಯುವತಿಗೆ ಮದ್ಯಂತರ ಜಾಮೀನು ಲಭಿಸಿದ್ದು ಆಕೆ ಬಿಡುಗಡೆಯಾಗಿದ್ದಾಳೆ. ಜಾಮೀನು ಪಡೆದ ಬಳಿಕ ಆಕೆಯೊಂದಿಗಿನ ಫೊಟೋ ಹಂಚಿಕೊಂಡಿರುವ ಶಾಸಕ ಹರೀಶ್ ಪೂಂಜ ಕಾಂಗ್ರೆಸ್ ಸರಕಾರದ ತುಷ್ಟೀಕರಣ ರಾಜಕೀಯದ ವಿರುದ್ಧ ಗೆಲುವು ಲಭಿಸಿದೆ ಎಂದು ಬರೆದಿದ್ದಾರೆ

ಶಾಸಕರ ಫೇಸ್ ಬುಕ್ ಪೋಸ್ಟ್‌ನಲ್ಲಿ "ಭಯೋತ್ಪಾದನಾ ವಿರೋಧಿ ಹಿಂದೂ ಪರವಾದ ಪೋಸ್ಟ್ ಒಂದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ವಿಚಾರವಾಗಿ ಕಾಂಗ್ರೆಸ್ ಸರಕಾರ ನಮ್ಮ ಬೆಳ್ತಂಗಡಿಯ ಕರಂಬಾರು ಗ್ರಾಮದ ವಿದ್ಯಾ ಎನ್ನುವ ದಲಿತ ಹೆಣ್ಣು ಮಗಳೊಬ್ಬಳನ್ನು ಏಕಾಏಕಿ ಬಂಧಿಸಿ ತನ್ನ ತುಷ್ಟಿಕರಣ ರಾಜಕೀಯದ ಕರಾಳ ಮುಖದ ಅನಾವರಣ ನಡೆಸಿತ್ತು.

ಆದರೆ ಈ ನೆಲದ ಕಾನೂನು ಕಾಂಗ್ರೆಸ್ ಸರ್ಕಾರದ ನೀಚ ರಾಜಕೀಯಕ್ಕೆ ಎಡೆ ಮಾಡಿಕೊಡಲಿಲ್ಲ ಮಧ್ಯರಾತ್ರಿ ಒಂದು ಗಂಟೆಗೆ ಮಾನ್ಯ ನ್ಯಾಯಾಧೀಶರು ಪ್ರಕರಣದ ವಾಸ್ತವತೆಯನ್ನು ಅರಿತು ಹೆಣ್ಣು ಮಗಳಿಗೆ ಮಧ್ಯಂತರ ಜಾಮೀನು ನೀಡಿ ಕಾನೂನಿನ ರಕ್ಷಣೆಯನ್ನು ನೀಡಿದ್ದಾರೆ. ಈ ಮೂಲಕ ಈ ನೆಲದ ಕಾನೂನಿನ ಮೇಲಿನ ಭರವಸೆಯನ್ನು ಮತ್ತಷ್ಟು ಹೆಚ್ಚಿಸಿದ್ದಾರೆ.



ಕಾನೂನು ಹೋರಾಟದಲ್ಲಿ ಸಹಕರಿಸಿದ ವಕೀಲ ಮಿತ್ರರಾದ ಅಜಯ್ ಸುವರ್ಣ ಹಾಗೂ ಸಂತೋಷ್ ಶೆಟ್ಟಿ ಅವರಿಗೆ ಧನ್ಯವಾದಗಳು. ದಲಿತರನ್ನು ಟಾರ್ಗೆಟ್ ಮಾಡಿ ಬಂಧಿಸುವ ಬೆಳ್ತಂಗಡಿ ನೀಚ ಕಾಂಗ್ರೆಸ್ ನಾಯಕರು" ಎಂದು ಪೋಸ್ಟ್ ಹಂಚಿಕೊಂಡಿದ್ದಾರೆ

ನಿಧನ ಸುದ್ದಿ

ಕಮಲ ಪೂಜಾರಿ



ಹೆಬ್ರಿ : ರಾಜ್ಯದ ಶ್ರೀನಾರಾಯಣ ಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮುದ್ರಾಡಿ ಮಂಜುನಾಥ ಪೂಜಾರಿ ಅವರ ತಾಯಿ ಕಮಲ ಪೂಜಾರಿ (88) ವರ್ಷ ಅವರು ಶುಕ್ರವಾರ ರಾತ್ರಿ ಸ್ವಗೃಹದಲ್ಲಿ ನಿಧನರಾದರು. ಮಂಡಲ ಪಂಚಾಯಿತಿ ಸದಸ್ಯರಾಗಿದ್ದ ದಿವಂಗತ ಚೆಂದು ಪೂಜಾರಿಯವರ ಧರ್ಮಪತ್ನಿಯಾಗಿದ್ದ ಕಮಲ ಪೂಜಾರಿ ಮುದ್ರಾಡಿ ಗ್ರಾಮ ಪಂಚಾಯತ್ ಸದಸ್ಯೆಯಾಗಿಯೂ ಸೇವೆ ಸಲ್ಲಿಸಿದ್ದರು. ಮುದ್ರಾಡಿಯ ಪರಿಸರದಲ್ಲಿ ಕಮಲ ಪೂಜಾರಿ ಅತ್ಯಂತ ಜನಾನುರಾಗಿಯಾಗಿದ್ದರು. ಕಮಲ ಪೂಜಾರಿ ಅವರಿಗೆ ಮುದ್ರಾಡಿ ಮಂಜುನಾಥ ಪೂಜಾರಿ, ಸೂರತ್ ಉದ್ಯಮಿ ಮನೋಜ್ ಸಿ.ಪೂಜಾರಿ ಸೇರಿದಂತೆ 4 ಗಂಡು ಮಕ್ಕಳು ಮತ್ತು 4 ಮಂದಿ ಹೆಣ್ಣು ಮಕ್ಕಳಿದ್ದಾರೆ. ಮೊಮ್ಮಕ್ಕಳು ಸೇರಿ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಶಾಸಕ ಸುನಿಲ್ ಕುಮಾರ್, ಕಾರ್ಕಳ ಕಾಂಗ್ರೆಸ್ ನಾಯಕ ಉದಯ ಕುಮಾರ್ ಶೆಟ್ಟಿ, ಕಾಂಗ್ರೆಸ್ ಅಧ್ಯಕ್ಷ ಅಶೋಕ ಕುಮಾರ್ ಕೊಡವೂರು ಸೇರಿದಂತೆ ನೂರಾರು ಮಂದಿ ಅಂತಿಮ ದರ್ಶನ ಪಡೆದರು.

ಸಂತಾಪ : ಕಾಂಗ್ರೆಸ್ ನಾಯಕ ಮಾಜಿ ಮುಖ್ಯಮಂತ್ರಿ ಡಾ.ಎಂ.ವೀರಪ್ಪ ಮೊಯಿಲಿ, ಮಾಜಿ ಸಚಿವ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ ಕುಮಾರ್ ಸೊರಕೆ, ಮಾಜಿ ಸಚಿವ ಕೆ.ಜಯಪ್ರಕಾಶ ಹೆಗ್ಡೆ, ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ.ಗಫೂರ್, ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಸುಧಾಕರ ಶೆಟ್ಟಿ, ಹೆಬ್ರಿ ಎಸ್.ಆರ್.ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ನಾಗರಾಜ ಶೆಟ್ಟಿ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

ನಾಟಿ ವೈದ್ಯೆ ಸೇಸಮ್ಮ



ಪುತ್ತೂರು: ಪುಂಜಾಲಕಟ್ಟೆ ಕುಕ್ಕಳ ಗ್ರಾಮದ ಹೊಸಮನೆ ದಿ. ಉಗ್ಗಪ್ಪ ಗೌಡರ ಧರ್ಮಪತ್ನಿ ಸೇಸಮ್ಮ (84) ಮಾ. 19ರಂದು ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ನಾಟಿ ಔಷಧದ ಸೇವೆಯನ್ನು ಗ್ರಾಮೀಣ ಪರಿಸರದಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೆ ಮಾಡಿ ಜನಾನುರಾಗಿಯಾಗಿದ್ದ ಸೇಸಮ್ಮ ಅವರು ಜನಪರ ಸೇವೆ ಮಾಡುತ್ತಿದ್ದರು. ಇದಲ್ಲದೆ ಸಂಧಿ ಪಾಡ್ದನ ಮತ್ತು ಶೋಭಾನೆ ಹಾಡುಗಳ ಮೂಲಕವೂ ಅವರು ಪ್ರಸಿದ್ಧಿ ಪಡೆದಿದ್ದರು. ಇವರು ಇಬ್ಬರು ಪುತ್ರರಾದ ವಸಂತ ಗೌಡ, ಗೋಪಾಲ ಗೌಡ, ಪುತ್ರಿಯರಾದ ಜಯಂತಿ, ವಾರಿಜಾ, ವಸಂತಿ ಮತ್ತು ಕುಸುಮ ಪಾಲೆತ್ತಾಡಿ, ಅಳಿಯಂದಿರಾದ ಮುತ್ತಪ್ಪ ಗೌಡ, ಪದ್ಮನಾಭ ಗೌಡ ಮತ್ತು ಚಂದ್ರಶೇಖರ್ ಪಾಲೆತ್ತಾಡಿ, ಸೊಸೆಯಂದಿರಾದ ಪುಷ್ಪಲತಾ ಮತ್ತು ಸುಗುಣ, ಮೊಮ್ಮಕ್ಕಳು ಹಾಗೂ ಮರಿಮೊಮ್ಮಕ್ಕಳು ಸಹಿತ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ.

ಯು. ಶಾಂತಾರಾಮ ಪ್ರಭು



ಬೈಂದೂರು: ಉಪ್ಪುಂದ ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನ ಟ್ರಸ್ಟ್‌ನ ಉಪಾಧ್ಯಕ್ಷ, ಉದ್ಯಮಿ ಯು. ಶಾಂತಾರಾಮ ಪ್ರಭು (65) ಅಲ್ಪಕಾಲದ ಅನಾರೋಗ್ಯದಿಂದ ಶನಿವಾರ ನಿಧನರಾದರು. ಸತತ 25 ವರ್ಷಗಳ ಕಾಲ ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಇವರು ಪತ್ನಿ, ಪುತ್ರಿಯನ್ನು ಅಗಲಿದ್ದಾರೆ.

ಸುಕುಮಾರ



ಉಪ್ಪಳ: ಅಸೌಖ್ಯ ಬಾಧಿಸಿ ಮನೆಯಲ್ಲಿ ಚಿಕಿತ್ಸೆಯಲ್ಲಿದ್ದ ಬಸ್ ನಿರ್ವಾಹಕ ಮೃತಪಟ್ಟರು. ವರ್ಕಾಡಿ ಧರ್ಮನಗರ ನಿವಾಸಿ ಬಾಬು ಪೂಜಾರಿ ಮತ್ತು ದಿ.ಕೃಷ್ಣಮ್ಮ ದಂಪತಿಯ ಪುತ್ರ ಸುಕುಮಾರ (51) ಮೃತಪಟ್ಟವರು. ಅವರು ತಲಪಾಡಿ – ಆನೆಕಲ್ಲು, ಉಪ್ಪಳ – ಕನ್ಯಾನ – ಬಾಯಾರು ರೂಟ್‌ನಲ್ಲಿ ಬಸ್ ನಿರ್ವಾಹಕರಾಗಿದ್ದರು. ಇತ್ತೀಚೆಗೆ ಅವರಿಗೆ ಅಸೌಖ್ಯ ಬಾಧಿಸಿದ್ದು, ಇದರಿಂದ ಮನೆಯಲ್ಲಿ ಚಿಕಿತ್ಸೆಯಲ್ಲಿದ್ದರು. ಶುಕ್ರವಾರ ರಾತ್ರಿ ಸಾವು ಸಂಭವಿಸಿತು. ಮೃತರು ಪತ್ನಿ ಯಶೋಧಾ, ಪುತ್ರಿ ಶಾನ್ವಿ ಅವರನ್ನು ಅಗಲಿದ್ದಾರೆ.

ಮಂಜಕ್ಕ

ಕಡಬ: ರಾಮಕುಂಜ ಗ್ರಾಮದ ಗಾಂಧಾರಿಮಜಲು ದಿ. ಮಂಜಪ್ಪಗೌಡರ ಪತ್ನಿ ಮಂಜಕ್ಕ(79) ಅಲ್ಪಕಾಲದ ಅಸೌಖ್ಯದಿಂದ ಮಾ.19 ರಂದು ನಿಧನ ಹೊಂದಿದರು. ಮೃತರು ಪುತ್ರಿ, ಮೂವರು ಪುತ್ರರು ಹಾಗೂ ಬಂಧುಗಳನ್ನು ಅಗಲಿದ್ದಾರೆ.

ಈಶ್ವರ್ ಮೂಲ್ಯ



ಮಂಗಳೂರು: ವಿಟ್ಲ ಅಳಿಕೆ ಗ್ರಾಮದ ಮುಳಿಯ ಅಡ್ಕ ನಿವಾಸಿ ಈಶ್ವರ್ ಮೂಲ್ಯ(71) ಅವರು ಶನಿವಾರ ನಿಧನ ಹೊಂದಿದ್ದಾರೆ. ವಿಟ್ಲ ಪರಿಸರದಲ್ಲಿ ಕಳೆದ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಬಾಡಿಗೆ ಕಾರು ಚಾಲಕರಾಗಿದ್ದುಕೊಂಡಿದ್ದ ಇವರು ತಮ್ಮ ಸೌಮ್ಯ ಸ್ವಭಾವ ಮತ್ತು ವೃತ್ತಿಪರತೆಯಿಂದ ಜನಾನುರಾಗಿಯಾಗಿದ್ದರು. ಮೃತರು ಓರ್ವ ಪುತ್ರ ಮತ್ತು ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುವರ್ಗದವರನ್ನು ಅಗಲಿದ್ದಾರೆ.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್ ಡಿಎ ಅಭ್ಯರ್ಥಿ ಕೆ. ಸುರೇಂದ್ರನ್ ಅವರು ನಾಮಪತ್ರ ಸಲ್ಲಿಸುವ ಮೊದಲು ಕುಂಜತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಶ್ರೀ ದೇವರ ದರುಶನ ಪಡೆದರು.

96 ಸಾವಿರ ಮೆಟ್ರಿಕ್ ಟನ್ ಕಚ್ಚಾ ತೈಲ ಹೊತ್ತು ಮಂಗಳೂರಿಗೆ ಬಂತು ಹಡಗು

ಮಂಗಳೂರು: ಅಂತೂ ಇಂತೂ ಮಂಗಳೂರು ಬಂದರಿಗೊಂದು ಬೃಹತ್ ಹಡಗು ಬಂದಿದೆ. ಶನಿವಾರ ರಾತ್ರಿ ಕಚ್ಚಾ ತೈಲ ಹೊತ್ತು ಬಂದ ಈ ಹಡಗಿನಿಂದಾಗಿ ಕರಾವಳಿಯ ಮಂದಿ ನಿಟ್ಟುಸಿರು ಬಿಡುವಂತಾಗಿದೆ. ದೇಶದ ಇಂಧನ ಬೇಡಿಕೆ ಪೂರೈಸುವಲ್ಲಿ ಮಂಗಳೂರಿಗೆ ಬಂದ ಬೃಹತ್ ತೈಲ ನೌಕೆ ಮಹತ್ತರ ಪಾತ್ರ ವಹಿಸಲಿದೆ.



ಮಧ್ಯಪ್ರಾಚ್ಯ ದೇಶಗಳ ಯುದ್ಧದ ನಡುವೆ ರಷ್ಯಾದಿಂದ ಚೀನಾಕ್ಕೆ ಹೊರಟಿದ್ದ ಆಕ್ವಾ ಟೈಟಾನ್ ಹೆಸರಿನ ಕಚ್ಚಾ ತೈಲ ಹೊತ್ತ ಬೃಹತ್ ಹಡಗು ಮಂಗಳೂರು ಬಂದರಿಗೆ ಆಗಮಿಸಿದ್ದು, ಇದರಿಂದ ಸುಮಾರು 96 ಸಾವಿರ ಮೆಟ್ರಿಕ್ ಟನ್ ನಷ್ಟು ಕಚ್ಚಾ ತೈಲವನ್ನು ಎಂಆರ್‌ಪಿಎಲ್ ತೈಲ ಸಂಸ್ಕರಣಾ ಘಟಕಕ್ಕೆ ಅನ್ ಲೋಡ್ ಮಾಡಲಾಗುತ್ತಿದೆ. ಈ ಸರಕು ಹಡಗು ಜನವರಿ ಅಂತ್ಯದ ವೇಳೆಗೆ ರಷ್ಯಾದಲ್ಲಿ ಕಚ್ಚಾ ತೈಲವನ್ನು ಲೋಡ್ ಮಾಡಿಕೊಂಡಿತ್ತು. ಚೀನಾಕ್ಕೆ ತೆರಳುವ ಗುರಿ ಹೊಂದಿದ್ದ ಈ ಹಡಗು ಕಾರಣಾಂತರಗಳಿಂದಾಗಿ ಆಗ್ನೇಯ ಏಷ್ಯಾದ ಜಲ ಪ್ರದೇಶಕ್ಕೆ ಬರುತ್ತಿದ್ದಂತೆ ಈ ಹಡಗಿನ ಪಥ ಬದಲಿಸಲಾಗಿದ್ದು, ಮಂಗಳೂರು ತಲುಪಿದೆ.

ಬಂದರಿನಸೂಕ್ತ ವ್ಯವಸ್ಥೆ

ಮಂಗಳೂರು ಬಂದರಿಗಿಂತ ಸ್ವಲ್ಪ ದೂರದಲ್ಲಿ ಸಮುದ್ರ ಮಧ್ಯದಿಂದ ಎಂಆರ್‌ಪಿಎಲ್ ತೈಲ ಶುದ್ಧೀಕರಣ ಘಟಕಕ್ಕೆ ಪೈಪ್‌ಲೈನ್ ಮೂಲಕ ಈ ತೈಲವನ್ನು ಅನ್‌ಲೋಡ್ ಮಾಡಲಾಗುತ್ತದೆ. ಭಾನುವಾರ ಬೆಳಗ್ಗೆ ಈ ಪ್ರಕ್ರಿಯೆ ಆರಂಭಿಸಲಾಗುತ್ತದೆ. ಪ್ರಕ್ರಿಯೆ ಮುಗಿಯಲು ಒಂದು- ಒಂದೂವರೆ ದಿನ ಬೇಕಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಭ್ರಮದಲ್ಲೂ ಸಂಸ್ಕಾರ ಕೊಡುವ ಹಬ್ಬವೇ ಯುಗಾದಿ: ಸು. ರಾಮಣ್ಣ



ಮಂಗಳೂರು: ನಮ್ಮ ದೇಶದ ಹಬ್ಬಗಳು ಮೋಜು ಮಸ್ತಿಗೆ ಆಚರಿಸುವಂತಹದ್ದಲ್ಲ ಬದಲಿಗೆ ಸಂಭ್ರಮದಲ್ಲೂ ಸಂಸ್ಕಾರ ಕೊಡುವಂಥದ್ದು. ಶಾಲಿವಾಹನನಮೂಲಕದೇಶದಸ್ವಂತಿಕೆ, ಸಾಮರ್ಥ್ಯ, ಪೌರುಷವನ್ನು ಪುನಸ್ಥಾಪಿಸಿದ ಮಹತ್ತಿನ ಜೊತೆಗೆ ವಾತಾವರಣದಲ್ಲಿ ಹೊಸತನ, ಬದುಕಿನ ಕಷ್ಟ-ಸುಖಗಳನ್ನು ಸ್ವೀಕರಿಸುವ ಮನೋದಾರ್ಢ್ಯತೆಗಳನ್ನು ಸಂಕೇತಿಸುವ ಹಬ್ಬ ಯುಗಾದಿ ಎಂಬುದಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕ್ ಸು. ರಾಮಣ್ಣ ಅವರು ಅಭಿಪ್ರಾಯಪಟ್ಟಿದ್ದಾರೆ.

ಅವರು ನಗರದ ಉರ್ವ ಮೈದಾನದಲ್ಲಿ ಜರಗಿದ ಯುಗಾದಿ ಉತ್ಸವದಲ್ಲಿ ಮಾತನಾಡಿದರು. ಭಾರತದ ಮೇಲಿನ ಪರಕೀಯ ಆಕ್ರಮಣವನ್ನು ಹಿಮ್ಮೆಟ್ಟಿಸಿದ ಹಿನ್ನೆಲೆಯಲ್ಲಿ ವಿಜಯದ ಆರಾಧನೆ ಮಾಡುವಂಥದ್ದು ನಮ್ಮ ದೇಶದ ಅಸ್ಮಿತೆಯಾಗಿದೆ. ಕಷ್ಟ ಬಂದಾಗ ಕುಗ್ಗದೆ, ಸುಖ ಬಂದಾಗ ಮೈಮರೆಯದೆ ಬೇವು-ಬೆಲ್ಲಗಳ ಮೂಲಕ ಸಮತೋಲನದ ಬದುಕು ನಮ್ಮದಾಗಬೇಕೆಂಬ ಸಂದೇಶವನ್ನು ಯುಗಾದಿ ನೀಡುತ್ತದೆ ಎಂದರು. ಸಂಘಸ್ಥಾಪಕ ಡಾ. ಕೇಶವ ಬಲಿರಾಮ್ ಹೆಡಗೇವಾರ್ ಜನಿಸಿದ್ದು ಕೂಡ ಈ ದಿನದಂದೇ. ಶಾಲಿವಾಹನ ಮಾಡಿದಂತಹ ಕ್ರಾಂತಿಯನ್ನು ಕೇಶವ ಮುಂದುವರಿಸಿದ.ಹೇಗೆ ಬದುಕಬೇಕೆಂದು ಕಲಿಸದ ಹಿರಿಯರು ಅದನ್ನು ವಾರಿಸಿಕೆಯಾಗಿ ಬಿಟ್ಟುಹೋದರು. ಅನೇಕ ಮಹಾನುಭಾವರು ಅದನ್ನು ಮುಂದುವರಿಸಿಕೊಂಡು ಬಂದಿದ್ದು, ಸಂಕ್ರಾಂತಿಯನ್ನು ಈಗ ಕಾಣುತ್ತಿದ್ದೇವೆ. ಡಾ. ಹೆಡಗೇವಾರ್ ಅವರದ್ದು, ಸ್ವಪ್ನದಿಂದ ಕ್ರಿಯಾಸಿದ್ಧಿ ಪ್ರಾಪ್ತಿ ಮಾಡಿಕೊಂಡಂತಹ ಮಹಾನ್ ವ್ಯಕ್ತಿತ್ವ. ದೇಶದಲ್ಲಿ ಹಿಂದುಗಳು ಸಂಘಟಿತರಾಗುವುದಿಲ್ಲವೋ ಅಲ್ಲಿಯವರೆಗೆ ದೇಶದಲ್ಲಿ ಸಾಮರಸ್ಯ ಪದಕ್ಕೆ ಅರ್ಥ ಬರುವುದಿಲ್ಲ. ಇದನ್ನು ಅರಿತೇ ಹೆಡಗೇವಾರ್ ಅವರುಸಂಘಸ್ಥಾಪನೆಮಾಡಿದ್ದು. ಹಿಂದುಗಳಿಗೆ ನಾನು ಎಂಬುದರ ಬದಲಿಗೆ ನಾವು ಎಂಬ ಅರಿವನ್ನು ಜಾಗೃತಗೊಳಿಸಿದವರು ಅವರು. ಆದರೆ ನಾನು ಮಾಡಿದ್ದು ಎಂಬುದಾಗಿ ಎಲ್ಲೂ ಹೇಳದ ಅವರು ನೀವೆಲ್ಲ ಸೇರಿ ಮಾಡಿದ್ದು ಎಂದೇಹೇಳುವಮೂಲಕಧ್ಯೇಯನಿಷ್ಠೆಯನ್ನು ಸ್ವಯಂಸೇವಕರಿಗೆ ಕಲಿಸಿಕೊಟ್ಟರು. ಇದರಂತೆ ಇಂದು ಹಿಂದು ಸಂಘಟಿತನಾಗುತ್ತಿದ್ದಾನೆ ಎಂದರು. ರೋಬೋ ಸಾಫ್ಟ್‌ನ ರೋಹಿತ್ ಭಟ್ ಅಧ್ಯಕ್ಷತೆ ವಹಿಸಿ ಶುಭಕೋರಿದರು. ಕ್ಷೇತ್ರೀಯ ಸಂಘಚಾಲಕ್ ಡಾ.ಪಿ.ವಾಮನ್ ಶೆಣೈ, ಮಹಾನಗರ ಸಂಘಚಾಲಕ್ ಡಾ.ಸತೀಶ್ ರಾವ್ ಉಪಸ್ಥಿತರಿದ್ದರು.

ಧನಲಕ್ಷ್ಮಿ ಗಟ್ಟಿ ನೇತೃತ್ವದಲ್ಲಿ ನಿರ್ಮಾಣದ ಮನೆ ಗೃಹ ಪ್ರವೇಶ

ಗಿರಿಜಾಗೆ ಸುಭದ್ರ ನಿಲಯ



ಉಳ್ಳಾಲ: ಕಳೆದ ಮಳೆಗಾಲದ ಪ್ರಾಕೃತಿಕ ವಿಕೋಪದಲ್ಲಿ ಮನೆಯನ್ನೇ ಕಳಕೊಂಡಿದ್ದ ಕೊಲ್ಯ ಸಾರಸ್ವತ ಕಾಲೋನಿಯ ತೊಂಭತ್ತರ ವೃದ್ಧೆ ಗಿರಿಜಾ ಅವರ ಕುಟುಂಬಕ್ಕೆ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯೆ ಧನಲಕ್ಷ್ಮಿ ಗಟ್ಟಿಯವರು ದಾನಿಗಳ ಸಹಕಾರದಿಂದ ನಿರ್ಮಿಸಿ ಕೊಟ್ಟ ನೂತನ ಮನೆ 'ಗಿರಿಜಾ ನಿಲಯ'ದ ಗೃಹಪ್ರವೇಶ ಸಮಾರಂಭ ಶನಿವಾರ ನಡೆಯಿತು. ಬಿಜೆಪಿ ಮಂಗಳೂರು ಮಂಡಲದ ಅಧ್ಯಕ್ಷರಾದ ಜಗದೀಶ ಆಳ್ವ ಕುವೆತ್ತಬೈಲ್ ಅವರು ನೂತನ ಮನೆಯ ಕೀಲಿ ಕೈಯನ್ನು ಗಿರಿಜಾ ಅವರಿಗೆ ಹಸ್ತಾಂತರಿಸಿದರು.

ಅತ್ಯಂತ ಕಡಿಮೆ ವೆಚ್ಚದಲ್ಲಿ ಸುಸಜ್ಜಿತ ಮನೆ ನಿರ್ಮಿಸಿ ಕೊಟ್ಟ ಗುತ್ತಿಗೆದಾರರಾದ ಸುಂದರ ಗಟ್ಟಿ, ಗಾಯತ್ರಿ ಗಟ್ಟಿ ದಂಪತಿಯನ್ನು ಸನ್ಮಾನಿಸಲಾಯಿತು.

ಮಾಜಿ ಜಿ.ಪಂ ಸದಸ್ಯೆ ಧನಲಕ್ಷ್ಮಿ ಗಟ್ಟಿ, ಬಿಜೆಪಿ ಮುಖಂಡರಾದ ಉಕ್ರಪ್ಪ ನಾಯ್ಕ್, ಪದ್ಮನಾಭ ಗಟ್ಟಿ ಕೆಳಗಿನ ಮನೆ, ಮುರಳಿ ಕೋಣಾಜೆ, ಸ್ಥಳೀಯ ಕೌನ್ಸಿಲರ್ ಅಮಿತ, ಪ್ರಮುಖರಾದ ಮಾಧವ ಗಟ್ಟಿ, ಕುತ್ತಾರು ಭ್ರಾಮರಿ ಮಹಿಳಾ ಮಂಡಳಿಯ ಸದಸ್ಯರಾದ ಯೋಗಿತ, ಶೃತಿ, ಸುರೇಖ, ನಿಶ್ಚಿತ, ಪೂರ್ಣಿಮಾ ಮೊದಲಾದವರು ಉಪಸ್ಥಿತರಿದ್ದರು.

ಆವರಣ ಗೋಡೆ ಕುಸಿದು ಮನೆ ನೆಲಸಮ

ಕಳೆದ ವರುಷ ಮೇ ತಿಂಗಳ ಕೊನೆಯಲ್ಲಿ ಸುರಿದಿದ್ದ ಭಾರೀ ಮಳೆಗೆ ವೃದ್ಧೆ ಗಿರಿಜಾ ಗಟ್ಟಿ ಅವರ ಗುಡಿಸಲಿನ ಮೇಲೆ ಪಕ್ಕದ ಖಾಸಗಿ ಶಾಲೆಯ ಆವರಣ ಗೋಡೆ ಕುಸಿದು ಬಿದ್ದ ಪರಿಣಾಮ ಮನೆಯು ಸಂಪೂರ್ಣ ನೆಲಸಮಗೊಂಡಿತ್ತು. ಘಟನೆಯ ನಾಲ್ಕೇ ದಿವಸಗಳ ಹಿಂದಷ್ಟೆ ಗಿರಿಜಾರ ಕುಟುಂಬವನ್ನು ಧನಲಕ್ಷ್ಮಿ ನೇತೃತ್ವದಲ್ಲಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದ ಪರಿಣಾಮ ಸಂಭವನೀಯ ಭಾರೀ ಅನಾಹುತವೊಂದು ತಪ್ಪಿತ್ತು.

ವೃದ್ಧೆಯ ಕುಟುಂಬಕ್ಕೆ ಧನಲಕ್ಷ್ಮಿ ಕೃಪಾಕಟಾಕ್ಷ

ಗಿರಿಜಾ ಅವರ ಕಿರಿಯ ಮೊಮ್ಮಗಳಾದ ರೂಪಿಕಾಲ ಪತಿಯು ಕಾಯಿಲೆಯಿಂದ ಮೃತಪಟ್ಟಿದ್ದರು. ಮೊಮ್ಮಗಳು ಮತ್ತು ಆಕೆಯ ಇಬ್ಬರು ಮಕ್ಕಳನ್ನ ಸಾಕುವ ಜವಾಬ್ದಾರಿಯನ್ನೂ ಗಿರಿಜಾ ಅವರೇ ಹೊತ್ತುಕೊಂಡಿದ್ದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೇ ಕುಟುಂಬವು ಇದ್ದ ಮನೆಯನ್ನೂ ಕಳಕೊಂಡಿತ್ತು.

ಹೊಸದಿಗಂತ ಕಳಕಳಿಗೆ ಸಂಸದರು ಸೇರಿ ದಾನಿಗಳಿಂದ ಸ್ಪಂದನೆ

ಗಿರಿಜಾ ಅವರಿಗೆ ಮನೆ ನಿರ್ಮಾಣದ ಯೋಜನೆಯ ಕುರಿತು 'ಹೊಸದಿಗಂತ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿ ನೋಡಿದ್ದ ಸಂಸದ ಬ್ರಿಜೇಶ್ ಚೌಟ ಅವರು ವೈಯಕ್ತಿಕವಾಗಿ ಆರ್ಥಿಕ ಸಹಕಾರ ನೀಡಿದ್ದಲ್ಲದೆ, ಅನೇಕ ದಾನಿಗಳು ಧನ ಸಹಾಯ ನೀಡಿ ಸಹಕರಿಸಿದ್ದಾರೆ. ಮನೆ ನಿರ್ಮಾಣಕ್ಕೆ ಎಂಟೂವರೆ ಲಕ್ಷ ರೂಪಾಯಿ ವೆಚ್ಚ ತಗುಲಿದ್ದು,ಗುತ್ತಿಗೆದಾರರಿಗೆ ಇನ್ನೂ ಮೂರುವರೆ ಲ.ರೂ. ಹಣ ಪಾವತಿಸಲು ಬಾಕಿ ಇದೆ.ರಾಜೀವ್ ಗಾಂಧಿ ಹೌಸಿಂಗ್ ಬೋರ್ಡ್‌ನ ಪರಿಹಾರ ನಿಧಿಯ ನಿರೀಕ್ಷೆಯಲ್ಲಿದ್ದು,ಗೇರು ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ಸೋಮೇಶ್ವರ ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಪುರುಷೋತ್ತಮ ಅವರು ಅದಕ್ಕಾಗಿ ಶ್ರಮಿಸುತ್ತಿದ್ದಾರೆ.

■ ಧನಲಕ್ಷ್ಮಿ ಗಟ್ಟಿ, ಮಾಜಿ ಜಿ.ಪಂ ಸದಸ್ಯರು

ಶ್ಲಾಘನೀಯ ಕಾರ್ಯ

ಧನಲಕ್ಷ್ಮಿ ಅವರು ಓರ್ವ ಮಹಿಳೆಯಾಗಿ ಇಳಿ ವಯಸ್ಸಿನ ವೃದ್ಧೆಗೆ ಮನೆ ಕಟ್ಟಿ ಕೊಟ್ಟಿರುವುದು ಶ್ಲಾಘನೀಯ ಹಾಗೂ ಎಲ್ಲರಿಗೂ ಮಾದರಿ ಕಾರ್ಯವಾಗಿದೆ.ಈ ಸತ್ಕಾರ್ಯಕ್ಕೆ ಆರ್ಥಿಕವಾಗಿ ಸಹಕರಿಸಿದ ದಾನಿಗಳ ಕಾರ್ಯವೂ ಅಭಿನಂದನಾರ್ಹವಾಗಿದೆ.ಎಲ್ಲರ ಪ್ರಯತ್ನದಲ್ಲಿ ಗಿರಿಜಾ ಅವರು ತಮ್ಮ ಜೀವನದ ಅಂತಿಮ ದಿನಗಳನ್ನು ಸ್ವಂತ ಸುಂದರ ಮನೆಯಲ್ಲಿ ಕಳೆಯುವಂತಾಗಿದೆ. ಧನಲಕ್ಷ್ಮಿ ಅವರಿಂದ ಮತ್ತಷ್ಟು ಅಶಕ್ತರಿಗೆ ಮನೆ ನಿರ್ಮಾಣಗೊಳಿಸುವ ಕಾರ್ಯ ಮುಂದುವರೆಯಲಿ.

■ ಜಗದೀಶ ಆಳ್ವ ಕುವೆತ್ತಬೈಲ್, ಅಧ್ಯಕ್ಷರು,ಬಿಜೆಪಿ ಮಂಗಳೂರು ಮಂಡಲ.

ಅಶಕ್ತ ಕುಟುಂಬಕ್ಕೆ ಆಧಾರವಾಗಿ ನಿಂತ ಧನಲಕ್ಷ್ಮಿ ಅವರು ರೂಪಿಕಾಳಿಗೆ ಜೀವನೋಪಾಯಕ್ಕಾಗಿ ಶಿಶುಪಾಲನಾ ಕೇಂದ್ರವೊಂದರಲ್ಲಿ ಶಿಶುಪಾಲಕಿ ಉದ್ಯೋಗವನ್ನು ಒದಗಿಸಿ ಕೊಟ್ಟಿದ್ದರು. ತನ್ನಲ್ಲಿ ಆರ್ಥಿಕ ಸಂಪತ್ತು ಇಲ್ಲದಿದ್ದರೂ ಸಹ ಸಮಾಜದ ಉದಾರಿ ದಾನಿಗಳ ನೆರವಿನಿಂದ ಗಿರಿಜಾ ಕುಟುಂಬಕ್ಕೆ ಸುಂದರವಾದ ಮನೆ ನಿರ್ಮಿಸಿ ಕೊಟ್ಟಿದ್ದಾರೆ.

ದಿ ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ ಆಫ್ ಇಂಡಿಯಾ

ಕರ್ನಾಟಕ ರಾಜ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಕಿಶೋರ್ ಆಳ್ವ ನೇಮಕ

ಪಡುಬಿದ್ರಿ: ದ ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಆಫ್ ಇಂಡಿಯಾ (ASSOCHAM) ಸಂಸ್ಥೆಯು 2026 –27ನೇ ಸಾಲಿಗೆ ತನ್ನ ಕರ್ನಾಟಕ ರಾಜ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಕಿಶೋರ್ ಆಳ್ವ ಅವರನ್ನು ನೇಮಕ ಮಾಡಿದೆ. ಕಿಶೋರ್ ಆಳ್ವ ಅವರು ಬಹುರಾಷ್ಟ್ರೀಯ ಕಂಪನಿಗಳು, ಇಂಧನ, ಮೂಲಸೌಕರ್ಯ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಸಂಬಂಧಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮೂರು ದಶಕಗಳಿಗಿಂತ ಹೆಚ್ಚು ವ್ಯಾಪಕ ಅನುಭವವನ್ನು ಹೊಂದಿದ್ದಾರೆ. ತಮ್ಮ ವೃತ್ತಿಜೀವನದಲ್ಲಿ ಅವರು Cogentrix, CLP-I, Unocal 76 ಹಾಗೂ U.S.-India Business Council (USIBC) ಸೇರಿದಂತೆ ಜಾಗತಿಕ ಖ್ಯಾತಿಯ ಸಂಸ್ಥೆಗಳಲ್ಲಿ ಪ್ರಮುಖ ನಾಯಕತ್ವ ಮತ್ತು ತಂತ್ರಾತ್ಮಕ ಹುದ್ದೆಗಳನ್ನು ವಹಿಸಿಕೊಂಡಿದ್ದು, ವ್ಯವಹಾರ ಅಭಿವೃದ್ಧಿ, ನೀತಿ ವಕಾಲತ್ತು ಮತ್ತು ಸಂಸ್ಥಾಪನಾ ಬಲವರ್ಧನೆಗೆ ಮಹತ್ವದ ಕೊಡುಗೆ ನೀಡಿದ್ದಾರೆ.



ಆಳ್ವ ಅವರು ಉದ್ಯಮ ಸಂಘಟನೆಗಳು ಮತ್ತು ಶೈಕ್ಷಣಿಕ ಆಡಳಿತ ಕ್ಷೇತ್ರಗಳಲ್ಲಿಯೂ ಪ್ರಮುಖ ಪಾತ್ರವಹಿಸಿದ್ದಾರೆ. ಅವರು 2018–19ರಲ್ಲಿ ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಅಂಡ್‌ಕಾಮರ್ಸ್ (BCIC) ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಉದ್ಯಮ ನೇತೃತ್ವದ ಉಪಕ್ರಮಗಳು, ನೀತಿ ಸಂವಾದ ಮತ್ತು ಹಿತಾಸಕ್ತಿಪಕ್ಷಗಳ ಸಹಭಾಗಿತ್ವವನ್ನು ಉತ್ತೇಜಿಸಲು ಸಕ್ರಿಯ ವಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ, ಅವರು ಕರ್ನಾಟಕದಲ್ಲಿ ಅದಾನಿ ಗ್ರೂಪ್‌ನ ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದರ ಜೊತೆಗೆ, ಅವರು ಕರ್ನಾಟಕ ರಾಜ್ಯದಲ್ಲಿನ ವಿಶ್ವವಿದ್ಯಾಲಯಗಳ ಮಂಡಳಿಗಳಿಗೆ ಅಧ್ಯಕ್ಷತೆ ವಹಿಸುವ ಮೂಲಕ ಉನ್ನತ ಶಿಕ್ಷಣ ಆಡಳಿತ ದಲ್ಲಿಯೂ ಮಹತ್ವದ ಕೊಡುಗೆ ನೀಡಿದ್ದಾರೆ.

ಆರೆಸ್ಸೆಸ್ ನೇತೃತ್ವದಲ್ಲಿ ಉಡುಪಿ ನಗರದ ಯುಗಾದಿ ಉತ್ಸವ

ಸಕಾರಾತ್ಮಕ ನಡೆ ಇರಲಿ: ಸಂತೋಷ್



ಉಡುಪಿ: ಭಗವಂತನ ಸೃಷ್ಟಿಯಲ್ಲಿ ಯಾವುದೂ ಕೆಟ್ಟದ್ದಿರಲು ಸಾಧ್ಯವಿಲ್ಲ. ಮನುಷ್ಯ ತನ್ನ ನಡವಳಿಕೆಯಿಂದ ಅಲ್ಲಿ ಶುಭ ಅಥವಾ ಅಶುಭವನ್ನು ನಿರ್ಮಾಣ ಮಾಡಿಕೊಳ್ಳುತ್ತಾನೆಯೇ ಹೊರತು, ಪ್ರಕೃತಿಯ ಚಕ್ರದಲ್ಲಿ ಎಲ್ಲವೂ ಮಂಗಳಕರವೇ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿದರು.

ಮಣಿಪಾಲದ ಎಂ.ಜೆ.ಸಿ. ಶಾಲಾ ಮೈದಾನದಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಉಡುಪಿ ನಗರದ ಯುಗಾದಿ ಉತ್ಸವದಲ್ಲಿ ಮುಖ್ಯ ವಕ್ತಾರರಾಗಿ ಅವರು ಮಾತನಾಡಿದರು.

ವಿಶ್ವಾವಸು ಸಂವತ್ಸರ ಮುಗಿದು ನಾವು ಈಗ ಪರಾಭವ ಸಂವತ್ಸರಕ್ಕೆ ಪದಾರ್ಪಣೆ ಮಾಡುತ್ತಿದ್ದೇವೆ. ಈ ಸಂವತ್ಸರದ ಹೆಸರುಗಳನ್ನು ಕೇಳಿದಾಗ ಸಾಮಾನ್ಯ ಜನರಲ್ಲಿ ಇದು ಅಶುಭವೇನೋ ಎಂಬ ಆತಂಕ ಅಥವಾ ಗೊಂದಲ ನಿರ್ಮಾಣವಾಗುವುದು ಸಹಜ. ಇಂದಿನ ಟಿವಿ ಮಾಧ್ಯಮಗಳ ಯುಗದಲ್ಲಿ ಸಣ್ಣ ವಿಷಯವನ್ನೂ ದೊಡ್ಡ ಪ್ರಳಯದಂತೆ ಬಿಂಬಿಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ಪರಾಭವ ಅಥವಾ ಕ್ಷಯ ಸಂವತ್ಸರದಂತಹ ಪದಗಳು ಜನರಲ್ಲಿ ಭಯ ಹುಟ್ಟಿಸುತ್ತವೆ. ಆದರೆ, ಸಂವತ್ಸರ ಚಕ್ರದ ನಲವತ್ತನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ನಾವು ಆತಂಕಪಡುವ ಅಗತ್ಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಟಿವಿಗಳಲ್ಲಿ ಬರುವ ಪ್ರಳಯ ಅಥವಾ ಭೂಕಂಪದ ಭಯಾನಕ ಸುದ್ದಿಗಳಿಗಿಂತ ನಮ್ಮ ನೈಜ ಬದುಕು ಮುಖ್ಯ. ಭಗವಂತನ ಸೃಷ್ಟಿಯಲ್ಲಿ ಪರಾಭವವಾಗಲಿ ಅಥವಾ ಕ್ಷಯವಾಗಲಿ ಯಾವುದೂ ಕೆಟ್ಟದ್ದಲ್ಲ. ಮನುಷ್ಯ ತನ್ನ ಕೆಟ್ಟ ಆಲೋಚನೆ ಮತ್ತು ನಡವಳಿಕೆಯಿಂದ ಅಶುಭವನ್ನು ಸೃಷ್ಟಿಸುತ್ತಾನೆ. ಹೊಸ ವರ್ಷದ ಈ ಸಂದರ್ಭದಲ್ಲಿ ನಾವು ಸಕಾರಾತ್ಮಕ ಆಲೋಚನೆಗಳೊಂದಿಗೆ ಮುನ್ನಡೆಯಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಜ್ಞಾನಸುಧಾ ಸಮೂಹ ಶಿಕ್ಷಣ ಸಂಸ್ಥೆಗಳ ಪ್ರವರ್ತಕ ಡಾ. ಸುಧಾಕರ್ ಶೆಟ್ಟಿ, ಮಂಗಳೂರು ವಿಭಾಗದ ಸಂಘಚಾಲಕ್ ಡಾ. ನಾರಾಯಣ ಶೆಣೈ, ಉಡುಪಿ ನಗರ ಸಂಘಚಾಲಕ್ ಮಟ್ಟು ಲಕ್ಷ್ಮೀನಾರಾಯಣ ಉಪಸ್ಥಿತರಿದ್ದರು. ಸಮಾರಂಭದಲ್ಲಿ ಸ್ವಯಂಸೇವಕರು ಪೂರ್ಣ ಗಣವೇಷಧಾರಿಗಳಾಗಿ ಪಾಲ್ಗೊಂಡಿದ್ದರು.

ಬಾಯಿಕಟ್ಟೆಯಿಂದ ಪೈವಳಿಕೆ ನಗರದ ವರೆಗೆ ಮೆರವಣಿಗೆ | ಎಲ್ಲೆಡೆ ಕಾರ್ಯಕರ್ತರ ಸಂಭ್ರಮ | ಭಾವಚಿತ್ರದ ಫ್ಲೆಕ್ಸ್ ಬೋರ್ಡ್ ಸಹಿತ ಮುಸ್ಲಿಂ ಮತದಾರ ಸಾಥ್

ಗಮನಸೆಳೆದ ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್ ಬೃಹತ್ ರೋಡ್ ಶೋ

ಉಪ್ಪಳ: ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಕೇರಳ ರಾಜ್ಯ ಮಾಜಿ ಅಧ್ಯಕ್ಷ ಕೆ. ಸುರೇಂದ್ರನ್ ಅವರ ಚುನಾವಣಾ ಪ್ರಚಾರಾರ್ಥವಾಗಿ ಬೃಹತ್ ರೋಡ್ ಶೋ ಕಾರ್ಯಕ್ರಮವು ಶುಕ್ರವಾರ ಸಂಜೆ ಅದ್ದೂರಿಯಾಗಿ ಜರಗಿತು. ಬಾಯಿಕಟ್ಟೆಯಿಂದ ಹೊರಟ ರೋಡ್ ಶೋ ಪೈವಳಿಕೆ ನಗರದಲ್ಲಿ ಸಮಾಪ್ತಿಯಾಯಿತು.



ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಉಡುಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ವೈ.ಭರತ್ ಶೆಟ್ಟಿ, ಉಡುಪಿ ವಿಧಾನಸಭಾ ಕ್ಷೇತ್ರದ ಶಾಸಕ ಯಶಪಾಲ್ ಎ.ಸುವರ್ಣ, ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಮುಂತಾದವರು ಭಾಗವಹಿಸಿದ್ದರು.

ಅಲ್ಲದೆ ಬಿಜೆಪಿ ರಾಜ್ಯ ಸಮಿತಿ ಸದಸ್ಯರಾದ ವಿ.ರವೀಂದ್ರನ್, ಸುರೇಶ್‌ಕುಮಾರ್ ಶೆಟ್ಟಿ ಪೂಕಟ್ಟೆ, ಕೋಳಾರು ಸತೀಶ್ಚಂದ್ರ ಭಂಡಾರಿ, ಕಲ್ಲಿಕೋಟೆ ವಲಯ ಉಪಾಧ್ಯಕ್ಷ ಎಂ.ವಿಜಯಕುಮಾರ್ ರೈ, ಕುಂಬಳೆ ಮಂಡಲಾಧ್ಯಕ್ಷ ಸುನೀಲ್ ಅನಂತಪುರ, ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ., ಪ್ರಮುಖರಾದ ವಸಂತಕುಮಾರ್ ಮಯ್ಯ, ಅನಿಲ್ ಕುಮಾರ್ ಕೆ.ಪಿ., ಯತಿರಾಜ್ ಶೆಟ್ಟಿ, ಕೆ.ವಿ.ಭಟ್, ಎಂ.ಹರಿಶ್ಚಂದ್ರ ಮಂಜೇಶ್ವರ ಮೊದಲಾದವರು ನೇತೃತ್ವ ನೀಡಿದರು. ರೋಡ್ ಶೋ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಕಾರ್ಯಕರ್ತರು, ಹಿತೈಷಿಗಳು, ಅಭಿಮಾನಿಗಳು ಪಾಲ್ಗೊಂಡಿದ್ದರು.

ಮುಸ್ಲಿಂ ಸಮುದಾಯದ ಮತದಾರನೋರ್ವ ರೋಡ್ ಶೋದಲ್ಲಿ ಕೆ.ಸುರೇಂದ್ರನ್ ಅವರ ಫ್ಲೆಕ್ಸ್ ಬೋರ್ಡ್‌ನೊಂದಿಗೆ ಭಾಗವಹಿಸಿರುವುದು ವಿಶೇಷ ಆಕರ್ಷಣೆಗೆ ಕಾರಣವಾಯಿತು.

ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ನಾಮಪತ್ರ ಸಲ್ಲಿಕೆ

ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಕೇರಳ ರಾಜ್ಯ ಮಾಜಿ ಅಧ್ಯಕ್ಷ ಕೆ.ಸುರೇಂದ್ರನ್ ಅವರು ಶನಿವಾರ ಉಪ್ಪಳದಲ್ಲಿರುವ ಮಂಜೇಶ್ವರ ತಾಲೂಕು ಕಚೇರಿಯಲ್ಲಿ ತಮ್ಮ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ, ರಾಜ್ಯ, ವಲಯ, ಜಿಲ್ಲಾ, ಮಂಡಲ ಹಾಗೂ ಬೂತ್ ಮಟ್ಟದ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು. ಇದಕ್ಕೂ ಮೊದಲು ಅವರು ವಿವಿಧ ದೇವಾಲಯಗಳಿಗೆ ಭೇಟಿ ನೀಡಿ ಶ್ರೀ ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿ ಕೃತಾರ್ಥತೆ ಪಡೆದರು.



ನಾಮಪತ್ರ ಸಲ್ಲಿಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಕೆ.ಸುರೇಂದ್ರನ್ ಅವರು, ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಅನೇಕ ಬಾರಿ ಗೆಲುವು ಸಾಧಿಸಿದ ಐಕ್ಯರಂಗ ಒಕ್ಕೂಟದ ಮುಸ್ಲಿಂಲೀಗ್ ಶಾಸಕರು ಮಂಜೇಶ್ವರದ ಅಭಿವೃದ್ಧಿಗೆ ಏನನ್ನೂ ಮಾಡಿಲ್ಲ. ಈ ಕ್ಷೇತ್ರದ ಕನ್ನಡಿಗರು ಅತಂತ್ರರಾಗಿದ್ದಾರೆ. ಕನ್ನಡ, ತುಳು ಭಾಷೆಗಳು ಇಲ್ಲಿನ ಮಾತೃಭಾಷೆಯಾಗಿದ್ದರೂ ಇಲ್ಲಿನ ಶಾಸಕರು ಆ ಬಗ್ಗೆ ಯಾವುದೇ ಸಮರ್ಥ ಯೋಜನೆ ಕೈಗೊಂಡಿಲ್ಲ. ವಿಧಾನಸಭಾ ಅಧಿವೇಶನದಲ್ಲೂ ಈ ಕುರಿತು ಮಾತನಾಡಿಲ್ಲ ಎಂದರು.

ಕನ್ನಡ ಮತ್ತು ತುಳು ಭಾಷೆಗಳ ಸಂರಕ್ಷಣೆಗೆ ಸಿಪಿಎಂ, ಮುಸ್ಲಿಂಲೀಗ್, ಕಾಂಗ್ರೆಸ್ ಪಕ್ಷಗಳ ಕಾರ್ಯ ಸಂಪೂರ್ಣ ಶೂನ್ಯ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಮಂಜೇಶ್ವರ ತಾಲೂಕು ಕಚೇರಿಯನ್ನು ಸ್ವಂತ ಸ್ಥಳದಲ್ಲಿ ಸ್ಥಾಪಿಸಲು ಸಾಧ್ಯವಾಗದಿರುವುದು ಇಲ್ಲಿನ ಶಾಸಕರ ವಿಫಲತೆಗೆ ಸಾಕ್ಷಿಯಾಗಿದೆ. ಜನಸಾಮಾನ್ಯರ ಬಗ್ಗೆ ಯಾವುದೇ ಕಾರ್ಯಕ್ರಮಗಳನ್ನು ಅಳವಡಿಸದ ಮಂಜೇಶ್ವರ ಶಾಸಕರು ಕೇವಲ ವೋಟ್‌ಬ್ಯಾಂಕ್‌ಗಾಗಿ ಮಾತ್ರ ಒಂದು ವಿಭಾಗದ ಜನರನ್ನು ಬೆಂಬಲಿಸುತ್ತಿರುವುದು ಜನಜನಿತವಾಗಿದೆ ಎಂದು ಕೆ.ಸುರೇಂದ್ರನ್ ಉದಾಹರಣೆಗಳೊಂದಿಗೆ ವಿವರಿಸಿದರು.

ಕಿರುಸುದ್ದಿ

ಜೂನ್‌ನಲ್ಲಿ ಭಾರತದ ಐರ್ಲೆಂಡ್ ಪ್ರವಾಸ

ಮುಂಬೈ: ವಿಶ್ವಕಪ್ ಮುಡಿಗೇರಿಸಿಕೊಂಡಿರುವ ಭಾರತ ಟಿ20 ತಂಡವು ಜೂನ್‌ನಲ್ಲಿ ಎರಡು ಪಂದ್ಯಗಳ ಟಿ20 ಸರಣಿಗಾಗಿ ಐರ್ಲೆಂಡ್ ಪ್ರವಾಸ ಮಾಡಲಿದೆ. ಇತ್ತೀಚೆಗಷ್ಟೇ ಮುಕ್ತಾಯಗೊಂಡಿರುವ ವಿಶ್ವಕಪ್‌ನಲ್ಲಿ ಗೆಲುವು ಸಾಧಿಸಿರುವ ಸೂರ್ಯ ಪಡೆ ಸದ್ಯ ಐಪಿಎಲ್‌ನಲ್ಲಿ ವ್ಯಸ್ತವಾಗಿದೆ. ಐಪಿಎಲ್ ಮುಗಿದ ನಂತರ ಇಂಗ್ಲೆಂಡ್ ಪ್ರವಾಸವಿದ್ದು ಟೆಸ್ಟ್ ಪಂದ್ಯಗಳು ನಡೆಯಲಿವೆ. ಈ ಬಳಿಕ ಭಾರತ ಜೂನ್‌ನಲ್ಲಿ ಎರಡು ಪಂದ್ಯಗಳ ಸರಣಿಗಾಗಿ ಐರ್ಲೆಂಡ್‌ಗೆ ಹೋಗುವ ಬಗ್ಗೆ ಬಿಸಿಸಿಐ ಅಧಿಕೃತ ಪ್ರಕಟಣೆ ಹೊರಡಿಸಿದೆ. ಜೂನ್ 26ರಂದು ಬೆಲ್ಫಾಸ್ಟ್‌ನಲ್ಲಿ ಮೊದಲ ಟಿ20 ಪಂದ್ಯವನ್ನಾಡಲಿದೆ. 28ರಂದು ಎರಡನೇ ಪಂದ್ಯವಾಡಲಿದೆ. ಜೂನ್‌ವರೆಗೂ ಭಾರತ ಯಾವುದೇ ಟಿ20 ಪಂದ್ಯಗಳನ್ನಾಡುವುದಿಲ್ಲ. ಎಲ್ಲರೂ ಐಪಿಎಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ವಿಶ್ವ ಯು-20 ಅಥ್ಲೆಟಿಕ್ಸ್‌ಗೆ ಪಿಯುಶ್ ಆಯ್ಕೆ

ತಿರುವನಂತಪುರ: ವಿಶ್ವ ಯು–20 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ 400 ಮೀ. ಓಟಕ್ಕಾಗಿ ಬಿಹಾರದ ಪಿಯುಶ್ ರಾಜ್ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಶನಿವಾರದಂದು ತಿರುವನಂತಪುರದಲ್ಲಿ ನಡೆದಿರುವ ಇಂಡಿಯನ್ ಓಪನ್ 400 ಮೀ. ಮೀಟ್ ಕೂಟದಲ್ಲಿ ಚಿನ್ನದ ಪದಕ ಗೆದ್ದು ಮುಂಬರಲಿರುವ ಅಂತಾರಾಷ್ಟ್ರೀಯ ಕೂಟದಲ್ಲಿ ಉತ್ತಮ ಪ್ರದರ್ಶನ ನೀಡುವ ಭರವಸೆ ಮೂಡಿಸಿದ್ದಾರೆ. ಶನಿವಾರದ ಆ ಕೂಟದಲ್ಲಿ ಅತ್ಯಂತ ಪ್ರಬಲರಿದ್ದ ಸ್ಪರ್ಧೆ ಯಲ್ಲಿ ಅವರು ನಿರೀಕ್ಷಿತ ಪ್ರದರ್ಶನ ನೀಡಿದರು. 47.11 ಸೆಕೆಂಡುಗಳಲ್ಲಿ ಮಾತ್ರೆ 400 ಮೀ. ದೂರವನ್ನು ವೇಗವಾಗಿ ಕ್ರಮಿಸಿ ಗೆಲುವು ಸಾಧಿಸಿದರು. ಬೆಳ್ಳಿ ಪದಕ ಗೆದ್ದ ಉತ್ತರಾಖಂಡದ ಸಾಹಿಲ್ ಮಲಿಕ್ ಕೂಡ ತಮ್ಮ ದೂರದ ಕ್ರಮವನ್ನು ವೇಗದಲ್ಲಿ ಉತ್ತಮ ಪಡಿಸಿಕೊಮಡರು. ಅವರು 47.28 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಕೇರಳದ ಇಡ್ವಿನ್ ಮ್ಯಾಥೆವ್ 47.65 ಸೆಕೆಂಡುಗಳಲ್ಲಿ ಗುರಿ ತಲುಪಿ ಕಂಚಿನ ಪದಕ ಗಿಟ್ಟಿಸಿಕೊಂಡರು. 2026 ವಿಶ್ವ ಯು–20 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕೂಟವು ಆಗಸ್ಟ್ 5ರಿಂದ 9ರವರೆಗೆ ನಡೆಯಲಿದೆ.

ಕ್ವಾರ್ಟರ್-ಮೈಲರ್ ಸ್ನೇಹ್‌ಗೆ ನಿಷೇಧ ಬಿಸಿ

ಹೊಸದಿಲ್ಲಿ: ಭಾರತದ ಕ್ವಾರ್ಟರ್ ಮೈಲರ್ ಸ್ನೇಹ ಕೊಳ್ಳೇರಿ ಅವರಿಗೆ ಡೋಪಿಂಗ್ ಪ್ರಕರಣದಲ್ಲಿ ಮೂರು ವರ್ಷಗಳ ನಿಷೇಧ ವಿಧಿಸಲಾಗಿದೆ. ಕಳೆದ ವರ್ಷ ಏಷ್ಯನ್ ಚಾಂಪಿಯನ್‌ಶಿಪ್ ತಂಡದಿಂದ ಡೋಪ್ ಪರೀಕ್ಷೆಯಲ್ಲಿ ವಿಫಲವಾದ ಕಾರಣ ಹೊರಗಿಡಲಾಗಿದ್ದ 26 ವರ್ಷದ ಕೊಚ್ಚಿ ಮೂಲದ ಆಟಗಾರ್ತಿಗೆ ಅಥ್ಲೆಟಿಕ್ಸ್ ಇಂಟೆಗ್ರಿಟಿ ಯೂನಿಟ್ ಮೂರು ವರ್ಷದ ನಿಷೇಧ ಹೇರಿದೆ. ಮಾಲಿನ್ಯಗೊಂಡ ಪೂರಕ ಆಹಾರದಿಂದ ಪರೀಕ್ಷಾ ಫಲಿತಾಂಶ ತಪ್ಪಾಗಿದೆ ಎಂಬ ಅವರ ವಾದವನ್ನು ಯೂನಿಟ್ ತಳ್ಳಿಹಾಕಿದೆ. ಇದಲ್ಲದೆ, ಚಂಡೀಗಢದಲ್ಲಿ ಸಂಗ್ರಹಿಸಲಾಗಿದ್ದ ಮಾದರಿಯ ಮರುಪರಿಶೀಲನೆ ವೇಳೆ, ದಿಲ್ಲಿಯಲ್ಲಿ ನಡೆದ ಪರೀಕ್ಷೆಯಲ್ಲಿ ನೆಗೆಟಿವ್ ಬಂದಿದ್ದರೂ, ನಂತರ ಅದು ನಿಷೇಧಿತ ಅನಾಬಾಲಿಕ್ ಸ್ಟೆರಾಯ್ಡ್ ಸ್ಟಾನೋಜೋಲಾಲ್ ಇರುವುದಾಗಿ ಪತ್ತೆಯಾಯಿತು. ಇದರಿಂದಾಗಿ ತಾತ್ಕಾಲಿಕ ಅಮಾನತು ಅವಧಿಯಲ್ಲೇ ಅವರ ವಿರುದ್ಧ ಮತ್ತೊಂದು ಡೋಪಿಂಗ್ ಆರೋಪವೂ ಸೇರಿಸಲಾಯಿತು. ಸ್ನೇಹ ಕೊಳ್ಳೇರಿ ಮೇ 10ರಂದು ಚೀನಾದ ಗ್ವಾಂಗ್‌ಜೌನಲ್ಲಿ ಸ್ಪರ್ಧೆಯ ವೇಳೆ ಪರೀಕ್ಷೆಗೆ ಒಳಪಟ್ಟಿದ್ದರು. ಭಾರತದಲ್ಲಿ ನಡೆದ ಹಲವು ಪರೀಕ್ಷೆಗಳಲ್ಲಿ ನೆಗೆಟಿವ್ ಫಲಿತಾಂಶ ಬಂದಿದ್ದರೂ, ಈ ಪರೀಕ್ಷೆಯಲ್ಲಿ ಸ್ಟಾನೋಜೋಲಾಲ್ ಪಾಸಿಟಿವ್ ಕಂಡುಬಂದಿತ್ತು. ಅಮಾನತು ಅವಧಿಯಲ್ಲಿ ಸ್ನೇಹ ಅವರು ಯಾವುದೇ ತಪ್ಪು ಮಾಡಿಲ್ಲ ಎಂದು ನಿರಾಕರಿಸಿದ್ದರು.



ಮಾರ್ಚ್ 28ಕ್ಕೆ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೂ ಮುನ್ನ ಫ್ರಾಂಚೈಸಿ ಲಖನೌ ಸೂಪರ್ ಜೈಂಟ್ಸ್ ತಂಡದ ಮಾಲಿಕ ಸಂಜೀವ್ ಗೋಯಿಂಕಾ, ನಾಯಕ ರಿಷಭ್ ಪಂತ್, ವೇಗಿ ಪ್ರಿನ್ಸ್ ಯಾದವ್ ಸೇರಿದಂತೆ ವಿವಿಧ ಆಟಗಾರರು ಅಯೋಧ್ಯೆಯ ರಾಮಲಲಾ ದರ್ಶನ ಪಡೆದರು.

ಬೆಂಗಳೂರಿನ ಥನುಷ್–ಧನುಷ್ ಏಷ್ಯಾ ಆಯ್ಕೆ

ಕಿರಿಯರ ಟೆನಿಸ್: ಭಾರತ ತಂಡದಲ್ಲಿ 2 ಕನ್ನಡಿಗರು

ಬೆಂಗಳೂರು: ಕನ್ನಡಿಗರಾದ 2ನೇ ಶ್ರೇಯಾಂಕಿತ ಥನುಷ್ ಶೇಖರ್ ಬಿ.ಸಿ. ಮತ್ತು ಮೂರನೇ ಶ್ರೇಯಾಂಕದ ಧನುಷ್ ಎಸ್.ಎಮ್ ಏಪ್ರಿಲ್ 13ರಿಂದ 17ರವರೆಗೆ ನೇಪಾಳದಲ್ಲಿ ನಡೆಯಲಿರುವ ಏಷ್ಯಾ ಅಂಡರ್ –12 ಮತ್ತು ಅಂಡರ್ ಟೀಮ್ ಸ್ಪರ್ಧೆಗಳಲ್ಲಿ ಆಯ್ಕೆಯಾಗಿದ್ದಾರೆ. ಕರ್ನಾಟಕದ ಟೆನಿಸ್ ಪಟುಗಳು ವಿಶ್ವಾದ್ಯಂತ ಸದ್ದು ಮಾಡುತ್ತಿರುವುದು ಗೋಚರಿಸಿದೆ. ಮುಂದಿನ ತಿಂಗಳು ನಡೆಯಲಿರುವ ಅಂತಾರಾಷ್ಟ್ರೀಯ ಮಟ್ಟದ ಈ ಕೂಟದಲ್ಲಿ ಭಾರತದಿಂದ ಮೂರೇ ಜನರು ಆಯ್ಕೆಯಾಗಿದ್ದಾರೆ. ಅದರಲ್ಲೂ ಇಬ್ಬರು ಕನ್ನಡಿಗರು ಇದರಲ್ಲಿರುವುದು ಕರ್ನಾಟಕದ ಪಾರುಪತ್ಯ ಎತ್ತಿಹಿಡಿಯುತ್ತದೆ.

ಅಂಡರ್–12 ವಿಭಾಗದ ನಂಬರ್–1 ಸ್ಥಾನದಲ್ಲಿರುವ ರಿಯಾನ್ ಅತುಲ್ ನಂದನಕರ್ ಅವರು ಆಯ್ಕೆಯಾದವರಲ್ಲಿದ್ದಾರೆ. ಏಷ್ಯಾದ ಚಾಂಪಿಯನ್‌ಶಿಪ್ ಅನ್ನಿಸಿಕೊಳ್ಳುವ ಈ ಕೂಟಕ್ಕಾಗಿ ಅಗ್ರ ಶ್ರೇಯಾಂಕ ಹೊಂದ ಆಟಗಾರರನ್ನು ಆಯ್ಕೆ ಮಾಡಲಾಗುತ್ತದೆ. ಸದ್ಯ ಮೊದಲ ಮೂರು ಸ್ಥಾನಗಳಲ್ಲಿರುವ ಕನ್ನಡಿಗರಿಬ್ಬರೂ ಇದರಲ್ಲಿ ಆಯ್ಕೆಯಾಗಿದ್ದಾರೆ.

ಅಂತಾರಾಷ್ಟ್ರೀಯ ಟೆನಿಸ್ ಸಂಸ್ಥೆ(ಐಟಿಎಫ್) ಮತ್ತು ಏಷ್ಯನ್ ಟೆನಿಸ್ ಸಂಸ್ಥೆ(ಎಟಿಎಫ್) ಮಾನ್ಯತೆಯೊಂದಿಗೆ ಭವಿಷ್ಯದ ಸ್ಟಾರ್‌ಗಳಿಗೆ ಪ್ರೋತ್ಸಾಹದ ರೂಪವಾಗಿ ಈ ಕೂಟವನ್ನು ಆಯೋಜಿಸಲಾಗುತ್ತದೆ. ಇದರಲ್ಲಿ 12 ವಯೋಮಿತಿ ಒಳಗಿನವರೇ ಇರುತ್ತಾರೆ. ಮಾದರಿಗೆ ಬಂದರೆ ಪಂದ್ಯವನ್ನು ನಿರ್ಧರಿಸುವಲ್ಲಿ ಮೂವರೂ ಆಟಗಾರರು ತಂಡವಾಗಿ ಆಟಬೇಕಾಗುತ್ತದೆ. ಅಂದರೆ ತಂಡದ ಪಂದ್ಯಾವಳಿ ಇದಾಗಿದೆ. ಎದುರಾಗುವ ಎರಡೂ ತಂಡಗಳಿಂದಲೂ ಇಬ್ಬರು ಸಿಂಗಲ್ಸ್ ಪಂದ್ಯಗಳನ್ನಾಡಿದರೆ, ಒಂದು ಡಬಲ್ಸ್ ಪಂದ್ಯ ಕೂಡ ಮೂವರಲ್ಲಿ ಇಬ್ಬರು ಆಡಬೇಕಾಗುತ್ತದೆ. ಹೆಚ್ಚಿನ ಪಂದ್ಯ ಗೆಲ್ಲುವ ತಂಡ ವಿಜೇತವಾಗುತ್ತದೆ. ದಕ್ಷಿಣ ಏಷ್ಯಾದ ಕ್ವಾಲಿಫೈ ಆಗುವ ತಂಡಗಳು ವರ್ಷಾಂತ್ಯದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಅಂಡರ್–12 ಮತ್ತು ಅಂಡರ್ ಟೀಮ್ ಚಾಂಪಿಯನ್‌ಶಿಪ್ ಫೈನಲ್‌ಗೆ ಅರ್ಹತೆ ಪಡೆಯುತ್ತವೆ.





> ಥನುಷ್ ಮತ್ತು ಧನುಷ್ ಅವರಿಗೆ ಈ ದೊಡ್ಡ ಸಾಧನೆಗಾಗಿ ಅಭಿನಂದನೆಗಳು. ಕರ್ನಾಟಕದ ಯುವ ಆಟಗಾರರು ದೇಶವನ್ನು ಪ್ರತಿನಿಧಿಸುತ್ತಿರುವುದು ವಿಶೇಷ. ಇಂತಹ ಪಂದ್ಯಾವಳಿಗಳಲ್ಲಿ ಭಾಗವಹಿಸುವುದರಿಂದ ಆಟಗಾರರಿಗೆ ಭರವಸೆ ಮೂಡುತ್ತದೆ. ಸಿನಿಯರ್ ಮಟ್ಟದಲ್ಲಿ ಮಿಂಚಲು ಅನುವು ಮಾಡಿಕೊಡುತ್ತದೆ.
> ■ **ಸುನಿಲ್ ಯಜಮಾನ,** ಜಂಟಿ ಕಾರ್ಯದರ್ಶಿ ಕೆಎಸ್‌ಎಲ್‌ಟಿಎ

ಕೋಲ್ಕತ್ತಾ ನೈಟ್ ರೈಡರ್ಸ್ ಪಡೆಗೆ ಭಾರೀ ಪೆಟ್ಟು

ಆಟಗಾರರು ಅಲಭ್ಯ ತಂಡಗಳಿಗೆ ಗಾಯ





ಕೋಲ್ಕತ್ತಾ: ಹರಾಜಿನಲ್ಲಿ ಗುಣಮಟ್ಟದ ಪರ್ಸ್‌ನೊಂದಿಗೆ ವಿವಿಧ ಬಲಿಷ್ಠ ವೇಗಿಗಳನ್ನು ಆಯ್ಕೆ ಮಾಡಿಕೊಂಡಿದ್ದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ಆಟಗಾರರ ಅಲಭ್ಯತೆ ಭಾರೀ ಹಿನ್ನಡೆ ತರುತ್ತಿದೆ.

ಗಾಯಗೊಂಡು ಪಂದ್ಯಾವಳಿಯಿಂದ ಹೊರಬೀಳುತ್ತಿರುವ ಆಟಗಾರರ ಸಂಖ್ಯೆ ಹೆಚ್ಚಾಗುತ್ತಿದೆ. ಕೆಕೆಆರ್ ತಂಡಕ್ಕೆ ಇದು ದೊಡ್ಡ ಆಘಾತ ನೀಡಿದೆ. ಆಕಾಶ್ ದೀಪ್ ಅವರ ಅಲಭ್ಯತೆ ಕೆಕೆಆರ್ ತಂಡಕ್ಕೆ ತೀರಾ ಆಘಾತ ನೀಡಿದೆ. ಹರ್ಷಿತ್ ರಾಣಾ, ಮಥೀಶಾ ಪಥಿರಾಣ ಪಂದ್ಯಾವಳಿಯಿಂದ ಆಗಲೇ ಹೊರಬಿದ್ದಿದ್ದಾರೆ. ಇದೀಗ ಮತ್ತೊಬ್ಬ ವೇಗಿ ಆಕಾಶ್‌ದೀಪ್ ಕೂಡ ಹಿನ್ನಡೆ ಅನುಭವಿಸಿದ್ದು, ತಂಡದ ವೇಗ ವಿಭಾಗದ ಮೇಲೆ ಪರಿಣಾಮಕಾರಿ ಪೆಟ್ಟು ಬಿದ್ದಂತಿದೆ.

ಪಂದ್ಯಾವಳಿಯಿಂದ ತಂಡದ ಮೂರನೇ ವೇಗಿ ಔಟ್

ಬಂಗಾಳದ ಆಕಾಶ್‌ದೀಪ್ ಈ ಹಿಂದೆ ನಡೆದಿದ್ದ ರಣಜಿ ಪಂದ್ಯಾವಳಿಯ ವೇಳೆ ಗಾಯಗೊಂಡಿದ್ದರು. ಹಲವು ದಿನಗಳಿಂದ ಚೇತರಿಕಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದ ಅವರು, ಸದ್ಯ ಬೆಂಗಳೂರಿನ ಶ್ರೇಷ್ಠತಾ ಕೇಂದ್ರದಲ್ಲಿ ಅಭ್ಯಾಸ ಮಾಡುತ್ತಿದ್ದಾರೆಂದು ವರದಿಯಾಗಿದೆ. ಆದಾಗ್ಯೂ ಮೂಲಗಳ ಪ್ರಕಾರ ಅವರು ಇನ್ನೂ ಫಿಟ್ ಆಗಬೇಕಿರುವದಿರಂದ ಪಂದ್ಯಾವಳಿಯಿಂದ ಹೊರಬೀಳುವ ಸಾಧ್ಯತೆ ಹೆಚ್ಚಿದೆ ಎನ್ನಲಾಗಿದೆ.

ಅಭಿಷೇಕ್ ನಾಯರ್ ಈ ಬಗ್ಗೆ ಮಾತನಾಡಿದ್ದು, ಈ ವರೆಗೆ ಮೂವರು ಹೊರಬಿದ್ದಿದ್ದಾರೆ. ಇವರ ಬದಲಿ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಬೇಕಿದೆ ಎಂದು ಸುಳಿವು ನೀಡಿದ್ದಾರೆ.

ವೇಗದ ವಿಭಾಗದಲ್ಲಿ ಈಗಾಗಲೇ ರೆಹಮಾನ್, ಹರ್ಷಿತ್ ರಾಣಾ ಮತ್ತು ಆಕಾಶ್‌ದೀಪ್ ಹೊರಬಿದ್ದಿದ್ದಾರೆ. ಇವರ ಬದಲಿಗೆ ಬಿಕರಿಯಾಗದ ಆಟಗಾರರನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಫ್ರಾಂಚೈಸಿ ಮುಂದಾಗಬಹುದು.

ಅಭ್ಯಾಸಕ್ಕೆ ಬಾರದ ಆರ್‌ಸಿಬಿ ವೇಗಿ ದಯಾಳ್

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಮುಖ ವೇಗಿ ಯಶ್ ದಯಾಳ್ ಅಭ್ಯಾಸಕ್ಕೆ ಹಾಜರಾಗಿಲ್ಲ. ಮುಂದಿನ ವಾರ ಬೆಂಗಳೂರಿನಲ್ಲೇ ನಡೆಯಲಿರುವ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಬೆಂಗಳೂರು ಮತ್ತು ಹೈದರಾಬಾದ್ ತಂಡಗಳು ಎದುರಾಗಲಿವೆ. ಇಂಡಿಯನ್ ಪ್ರೀಮಿಯರ್ ಲೀಗ್ ಹತ್ತಿರ ಬರುತ್ತಿದ್ದಂತೆ ಎಲ್ಲಾ ತಂಡದ ಆಟಗಾರರು ತಮ್ಮ ತಮ್ಮ ಕ್ಯಾಂಪ್‌ಗಳಿಗೆ ಸೇರಿಕೊಂಡಿದ್ದಾರೆ. ಅಭ್ಯಾಸ ಜೋರಾಗಿದೆ. ಇತ್ತ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲೂ ಅಭ್ಯಾಸದ ಕಹಳೆ ಜೋರಾಗಿದೆ. ಹಾಲಿ ಚಾಂಪಿಯನ್ ಆರ್‌ಸಿಬಿ ತಂಡದ ಎಲ್ಲಾ ಆಟಗಾರರು ಮೈದಾನ ಸೇರಿಕೊಂಡಿದ್ದಾರೆ. ಆದರೆ ಕಳೆದ ಬಾರಿ ಪ್ರಮುಖ ಪಾತ್ರ ವಹಿಸಿದ್ದ ಯಶ್ ದಯಾಳ್ ಮಾತ್ರ ಶುಕ್ರವಾರದ ಅಭ್ಯಾಸದ ವೇಳೆ ಕಾಣಿಸಿಕೊಂಡಿಲ್ಲ. ಲೈಂಗಿಕ ದೌರ್ಜನ್ಯದ ಪ್ರಕರಣವನ್ನು ಎದುರಿಸುತ್ತಿರುವ ಅವರು, ಎರಡು ಕೇಸುಗಳಿಂದ ಇನ್ನೂ ಸಂಪೂರ್ಣವಾಗಿ ಮುಕ್ತಾಗಬೇಕಿದೆ. ಇದಲ್ಲದೆ ಇತ್ತೀಚೆಗಷ್ಟೇ ದಯಾಳ್ ಮದುವೆ ಮಾಡಿಕೊಂಡಿದ್ದಾರೆ. ಈ ಮಧ್ಯೆ ತಂಡದಲ್ಲಿ ಕಾಣಿಸಿಕೊಳ್ಳದಿರುವುದು ಆರ್‌ಸಿಬಿ ಅಭಿಮಾನಿಗಳಲ್ಲಿ ನಿಗೂಢ ಪ್ರಶ್ನೆಯೊಂದನ್ನಿಟ್ಟಿದೆ. ಇದಲ್ಲದೆ, ಬೆಂಗಳೂರಿನ ಆಟಗಾರರನ್ನು ಸ್ಥಳಾಂತರಿಸುವ ಬಸ್ ಮೇಲೆ ಎಲ್ಲಾ ಆಟಗಾರರ ಚಿತ್ರವಿದ್ದರೂ ಯಶ್ ದಯಾಳ್ ಅವರ ಚಿತ್ರ ಇಲ್ಲದಿರುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ.

ಲಂಕಾ ಕ್ರಿಕೆಟಿಗರ ಫಿಟ್ನೆಸ್ ಟೆಸ್ಟ್

ಮಾರ್ಚ್ 28ರಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ತನ್ನ ದೇಶದ ಆಟಗಾರರಿಗೆ ನಿರಾಕ್ಷೇಪಣಾ ಪತ್ರ ನೀಡುವ ಮೊದಲು ಕೆಲವು ಆಟಗಾರರಿಗೆ ಫಿಟ್ನೆಸ್ ಪರೀಕ್ಷೆಗೆ ಒಳಗಾಗಿಸಲಿದೆ. ಕೆಕೆಆರ್ ತಂಡಕ್ಕೆ ಆಯ್ಕೆಯಾಗಿರುವ ಮತೀಶ ಪಥಿರಾಣ, ಲಖನೌ ತಂಡದ ವನಿಂದು ಹಸ್ರಂಗಾ, ಹೈದರಾಬಾದ್‌ನ ಈಶಾನ್ ಮಾಲಿಂಗಾ ಮತ್ತು ಬೆಂಗಳೂರು ತಂಡದ ತುಷಾರಾ ನಿರಾಕ್ಷೇಪಣಾ ಪತ್ರ ಪಡೆಯಬೇಕಿದೆ. ಸೋಮವಾರ ಮತ್ತು ಮಂಗಳವಾರದಂದು ಶ್ರೀಲಂಕಾ ಕ್ರಿಕೆಟ್ ಸಂಸ್ಥೆ ವಿವಿಧ ಆಟಗಾರರ ಫಿಟ್ನೆಸ್ ಪರೀಕ್ಷೆ ತೆಗೆದುಕೊಳ್ಳಲಿದೆ. ಮೇಲಿನ ಆಟಗಾರರೆಲ್ಲರೂ ಇದರಲ್ಲಿ ಭಾಗಿಯಾಗಲಿದ್ದಾರೆ. ಚಮೀರಾ, ನಿಸ್ಸಂಕಾ ಮತ್ತು ಮೆಂಡೀಸ್ ಮಾತ್ರ ಈಗಾಗಲೇ ಫಿಟ್ನೆಸ್ ಪ್ರಮಾಣ ಪಡೆದುಕೊಂಡಿದ್ದಾರೆ. ಅವರಿಗೆ ಸಂಸ್ಥೆ ನಿರಾಕ್ಷೇಪಣಾ ಪತ್ರ ಕೂಡ ನೀಡಿದೆ.

ವಿಂಬಲ್ಡನ್‌ಗೂ ಬಂತು ಡಿಆರ್‌ಎಸ್ ವ್ಯವಸ್ಥೆ!

ಲಂಡನ್: ಅಂಪೈರ್‌ಗಳ ನಿರ್ಣಯವನ್ನು ಮರುಪರಿಶೀಲನೆ ಮಾಡುವ ವಿಡಿಯೋ ರಿವೀವ್ ವ್ಯವಸ್ಥೆ ಇದೀಗ ಟೆನಿಸ್‌ಗೂ ಬಂದಿದೆ. ಇದೇ ಮೊದಲ ಬಾರಿಗೆ ಈ ವರ್ಷದ ವಿಂಬಲ್ಡನ್ ಗ್ರ್ಯಾಂಡ್‌ಸ್ಲಾಮ್ ಪಂದ್ಯಾವಳಿಗೆ ಕ್ಯಾಮರಾ ರಿವೀವ್ ಇರುವುದಾಗಿ ಸಂಸ್ಥೆ ಶನಿವಾರ ತಿಳಿಸಿದೆ.

ಇಂಗ್ಲೆಂಡ್‌ನಲ್ಲಿ ನಡೆಯುವ ದೊಡ್ಡ ಗ್ರ್ಯಾಂಡ್‌ಸ್ಲಾಮ್ ಅನ್ನಿಸುವ ವಿಂಬಲ್ಡನ್‌ನಲ್ಲಿ ಇಷ್ಟು ವರ್ಷ ಚೇರ್ ಅಂಪೈರ್ ನೀಡುವ ನಿರ್ಧಾರವೇ ಅಂತಿಮವಾಗಿತ್ತು. ಆದರೆ ಮೊದಲ ಬಾರಿಗೆ ಅಂಪೈರ್‌ಗಳ ನಿರ್ಣಯವನ್ನು ಪ್ರಶ್ನಿಸುವ ಅಧಿಕಾರ ಆಟಗಾರರಿಗೆ ನೀಡಲಾಗಿದೆ. ಇದಕ್ಕೆ ಎಲೆಕ್ಟ್ರಾನಿಕ್ ಲೈನ್ ಕಾಲಿಂಗ್ ಎಂಬ ಹೆಸರನ್ನಿಡಲಾಗಿದೆ. ಎರಡು ಬಾರಿ ಬಾಲು ನೆಲಕ್ಕೆ ಪುಟದಿರುವ ವಿಚಾರ, ಆಟಗಾರರಿಗೆ ತಾಗಿದ ವಿಚಾರವನ್ನು ಮರುಪರಿಶೀಲನೆ ನಡೆಸುವ ಹಂತಕ್ಕೇರಬಹುವುದು.

ಆಟಗಾರರು ಪಾಯಿಂಟ್–ಎಂಡಿಂಗ್ ಕರೆಯ ಸಮಯದಲ್ಲಿ, ಆಟಗಾರನು ತಕ್ಷಣವೇ ಆಟವನ್ನು ನಿಲ್ಲಿಸಿದಾಗ ಅಥವಾ ಪಾಯಿಂಟ್ ಪೂರ್ಣಗೊಂಡ ತಕ್ಷಣ (ಅಡೆತಡೆಯ ಸಂದರ್ಭದಲ್ಲಿ) ಚೇರ್ ಅಂಪೈರ್ ಮಾಡಿದ ನಿರ್ದಿಷ್ಟ ತೀರ್ಪಿನ ಕರೆಗಳನ್ನು (ಉದಾಹರಣೆಗೆ, 'ನಾಟ್–ಅಪ್', 'ಫೌಲ್ ಶಾಟ್', 'ಟಚ್') ಪರಿಶೀಲಿಸಲು ಅನುಮತಿಸಲಾಗುತ್ತದೆ, ಎಂದು ಆಲ್ ಇಂಗ್ಲೆಂಡ್ ಲಾನ್ ಟೆನಿಸ್ ಮತ್ತು ಕ್ರೋಕೆಟ್ ಕ್ಲಬ್ ಹೇಳಿಕೆಯಲ್ಲಿ ತಿಳಿಸಿದೆ.

ಮಾ.24ರಿಂದ ರಾಷ್ಟ್ರ ಮಟ್ಟದ ಪವರ್ ಲಿಫ್ಟಿಂಗ್

ಮಂಗಳೂರು: ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಶನ್ ಆಶ್ರಯದಲ್ಲಿ, ಕಶಾರ್ಪ್ ಫಿಟ್ನೆಸ್ ವತಿಯಿಂದ ರಾಷ್ಟ್ರ ಮಟ್ಟದ ಸೀನಿಯರ್ ಕ್ಲಾಸಿಕ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ ಮಾ.24ರಿಂದ 28ರವರೆಗೆ ಮಂಗಳೂರಿನ ಟಿ.ವಿ.ರಮಣ ಪೈ ಸಭಾಂಗಣದಲ್ಲಿ ನಡೆಯಲಿದೆ.

ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ವಿಜೇತರು ಲಿಥುವೇನಿಯಾದಲ್ಲಿ ಜೂನ್‌ನಲ್ಲಿ ನಡೆಯಲಿರುವ ವಿಶ್ವ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಲಿದ್ದಾರೆ. ಸ್ಪರ್ಧೆಯಲ್ಲಿ ಸ್ಕ್ವಾಟ್, ಬೆಂಚ್‌ಪ್ರೆಸ್ ಮತ್ತು ಡೆಡ್‌ಲಿಫ್ಟ್ ವಿಭಾಗಗಳಿದ್ದು, ಮಾ.24ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟನೆ ನಡೆಯಲಿದೆ ಎಂದು ಚಾಂಪಿಯನ್‌ಶಿಪ್‌ನ ನಿರ್ದೇಶಕ ಸತೀಶ್ ಕುಮಾರ್ ಕುದ್ರೋಳಿ ತಿಳಿಸಿದ್ದಾರೆ.



5 ದಿನಗಳ ಈ ಚಾಂಪಿಯನ್‌ಶಿಪ್‌ನಲ್ಲಿ ವಿವಿಧ ರಾಜ್ಯಗಳ 300ಕ್ಕೂ ಅಧಿಕ ಪುರುಷ ಹಾಗೂ ಮಹಿಳಾ ಪವರ್ ಲಿಫ್ಟರ್‌ಗಳು ಭಾಗವಹಿಸಲಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದ ಮಾನದಂಡಗಳಡಿ ಈ ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದ್ದು, ಎಲ್ಲಾ ರೀತಿಯ ಸೌಲಭ್ಯಗಳನ್ನು ಸಂಸ್ಥೆ ವತಿಯಿಂದ ಒದಗಿಸಲಾಗುವುದು ಎಂದು ಕಶಾರ್ಪ್ ಫಿಟ್ನೆಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಪ್ರದೀಪ್ ಕುಮಾರ್ ತಿಳಿಸಿದರು.ಬೇರೆ ಕ್ರೀಡೆಗಳಿಗೆ ಹೋಲಿಸಿದರೆ ಪವರ್ ಲಿಫ್ಟಿಂಗ್ ಭಾರತದಲ್ಲಿ ಅಧಿಕ ಪದಕಗಳನ್ನು ತರುವ ಕ್ರೀಡೆಯಾಗಿದೆ. ಈ ಕ್ರೀಡೆಗೆ ಇನ್ನಷ್ಟು ಬೆಂಬಲದ ಅಗತ್ಯವಿದೆ ಎಂದು ಅವರು ಹೇಳಿದರು.

ಸವಾಲುಗಳನ್ನೆದುರಿಸಲು ಸಜ್ಜು: ಕೊಹ್ಲಿ | ಹೊಸಬರಿಗೆ ಸ್ವಾಗತ

ಕಪ್ ಉಳಿಸಿಕೊಳ್ಳಲು ಸನ್ನದ್ಧ

ಬೆಂಗಳೂರು: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಟ್ರೋಫಿ ಉಳಿಸಿಕೊಳ್ಳಲು ಸಜ್ಜಾಗಿದೆ. ಶಿಸ್ತು ಬದ್ಧ ಅಭ್ಯಾಸ ಆರಂಭಿಸಿರುವ ತಂಡವು ವಿಶೇಷ ಸೆಷನ್‌ಗಳನ್ನು ನಡೆಸಿತು.

ನಾವು ಟ್ರೋಫಿ ಉಳಿಸಿಕೊಳ್ಳಲು ಪಡಬೇಕಾದ ಶ್ರಮವನ್ನು ಪಟ್ಟಿದ್ದೇವೆ. ಕಳೆದ ಎರಡು–ಮೂರು ದಿನಗಳಲ್ಲಿ ನಾವು ಹೆಚ್ಚಿನ ಅಭ್ಯಸವನ್ನೂ ಮಾಡಿದ್ದೇವೆ, ಕಳೆದ ಬಾರಿ ಮಾಡಿದ ಸಾಧನೆ ಮತ್ತೊಮ್ಮೆ ಮಾಡಲು ನಾವು ಸಿದ್ಧವಾಗಿದ್ದೇವೆ ಎಂದು ಅಭ್ಯಾಸದ ವೇಳೆ ತಂಡದೊಂದಿಗೆ ಮಾತನಾಡುತ್ತಾ ವಿರಾಟ್ ಕೊಹ್ಲಿ ಹೇಳಿದರು. ಟ್ರೋಫಿ ಸಾಧಿಸುವುದಕ್ಕೆ ಕೇವಲ ಸಾಮಾನ್ಯ ಅಭ್ಯಾಸ ಮಾಡಿದರೆ ಸಾಲದು. ನಾವು ಗುಣಮಟ್ಟದ ಅಭ್ಯಾಸ ಮಾಡಬೇಕಿದೆ, ಒಂದೇ ಒಂದು ಕ್ಷಣವನ್ನೂ ನಾವು ಸುಮ್ಮನಿರಲಾಗಲ್ಲ. ಕಪ್‌ಗಾಗಿ ನಾವು ನಮ್ಮ 120 ರಷ್ಟು ಶ್ರಮವನ್ನು ಪಡಬೇಕು ಎಂದು ಹೇಳಿದ್ದಾರೆ.

ಹೊಸ ಆಟಗಾರರಿಗೆ ಸ್ವಾಗತ:

ಇದೇ ಮೊದಲ ಬಾರಿಗೆ ತಂಡ ಸೇರಿಕೊಂಡ ಆಟಗಾರರನ್ನು ಪ್ರಮುಖ ಕೋಚ್ ಆ್ಯಂಡಿ ಫ್ಲಾವರ್ ಸ್ವಾಗತಿಸಿದರು. ವೆಂಕಟೇಶ್ ಅಯ್ಯರ್, ಮಂಗೇಶ್ ಯಾದವ್, ಜಾರ್ಡನ್ ಕಾಕ್ಸ್, ವಿಕಿ ಓಸ್ತವಾಲ್, ಸಾತ್ವಿಕ್ ದೇಶ್ವಾಲ್, ಮತ್ತು ವಿಶೇಷವಾಗಿ ಅಂಡರ್ –19 ತಂಡದಲ್ಲಿ ಗಮನ ಸೆಳೆದಿರುವ ಕನಿಷ್ಕ್ ಚೌಹಾಣ್ ಮತ್ತು ವಿಹಾನ್ ಮಲಹೋತ್ರಾ ಅವರನ್ನು ಉದ್ದೇಶಿಸಿ ಮಾತನಾಡಿದ ಆ್ಯಂಡಿ, ನಾವು ಹರಾಜಿನಲ್ಲಿ ಅತ್ಯುತ್ತಮ ಆಟಗಾರರನ್ನು ಖರೀದಿಸಿದ್ದೇವೆ. ಕಳೆದ ಬಾರಿಯ ತಂಡವನ್ನು ಇನ್ನಷ್ಟು ಬಲಿಷ್ಠಗೊಳಿಸಿದ್ದೇವೆ. ಮುಖ್ಯವಾಗಿ ಯುವ ಆಟಗಾರರನ್ನು ಒಗ್ಗೂಡಿಸಿದ್ದೇವೆ. ವಿರಾಟ್ ಕೊಹ್ಲಿ ಮತ್ತು ರಜತ್ ಪಾಟಿದಾರ್ ಅವರ ನಾಯಕತ್ವದಲ್ಲಿ ಅವರಿಗೆ ಸ್ವಾಗತಿಸುತ್ತೇನೆ ಎಂದರು.

> ಎಲ್ಲರೂ ಒಬ್ಬರಿಗೊಬ್ಬರನ್ನು ಭೇಟಿ ಮಾಡಲು ಉತ್ಸುಕರಾಗಿದ್ದೆವು. ಹೊಸ ಮುಖಗಳನ್ನು ನಾವು ತಂಡದಲ್ಲಿ ಸ್ವಾಗತಿಸುತ್ತೇವೆ, ನಾನು ವೈಯಕ್ತಿಕವಾಗಿ ನೆಟ್ಸ್‌ನಲ್ಲಿ ಆಡಲು ಉತ್ಸುಕನಾಗಿದ್ದೆ. ನನಗೆ ಹೆಚ್ಚಿನ ಬ್ಯಾಟಿಂಗ್ ಸಿಗಲಿದೆ. ನೆಟ್ಸ್‌ನಲ್ಲಿ ಕೋಚ್‌ಗಳ ಮಧ್ಯೆ ಹೊಸ ಕಲಿಕೆ ಸಿಗಲಿದೆ.
> ■ **ಜಿತೇಶ್ ಶರ್ಮ,** ವಿಕೆಟ್ ಕೀಪರ್–ಬ್ಯಾಟರ್



ಈ ವರ್ಷ ಆಟವೇ ಬೇರೆಯದ್ದು. ಹೊಸ ಆಟಗಾರರನ್ನು ಹೊಂದಿರುವುದು ಸಮಸ್ತ ಆರ್‌ಸಿಬಿ ಅಭಿಮಾನಿಗಳಿಗೆ ಹೆಮ್ಮೆ ತಂದಿದೆ. ಕಪ್ ಕೂಡ ನಮ್ಮದಾಗಿಸಿಕೊಂಡಿದ್ದೇವೆ. ಆದರೆ ಕಾಲ ಮುಗಿದಿದೆ. ಇದು ಹೊಸ ಆವೃತ್ತಿ, ನಾವು ಹೊಸ ಹೊಸ ಸವಾಲುಗಳನ್ನು ಎದುರಿಸಲಿದ್ದೇವೆ. ಅದೇ ನಮಗೆ ತುಂಬಾ ರೋಮಾಂಚನಕಾರಿಯಾದ ವಿಷಯ. ಈ ಬಾರಿಯ ಐಪಿಎಲ್ ಅನ್ನೂ ಗೆಲ್ಲಲು ನಾವು ಇಲ್ಲಿದ್ದೇವೆ ಎಂದರು.

ಇಂಡಿಯನ್ ಓಪನ್‌ನಲ್ಲಿ ಸ್ಥಳೀಯರದ್ದೇ ದರ್ಬಾರ್

ಸ್ಕ್ವ್ಯಾಷ್: ಸೆಮಿಗೆ 4 ಭಾರತೀಯರು

ಮುಂಬೈ: ಭಾರತದ ಪ್ರಮುಖ ಸ್ಕ್ವ್ಯಾಷ್ ಆಟಗಾರರಾದ ಅಭಯ್ ಸಿಂಗ್, ವೀರ್ ಚೆಟ್ರೋನಿ, ಅನಹತ್ ಸಿಂಗ್ ಹಾಗೂ ತನ್ವಿ ಕುಮಾರ್ ತಮ್ಮ ಪ್ರಾಬಲ್ಯ ಮುಂದುವರಿಸಿ ಸೆಮಿಗೇರಿದ ನಂತರ ಜೆಎಸ್‌ಡಬ್ಲ್ಯು ಇಂಡಿಯನ್ ಓಪನ್ ಸ್ಕ್ವ್ಯಾಷ್ ಪಂದ್ಯಾವಳಿಯಲ್ಲಿ ಭಾರತದ ಪಾರುಪತ್ಯ ಮುಂದೆ ಸಾಗಿದೆ.

ಪ್ರಾಬಲ್ಯಭರಿತ ಪ್ರದರ್ಶನದೊಂದಿಗೆ ಮಿಂಚಿದ ಭಾರತದ ಪ್ರಮುಖ ಆಟಗಾರರು ಕ್ವಾರ್ಟರ್‌ಫೈನಲ್‌ನಲ್ಲಿ ಕರಾರುವಾಕ್ ಪ್ರದರ್ಶನೊಂದಿಗೆ ಭಾರೀ ಗೆಲುವು ಸಾಧಿಸಿದರು.

ಅಭಯ್ ಮಿಂಚಿನಾಟ: ಜೀವಾ ಇಜಿಪ್ಟ್‌ನ ಇಬ್ರಾಹಿಂ ಎಲ್ ಕಬ್ಬಾನಿ ಅವರನ್ನು ಎದುರಿಸಿ 3–0(11–8, 11–7, 11–8) ರಿಂದ ಸೋಲಿಸಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದರು. ಇಜಿಪ್ಟ್‌ನ ಯಾಸ್ಸಿನ್ ಶೋಹ್ದಿ ಅವರನ್ನು ಎದುರಿಸಿದ್ದ ಭಾರತದ ಭರವಸೆಯ ಆಟಗಾರ ಅಭಯ್ ಸಿಂಗ್ ಕರಾರುವಾಕ್ ಪ್ರದರ್ಶನದೊಂದಿಗೆ 3–1 (11–8, 7–11, 11–5, 11–7) ರಿಂದ ಗೆದ್ದರು. ಅತ್ಯುತ್ತಮ ಆರಂಭ ಪಡೆದ ಭಾರತದ ಹಿರಿಯ ಆಟಗಾರ ಅಭಯ್ ಎದುರಾಳಿಗೆ ಮೊದಲಿನಿಂದಲೂ ಕಡಿವಾಣ ಹಾಕಿದರು. ಮೊದಲನೇ ಸೆಟ್‌ನಲ್ಲಿ ನಿಯಂತ್ರಿತ ಪ್ರದರ್ಶನದೊಂದಿಗೆ 11–8ರಿಂದ ಗೆದ್ದ ಅಭಯ್ ಎರಡನೇ ಸುತ್ತಿನಲ್ಲಿ ನಿರಾಸೆ ಅನುಭವಿಸಿದರೂ ಮೂರನೇ ಸುತ್ತಿನಲ್ಲಿ ಮತ್ತೆ ಪುಟಿದೆದ್ದರು. ಐದನೇ ಸೆಟ್‌ಗೆ ಕೊಂಡೊಯ್ಯದೆ ನಾಲ್ಕು ಸೆಟ್‌ಗಳಲ್ಲೇ ಪಂದ್ಯ ಮುಗಿಸಿದ ಅವರು, ಸೆಮಿಗೆ ಸಿದ್ಧರಾದರು. ಇದಕ್ಕೂ ಮೊದಲು ಚೆಟ್ರೋನಿ ತಮ್ಮ ಆಕ್ರಮಣಕಾರಿ ಆಟದೊಂದಿಗೆ ಮಿಂಚಿದರು. ಇಜಿಪ್ಟ್‌ನ ಮೊಹಮ್ಮದ್ ಶರಫ್ ಅವರನ್ನು ಎದುರಿಸಿದ್ದ ಅವರು, ಮೂರೇ ಮೂರು ಸೆಟ್‌ಗಳಲ್ಲಿ ಕ್ಲೀನ್‌ಸ್ವಿಪ್ ಮಾಡಿದರು. ನಿಯಂತ್ರಿತ ಆಟದೊಂದಿಗೆ ಮೊದಲಿನ ಸೆಟ್‌ನಲ್ಲಿ 11–9, ಎರಡನೇ ಸೆಟ್‌ನಲ್ಲಿ 11–8, ಹಾಗೂ ಮೂರನೇ ಸೆಟ್‌ನಲ್ಲಿ 11–2ರಿಂದ ಭರ್ಜರಿ ಗೆಲುವು ಸಾಧಿಸಿ ಸೆಮಿಫೈನಲ್‌ಗೇರಿದರು.




ಮಹಿಳೆಯರಲ್ಲೂ ಪ್ರಾಬಲ್ಯ: ಯುವ ಆಟಗಾರ್ತಿ ಅನಾಹತ್ ಸಿಂಗ್ ಮತ್ತು ಶ್ರೇಯಾಂಕ ರಹಿತ ಆಟಗಾರ್ತಿ ತನ್ವಿ ಖನ್ನಾ ಅವರು ಅತ್ಯುತ್ತಮ ಪ್ರದರ್ಶನದೊಂದಿಗೆ ಮಿಂಚಿದರು. ಮೊದಲಿನೇ ಸುತ್ತಿನ ಪಂದ್ಯದಿಂದಲೂ ಈ ಇಬ್ಬರೂ ಕರಾರುವಾಕ್ ಪ್ರದರ್ಶನವನ್ನೇ ನೀಡುತ್ತಾ ಬಂದರು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮಲೇಷ್ಯಾದ ಸೆಹವೀತ್ರಾ ಕುಮಾರ್ ಅವರನ್ನು ಎದುರಿಸಿದ್ದ ಅನಾಹತ್ ಸಿಂಗ್ 30 (11–2, 11–6, 11–4)ರಿಂದ ಭರ್ಜರಿ ಗೆಲುವು ಸಾಧಿಸಿದರು. ಮೊದಲಿನಿಂದಲೂ ಪಂದ್ಯದಲ್ಲಿ ಹಿಡಿತ ಸಾಧಿಸಿದ ಅವರು, ಕೊನೆಯವರೆಗೂ ಎದುರಾಳಿಗೆ ಅವಕಾಶವೇ ನೀಡಲಿಲ್ಲ. ನಾಲ್ಕನೇ ಸೀಡ್‌ನ ಐನಾ ಅಮಾನಿ ಅವರನ್ನು ಎದುರಿಸಿದ್ದ ತನ್ವಿ 3–1ರಿಂದ ಗೆಲುವು ಸಾಧಿಸಿ ಮುನ್ನಡೆದರು. ಜೋಶ್ನಾ ಕ್ವಾರ್ಟರ್‌ಫೈನಲ್‌ನಲ್ಲಿ ಹಿನ್ನಡೆ ಅನುಭವಿಸಿದರು.

ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಕೂಟಕ್ಕೆ ಸಿದ್ಧತೆ

ತುಮಕೂರಲ್ಲಿ ಅಂತಾರಾಷ್ಟ್ರೀಯ ಟೆನಿಸ್

ಬೆಂಗಳೂರು: ಇಲ್ಲಿನ ವಿಶ್ವವಿದ್ಯಾಲಯ ಆವರಣದ ಜಿಲ್ಲಾ ಟೆನಿಸ್ ಕ್ರೀಡಾಂಗಣದಲ್ಲಿ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಟೂರ್ನಿ ನಡೆಯಲಿದೆ. ಮೇ 4ರಿಂದ 10ರವರೆಗೆ ತುಮಕೂರಿನಲ್ಲಿ ಟೆನಿಸ್ ಹಬ್ಬ ನೆರವೇರಲಿದೆ. ಸುಮಾರು 30,000 ಡಾಲರ್ ಬಹುಮಾನ ಮೊತ್ತದ ಈ ಸ್ಪರ್ಧೆ ತುಮಕೂರಿನ ಇತಿಹಾಸದಲ್ಲೇ ಮೊದಲ ಮಹಿಳಾ ಐಟಿಎಫ್ ಟೂರ್ನಿಯಾಗಿದ್ದು, ಎರಡು ದಶಕಗಳ ನಂತರ ಮತ್ತೆ ಅತಾರಾಷ್ಟ್ರೀಯ ಟೆನಿಸ್ ಕ್ರೀಡೆಗೆ ವೇದಿಕೆಯಾಗುತ್ತಿದೆ.

ಈ ಸ್ಪರ್ಧೆಯಲ್ಲಿ 32 ಆಟಗಾರ್ತಿಯರ ಮುಖ್ಯ ಡ್ರಾ ಹಾಗೂ ಅರ್ಹತಾ ಸುತ್ತುಗಳ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಯುವ ಆಟಗಾರ್ತಿಯರು ಮತ್ತು ಭಾರತದ ಶ್ರೇಷ್ಠ ಆಟಗಾರ್ತಿಯರು ಭಾಗವಹಿಸಲಿದ್ದಾರೆ. ಇದು ವಿಶ್ವ ಟೆನಿಸ್ ಸಂಘಟನೆಯ ಸರ್ಕ್ಯೂಟ್‌ನ ಭಾಗವಾಗಿದ್ದು, ಆಟಗಾರ್ತಿಯರಿಗೆ ರ್‍ಯಾಂಕಿಂಗ್ ಅಂಕಗಳನ್ನು ಗಳಿಸಲು ಅವಕಾಶ ಒದಗಿಸುತ್ತದೆ.




ವರ್ಷಗಳ ನಂತರ ಟೆನಿಸ್: 2003ರಲ್ಲಿ ತುಮಕೂರಿನಲ್ಲಿ ನಡೆದ ಎಟಿಪಿ ಚಾಲೆಂಜರ್ ಟೂರ್ನಿಯ ನಂತರ ಇದೇ ಮೊದಲ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಾಗಿದೆ. ಆ ಸಂದರ್ಭದಲ್ಲಿ ರೋಹನ್ ಬೋಪಣ್ಣ, ಪ್ರಕಾಶ್ ಅಮೃತರಾಜ್ ಸೇರಿದಂತೆ ಹಲವರು ಭಾಗವಹಿಸಿದ್ದರು. ಜರ್ಮನಿಯ ಫಿಲಿಪ್ ಕೊಹ್ಲ್‌ಶ್ರೈಬರ್ ಪ್ರಶಸ್ತಿ ಗೆದ್ದಿದ್ದು, ಮಾರ್ಕೋಸ್ ಬಾಗ್ದಾತಿಸ್ ಸೆಮಿಫೈನಲ್ ತಲುಪಿದ್ದರು. ಸಚಿವ ಪ್ರಿಯಾಂಕ್ ಖರ್ಗೆ ಅವರು, ತುಮಕೂರಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿ ಆಯೋಜನೆ ನಮ್ಮ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ. ಇದು ರಾಜ್ಯದ ಯುವ ಪ್ರತಿಭೆಗಳಿಗೆ ಪ್ರೇರಣೆ ನೀಡಲಿದೆ ಎಂದು ಹೇಳಿದರು. ಒಟ್ಟಿನಲ್ಲಿ, ದೇಶ–ವಿದೇಶದ ಆಟಗಾರ್ತಿಯರು ಭಾಗವಹಿಸುವ ಈ ಐಟಿಎಫ್ ಡಬ್ಲ್ಯು35 ಟೂರ್ನಿ ತುಮಕೂರಿನ ಕ್ರೀಡಾ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸುವ ನಿರೀಕ್ಷೆಯಿದೆ ಎಂದಿದ್ದಾರೆ.

ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ ಅವರು, ಇದು ತುಮಕೂರಿಗೆ ಹೆಮ್ಮೆಯ ಕ್ಷಣ. ಎರಡು ದಶಕಗಳ ನಂತರ ಇಂತಹ ದೊಡ್ಡ ಮಟ್ಟದ ಟೂರ್ನಿ ಆಯೋಜನೆ ನಮ್ಮ ಜಿಲ್ಲೆಯ ಕ್ರೀಡಾ ಅಭಿವೃದ್ಧಿಯ ಪ್ರತೀಕವಾಗಿದೆ. ಯುವಕರಿಗೆ ಹೆಚ್ಚಿನ ಅವಕಾಶಗಳನ್ನು ನೀಡಲು ಇದು ಸಹಕಾರಿ ಎಂದು ಹೇಳಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5930

ಎಡದಿಂದ ಬಲಕ್ಕೆ
1.ಕೆಲಸಕ್ಕೆ ಪ್ರಯತ್ನಿಸು–ತೊಡಗು (4)
3.ಮಾರುವಿಕೆಯಿಲ್ಲಿ ತಿರುಗಿದೆ (3)
5.ಕಸುವಿನ ನಡುವೆ ಪಡ್ಡೆ ಜಾನುವಾರಿದೆ (3)
7.ಕಡಮೆ–ಅಭಾವದ ಸಮಾನಪದ (3)
8.ಬಿಡುಗಡೆಗಾಗಿ ತೋರುತ್ತಿರುವ ಅವಸರ (4)
10.ಬೇಡಿಕೆಯ ಪತ್ರದ ಮೊದಲು ದರವಿದೆ (4)
12.ತಳದ ನಡುವೆ ಅಡಗಿ ಕುಳಿತ ಹುಡುಗ (3)
14.ಸುತನು ಹೀಗೆ ಒಳ್ಳೆಯ ಚಾರಿತ್ರ್ಯದವನು (3)
15.ಸಂಪ್ರದಾಯ–ರೂಢಿಯಿದು (3)
16.ಮತದ ನಡುವೆ ಅಡಗಿದ ವ್ಯಥೆ (4)

ಮೇಲಿನಿಂದ ಕೆಳಕ್ಕೆ
1.ಅಭ್ಯುದಯ–ಏಳಿಗೆಯಿದು (3)
2.ಸುಲಭವಾಗಿರುವಿಕೆ–ದಯಾಪರತೆ (4)
4.ತಡೆ–ನಿಗ್ರಹಿಸು ಎಂಬರ್ಥದ ಶಬ್ದ (4)
6.ಭೂಮಿ ಕೊರೆದು ಮಾಡಿದ ದಾರಿ (3)
7.ಸಿಂಗರಿಸಿಕೊಂಡ ಕಮಾನುಬಂಡಿ (3)
9.ಕಲಚೂರಿ ವಂಶದ ಅರಸನೀತ (3)
10.ದರಿಯ ನಡುವೆ ಹಿಡಿಯುವಿಕೆಯಿದೆ (4)
11.ಹೊಗಳು–ಕೊಂಡಾಡುವಿಕೆ (3)
12.ಮತ–ತರ ಒಳಗೊಂಡ ಮೇಲುಕೀಳು (4)
13.ಅಸಂಖ್ಯವಾದುದು (3)

5929 ಉತ್ತರ

ಎಡದಿಂದ ಬಲಕ್ಕೆ:
1.ಭಗವದ್ಗೀತೆ
3.ಕುಟುಕು 5.ರಮೇಶ
6.ನಕುಲ 8.ಚಿತ್ರಕ
9.ಸಾಕ್ಷರ 13.ಮಣಕ
15.ತಮಾಳ 16.ನಮನ
17.ಕುಮುದಾಕರ

ಮೇಲಿನಿಂದ ಕೆಳಕ್ಕೆ :
1.ಭವನ 2.ತೆರಳು
3.ಕುಶಲ 4.ಕುತ್ಸಿಕಾಚಾರ
7.ಕುತಂತ್ರ 8.ಚಿರನೂತನ
10.ಕ್ಷಪಣ 11.ವೇತನ
12.ಬೆಳಕು 14.ಕಠೋರ

ಕಿರುಸುದ್ದಿ

ಕಾರು-ಬೈಕ್ ಡಿಕ್ಕಿ: ಗಾಯಾಳು ವಿದ್ಯಾರ್ಥಿ ಸಾವು

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿಯ ಚಟ್ಟಂಚಾಲ್ ಮೇಲ್ಸೇತುವೆಯಲ್ಲಿ ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸರ್ವೀಸ್ ರಸ್ತೆಗೆ ಬಿದ್ದು ಗಂಭೀರ ಗಾಯಗೊಂಡು ಚಿಕಿತ್ಸೆಯಲ್ಲಿದ್ದ ವಿದ್ಯಾರ್ಥಿ ಮೃತಪಟ್ಟಿದ್ದಾನೆ. ವಿದ್ಯಾನಗರ ಉದಯಗಿರಿ ನಿವಾಸಿ ಬಿ.ದಿನೇಶ್ ಮತ್ತು ರತ್ನಾವತಿ ದಂಪತಿಯ ಏಕಪುತ್ರ ಪೆರಿಯ ಸರಕಾರಿ ಪಾಲಿಟೆಕ್ನಿಕ್‌ನ ತೃತೀಯ ವರ್ಷ ಕಂಪ್ಯೂಟರ್ ವಿದ್ಯಾರ್ಥಿ ರಕ್ಷಿತ್ ಎನ್. (19) ಸಾವನ್ನಪ್ಪಿದ ದುರ್ದೈವಿ. ಕಳೆದ ಗುರುವಾರ ಸಂಜೆ ಅಪಘಾತ ಸಂಭವಿಸಿದೆ. ಸಹಪಾಠಿ ಕಾಸರಗೋಡು ಕೊಲ್ಲಂಬಾಡಿ ಬೈತುಲ್ ಸಯ್ಯಿದ್ ಹೌಸ್‌ನ ಕೆ.ಎ.ಸೈದ್ (19) ಬೈಕ್ ಚಲಾಯಿಸುತ್ತಿದ್ದರು. ರಕ್ಷಿತ್ ಬೈಕ್‌ನ ಹಿಂಬದಿ ಸೀಟಿನಲ್ಲಿ ಕುಳಿತಿದ್ದರು. ರಕ್ಷಿತ್ ಹಾಗೂ ಸೈದ್ ಬೈಕ್‌ನಲ್ಲಿ ಕಾಲೇಜಿನಿಂದ ಮನೆಗೆ ಹಿಂತಿರುಗುತ್ತಿದ್ದ ವೇಳೆ ಚಟ್ಟಂಚಾಲ್ ಮೇಲ್ಸೇತುವೆಯಲ್ಲಿ ಹಿಂದಿನಿಂದ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಡಿಕ್ಕಿಯ ರಭಸಕ್ಕೆ ರಕ್ಷಿತ್ ಮೇಲ್ಸೇತುವೆಯಿಂದ ಆರು ಮೀಟರ್‌ನಷ್ಟು ಕೆಳಗಿರುವ ಸರ್ವೀಸ್ ರಸ್ತೆಗೆ ಬಿದ್ದು ಗಾಯಗೊಂಡಿದ್ದರು. ಕೂಡಲೇ ಕಾಸರಗೋಡಿನ ಆಸ್ಪತ್ರೆಗೆ ಬಳಿಕ ಮಂಗಳೂರಿನ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸಾವು ಸಂಭವಿಸಿತು. ಕಾರು ಚಾಲಕ ಎಂ.ಮುಹಮ್ಮದ್ ಶಿಬಿಲ್ ಎಂಬಾತನ ವಿರುದ್ಧ ಮೇಲ್ಪರಂಬ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ.

ಗೃಹಪ್ರವೇಶದ ಗಂಟೆಗೂ ಮುನ್ನ ಹೃದಯಾಘಾತ: ಮನೆ ಯಜಮಾನ ನಿಧನ

ಕುಂಬಳೆ: ನೂತನ ಮನೆಯ ಗೃಹ ಪ್ರವೇಶಕ್ಕೆ ಕೆಲವೇ ಗಂಟೆಗಳ ಮೊದಲು ಮನೆ ಯಜಮಾನ ಹೃದಯಾಘಾತದಿಂದ ಮೃತಪಟ್ಟ ಘಟನೆ ನಡೆದಿದೆ. ಮುಗು ಉರ್ಮಿ ಜುಮಾ ಮಸೀದಿ ಸಮೀಪದ ದಿ.ಕುಂಞಿಮಾಹಿನ್ ಹಾಜಿ ಮತ್ತು ಬೀಫಾತಿಮ್ಮ ದಂಪತಿಯ ಪುತ್ರ ಮುಹಮ್ಮದ್ ಯಾನೆ ಮೋಣು (50) ಮೃತಪಟ್ಟವರು. ಮುಗುವಿನಲ್ಲಿ ನಿರ್ಮಿಸಿದ ನೂತನ ಮನೆಯ ಗೃಹಪ್ರವೇಶ ಕಾರ್ಯಕ್ರಮ ಶುಕ್ರವಾರ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ ಶುಕ್ರವಾರ ಮುಂಜಾನೆ 4 ಗಂಟೆಯ ವೇಳೆ ಕಾರಿನಲ್ಲಿ ಸಂಚರಿಸುತ್ತಿದ್ದ ವೇಳೆ ಹೃದಯಾಘಾತ ಸಂಭವಿಸಿದ್ದು, ಕೂಡಲೇ ಕಾಸರಗೋಡಿನ ಆಸ್ಪತ್ರೆಗೆ ತಲುಪಿಸಿದರೂ ಜೀವ ಉಳಿಸಲು ಸಾಧ್ಯವಾಗಲಿಲ್ಲ. ಮೃತರು ಪತ್ನಿ ಶಂಸೀನಾ ಹಾಗೂ ಐದು ಮಂದಿ ಮಕ್ಕಳನ್ನು ಅಗಲಿದ್ದಾರೆ.

ನಾಪತ್ತೆಯಾದ ಬಳಿಕ ಹೊಳೆಯಲ್ಲಿ ಅಸ್ವಸ್ಥ ಸ್ಥಿತಿಯಲ್ಲಿ ಪತ್ತೆಯಾದ ಬಿಎಲ್‌ಒ ಮೃತ್ಯು

ಕಾಸರಗೋಡು: ಶನಿವಾರ ಬೆಳಗ್ಗೆ ಮನೆಯಿಂದ ನಾಪತ್ತೆಯಾದ ಬಳಿಕ ಮೊಗ್ರಾಲ್ ಕಡವತ್ ಹೊಳೆಯಲ್ಲಿ ಅಸ್ವಸ್ಥ ಸ್ಥಿತಿಯಲ್ಲಿ ಪತ್ತೆಯಾದ ಬಿಎಲ್‌ಒ ಮೃತಪಟ್ಟ ಘಟನೆ ನಡೆದಿದೆ. ಮೊಗ್ರಾಲ್ ಪುತ್ತೂರು ನಿವಾಸಿ ಶಾಫಿ ಎಂಬವರ ಪುತ್ರ, ಚೆರ್ಕಳ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಅಧ್ಯಾಪಕ ಸವಾದ್ (32) ಮೃತಪಟ್ಟವರು. ಅವರು ಮೊಗ್ರಾಲ್ ಪುತ್ತೂರು ಒಂದನೇ ಬೂತ್‌ನ ಬಿಎಲ್‌ಒ ಆಗಿದ್ದರು. ಶನಿವಾರ ಬೆಳಗ್ಗೆ 7 ಗಂಟೆಗೆ ಸವಾದ ಮನೆಯಿಂದ ನಾಪತ್ತೆಯಾಗಿದ್ದರು. ಬಳಿಕ ಮನೆಯವರು ಹಾಗೂ ಊರವರು ಹುಡುಕಾಟ ನಡೆಸಿದಾಗ ಸ್ಕೂಟರ್ ಮೊಗ್ರಾಲ್ ಪುತ್ತೂರು ಸೇತುವೆ ಮೇಲೆ ಪತ್ತೆಯಾಗಿತ್ತು. ಈ ಹಿನ್ನೆಲೆಯಲ್ಲಿ ಶೋಧ ನಡೆಸಿದಾಗ ಅವರನ್ನು ಅಸ್ವಸ್ಥ ಸ್ಥಿತಿಯಲ್ಲಿ ಮೊಗ್ರಾಲ್ ಕಡವತ್ ಹೊಳೆಯಲ್ಲಿ ಪತ್ತೆಹಚ್ಚಲಾಯಿತು. ಕೂಡಲೇ ಅವರನ್ನು ಮೇಲಕ್ಕೆತ್ತಿ ಕಾಸರಗೋಡು ಜನರಲ್ ಆಸ್ಪತ್ರೆಗೆ ತಲುಪಿಸಿ ತುರ್ತು ಚಿಕಿತ್ಸೆ ನೀಡಲಾಗಿತ್ತಾದರೂ ಪ್ರಾಣ ರಕ್ಷಿಸಲು ಸಾಧ್ಯವಾಗಲಿಲ್ಲ. ಪೊಲೀಸರು ಸ್ಥಳಕ್ಕಾಗಮಿಸಿ ತನಿಖೆ ಆರಂಭಿಸಿದ್ದಾರೆ.

ನೀರಿನಲ್ಲಿ ಮುಳುಗಿ ಯುವಕ ಸಾವು

ಬೆಳ್ತಂಗಡಿ: ನೀರಲ್ಲಿ ಈಜಲು ಹೋದ ಯುವಕನೊಬ್ಬ ಆಕಸ್ಮಿಕವಾಗಿ ನೀರಿನ ಸೆಳೆತಕ್ಕೆ ಸಿಕ್ಕಿ ಸಾವನ್ನಪ್ಪಿದ ಘಟನೆ ನಡೆದಿದೆ. ಬೆಳ್ತಂಗಡಿ ತಾಲೂಕಿನ ಕರಂಬಾರು ಗ್ರಾಮದ ಕೇಳ್ಕರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿಯ ನದಿಗೆ ಮಾ.21 ರಂದು ಸಂಜೆ 4 ಗಂಟೆಗೆ ಈಜಲು ಹೋದ ಬೆಳ್ತಂಗಡಿ ತಾಲೂಕಿನ ಕುವೆಟ್ಟು ಗ್ರಾಮದ ನಿವಾಸಿ ಇರ್ಫಾನ್ (19) ಎಂಬಾತ ನೀರಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ.





ನುಡಿಸಿರಿ-ವಿರಾಸತ್ ಮಂಗಳೂರು ಘಟಕದ ಆಶ್ರಯದಲ್ಲಿ ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ಸತತ ಮೂರು ಗಂಟೆಗಳ ಸಾಂಸ್ಕೃತಿಕ ರಸದೌತಣ ಉಣಬಡಿಸಿದ ಆಳ್ವಾಸ್ ಕಲಾವಿದರು! ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್ ಭಾಗ್

ಮಂಗಳೂರಿನಲ್ಲಿ ನಡೆದ ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮದಲ್ಲಿ ಡಾ.ಎಂ.ಮೋಹನ ಆಳ್ವ

ಇದು ಪರಂಪರೆ ಗಟ್ಟಿಗೊಳಿಸುವ ಕಾರ್ಯ

ಮಂಗಳೂರು: ಆಳ್ವಾಸ್ ಶಿಕ್ಷಣ ಸಂಸ್ಥೆ ಶೈಕ್ಷಣಿಕ ಕಾರ್ಯಕ್ರಮ ಜೊತೆಗೆ ದೇಶದ ಸಾಂಸ್ಕೃತಿಕ ಪರಂಪರೆ ಸಾರುವ ಕೆಲಸ ನಿರಂತರವಾಗಿ ನಡೆಸುತ್ತಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಹೇಳಿದರು.

ಆಳ್ವಾಸ್ ನುಡಿಸಿರಿ-ವಿರಾಸತ್ ಮಂಗಳೂರು ಘಟಕದ ಆಶ್ರಯದಲ್ಲಿ ಮಂಗಳೂರಿನ ಕರಾವಳಿ ಉತ್ಸವ ಮೈದಾನದ ಕೀರ್ತಿಶೇಷ ಡಾ.ಎನ್. ವಿನಯ ಹೆಗ್ಡೆ ವೇದಿಕೆಯಲ್ಲಿ ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ ಅವರು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ವತಿಯಿಂದ ಇದುವರೆಗೆ 88 ಆಳ್ವಾಸ್ ನುಡಿಸಿರಿ, ವಿರಾಸತ್ ಘಟಕಗಳ ಮೂಲಕ ದೇಶ- ವಿದೇಶಗಳಲ್ಲಿ 500ಕ್ಕೂ ಅಧಿಕ ಕಾರ್ಯಕ್ರಮ ನೀಡುವ ಮೂಲಕ ಈ ದೇಶದ ಸಾಂಸ್ಕೃತಿಕ ಪರಂಪರೆ ಸಾರುವ ಕೆಲಸ ಮಾಡಲಾಗಿದೆ. ಈ ವರ್ಷ 40 ಕಾರ್ಯಕ್ರಮ ನೀಡಿದ್ದೇವೆ ಎಂದರು.

ಸಾಂಸ್ಕೃತಿಕ ಪ್ರಜ್ಞೆ ಇಲ್ಲದಾತ ಅಪಾಯಕಾರಿ:

ಸಾಂಸ್ಕೃತಿಕ ಪ್ರಜ್ಞೆ ಇರುವಾತ ದೇಶ, ಕಲೆ ಮತ್ತು ಕಲಾವಿದರನ್ನು ಪ್ರೀತಿಸುತ್ತಾನೆ. ಆದರೆ ಸಾಂಸ್ಕೃತಿಕ ಪ್ರಜ್ಞೆ ಇಲ್ಲದಾತ ಅಪಾಯಕಾರಿ ಎಂದು ಆಳ್ವರು ಹೇಳಿದರು. ಕಲೆ, ಕಲಾವಿದರು ದೇಶದ ಸಂಪತ್ತು. ಇದನ್ನು ಬೆಳೆಸಬೇಕಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳು ದೊಂಬರಾಟದ ಸ್ಥಿತಿಗೆ ತಲುಪಿರುವುದು ವಿಪರ್ಯಾಸ ಎಂದು ಅವರು ಹೇಳಿದರು. 147 ಕೋಟಿ ಜನಸಂಖ್ಯೆ ಇರುವ ಭಾರತದಲ್ಲಿ 52 ಕೋಟಿಯಷ್ಟು ಮಂದಿ 25 ವರ್ಷ ಕೆಳಗಿನವರಿದ್ದಾರೆ. ನಮ್ಮದು ಸಾಂಸ್ಕೃತಿಕವಾಗಿ ವೈಶಿಷ್ಟ್ಯವುಳ್ಳ ದೇಶ. ಸಾಂಸ್ಕೃತಿಕವಾಗಿ ನಾವು ನಂಬರ್‌ವನ್ ಸ್ಥಾನದಲ್ಲಿದ್ದೇವೆ. ಅದನ್ನು ಮುಂದುವರಿಸಿಕೊಂಡು ಹೋಗುವ ಮಹತ್ತರ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಮೋಹನ ಆಳ್ವ ಹೇಳಿದರು. ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾರ್ಯಕ್ರಮಗಳ ಜೊತೆಗೆ ಸಮಾಜ ಕೂಡ ಸಾಂಸ್ಕೃತಿಕ ಪರಂಪರೆಯನ್ನು ಗಟ್ಟಿಗೊಳಿಸುವ ಕಾರ್ಯವನ್ನು ಮಾಡಬೇಕಿದೆ. ಆ ಕಾರ್ಯವನ್ನು ಆಳ್ವಾಸ್ ಯಶಸ್ವಿಯಾಗಿ ಮಾಡುತ್ತಾ ಬಂದಿದೆ ಎಂದು ಹೇಳಲು ಹೆಮ್ಮೆಯಾಗುತ್ತಿದೆ ಎಂದವರು ಹೇಳಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ಕಲೆ, ಸಾಹಿತ್ಯ, ಕ್ರೀಡೆ, ಸಂಸ್ಕೃತಿ ಜತೆಗೆ ಆಧುನಿಕ ಶಿಕ್ಷಣ ಎಲ್ಲದಕ್ಕೂ ಒತ್ತು ನೀಡುವ ಮೂಲಕ ದೇಶದ ಅಸ್ಮಿತೆ ಮತ್ತು ಶಕ್ತಿಯನ್ನು ಅನಾವರಣಗೊಳಿಸುವ ಕೆಲಸ ಶ್ಲಾಘನೀಯ ಎಂದು ಹೇಳಿದರು.

ಈ ಸಾಂಸ್ಕೃತಿಕ ಕಾರ್ಯಕ್ರಮ ವನ್ನು ಕೀರ್ತಿಶೇಷ ಡಾ.ಎನ್. ವಿನಯ ಹೆಗ್ಡೆ ಅವರಿಗೆ ಅರ್ಪಿಸುವ ಮೂಲಕ ಆಳ್ವಾಸ್ ಶಿಕ್ಷಣ ಸಂಸ್ಥೆ ಉತ್ತಮ ಮೇಲ್ಪಂಕ್ತಿ ಹಾಕಿಕೊಟ್ಟಿದೆ. ಡಾ. ವಿನಯ ಹೆಗ್ಡೆ ಅವರು ಕರಾವಳಿ ಕರ್ನಾಟಕ ಮಾತ್ರವಲ್ಲ ದೇಶಕ್ಕೆ ಹೆಮ್ಮೆಯ ಕೊಡುಗೆ ನೀಡಿದ್ದಾರೆ. ಅವರದೇ ಹಾದಿಯಲ್ಲಿ ಮುನ್ನಡೆಯುತ್ತಿರುವ ಡಾ. ಮೋಹನ ಆಳ್ವರು ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಬಹು ಆಯಾಮದ ಶಿಕ್ಷಣವನ್ನು ನೀಡುತ್ತಿದ್ದಾರೆ. ಪ್ರತಿ ವಿಭಾಗದಲ್ಲೂ ಸಾಧನೆ ತೋರಿಸುವ ಮೂಲಕ ದೇಶಕ್ಕೆ ಮಾದರಿ ಎನಿಸಿದ್ದಾರೆ ಎಂದರು.



ಆಳ್ವಾಸ್ ಸಾಂಸ್ಕೃತಿಕ ಕಾರ್ಯಕ್ರಮಗಳ ವೈಭವಕ್ಕೆ ಮನಸೋತ ಜನ!

ಮಂಗಳೂರು: ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ಶನಿವಾರ ಸಂಜೆ ನಡೆದ ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಜನಮನಸೂರೆಗೊಂಡಿತು. ಒಂದನ್ನೊಂದು ಮೀರಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕ ವರ್ಗಕ್ಕೆ ಭಾರತೀಯ ಸಾಂಸ್ಕೃತಿಕ ಪರಂಪರೆಯ ರಸದೌತಣ ಉಣಬಡಿಸಿತು. ಸತತ ಮೂರು ಗಂಟೆಗಳ ಕಾಲ ನಡೆದ ಈ ಕಾರ್ಯಕ್ರಮ ಕಲಾಸಕ್ತರನ್ನು ಸಾಂಸ್ಕೃತಿಕ ಲೋಕದಲ್ಲಿ ತೇಲಾಡುವಂತೆ ಮಾಡಿತು. ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ಕಲಿಯುತ್ತಿರುವ 22 ಸಾವಿರ ವಿದ್ಯಾರ್ಥಿಗಳ ಪೈಕಿ 500 ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮದಡಿ ದತ್ತು ಸ್ವೀಕಾರ ಮಾಡಲಾಗಿದ್ದು, ಈ ವಿದ್ಯಾರ್ಥಿಗಳು ತಮ್ಮ ಅದ್ಭುತ ಪ್ರತಿಭೆಯನ್ನು ಪ್ರದರ್ಶಿಸುವ ಮೂಲಕ ಕಲಾ ನೈಪುಣ್ಯತೆ ಮರೆದರು. ಆಳ್ವಾಸ್ ನುಡಿಸಿರಿ-ವಿರಾಸತ್ ಮಂಗಳೂರು ಘಟಕದ ಆಶ್ರಯದಲ್ಲಿ ಕರಾವಳಿ ಉತ್ಸವ ಮೈದಾನದ ಕೀರ್ತಿಶೇಷ ಡಾ.ಎನ್. ವಿನಯ ಹೆಗ್ಡೆ ವೇದಿಕೆಯಲ್ಲಿ ಆಳ್ವಾಸ್ ಸಾಂಸ್ಕೃತಿಕ ವೈಭವ ಮೇಳೈಸಿತು. ಆಳ್ವಾಸ್‌ನ ವಿದ್ಯಾರ್ಥಿ ಕಲಾವಿದರಿಂದ ಭಾರತೀಯ ಕಲಾಪ್ರಕಾರಗಳಾದ ಯೋಗ ದೀಪಿಕಾ, ಶಾಸ್ತ್ರೀಯ ನೃತ್ಯ-ಅಷ್ಟಲಕ್ಷ್ಮಿ, ಬಡಗುತಿಟ್ಟು ಯಕ್ಷಗಾನ ಶಂಕರಾರ್ಧ ಶರೀರಿಣಿ, ಗುಜರಾತಿನ ದಾಂಡಿಯ ನೃತ್ಯ, ಮಣಿಪುರಿ ಸ್ಟಿಕ್ ಡಾನ್ಸ್, ಮಲ್ಲಕಂಬ ಹಾಗೂ ಕಸರತ್ತು, ಸೃಜನಾತ್ಮಕ ನೃತ್ಯ, ಡೊಳ್ಳು ಕುಣಿತ, ಕಥಕ್ ವರ್ಷಧಾರೆ, ಪುರುಲಿಯಾ ಸಿಂಹ ನೃತ್ಯ, ತೆಂಕುತಿಟ್ಟು ಯಕ್ಷಗಾನ ಹಿರಣ್ಯಾಕ್ಷ ವಧೆ, ಬೊಂಬೆ ವಿನೋದಾವಳಿಯ ಅದ್ಭುತ ಪ್ರದರ್ಶನಗಳು ಸೇರಿದ್ದ ಜನಸ್ತೋಮವನ್ನು ಮಂತ್ರಮುಗ್ಧಗೊಳಿಸಿತು.



> ಆಳ್ವಾಸ್ ಎಂಬುದು ಒಂದು ಮಿನಿ ಇಂಡಿಯಾ. ಇಲ್ಲಿ 22 ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಈ ಪೈಕಿ 20 ಸಾವಿರ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿದ್ದುಕೊಂಡು ಕಲಿಯುತ್ತಿದ್ದಾರೆ. ಯಾವುದೇ ತಾರತಮ್ಯವಿಲ್ಲದೆ ವಿದ್ಯಾರ್ಥಿಗಳಿಗೆ ಸಮಗ್ರ ಶಿಕ್ಷಣ ನೀಡಲಾಗುತ್ತಿದೆ. ಜೊತೆಗೆ ಕ್ರೀಡೆ, ಸಾಂಸ್ಕೃತಿಕ ರಂಗದಲ್ಲಿಯೂ ವಿಶೇಷ ಪ್ರೋತ್ಸಾಹ ನೀಡಲಾಗುತ್ತಿದೆ.
>
> ■ ಡಾ.ಎಂ.ಮೋಹನ ಆಳ್ವ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರು.

> ತುಳು ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರ್ಪಡೆಗೊಳಿಸುವಲ್ಲಿ ಹಾಗೂ ರಾಜ್ಯದ 2ನೇ ಭಾಷೆಯಾಗಿ ಸರ್ಕಾರ ಅಂಗೀಕರಿಸಲು ಮುನ್ನಡೆಸುವಲ್ಲಿ ಡಾ.ಮೋಹನ ಆಳ್ವರ ಅಂದಿನ ಶಿಫಾರಸು ವರದಿಯೇ ಕಾರಣವಾಗಿದೆ.
>
> ■ ಡಿ.ವೇದವ್ಯಾಸ ಕಾಮತ್, ಶಾಸಕರು

ಈ ಸಂದರ್ಭ ಆಳ್ವಾಸ್ ನುಡಿಸಿರಿ ವಿರಾಸತ್ ಮಂಗಳೂರು ಘಟಕದ ಪರವಾಗಿ ಡಾ.ಮೋಹನ ಆಳ್ವರನ್ನು ಹಾರ, ಶಾಲು ಹಾಕಿ, ನಟರಾಜನ ಸ್ಮರಣಿಕೆ, ಫಲಪುಷ್ಪ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಕೆ.ಸಿ ನ್ಯಾಕ್, ಪ್ರೊ.ಎಂ.ಬಿ.ಪುರಾಣಿಕ್, ಕ್ಯಾ.ಗಣೇಶ್ ಕಾರ್ಣಿಕ್, ನಾಗರಾಜ ಶೆಟ್ಟಿ, ದೇವದಾಸ್ ಕಾಪಿಕಾಡ್, ಪಿ.ಎಸ್.ಪ್ರಕಾಶ್, ಮಮತಾ ಗಟ್ಟಿ, ಎಸ್.ಪ್ರದೀಪ್ ಕುಮಾರ್ ಕಲ್ಕೂರ, ಜಿತೇಂದ್ರ ಕೊಟ್ಟಾರಿ, ಅಜಿತ್ ಕುಮಾರ್ ರೈ ಮಾಲಾಡಿ, ಶಕುಂತಳಾ ಶೆಟ್ಟಿ, ಪುಷ್ಪರಾಜ್ ಜೈನ್, ಎ.ಸಿ.ಭಂಡಾರಿ, ಅಣ್ಣಯ್ಯ ಕುಲಾಲ್, ಡಾ.ಚಿನ್ನಪ್ಪ ಗೌಡ ಮತ್ತಿತರರು ಉಪಸ್ಥಿತರಿದ್ದರು.

24 ಗಂಟೆಯಲ್ಲಿ ವಿಶೇಷ ರೈಲು ಸಂಪೂರ್ಣ ಭರ್ತಿ: ಅಗತ್ಯದ ಅರಿವಾಗಿಸಿದ ಯುಗಾದಿ!

ಕುಂದಾಪುರ: ಬೆಂಗಳೂರಿನಿಂದ ಕರಾವಳಿಗೆ ಮಂಗಳೂರಿನ ಪಡೀಲ್ ಮಾರ್ಗದಲ್ಲಿ ಮಂಗಳೂರು ನಾರ್ತ್, ಸುರತ್ಕಲ್, ಉಡುಪಿ, ಕಾರವಾರ ಮಾರ್ಗವಾಗಿ ಯುಗಾದಿ ವಿಶೇಷ ರೈಲು ಓಡಿಸಲಾಗಿದ್ದು, ಇದರಿಂದ ಪ್ರಯಾಣಿಕರಿಗೆ ಕಡಿಮೆ ಖರ್ಚಿನಲ್ಲಿ ರಾಜಧಾನಿ ಮತ್ತು ಕರಾವಳಿ ನೇರ ಸಂಪರ್ಕ ಸಾಧ್ಯವಾಗಿದೆ ಎಂದು ಕುಂದಾಪುರ ರೈಲ್ವೆ ಪ್ರಯಾಣಿಕರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗಣೇಶ ಪುತ್ರನ್ ಹೇಳಿದ್ದಾರೆ.



ಪಡೀಲ್ ನೇರ ಮಾರ್ಗದಲ್ಲಿ ರೈಲು ಘೋಷಣೆಯಾದ ಹಿನ್ನೆಲೆಯಲ್ಲಿ ಕುಕ್ಕೆ ಸುಬ್ರಹ್ಮಣ್ಯ, ಪುತ್ತೂರು, ಬಂಟ್ವಾಳ ಹಾಗೂ ಮಂಗಳೂರು ನಾರ್ತ್ ಸುರತ್ಕಲ್‌ನಿಂದ ಕಾರವಾರದವರೆಗೆ ಸುಮಾರು 800 ಜನ ಪ್ರಯಾಣಿಕರು ಬೆಂಗಳೂರಿನಿಂದ ಬರುವ ರೈಲನ್ನು ಬುಕ್ ಮಾಡಿದ್ದರು. ಹಾಗೆಯೇ ಯುಗಾದಿ ರಜೆ ಮುಗಿಸಿ ಮರಳಿ ಬೆಂಗಳೂರು ತಲುಪುವ ಪ್ರಯಾಣಿಕರಿಗಾಗಿ ನೈರುತ್ಯ ರೈಲ್ವೆಯು ಮತ್ತೊಂದು ವಿಶೇಷ ರೈಲನ್ನು ಭಾನುವಾರ ಮಧ್ಯಾಹ್ನಕ್ಕೆ ಕಾರವಾರ -ಬೆಂಗಳೂರು ನಡುವೆ ಓಡಾಟ ನಡೆಸುವಂತೆ ಪ್ರಕಟಿಸಿದ್ದು, ಆ ರೈಲು ಟಿಕೆಟ್ ಮಾರಾಟ ಆರಂಭವಾದ 24 ಗಂಟೆಯಲ್ಲಿ ಸಂಪೂರ್ಣ ಬುಕ್ ಆಗುವ ಮೂಲಕ ಪಡೀಲ್ ಬೈಪಾಸ್ ಮಾರ್ಗದ ನೇರ ಮಾರ್ಗದಲ್ಲಿ ರೈಲು ಓಡಾಟದ ಅಗತ್ಯ ದಕ್ಷಿಣ ಕನ್ನಡದ ಸುರತ್ಕಲ್, ಮೂಲ್ಕಿ, ಉಡುಪಿ, ಕಾರವಾರದ ಜನರಿಗೆಷ್ಟಿದೆ ಎಂಬುದನ್ನು ತೋರಿಸಿದೆ ಎಂದವರು ಹೇಳಿದರು.

ಬೆಂಗಳೂರು ಮಡಗಾಂವ್ ನಡುವೆ ಪಡೀಲ್ ಬೈಪಾಸ್ ಮೂಲಕ ಓಡಿದ ಎಲ್ಲಾ ರೈಲುಗಳಿಗೂ ಅತ್ಯುತ್ತಮ ಪ್ರತಿಕ್ರಿಯೆ ಸಿಕ್ಕಿದ್ದು, ಇದು ಕಳೆದ ದಶಕದಲ್ಲಿ ಮಂಗಳೂರು ಜಂಕ್ಷನ್ ಮೂಲಕ ಬರುವಾಗ ಆಗುತಿದ್ದ 2-3 ಗಂಟೆ ವಿಳಂಬದಿಂದ ರೈಲು ಪ್ರಯಾಣದಿಂದಲೇ ದೂರಾಗಿದ್ದ ಸುರತ್ಕಲ್, ಉಡುಪಿ, ಕಾರವಾರ, ಕರಾವಳಿ ಪ್ರಯಾಣಿಕರು ಮತ್ತೆ ರೈಲು ಪ್ರಯಾಣಕ್ಕೆ ಮರಳುತ್ತಿರುವುದರ ಸೂಚನೆ ಎಂದು ಹೇಳಿರುವ ಪುತ್ರನ್, ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಮತ್ತು ನೈರುತ್ಯ ರೈಲ್ವೆಗೆ ಪ್ರಯಾಣಿಕರ ಪರವಾಗಿ ಅವರು ಧನ್ಯವಾದ ತಿಳಿಸಿದ್ದಾರೆ.

ಚಾರ್ಮಾಡಿ ಘಾಟ್‌ನಲ್ಲಿ ಭೀಕರ ಅಪಘಾತ: ಟೆಂಪೋ ಟ್ರಾವೆಲರ್ ಮಗುಚಿ ಓರ್ವ ಸಾವು

ಬೆಳ್ತಂಗಡಿ: ಬ್ರೇಕ್ ವೈಫಲ್ಯದಿಂದ ನಿಯಂತ್ರಣ ತಪ್ಪಿದ ಟಿಟಿ ವಾಹನವೊಂದು ಪಲ್ಟಿಯಾಗಿ ಒಂಬತ್ತು ಮಂದಿಗೆ ಗಂಭೀರ ಗಾಯಗಳಾಗಿದ್ದು. ಓರ್ವ ವ್ಯಕ್ತಿ ಸಾವನ್ನಪ್ಪಿದ್ದಾರೆ. ಶನಿವಾರ ಬೆಳಿಗ್ಗೆ ಘಟನೆ ನಡೆದಿದೆ.

ಬೆಳ್ತಂಗಡಿ ತಾಲೂಕಿನ ಚಾರ್ಮಾಡಿ ಘಾಟ್‌ನ ಒಂಬತ್ತನೇ ತಿರುವಿನಲ್ಲಿ ಬ್ರೇಕ್ ಫೈಲ್ ಆಗಿ ಟಿಟಿ ವಾಹನ ಪಲ್ಟಿಯಾಗಿದೆ. ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ಮೇಲನಹಳ್ಳಿಯಿಂದ 10 ಮಂದಿ ಸೇರಿದಂತೆ ಮೂವರು ಮಕ್ಕಳು ಮಾ.21ರಂದು ಟಿಟಿ ವಾಹನದಲ್ಲಿ ಪ್ರಯಾಣಿಸುತ್ತಿದ್ದರು. ಟಿಟಿ ವಾಹನದಲ್ಲಿ ಒಂದೇ ಕುಟುಂಬದ 13 ಮಂದಿಯಲ್ಲಿ 9 ಮಂದಿಗೆ ಗಂಭೀರ ಗಾಯವಾಗಿದ್ದು. ಮಲೇನಹಳ್ಳಿ ನಿವಾಸಿ ಶೇಖರಪ್ಪ (59) ಸಾವನ್ನಪ್ಪಿದ್ದಾರೆ. ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಬೆಳ್ತಂಗಡಿ ಸಂಚಾರಿ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಕಿಶೋರ್ ಪಿ ಮತ್ತು ತಂಡ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.



ಹೇರಳ ಲಾಭ, ಅಧಿಕ ಇಳುವರಿಗೆ ಹೊಸ ಪ್ರಯೋಗ ಮಾಡಿ ಯಶಸ್ವಿಯಾದ ರೈತರು

ಹೊಸತನಕ್ಕೆ ನಾಂದಿ.. ಪೇರಳೆ ಕೃಷಿ ಯಶೋಗಾಥೆ!

ಗಣೇಶ್ ನಾಯಕ್, ಸಾಣೂರು

ದಿಗಂತ ವಿಶೇಷ

ಕಾರ್ಕಳ: ಕೃಷಿಕರಾಗಿದ್ದರೂ ಈಗಿನ ಕಾಲದಲ್ಲಿ ಎಷ್ಟೇ ಮಂದಿ ಕೆಲಸಕ್ಕೆ ಜನ ಸಿಗುತ್ತಿಲ್ಲ ಎನ್ನುವ ರೈತರು ಒಮ್ಮೆ ಕೃಷಿ ತೊರೆದು ಬೇರೆಡೆಗೆ ಹೋದವರು ಮತ್ತೆ ಕೃಷಿಯತ್ತ ಮರಳುವುದು ಕನಸಿನ ಮಾತು. ಆದರೆ ಕಾರ್ಕಳ ತಾಲೂಕಿನ ಇನ್ನಾ ಗ್ರಾಮದ 5-6 ಮಂದಿ ರೈತರು ಮಾತ್ರ ಇದಕ್ಕೆ ತದ್ವಿರುದ್ಧ. ಸದ್ಯ ಪೇರಳೆ (ಸೀಬೆ) ಕೃಷಿಯಲ್ಲಿ ಜೀವನ ಕಂಡುಕೊಂಡಿದ್ದಾರೆ.

ಅಂದು 'ಬಡವರ ಹಣ್ಣು' ಹಣೆಪಟ್ಟಿ ಇತ್ತು

ಒಂದು ಕಾಲದಲ್ಲಿ ಪೇರಳೆ ಬಡವರು ತಿನ್ನುವ ಹಣ್ಣು ಎಂಬ ಹಣೆಪಟ್ಟಿ ಪಡೆದಿತ್ತು. ಶ್ರೀಮಂತರು ಸೇಬು, ದ್ರಾಕ್ಷಿ ಮುಂತಾದ ದುಬಾರಿ ಹಣ್ಣು ಬಳಸಿದರೆ ಬಡವರು ಪೇರಳೆಯಂತಹ ಹಣ್ಣು ತಿನ್ನುತ್ತಿದ್ದರು. ಈಗ ಪರಿಸ್ಥಿತಿ ತಿರುವು ಮುರುವಾಗಿದೆ. ಇದರ ಪೌಷ್ಟಿಕ ಗುಣಗಳನ್ನು ಅರಿತು ಜನ ಸೇಬಿಗಿಂತಲೂ ಇದನ್ನು ಹೆಚ್ಚು ಇಷ್ಟಪಡುತ್ತಾರೆ. ಈಗ ಸೀಬೆ, ಬಡವರೊಂದಿಗೆ ಶ್ರೀಮಂತರಿಗೂ ಪ್ರಿಯವಾದ ಹಣ್ಣಾಗಿದೆ. ರಾಜ್ಯದ ಹೆಚ್ಚಿನೆಲ್ಲಾ ಪ್ರದೇಶಗಳಲ್ಲಿ ಆರಾಮವಾಗಿ ಬೆಳೆಸಬಹುದಾದಂತಹ ಲಾಭದಾಯಕ ತೋಟಗಾರಿಕಾ ಹಣ್ಣಿನ ಬೆಳೆಗಳಲ್ಲಿ ಪೇರಳೆಯೂ ಒಂದು.

ಪೇರಳೆ ಕೃಷಿಯು ಕಡಿಮೆ ಹೂಡಿಕೆಯಲ್ಲಿ ಅಧಿಕ ಲಾಭ ತಂದುಕೊಡುವ ಸುಲಭ ಹಾಗೂ ಭರವಸೆಯ ಬೆಳೆಯಾಗಿದೆ. ಕರಾವಳಿಯಲ್ಲಿ ಪೇರಳೆಯನ್ನು ಒಂದು ವಾಣಿಜ್ಯ ಬೆಳೆಯಾಗಿ ಬೆಳೆಯುವುದು ಅಪರೂಪ. ಅಂಥ ಅಪರೂಪದ ಪ್ರಯತ್ನವನ್ನು ಇವರು ಒಟ್ಟಿಗೆ ಸೇರಿ ಮಾಡುತ್ತಿದ್ದಾರೆ. ಪೇರಳೆಗೆ ಕರಾವಳಿಯ ಅತಿ ಮಳೆಯ ಹವಾಮಾನ ಅಷ್ಟೇನೂ ಉತ್ತಮವಲ್ಲ. ಆದರೂ ಹವಾಮಾನದ ಸವಾಲುಗಳನ್ನು ಮೀರಿದ ಪ್ರಯೋಗದಲ್ಲಿ ಇಲ್ಲಿನ ಕೃಷಿಕರು ಖುಷಿ ಕಾಣುತ್ತಿದ್ದಾರೆ. ಐದು ವರ್ಷಗಳ ಹಿಂದೆ ಇನ್ನಾ ಭಾಗದ ಚಂದ್ರಶೇಖರ ರಾವ್ ನೇತೃತ್ವದಲ್ಲಿ ರೈತರ ಗುಂಪೊಂದು ಪ್ರಾಯೋಗಿಕವಾಗಿ ಪೇರಳೆ ಕೃಷಿಯನ್ನು ಆರಂಭಿಸಿತ್ತು. ಪ್ರಸ್ತುತ ಈ ಭಾಗದಲ್ಲಿ 5-6 ಕೃಷಿಕರು ಸುಮಾರು 5 ಎಕರೆ ಪ್ರದೇಶದಲ್ಲಿ ಬೆಳೆಯುತ್ತಿದ್ದಾರೆ. ಬೆಂಗಳೂರಿನ ಕೃಷಿ ವಿವಿಯ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ 'ಅರ್ಕ ಕಿರಣ' ತಳಿಯನ್ನು ಇಲ್ಲಿ ಬೆಳೆಯಲಾಗಿದೆ.



> ಕರಾವಳಿಯ ಮಳೆಯ ಸವಾಲಿನ ನಡುವೆಯೂ ಇಲ್ಲಿನ ರೈತರು ವರ್ಷಕ್ಕೆ ಎರಡು ಬೆಳೆ (ಮಳೆಗೆ ಮೊದಲು ಮತ್ತು ಮಳೆಯ ನಂತರ) ಪಡೆಯುತ್ತಿದ್ದೇವೆ. ರೈತರು ಸೇರಿ ಗುಂಪು ಕೃಷಿ ಮಾಡುವುದರಿಂದ ಸರಕಾರಿ ಮಾರುಕಟ್ಟೆ ವ್ಯವಸ್ಥೆಗೂ ಅನುಕೂಲವಾಗುತ್ತದೆ. ದಿನದಿಂದ ದಿನಕ್ಕೆ ಮಾರುಕಟ್ಟೆಯಲ್ಲಿ ಪೇರಳೆಗೆ ಬೇಡಿಕೆ ಹೆಚ್ಚಿದ್ದು, ಮಾರುಕಟ್ಟೆಯಲ್ಲಿ ಕೆ.ಜಿ.ಗೆ 80ರಿಂದ 100 ರೂಪಾಯಿ ದರದಲ್ಲಿ ಮಾರಾಟವಾಗುತ್ತಿದೆ.
>
> ■ ದೀಪಕ್ ಕಾಮತ್ ಕೃಷಿಕರು, ಕಂಜಾರಕಟ್ಟೆ

ಪೇರಳೆಯ ಅರ್ಕ ಕಿರಣ ತಳಿಯು ಹೇರಳವಾದ ಪೌಷ್ಟಿಕಾಂಶ ಹೊಂದಿದೆ. ಅತ್ಯಂತ ರುಚಿಕರವಾಗಿದೆ. ಇದರ ಹೊರಪದರ ಅತ್ಯಂತ ಮೃದುವಾಗಿದೆ. ಈ ಪೇರಳೆಯನ್ನು ಗ್ರಾಹಕರಿಗೆ ನೇರವಾಗಿ ಇನ್ನಾ ಭಾಗದ ರೈತರಿಂದಲೇ ಖರೀದಿಸಲು ಅವಕಾಶವಿದೆ. ತಿನ್ನಲು ಮಾತ್ರವಲ್ಲ ಐಸ್ ಕ್ರೀಂ, ಜ್ಯೂಸ್, ಜಾಮ್‌ಗೆ ಬಳಕೆ ಮಾಡಲಾಗುತ್ತದೆ. ಯಾವುದೇ ಕೃಷಿ ಚಟುವಟಿಕೆಗೆ ಕೈಹಾಕಿದರೂ ಅದು ಯಶಸ್ವಿಯಾಗಿ ನಿರೀಕ್ಷಿತ ಮಟ್ಟ ತಲುಪಿ ಲಾಭ ಸಿಗಲಿದೆ ಎಂಬ ಭರವಸೆ ಅನೇಕರಲ್ಲಿದೆ. ಹೀಗಾಗಿ ಅದೆಷ್ಟೋ ಜನ ವಿದ್ಯಾವಂತ ಯುವಕರು ಕೈ ತುಂಬಾ ಸಂಬಳ ಬರುವ ಕೆಲಸವನ್ನು ಬಿಟ್ಟು ಬಂದು ಭೂಮಿಯನ್ನು ನಂಬಿ ಕೃಷಿ ಮಾಡುತ್ತಿದ್ದಾರೆ. ಕೇವಲ ಸಾಂಪ್ರದಾಯಿಕ ಶೈಲಿಯಲ್ಲಿ ಕೃಷಿ ಮಾಡುತ್ತಿದ್ದರೆ ಸಾಲದು ಹೊಸಹೊಸ ಪ್ರಯೋಗಗಳನ್ನು ಮಾಡುತ್ತಿರಬೇಕು. ಮಾಡಿದರೆ ಮಾತ್ರ ಬದಲಾದ ಕಾಲಘಟ್ಟದಲ್ಲಿ ಹೆಚ್ಚಿನ ಆದಾಯ ಗಳಿಸಲು ಸಾಧ್ಯ ಎಂದು ಮನವರಿಕೆ ಮಾಡಿಕೊಂಡಿರುವ ರೈತರು ಹೊಸ ಹೊಸ ಪ್ರಯೋಗಗಳಿಗೆ ಕೈ ಹಾಕುತ್ತಲೇ ಇದ್ದಾರೆ.. ಈ ಮಾತಿಗೆ ಪೂರಕವಾಗಿ ಈ ಕೃಷಿ ಕರ ತಂಡ ಸದ್ಯ ಇತರೆ ಕೃಷಿ ಕರಿಗೆ ಮಾದರಿಯಾಗಿದ್ದಾರೆ. ಪೇರಳೆ ಬೆಳೆದು ತಾವೇ ಮಾರಿ ಸುತ್ತಮುತ್ತಲ ಊರಲ್ಲಿ ಹೀರೋ ಅನಿಸಿಕೊಂಡಿದ್ದಾರೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 22, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ತ್ರಿವಳಿ ಇಂಜಿನ್ ಆಡಳಿತ ಇದ್ದರೂ ಅಭಿವೃದ್ಧಿಗೊಳ್ಳದ ಕಾಸರಗೋಡು: ಅಶ್ವಿನಿ



ಪುಟ 6

ಆದಿವಾಸಿ ಜನಾಂಗದ ಒಳ ಮೀಸಲಾತಿ ಗೊಂದಲ ಶೀಘ್ರ ಬಗೆಹರಿಸಿ

ಕಡಲತಡಿಯಲ್ಲಿ ಪ್ರೇಕ್ಷಕ ಗಡಣವನ್ನು ಅಕ್ಷರಶಃ ಮಂತ್ರಮುಗ್ಧಗೊಳಿಸಿತು ಆಳ್ವಾಸ್ ಸಾಂಸ್ಕೃತಿಕ ವೈಭವ!



ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ಶನಿವಾರ ಸಂಜೆ ನಡೆದ ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಜನಮನಸೂರೆಗೊಂಡಿತು. ಒಂದನ್ನೊಂದು ಮೀರಿಸುವ ಸಾಂಸ್ಕೃತಿಕ ಕಾರ್ಯಕ್ರಮ ಪ್ರೇಕ್ಷಕ ವರ್ಗಕ್ಕೆ ಭಾರತೀಯ ಸಾಂಸ್ಕೃತಿಕ ಪರಂಪರೆಯ ರಸದೌತಣ ಉಣಬಡಿಸಿತು. ಸತತ ಮೂರು ಗಂಟೆ ನಡೆದ ಈ ಕಾರ್ಯಕ್ರಮ ರೋಮಾಂಚನ ಮೂಡಿಸಿತು. ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್

ಕಾಸರಗೋಡಿಗೆ ಜಲಕ್ಷಾಮ ಭೀತಿ ಶುರು

ಪಾತಾಳಕ್ಕೆ ಜೀವಜಲ

ಬೇಸಿಗೆ ವಿಪತ್ತು ನಿರ್ವಹಣೆಗೆ ಯೋಜನೆ

ಕಾಸರಗೋಡು: ಜಿಲ್ಲೆಯಲ್ಲಿ ಸತತವಾಗಿ ಬಿಸಿಲಿನತಾಪಮಾನ ಏರಿಕೆಯಾಗುತ್ತಿದ್ದು, ಇದರ ಪರಿಣಾಮ ಕೊಳವೆ ಬಾವಿ, ತೆರೆದ ಬಾವಿ ಸೇರಿದಂತೆ ನೀರಿನ ಲಭ್ಯತೆ ಮಟ್ಟ ತೀವ್ರವಾಗಿ ಕುಸಿತಗೊಂಡಿದೆ.

ಕಾಸರಗೋಡು ಬ್ಲಾಕ್ ವ್ಯಾಪ್ತಿಯಲ್ಲಿ ಕೊಳವೆ ಬಾವಿಯ ನೀರಿನ ಮಟ್ಟ ಪಾತಾಳಕ್ಕೆ ಇಳಿದಿದೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಗ್ರಾಮೀಣ ಭಾಗಗಳಲ್ಲಿ ನೀರಿನ ಲಭ್ಯತೆಗೆ ಸಮಸ್ಯೆ ಒದಗಬಹುದೆಂದು ಆತಂಕಪಡಲಾಗಿದೆ.

ಈಗ ಬೇಸಿಗೆ ಮಳೆಯ ನಿರೀಕ್ಷೆ

ಇದೇ ವೇಳೆ ಜಿಲ್ಲೆಯಲ್ಲಿ ಬಿಸಿಲಿನ ತಾಪ ಏರುತ್ತಿದ್ದರೂ ಏಪ್ರಿಲ್ ಆರಂಭದಲ್ಲಿ ಬೇಸಿಗೆ ಮಳೆ ಸಾಧ್ಯತೆ ಇದೆಯೆನ್ನಲಾಗಿದೆ. ಬೇಸಿಗೆ ಮಳೆಯಾದರೆ ಕುಡಿಯುವ ನೀರು ಸಹಿತ ಕೃಷಿ ಚಟುವಟಿಕೆಗಳಿಗೆ ನೀರಿನ ಸಮಸ್ಯೆಗೆ ಅಲ್ಪಮಟ್ಟಿನ ಪರಿಹಾರ ದೊರಕಬಹುದು ಎಂಬ ಆಶಾ ಭಾವನೆಯಲ್ಲಿ ಜಿಲ್ಲೆಯ ಜನತೆ ಇದ್ದಾರೆ.



ಬೇಸಿಗೆಯ ಉಷ್ಣ ಅಲೆ ಎದುರಿಸಲು ಸಿದ್ಧತೆಗೆ ಸೂಚನೆ

ಬರ, ನೀರಿನ ಕೊರತೆ, ತೀವ್ರ ಉಷ್ಣತೆ, ವನ್ಯಜೀವಿಗಳ ದಾಳಿ, ಸಿಡಿಲು, ಅತಿಯಾದ ಬಿಸಿಲು ಸಂಬಂಧಿಸಿ ಆರೋಗ್ಯ ಸಮಸ್ಯೆಗಳು ಮತ್ತು ಬೆಂಕಿ ಅವಘಡದಂತಹ ಸಮಸ್ಯೆಗಳಿಗೆ ಹೆಚ್ಚಿನ ಗಮನಹರಿಸಲು ಮತ್ತು ಕಾಸರಗೋಡು ಜಿಲ್ಲಾ ಮಟ್ಟದಲ್ಲಿ ಉಷ್ಣ ಅಲೆ ಎದುರಿಸಲು ಸಿದ್ಧತೆಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ.

ಸಮಗ್ರ ಯೋಜನೆ ಜಾರಿಗೆ ಸಿದ್ಧತೆ

ಬೇಸಿಗೆಯ ವಿಪತ್ತುಗಳ ನಿರ್ವಹಣೆಗಾಗಿ ಕಾಸರಗೋಡು ಜಿಲ್ಲೆ ಸಜ್ಜಾಗುತ್ತಿದ್ದು ಈಗ ವಿವಿಧ ರೀತಿಯಲ್ಲಿ ಜಿಲ್ಲೆಯಾದ್ಯಂತ ಸಮಗ್ರ ಯೋಜನೆಗಳನ್ನು ಜಾರಿಗೊಳಿಸಲು ನಿರ್ಧರಿಸಲಾಗಿದೆ. »ಪುಟ 6

ತಿರುವನಂತಪುರದಲ್ಲಿ ನಡೆದಿದೆ ತುರ್ತು ಸಭೆ

ಬೇಸಿಗೆ ವಿಪತ್ತು ನಿರ್ವಹಣೆಗೆ ಸಂಬಂಧಿಸಿ ಕೇರಳ ರಾಜ್ಯ ಸರ್ಕಾರ ಗಂಭೀರ ಹೆಜ್ಜೆಯಿಡುತ್ತಿದೆ. ಇದರ ಭಾಗವಾಗಿ ತಿರುವನಂತಪುರದಲ್ಲಿ ರಾಜ್ಯ ಮಟ್ಟದ ತುರ್ತು ಸಭೆ ಜರುಗಿದೆ. ಈ ಸಭೆಯಲ್ಲಿ ಕಾಸರಗೋಡು ಜಿಲ್ಲೆಯ ಮಂಜೇಶ್ವರ, ಕಾಸರಗೋಡು, ಹೊಸದುರ್ಗ ಮತ್ತು ವೆಳ್ಳರಿಕುಂಡು ತಾಲೂಕುಗಳಲ್ಲಿ ಬೇಸಿಗೆ ಕಾಲದ ದುರಂತ ಎದುರಿಸುವ ಬಗ್ಗೆ ಗಂಭೀರ ಚರ್ಚೆಗಳಾಗಿದ್ದು, ಪರಿಹಾರ ಕ್ರಮವಾಗಿ ವಿವಿಧ ಯೋಜನೆಗಳನ್ನು ರೂಪಿಸುವಂತೆ ಜಿಲ್ಲಾಡಳಿತಕ್ಕೆ ತಿಳಿಸಲಾಗಿದೆ.

ಮುಂಜಾಗ್ರತೆಗಾಗಿ ರೈತರಿಗೆ ಸಲಹೆ

ಹೆಚ್ಚುತ್ತಿದೆ ತಾಪಕೋಪ: ಎಚ್ಚರ ತಪ್ಪದಿರಿ ಎಚ್ಚರಾ

ಸಾಕುಪ್ರಾಣಿಗಳ ಮೇಲೆ ಇರಲಿ ನಿಗಾ

ಮಂಗಳೂರು: ಕರಾವಳಿಯಲ್ಲಿ ಉಷ್ಣಾಂಶ ಏರಿಕೆಯಾಗುತ್ತಿದ್ದು, ಕೋಳಿ, ಹಸು ಮುಂತಾದ ಪ್ರಾಣಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ಈ ನಿಟ್ಟಿನಲ್ಲಿ ರೈತರು ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಇಲಾಖೆ ತಿಳಿಸಿದೆ.

ಉಷ್ಣಾಂಶದ ಏರಿಕೆಯೊಂದಿಗೆ ವಾತಾವರಣದ ಆದ್ರತೆ ಎಲ್ಲಾ ಪ್ರಾಣಿ ಪಕ್ಷಿಗಳಲ್ಲಿ ಪರಿಣಾಮ ಬೀರುತ್ತದೆ. ಆದರಲ್ಲಿಯೂ ಉತ್ಪಾದಕ ಪ್ರಾಣಿಗಳಾದ ದನ ಹಾಗೂ ಮಾಂಸ ಕೋಳಿಗಳ ಮೇಲೆ ತುಂಬಾ ಒತ್ತಡವನ್ನುಂಟು ಮಾಡುತ್ತದೆ ಎಂದು ಇಲಾಖೆ ಕಿವಿಮಾತನ್ನು ಹೇಳಿದೆ.

ಹಾಲಿನ ಇಳುವರಿ ಕಡಿಮೆ

ಬೇಸಿಗೆ ಅವಧಿಯಲ್ಲಿ ದನಗಳಲ್ಲಿ ಉಷ್ಣಾಂಶದ ಒತ್ತಡದಿಂದ ಆಹಾರ ತಿನ್ನುವ ಪ್ರಮಾಣ ಕಡಿಮೆಯಾಗಿ, ಹಾಲಿನ ಇಳುವರಿ ಕಡಿಮೆ ಯಾಗುತ್ತದೆ ಅಥವಾ ಇನ್ನೂ ಹೆಚ್ಚಿನ ಬಿಸಿಲಿನ ತಾಪಮಾನದಿಂದಾಗಿ ಸಾಯುವ ಸಾಧ್ಯತೆ ಇರುತ್ತದೆ ಆದ್ದರಿಂದ ರೈತರು ಮುನ್ನೆಚ್ಚರಿಕಾ ಕ್ರಮ ಅನುಸರಿಸಬೇಕು ಎಂದು ಇಲಾಖೆ ತಿಳಿಸಿದೆ. ತಾಪಮಾನ ಏರಿಕೆ ಪರಿಣಾಮ ಮಾಂಸ ಕೋಳಿಗಳಲ್ಲೂ ಆಗುತ್ತದೆ. »ಪುಟ 6



ಊರು ಕಾಳಜಿಗಳು ನೂರು

11 ರಿಂದ 4 ತುಸು ಎಚ್ಚರ ಇರಲಿ

ಬೇಸಿಗೆಯಲ್ಲಿ ಉಷ್ಣತೆ ಹೆಚ್ಚಾಗುವುದರಿಂದ ದನಗಳನ್ನು ಬೆಳಗ್ಗೆ ಅಥವಾ ಸಂಜೆ ಮೇಯಲು ಹೊರಗಡೆ ಬಿಡಬೇಕು. ಯಾವುದೇ ಕಾರಣಕ್ಕೂ ಬೆಳಗ್ಗೆ 11 ರಿಂದ 4 ಗಂಟೆ ಅವಧಿಯಲ್ಲಿ ಜಾನುವಾರುಗಳನ್ನು ಹೊರಗಡೆ ಬಿಡಬಾರದು. ದಿನದ 24 ಗಂಟೆಯೂ ತಂಪಾದ ನೀರು ನೀಡಬೇಕು ಎಂದು ಇಲಾಖೆ ಹೇಳಿದೆ.

ಸುತ್ತಮುತ್ತ

ಹಠಾತ್ ಏರಿಕೆ ಕಂಡ ತಾಪಮಾನ: ಕರಾವಳಿಯ ಜನ ಅಕ್ಷರಶಃ ಹೈರಾಣ

ಮಂಗಳೂರು: ಕರಾವಳಿ ಭಾಗದ ಜಿಲ್ಲೆಗಳಾದ ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ಶನಿವಾರ ವಾತಾವರಣದ ಉಷ್ಣಾಂಶ ಹಠಾತ್ ಏರಿಕೆಯಾಗಿದ್ದು ನೆತ್ತಿ ಸುಡುವ ಬಿಸಿಲಿಗೆ ಜನತೆ ಹೈರಾಣಾದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಗರಿಷ್ಠ 37 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿದ್ದರೆ, ಉಡುಪಿಯಲ್ಲಿ 32, ಕಾಸರಗೋಡಿನಲ್ಲಿ 31 ಡಿಗ್ರಿ ಸೆಲ್ಸಿಯೆಸ್ ತಾಪಮಾನ ದಾಖಲಾಗಿತ್ತು. ಸಂಜೆ ಬಳಿಕ ವಿವಿಧೆಡೆ ತಾಪಮಾನ ಇಳಿಕೆಯಾಗಿ ತಂಪಿನ ಅನುಭವ ನೀಡಿತು.

ಸರಪಾಡಿ ಗ್ರಾಮದ ವಿವಿಧ ಭಾಗಗಳಲ್ಲಿ ಚಿರತೆ ಓಡಾಟ: ಜನತೆಗೆ ಆತಂಕ

ಬಂಟ್ವಾಳ: ಬಂಟ್ವಾಳ ತಾಲೂಕು ಸರಪಾಡಿ ಗ್ರಾಮದ ವಿವಿಧ ಭಾಗಗಳಲ್ಲಿ ಚಿರತೆಯೊಂದು ಅಡಾಡುತ್ತಿದ್ದು, ನಾಗರಿಕರಲ್ಲಿ ಈ ಬೆಳವಣಿಗೆ ಭಾರೀ ಆತಂಕ ಹುಟ್ಟುಹಾಕಿದೆ. ಇಲ್ಲಿನ ಮುನ್ನಲಾಯಿ ಪದವು,, ಪಟ್ಲಕೆರೆ, ಕಂಗಿನಡಿ, ಬೊಳ್ಳೂರು ಭಾಗದಲ್ಲಿ ಚಿರತೆ ಓಡಾಟ ನಡೆಸುತ್ತಿರುವುದು ಕಂಡುಬಂದಿದ್ದು, ಆರಣ್ಯ ಇಲಾಖೆ ತಕ್ಷಣವೇ ಇದನ್ನು ಗಂಭೀರವಾಗಿ ಪರಿಗಣಿಸಿ ಬೋನ್ ಇಡುವ ಮೂಲಕ ಚಿರತೆಯನ್ನು ಸೆರೆಹಿಡಿಯಲು ಸ್ಥಳೀಯರು ಆಗ್ರಹಿಸಿದ್ದಾರೆ.

ಬಿಸಿ ಬಿಸಿ ಹವೆಗೆ ತಂಪು ತಂಪು ಪಾನೀಯ: ಎಲ್ಲೆಡೆ ಭರ್ಜರಿ ಡಿಮಾಂಡ್!!

ಮಂಗಳೂರು: ದಕ್ಷಿಣ ಕನ್ನಡದಲ್ಲಿ ಭರ್ಜರಿಯಾಗಿ ಬಿಸಿಲಿನ ಪ್ರತಾಪ ಕಂಡುಬರುತ್ತಿದ್ದು, ಇದರ ಬೆನ್ನಿಗೇ ತಂಪುಪಾನೀಯಗಳಿಗೆ ಬೇಡಿಕೆ ಹೆಚ್ಚಳವಾಗಿದೆ. ಬಹುತೇಕ ಮಂದಿ ಎಳನೀರಿಗೆ ಒಲವು ತೋರುತ್ತಿದ್ದು, ಸ್ಥಳೀಯವಾಗಿ ತಯಾರಾಗುವ ರಾಗಿ, ಎಳ್ಳು, ಪುನರ್ಪುಳಿ ಜ್ಯೂಸ್‌ಗಳಿಗೂ ಭಾರೀ ಡಿಮಾಂಡ್ ಕಾಣಿಸಿಕೊಂಡಿದೆ. ಬಿಸಿಲಿಗೆ ಬೆವರಿಳಿಸಿಕೊಳ್ಳುತ್ತಲೇ ವ್ಯಾಪಾರಿಗಳು ಫುಲ್ ಖುಷ್ ಆಗಿದ್ದಾರೆ.

ಇನೆರಡೇ ದಿನಗಳಲಿ ಕರಾವಳಿ ಜಿಲೆಗಳ ವಿವಿಧ ಭಾಗಗಳಲ್ಲಿ ಮಳೆ?

ಮಂಗಳೂರು: ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮಾ.24ರಿಂದ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅಲ್ಲಿಯ ತನಕ ಇದೇ ಮಾದರಿಯ ವಾತಾವರಣ ಮುಂದುವರಿಯಲಿದೆ.

ಕಾಸರಗೋಡು ಗಡಿಯಲ್ಲಿ ಕ್ಯಾನ್‌ಗಳಲ್ಲಿ ಡೀಸೆಲ್ ಸಂಗ್ರಹ ನಿಷೇಧ

ಕೃಷಿ ವಲಯಕ್ಕೆ ಶುರುವಾಗಿದೆ ಹೊಸ ಸಂಕಷ್ಟ

ಮುಳ್ಳೇರಿಯ: ಕಾಸರಗೋಡು ಜಿಲ್ಲೆಯ ಕೆಲವು ಗಡಿ ಪ್ರದೇಶಗಳ ಪೆಟ್ರೋಲ್ ಬಂಕ್‌ಗಳಲ್ಲಿ ಕೃಷಿ ನೀರಾವರಿಗೆ ಆಗತ್ಯವಾದ ಡೀಸೆಲ್‌ನ್ನು ಕ್ಯಾನ್‌ಗಳಲ್ಲಿ ತುಂಬಿಸಿ ನೀಡುವುದಕ್ಕೆ ಪೆಟ್ರೋಲ್ ಬಂಕ್ ಸಿಬ್ಬಂದಿಗಳು ಹಿಂದೇಟು ಹಾಕುತ್ತಿದ್ದಾರೆ. ಇದರಿಂದಾಗಿ ಕೃಷಿಗೆ ನೀರುಣಿಸಲು ಡೀಸೆಲ್ ಪಂಪ್‌ಗಳನ್ನು ಬಳಸುತ್ತಿರುವ ಕೃಷಿಕರು ಮಾತ್ರ ಈಗ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

10 ಲೀಟರ್‌ಗೆ ಅವಕಾಶ ಕೊಡಿ...

ಕಾಸರಗೋಡು ಜಿಲ್ಲೆಯ ಆನೇಕ ಕಡೆಗಳಲ್ಲಿ ಕೃಷಿ ನೀರಾವರಿ ವ್ಯವಸ್ಥೆಗೆ ಡೀಸೆಲ್ ಬಳಸುವ ಕೃಷಿಕರಿದ್ದಾರೆ. ತೋಟಗಳಿಗೆ ನೀರುಣಿಸುವ ಪಂಪ್‌ಗಳಿಗೆ ಡಿಸೇಲ್ ಅವಶ್ಯಕತೆ ಹೆಚ್ಚಾಗಿ ಇದೆ. ಆದ್ದರಿಂದ ಪೆಟ್ರೋಲ್ ಬಂಕ್ ಮೂಲಕ ಗರಿಷ್ಠ 10 ಲೀಟರ್ ಪ್ರಮಾಣದ ಡೀಸೆಲ್‌ನ್ನು ಮಳೆಗಾಲ ಆರಂಭವಾಗುವ ತನಕವಾದರೂ ಕೃಷಿಕರಿಗೆ ಕ್ಯಾನ್‌ಗಳಲ್ಲಿ ತುಂಬಿಸಿ ಒದಗಿಸುವ ನಿಟ್ಟಿನಲ್ಲಿ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಈ ಭಾಗದ ಕೃಷಿ ಸಮುದಾಯ ಸಂಬಂಧಪಟ್ಟ ಇಲಾಖೆ, ಆಡಳಿತಗಳನ್ನು ಒತ್ತಾಯಿಸಿದ್ದಾರೆ.



ಕೃಷಿಗೆ ಡೀಸೆಲ್ ಬಳಕೆ ಅನಿವಾರ್ಯ

ಮುಂದಿನ ಎರಡು ತಿಂಗಳುಗಳ ಕಾಲ ತೋಟಗಳಿಗೆ ಗರಿಷ್ಠ ಪ್ರಮಾಣದಲ್ಲಿ ನೀರಿನ ಆಗತ್ಯವಿದೆ. ನೀರುಣಿಸಲು ಕೃಷಿಕರಿಗೆ ಡೀಸೆಲ್ ಅನಿವಾರ್ಯ. ಹೀಗಾಗಿ ಕೃಷಿ ಹಾಗೂ ಕೃಷಿಕರ ಸಂರಕ್ಷಣೆಗಾಗಿ ಗರಿಷ್ಠ 10 ಲೀಟರ್‌ನಷ್ಟು ಡೀಸೆಲ್‌ನ್ನು ಕ್ಯಾನ್‌ಗಳಲ್ಲಿ ತುಂಬಿಸಿ ನೀಡುವ ತಿದ್ದುಪಡಿಯ ಆದೇಶವನ್ನು ಕೂಡಲೇ ಅನುಷ್ಠಾನಗೊಳಿಸಬೇಕೆಂದು ಕೃಷಿಕರು ಮನವಿ ಮಾಡಿದ್ದಾರೆ.

ಕಡಲಿನತ್ತ ಮುಖಮಾಡದ ನಾಡದೋಣಿ!

ಮಂಗಳೂರು: ಒಂದೆಡೆ ಎಲ್‌ಪಿಜಿ ಕೊರತೆಯಿಂದ ಆಳ ಸಮುದ್ರ ಮೀನುಗಾರಿಕೆ ಬಹುತೇಕ ಕುಂಠಿತವಾಗಿದ್ದರೆ, ಇನ್ನೊಂದೆಡೆ ಕಡಲಿನಲ್ಲಿ ಕಾಡುತ್ತಿರುವ ಮೀನಿನ ಕೊರತೆಯಿಂದ ನಾಡದೋಣಿಗಳು ಕೂಡಾ ಈಗ ಮೀನುಗಾರಿಕೆಯತ್ತ ವಿಶೇಷ ಆಸಕ್ತಿ ವಹಿಸುತ್ತಿಲ್ಲ. ಕರಾವಳಿ ಮಾರುಕಟ್ಟೆಯಲ್ಲಿ ಈಗ ನಿಧಾನವಾಗಿ ತಾಜಾ ಮೀನಿಗೆ ಅಭಾವ ಕಂಡುಬರುತ್ತಿದ್ದು, ಕಳೆದ ಕೆಲವು ದಿನಗಳಿಂದ ಧಾರಣೆಯಲ್ಲಿ ಕೂಡಾ ವಿಪರೀತವಾಗಿ ಹೆಚ್ಚಳವಾಗುತ್ತಿದೆ.

ಮತ್ತಷ್ಟು ಸಂಕಷ್ಟದಲ್ಲಿ ಹೊಟೇಲ್ ಮಾಲಕರು | ದೋಸೆ, ಚಿಕನ್ ಖಾದ್ಯಗಳ ತಯಾರಿ ಬಂದ್

ಎಲ್‌ಪಿಜಿ ಅಭಾವದ ನಡುವೆ ಈಗ ಕಟ್ಟಿಗೆ ರೇಟಿನ ಏಟು!

ಮಂಗಳೂರು: ಕರಾವಳಿ ಭಾಗದ ಹೊಟೇಲ್ ಉದ್ಯಮ ಈಗ 'ಕೊಲ್ಲಿ ಯುದ್ಧ'ಕ್ಕೆ ತತ್ತರಿಸಿ ಹೋಗಿದ್ದು, ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಅಭಾವ ಮಾಲಿಕರು, ಕಾರ್ಮಿಕರು, ಗ್ರಾಹಕರನ್ನು ಈಗ ಇನ್ನಷ್ಟು ಸಂಕಷ್ಟಕ್ಕೆ ತಳ್ಳಿದೆ.

ದೋಸೆ, ಚಿಕನ್ ಖಾದ್ಯಕ್ಕೆ ಗೇಟ್‌ಪಾಸ್

ಗ್ಯಾಸ್ ಪೂರೈಕೆ ವ್ಯತ್ಯಯದಿಂದಾಗಿ ನಗರದ ಹೆಚ್ಚಿನ ಹೋಟೇಲ್‌ಗಳು ಬಾಗಿಲು ಎಳೆದುಕೊಂಡಿದ್ದರೆ, ಇನ್ನು ಕೆಲವು ಚಾಲ್ತಿಯಲ್ಲಿರುವ ಹೊಟೇಲ್‌ಗಳಲ್ಲಿ ಕೆಲವು ತಿಂಡಿಗಳಿಗೆ 'ಗೇಟ್‌ಪಾಸ್' ನೀಡಲಾಗಿದೆ. ಬಹುತೇಕ ಹೊಟೇಲ್‌ಗಳು ಹೆಚ್ಚು ಗ್ಯಾಸ್ ಆಗತ್ಯವಿರುವ ದೋಸೆ, ಚಿಕನ್ ಮೊದಲಾದ ಖಾದ್ಯಗಳ ತಯಾರಿಯನ್ನೇ ಸ್ಥಗಿತಗೊಳಿಸಿದೆ. ಕೆಲವೆಡೆ ಇಡ್ಲಿ ವಡೆ ಮೊದಲಾದ ತಿಂಡಿಗಳ ಬದಲು ಗ್ಯಾಸ್ ಬಳಕೆ ಆಗತ್ಯವಿಲ್ಲದ ಕಡ್ಲೆ ಅವಲಕ್ಕಿ, ಪುಳಿಯೋಗರೆ, ಪಲಾವ್ ಮೊದಲಾದವುಗಳತ್ತ ಚಿತ್ತ ಹರಿಸಿವೆ.

ಊಟದಲ್ಲೂ ಕುಚಿಲಕ್ಕಿ ಬಂದ್

ಹೆಚ್ಚಿನ ಗ್ಯಾಸ್ ಬಳಸಿಕೊಳ್ಳುವ ಕುಚಿಲಕ್ಕಿಯ ಬದಲು ಕ್ಷಣದಲ್ಲಿ ತಯಾರಾಗುವ ಬೆಳ್ತಿಗೆ ಅನ್ನಕ್ಕೆ ಹೆಚ್ಚಿನ ಹೊಟೇಲ್‌ಗಳು ಒತ್ತು ನೀಡುತ್ತಿವೆ. ಕೆಲವು ಹೊಟೇಲ್‌ಗಳಲ್ಲಿ 'ಬಾಯಿಲ್ಡ್ ರೈಸ್' ತಾಯಾರಿಯನ್ನೇ ಸ್ಥಗಿತಗೊಳಿಸಲಾಗಿದೆ.

ಗೋಳಿಬಜೆಗೆ ಇನ್ನೂ ಇದೆ ಸ್ಥಾನ!

ಹೆಚ್ಚಿನ ಹೊಟೇಲ್‌ಗಳು ಸಾಂಪ್ರದಾಯಿಕ ತಿಂಡಿ ಖ್ಯಾತಿಯ ಗೋಳಿಬಜೆ ಮಾತ್ರ ಕೈಬಿಟ್ಟಿಲ್ಲ!



- ಮತ್ತಷ್ಟು ಸಂಕಷ್ಟದಲ್ಲಿ ಕರಾವಳಿ ಹೊಟೇಲ್
- ಇನ್ನೂ ಸುಗಮವಾಗದ ಎಲ್‌ಪಿಜಿಯ ಪೂರೈಕೆ
- ಹಲವು ತಿಂಡಿಗಳಿಗೆ ಈಗಾಗಲೇ ಗುಡ್ ಬೈ
- ಈಗ ಅಡುಗೆ ಕಟ್ಟಿಗೆಗೂ ಏರಿಕೆಯಾದ ರೇಟು

ಸೌದೆ ಒಲೆಯತ್ತ ಚಿತ್ತ ಹರಿಸಿದವರಿಗೂ ಸಂಕಷ್ಟ

ಗ್ಯಾಸ್ ಅಭಾವದಿಂದಾಗಿ ಕಟ್ಟಿಗೆ ಒಲೆಗಳತ್ತ ಚಿತ್ತ ಹರಿಸಿದ ಹೊಟೇಲ್‌ಗಳಿಗೂ ಸಂಕಷ್ಟ ಎದುರಾಗಿದೆ. ಕಟ್ಟಿಗೆಯ ಬೆಲೆಯಲ್ಲಿಯೂ ಏಕಾಏಕಿ ಏರಿಕೆಯಾಗಿದ್ದು, ಈ ಹಿಂದೆ ಕ್ವಿಂಟಾಲ್‌ಗೆ 900 ರೂ.ಗಳಲ್ಲಿ ಸಿಗುತ್ತಿದ್ದ ಅಡುಗೆ ಕಟ್ಟಿಗೆ ಬೆಲೆ ಏಕಾಏಕಿ ರೂ. 1250ನ್ನು ದಾಟಿದೆ. ಹೀಗಾಗಿ ಅತ್ತ ದರಿ ಇತ್ತ ಪುಲಿ ಎಂಬ ಸ್ಥಿತಿಯಲ್ಲಿ ಹೊಟೇಲ್ ಮಾಲಕರಿದ್ದು, ಶೀಘ್ರ ಈ ಬಿಕ್ಕಟ್ಟು ಕೊನೆಯಾಗದಿದ್ದಲ್ಲಿ ಮತ್ತಷ್ಟು ಸಂಕಷ್ಟವನ್ನು ಕರಾವಳಿಯ ಆಹಾರೋದ್ಯಮ ಎದುರಿಸಬಹುದಾಗಿದೆ.

ಪುತ್ತೂರು ಹನುಮಗಿರಿಯಲ್ಲಿ ಬ್ರಹ್ಮಕಲಶ ಸಂಭ್ರಮಕ್ಕೆ ಸಿದ್ಧತೆ 2

ಏ.1ರಿಂದ 8ರವರೆಗೆ ಬಪ್ಪನಾಡು ದೇವಳ ಜಾತ್ರೆ: ಪೂರ್ವಭಾವಿ ಸಭೆ 3

ದೇವರ ಸನಿಧಾನ ಕಲಷವಾದರೆ ಊರಿಗೆ ಸಮಸ್ಯೆ: ಸುಬ್ರಹ್ಮಣ್ಯ ಶ್ರೀ 4

ಸುತ್ತ ಮುತ್ತ

ಇಂದು 'ಯುವ ಸೇವಾ ಸಂಭ್ರಮ'

ಮಂಗಳೂರು: ಯುವಶಕ್ತಿ ಸೇವಾಪಥ ದ.ಕ. ಸಂಸ್ಥೆಯ ನಾಲ್ಕನೇ ವಾರ್ಷಿಕ ಕಾರ್ಯಕ್ರಮ 'ಯುವ ಸೇವಾ ಸಂಭ್ರಮ' ಮಾ.22ರಂದು ನಗರದ ಉರ್ವ ಮಾರಿಯಮ್ಮ ಸಭಾಭವನದಲ್ಲಿ ನಡೆಯಲಿದೆ. ಟೀಮ್ ಸನಾತನ್ ಮಂಗಳೂರು ಆಶ್ರಯದಲ್ಲಿ ನಡೆಯಲಿರುವ ಚತುರ್ಥ ಸೇವಾ ಹೆಜ್ಜೆ ಕಾರ್ಯಕ್ರಮದಲ್ಲಿ ಬೆಳಗ್ಗೆ 9.30ಕ್ಕೆ ರಕ್ತದಾನ ಶಿಬಿರ, ಸಂಜೆ 4ರಿಂದ ಕೀರ್ತನ್ ನಾಯ್ಗ ಮಾಡೂರು ಬಳಗದವರಿಂದ ಭಕ್ತಿ ಸಂಗೀತ ಕಾರ್ಯಕ್ರಮ, ಸಂಜೆ 5.30ರಿಂದ 20ಕ್ಕೂ ಹೆಚ್ಚು ಅಶಕ್ತ ಕುಟುಂಬಗಳಿಗೆ ಸೇವಾನಿಧಿ ಹಸ್ತಾಂತರ, ಸೇವಾಸಾಧಕರಿಗೆ ಗೌರವ, ಸೇವಾ ಸಂಸ್ಥೆಗಳಿಗೆ ಅಭಿನಂದನೆ, ಮಿತ್ರ ಸಂಸ್ಥೆಗಳಿಗೆ ಪುರಸ್ಕಾರ, ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ನೀಲಾಶ್ರೀ ಕಲಾವಿದರು ವಾಮದಪದವು ಅಭಿನಯದ 40ಕ್ಕೂ ಅಧಿಕ ಪ್ರತಿಭಾನ್ವಿತ ಕಲಾವಿದರಿಂದ 'ಅಪ್ಪೆ ಭ್ರಾಮರಿ' ತುಳುನಾಡ ಕಥೆ ಬೊಕ್ಕ ನೃತ್ಯೋದ್ಯೆಸಿರ ಕಾರ್ಯಕ್ರಮ ನಡೆಯಲಿದೆ ಎಂದು ಟೀಮ್ ಸನಾತನ್ ಪ್ರಮುಖ್ ಸಾಯಿಪ್ರಸಾದ್ ಶೆಟ್ಟಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಕಾರ್ಯಕ್ರಮದಲ್ಲಿ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡುವರು. ಉರ್ವ ಮಾರಿಯಮ್ಮ ದೇವಸ್ಥಾನದ ಆಡಳಿತ ಮೊಕ್ತೇಸರ ಲಕ್ಷ್ಮಣ ಅಮೀನ್ ಕೋಡಿಕಲ್ ಅಧ್ಯಕ್ಷತೆ ವಹಿಸುವರು. ಶಾಸಕ ಡಿ. ವೇದವ್ಯಾಸ ಕಾಮತ್ ದೀಪ ಪ್ರಜ್ವಲನೆ ಮಾಡುವರು. ಸಂಸದ ಕ್ಯಾ. ಬ್ರಿಜೇಶ್ ಚೌಟ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಅಭ್ಯಾಗತರಾಗಿ ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ್ ಶೆಟ್ಟಿ ಕಾರ್ಕಳ, ಪ್ರಮುಖರಾದ ಲಾಂಚುಲಾಲ್ ಕೆ.ಎಸ್., ಗಣೇಶ್ ಕುಲಾಲ್, ಗೌತಮ್ ಸಾಲ್ಯಾನ್ ಕೋಡಿಕಲ್, ಯಜ್ಞೇಶ್ವರ ಬರ್ಕೆ, ಮಾಧವ ಕಾಮತ್, ಸಂತೋಷ್ ಕುಮಾರ್ ಶೆಟ್ಟಿ, ಅಶ್ವಿತ್ ಕೊಟ್ಟಾರಿ, ರವಿಚಂದ್ರ ಶೆಟ್ಟಿ, ಋತ್ವಿಕ್ ಕದ್ರಿ, ತಾರಾ ಶೆಟ್ಟಿ, ಡಾ. ಶಿಲ್ಪಾ ದಿನೇಶ್, ಕಾರ್ತಿಕ್ ಶೆಟ್ಟಿ ಬರ್ಕೆ, ತಿಲಕ್‌ರಾಜ್ ಕಡೇಶಿವಾಲಯ, ಸಾಯಿಪ್ರಸಾದ್ ಶೆಟ್ಟಿ ಪಾಲ್ಗೊಳ್ಳುವರು. ಯುಶಕ್ತಿ ಸೇವಾಪಥ ಸಂಸ್ಥೆಯ ದಿನೇಶ್ ಬಡೆಕೊಟ್ಟು, ಯುವಶಕ್ತಿ ಕಡೇಶಿವಾಲಯ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ ಬೇಂಗೆದಡಿ, ಕಾರ್ತಿಕ್ ಶೆಟ್ಟಿ ಬರ್ಕೆ, ದೀಪಕ್ ಸನಿಲ್, ದೀಕ್ಷಿತ್ ಕುಲಾಲ್ ಕಡೇಶಿವಾಲಯ ಇದ್ದರು.

ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲು ಮನವಿ

ಬಂಟ್ವಾಳ: ಕರಾವಳಿ ಜಿಲ್ಲೆಯಲ್ಲಿ ಸಾವಿರಾರು ಮಂದಿ ಬಡವರು ಸರಕಾರಿ ಜಮೀನು ಹಾಗೂ ಕುಮ್ಕಿ ಸ್ಥಳದಲ್ಲಿ ಸಣ್ಣ ಗುಡಿಸಲು ನಿರ್ಮಿಸಿ ವಾಸ್ತವ ಇದ್ದುಕೊಂಡು ಹಕ್ಕು ಪತ್ರವಿಲ್ಲದೇ ಸರಕಾರದ ವಿವಿಧ ಯೋಜನೆಗಳ ಪ್ರಯೋಜನ ಪಡೆಯಲು



ವಿಫಲರಾಗಿರುವ ಹಿನ್ನಲೆಯಲ್ಲಿ ತಕ್ಷಣ 94ಸಿ ಹಕ್ಕುಪತ್ರಕ್ಕಾಗಿ ಅರ್ಜಿ ನೀಡಲು ಅವಕಾಶ ಮಾಡಿಕೊಡುವಂತೆ ಒತ್ತಾಯಿಸಿ ರಾಜ್ಯದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಸಿದ್ದಕಟ್ಟೆ ಸಿ.ಎ.ಬ್ಯಾಂಕ್ ಅಧ್ಯಕ್ಷ ಪ್ರಭಾಕರ ಪ್ರಭು ಲಿಖಿತ ಮನವಿ ಮೂಲಕ ಒತ್ತಾಯಿಸಿದ್ದಾರೆ.
ಹಕ್ಕುಪತ್ರವಿಲ್ಲದೇ ಮನೆ ನಂಬರ್ ಕೂಡ ಸಿಗದಿದ್ದು, ವಿದ್ಯುತ್ ಸಂಪರ್ಕಕ್ಕು ತುಂಬಾ ತೊಂದರೆಯಾಗಿದೆ. ಕೆಲವೊಂದು ಕಡೆಗಳಲ್ಲಿ ಸಣ್ಣಪುಟ್ಟ ಮಕ್ಕಳ ಜೊತೆಗೆ ವಾಸ್ತವ್ಯ ಇದ್ದುಕೊಂಡು ವಿದ್ಯುತ್ ಸಂಪರ್ಕವಿಲ್ಲದೇ ಕತ್ತಲೆಯಲ್ಲಿ ಜೀವನ ಸಾಗಿಸುವಂತಾಗಿದೆ ಎಂದು ಮನವಿಯಲ್ಲಿಅವರು ತಿಳಿಸಿದ್ದಾರೆ. 94 ಸಿ ಅಡಿಯಲ್ಲಿ ಹಕ್ಕುಪತ್ರ ಪಡೆಯದೇ ಅರ್ಜಿ ಸಲ್ಲಿಸಲು ಅವಕಾಶ ಇಲ್ಲದಿರುವುದರಿಂದ ಅನಧಿಕೃತವಾಗಿ ವಾಸ್ತವ ಇರುವವರ ಕಷ್ಟ ಹೇಳತೀರದಾಗಿದೆ.ಈ ಹಿನ್ನಲೆಯಲ್ಲಿ ಸರಕಾರಿ ಜಮೀನಿನಲ್ಲಿ ಮನೆ ನಿರ್ಮಿಸಿ ವಾಸ್ತವ್ಯ ಇರುವವರಿಗೆ ಮನೆಯಡಿ ಸ್ಥಳದ ಹಕ್ಕುಪತ್ರ ಪಡೆಯುವರೇ 94 ಸಿ ಅಡಿಯಲ್ಲಿ ಅರ್ಜಿ ಸ್ವೀಕರಿಸುವ ಸರಕಾರದ ಹಿಂದಿನ ಆದೇಶವನ್ನು ಪರಿಷ್ಕರಿಸಿ ಹೊಸದಾಗಿ ಅರ್ಜಿ ಸ್ವೀಕರಿಸಲು ಅವಕಾಶ ಮಾಡಿಕೊಡುವ ಬಗ್ಗೆ ಸರಕಾರದ ಮಟ್ಟದಲ್ಲಿ ಆದೇಶ ಹೊರಡಿಸುವಂತೆ ಪ್ರಭು ಮನವಿಯಲ್ಲಿ ಆಗ್ರಹಿಸಿದ್ದಾರೆ. ಕಂದಾಯ ಇಲಾಖೆ ಕಾರ್ಯದರ್ಶಿಗೂ ಪತ್ರವನ್ನು ರವಾನಿಸಿದ್ದಾರೆ.

ಮಾ.24ಕ್ಕೆ ಸಭೆ

ವಿಟ್ಲ: ಮೆಸ್ಕಾಂ ವಿಟ್ಲ ಉಪವಿಭಾಗ ಕಚೇರಿಯಲ್ಲಿ ಮಾ.24ರಂದು ಸಮಯ ಬೆಳಿಗ್ಗೆ 11.00 ರಿಂದ 12ರವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ, ದೂರವಾಣಿ ಮುಖಾಂತರವೂ ಸಂಪರ್ಕಿಸಿ, ಅಹವಾಲುಗಳನ್ನು ಸಲ್ಲಿಸಬಹುದಾಗಿದೆ. ದೂರವಾಣಿ ಸಂಖ್ಯೆ: 08255-239909 ಅನ್ನು ಸಂಪರ್ಕಿಸಿ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಏ.9ರಿಂದ 12ರ ತನಕ ಅದ್ದೂರಿಯಾಗಿ ಧಾರ್ಮಿಕ ಕಾರ್ಯಕ್ರಮ | 60 ಗ್ರಾಮ ಸಮಿತಿ ರಚನೆ

ಹನುಮಗಿರಿಯಲ್ಲಿ ಬ್ರಹ್ಮಕಲಶೋತ್ಸವ ಸಂಭ್ರಮಕ್ಕೆ ಸಿದ್ಧತೆ

ಸುಳ್ಯ: ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರ ಹನುಮಗಿರಿಯಲ್ಲಿ ಏ.9 ರಿಂದ 12ರ ತನಕ ಅದ್ದೂರಿಯಾಗಿ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಬ್ರಹ್ಮಕಲಶೋತ್ಸವ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ 60 ಗ್ರಾಮ ಸಮಿತಿಗಳನ್ನೊಳಗೊಂಡು ಅಭೂತಪೂರ್ವವಾಗಿ ಸಮರೋಪಾದಿಯಲ್ಲಿ ಪೂರ್ವಭಾವಿ ಸಿದ್ಧತೆಗಳು ನಡೆಯುತ್ತಿವೆ ಎಂದು ಆಡಳಿತ ಧರ್ಮದರ್ಶಿ ನನ್ಯ ಅಚ್ಯುತ ಮೂಡೆತ್ತಾಯ ತಿಳಿಸಿದ್ದಾರೆ.



ಅವರು ಸುಳ್ಯ ಪ್ರೆಸ್ ಕ್ಲಬ್ ನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಬ್ರಹ್ಮಕಲಶೋತ್ಸವ ಕುರಿತು ಮಾತನಾಡಿ, ಈ ಬಾರಿ ಕ್ಷೇತ್ರದಲ್ಲಿ ದೈವಜ್ಞರ ಪ್ರಶ್ನಾ ಚಿಂತನೆಯ ಪ್ರಕಾರ ಕಂಡುಬಂದಂತೆ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು, ಅದರ ಜೊತೆಗೆ ಇತಿಹಾಸ ಪುರುಷರಾದ ಶ್ರೀರಾಮ ಹಾಗೂ ಆತನ ಬಂಟನಾದ ಹನುಮಂತನ ಜೀವನಾಧಾರಿತ ಶಿಲ್ಪಗಳನ್ನು ಯುವ ಜನತೆಗೆ ತಿಳಿಸುವ ನಿಟ್ಟಿನಲ್ಲಿ ಮಾಡಲಾಗಿದೆ. ವಿಶೇಷವಾಗಿ ಅದ್ದೂರಿ ಕಾರ್ಯಕ್ರಮದಲ್ಲಿ ಯಾವುದೇ ಸಭೆಗಳು ಇಲ್ಲದೇ ಇದ್ದು ಕೇವಲ ಯತೀವರ್ಯರು ಸಮಯೋಚಿತವಾಗಿ ಆಶೀರ್ವಚನ ನೀಡುವ ಕುರಿತು ತೀರ್ಮಾನಿಸಲಾಗಿದೆ ಎಂದು ವಿವರ ನೀಡಿದರು.

ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ವಿಶೇಷವಾಗಿ ಶ್ರೀ ಕೋಟಿ ರಾಮ ತಾರಕ ಮಹಾಜಪಯಜ್ಞ ನಡೆಯಲಿದೆ. ಇದು ಅತ್ಯಂತ ಶಕ್ತಿಶಾಲಿಯಾದ ಮಂತ್ರವಾಗಿದ್ದು, ಇದು 13 ಅಕ್ಷರಗಳಿಂದ ಕೂಡಿದೆ. ಲೋಕಕಲ್ಯಾಣಾರ್ಥವಾಗಿ ಮಂತ್ರ ಜಪತಪಗಳೊಂದಿಗೆ ನಡೆದರೆ ಆ ಬಳಿಕ ಲಕ್ಷೋತ್ತರ ನಾರಿಕೇಳ ಸಮರ್ಪಣೆ, ಭಜನಾಸಂಕೀರ್ತನೆ, ಹೊರೆ ಕಾಣಿಕೆ ಸಮರ್ಪಣೆ ಹಾಗೂ ಇತರೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿದೆ ಎಂದು ತಿಳಿಸಿದರು.

ಶ್ರೀ ರಾಮ ಹನುಮ ಜ್ಯೋತಿ ರಥಯಾತ್ರೆ
ಆಯೋಧ್ಯೆ ಮಂದಿರದಲ್ಲಿ ಬೆಳಗುವ ಜ್ಯೋತಿಯನ್ನು ರಾಮನ ಪರಮ ಭಕ್ತ ಆಂಜನೇಯ ಹುಟ್ಟಿದ ಸ್ಥಳವಾದ ಅಂಜನಾದ್ರಿ ತಲುಪಿ ಅಲ್ಲಿಂದ ಹನುಮ ಜ್ಯೋತಿಯನ್ನು ಬೆಳಗಿ ಬಳಿಕ ಏ.9 ರಂದು ದೇಗುಲ ತಲುಪಿ ಕೋಟಿ ಶ್ರೀ ರಾಮ ತಾರಕ ಯಜ್ಞ ಆರಂಭಗೊಳ್ಳಲಿದೆ ಎಂದು ತಿಳಿಸಿದರು.

ರಮಣೀಯ ಕ್ಷೇತ್ರ
ಹನುಮಗಿರಿಯ ಶ್ರೀ ಕೋದಂಡರಾಮ



ಪಂಚಮುಖಿ ಆಂಜನೇಯ ಕ್ಷೇತ್ರ ಪ್ರವಾಸಿ ತಾಣವಾಗಿ ಕರಾವಳಿ ಭಾಗದ ಜನರನ್ನು ಸೆಳೆಯುತ್ತಿದೆ. ಎತ್ತರದ ಶಿಲಾಮೂರ್ತಿ ಜೊತೆಗೆ ಪ್ರಕೃತಿಯ ರಮಣೀಯ ದೃಶ್ಯ ನೋಡುಗರ ಕಣ್ಮನ ಸೆಳೆಯುತ್ತಿದೆ. ದಿನನಿತ್ಯ ಸಾವಿರಾರು ಭಕ್ತರು ಈ ಕ್ಷೇತ್ರಕ್ಕೆ ಆಗಮಿಸುತ್ತಿದ್ದಾರೆ.

ಮಾ. 27ರಂದು ಅಯೋಧ್ಯೆಯಿಂದ ಹೊರಟು ಮೇಹರ್, ನಾಗ್ಪುರ, ಲಾತೂರು, ಅಂಜನಾದ್ರಿ, ಚಿತ್ರದುರ್ಗ, ಕಾರ್ಕಳ, ಕಲ್ಲಡ್ಕ, ಪುತ್ತೂರು, ಕೆಮ್ಮಿಂಜೆ, ಕಾಣಿಯೂರು, ಬೆಟ್ಟಂಪಾಡಿ, ಕೆಯ್ಯೂರು, ಕಾವು ಮೂಲಕ ಈಶ್ವರಮಂಗಲ ದೇಗುಲ ತಲುಪಿ ಅಲ್ಲಿಂದ ಹನುಮ ಜ್ಯೋತಿ ರಥಯಾತ್ರೆಯು ವೈಭವದ ಮೆರವಣಿಗೆಯೊಂದಿಗೆ ಹನುಮಗಿರಿ ಕ್ಷೇತ್ರಕ್ಕೆ ಆಗಮಿಸಲಿದೆ ಎಂದು ತಿಳಿಸಿದರು.

ಸುಳ್ಯಕ್ಕೂ ಜ್ಯೋತಿ ಆಗಮನ
ಸುಳ್ಯ ವಿಧಾನಸಭಾಕ್ಷೇತ್ರದ ಕೊಯಿಲ, ಕಾಣಿಯೂರು, ಬೆಳ್ಳಾರೆ, ಪೆರುವಾಜೆ, ಐವರ್ನಾಡು ಸೇರಿದಂತೆ ಇತರೆ ಭಾಗಗಳಿಗೆ ಜ್ಯೋತಿ ಆಗಮಿಸಲಿದೆ. ಅಲ್ಲದೆ ಹಸಿರು ಹೊರೆ ಕಾಣಿಕೆಯನ್ನು ಸುಳ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಿಂದ ಏ.8 ರಂದು ಸಮರ್ಪಿಸಲಾಗುವುದು ಎಂದು ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ಎಸ್. ಎನ್. ಮನ್ಮಥ ತಿಳಿಸಿದರು.
ಸುದ್ದಿಗೋಷ್ಠಿಯಲ್ಲಿ ಹರೀಶ್ ಕಂಜಿಪಿಲಿ, ರಾಕೇಶ್ ರೈ ಕೆಡೆಂಜಿ, ಎನ್.ಎ. ರಾಮಚಂದ್ರ, ಸುನಿಲ್ ಕೇರ್ಪಳ, ಸಂತೋಷ್ ಜಾಕೆ, ಲೋಹಿತ್ ಕುದ್ಕುಳಿ, ಮಹೇಶ್, ಚಂದ್ರಶೇಖರ ನೆಡೀಲು,ಸುಹಾಸ್ ಭಟ್, ಸತೀಶ್ ಎಡಮಲೆ, ಗೋಪಾಲಕೃಷ್ಣ ಜಯರಾಮ ರೈ ಉಪಸ್ಥಿತರಿದ್ದರು.

ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆದ ಕಿಶೋರ್ ಕುಮಾರ್ ಪುತ್ತೂರು

ಸ್ಥಳೀಯ ಸಂಸ್ಥೆಗಳಲ್ಲಿ ಬಹುತೇಕ ಹುದ್ದೆಗಳು ಖಾಲಿ

ಪುತ್ತೂರು: ಪ್ರಸ್ತುತ ನಡೆಯುತ್ತಿರುವ ವಿಧಾನ ಪರಿಷತ್ತಿನ ಬಜೆಟ್ ಅಧಿವೇಶನ ದಲ್ಲಿ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಪಟ್ಟಣ ಪಂಚಾಯತ್, ಪುರಸಭೆ ಹಾಗೂ ನಗರಸಭೆ) ಖಾಲಿ ಇರುವ ಹುದ್ದೆಗಳ ಕುರಿತು ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಸರಕಾರ ನೀಡಿರುವ ಉತ್ತರ ಆಘಾತಕಾರಿಯಾಗಿದೆ ಎಂದು ಹೇಳಿರುವ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿ ಹಾಗೂ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬರೋಬ್ಬರಿ ಶೇ. 53ಕ್ಕೂ ಹೆಚ್ಚು ಹುದ್ದೆಗಳು ಖಾಲಿಯಿದ್ದು, ಸಾರ್ವಜನಿಕ ಸೇವೆಯು ತೀವ್ರ ವ್ಯತ್ಯಯವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಸರಕಾರವು ಸದನದಲ್ಲಿ ಒದಗಿಸಿರುವ ಅಧಿಕೃತ ಲಿಖಿತ ಉತ್ತರದ ಪ್ರಕಾರ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಂಜೂರಾದ ಒಟ್ಟು 36,134 ಹುದ್ದೆಗಳ ಪೈಕಿ ಬರೋಬ್ಬರಿ 19,509 ಹುದ್ದೆಗಳು ಖಾಲಿ ಇವೆ. ಗ್ರೂಪ್ 'ಎ' ವೃಂದದ 356 ಹುದ್ದೆಗಳಲ್ಲಿ 112, ಗ್ರೂಪ್ 'ಬಿ' ವೃಂದದ 408 ರಲ್ಲಿ 307, ಗ್ರೂಪ್ 'ಸಿ' ವೃಂದದ 9,856 ರಲ್ಲಿ 5,624 ಹಾಗೂ ಗ್ರೂಪ್ 'ಡಿ' ವೃಂದದ 25,514 ಹುದ್ದೆಗಳಲ್ಲಿ 13,672 ಹುದ್ದೆಗಳು ಖಾಲಿ ಇವೆ. ಅರ್ಧಕ್ಕಿಂತ ಹೆಚ್ಚು ಸಿಬ್ಬಂದಿಯೇ ಇಲ್ಲದಿರುವುದರಿಂದ ರಾಜ್ಯದ ಸ್ಥಳೀಯ ಸಂಸ್ಥೆಗಳ ಆಡಳಿತ ಯಂತ್ರವು ಸಂಪೂರ್ಣವಾಗಿ ಕುಸಿದುಬಿದ್ದಿದೆ.

> **ಸಿಬ್ಬಂದಿ ಕೊರತೆಯಿಂದಾಗಿ ಸಾರ್ವಜನಿಕರಿಗೆ ಒದಗಿಸಬೇಕಾದ ಮೂಲಭೂತ ಸೇವೆಗಳು ಮರೀಚಿಕೆ ಯಾಗಿದ್ದು, ದಿನನಿತ್ಯದ ಸಣ್ಣಪುಟ್ಟ ಕೆಲಸಗಳಿಗೂ ಜನಸಾಮಾನ್ಯರು ಕಚೇರಿಗಳಿಗೆ ಅಲೆದಾಡುವಂತಹ ಶೋಚನೀಯ ದುಸ್ಥಿತಿ ನಿರ್ಮಾಣ ವಾಗಿದೆ. ಇದರ ಜೊತೆಗೆ, ಇರುವ ಬೆರಳೆಣಿಕೆಯ ಸಿಬ್ಬಂದಿಗಳಿಗೆ ಜನಗಣತಿ, ಜಾತಿ ಸಮೀಕ್ಷೆಯಂತಹ ಸರ್ಕಾರದ ಇತರೆ ಕೆಲಸಗಳನ್ನು ವಹಿಸುತ್ತಿರುವುದರಿಂದ ಸ್ಥಳೀಯ ಸಂಸ್ಥೆಗಳ ದೈನಂದಿನ ಕಾರ್ಯಚಟುವಟಿಕೆಗಳಿಗೆ ತೀವ್ರ ಅಡ್ಡಿಯಾಗುತ್ತಿದೆ.**
> ● ಕಿಶೋರ್ ಕುಮಾರ್ ಪುತ್ತೂರು, ಎಂಎಲ್ಸಿ



ಜನಸಾಮಾನ್ಯರ ಪರದಾಟ
ಸಿಬ್ಬಂದಿ ಕೊರತೆಯಿಂದಾಗಿ ಸಾರ್ವಜನಿಕರಿಗೆ ಒದಗಿಸಬೇಕಾದ ಮೂಲ ಸೇವೆಗಳು ಮರೀಚಿಕೆಯಾಗಿದ್ದು, ದಿನನಿತ್ಯದ ಸಣ್ಣಪುಟ್ಟ ಕೆಲಸಗಳಿಗೂ ಜನಸಾಮಾನ್ಯರು ಕಚೇರಿಗಳಿಗೆ ಅಲೆದಾಡುವಂತಹ ಶೋಚನೀಯ ದುಸ್ಥಿತಿ ನಿರ್ಮಾಣವಾಗಿದೆ. ಮತ್ತೊಂದೆಡೆ, ರಾಜ್ಯಾದ್ಯಂತ ಪೌರಸೇವಾ ವೃಂದದ ಸುಮಾರು 110 ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನಿಯೋಜನೆ ಮೇಲೆ ಅನ್ಯ ಇಲಾಖೆಗಳಲ್ಲಿ ಬಳಸಿಕೊಳ್ಳಲಾಗುತ್ತಿರುವುದು ಈ ಸಮಸ್ಯೆಯನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡಿದೆ.
ಸಿಬ್ಬಂದಿ ಕೊರತೆಯ ಬಹುದೊಡ್ಡ ಸಮಸ್ಯೆಯಿಂದಾಗಿ ರಾಜ್ಯದ ಪಟ್ಟಣ ಪಂಚಾಯತ್, ಪುರಸಭೆ ಮತ್ತು ನಗರಸಭೆಗಳಲ್ಲಿ ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ನಗರ ಪ್ರದೇಶದ ಸಾಮಾನ್ಯ ನಾಗರಿಕರು ಇದರ ನೇರ ಬಲಿಪಶುಗಳಾಗಿದ್ದಾರೆ.
ಆದ್ದರಿಂದ, ಸರಕಾರವು ಇನ್ನಾದರೂ ಎಚ್ಚೆತ್ತುಕೊಂಡು ಸಾರ್ವಜನಿಕರ ಹಿತದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳಿಗೆ ಕೂಡಲೇ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಬೇಕು. ಜೊತೆಗೆ ಅನ್ಯ ಇಲಾಖೆಗಳಲ್ಲಿರುವ ಪೌರಸೇವಾ ಸಿಬ್ಬಂದಿಯನ್ನು ವಾಪಸ್ ಕರೆಸಿಕೊಂಡು ಸುಗಮ ಆಡಳಿತಕ್ಕೆ ಅನುವು ಮಾಡಿಕೊಡಬೇಕು ಎಂದು ಕಿಶೋರ್ ಕುಮಾರ್ ಪುತ್ತೂರು ಅವರು ಸರಕಾರವನ್ನು ಒತ್ತಾಯಿಸಿದ್ದಾರೆ.

ಭಕ್ತಾದಿಗಳಿಂದ ಮಲ್ಲಿಗೆ ಹೂವು ಸಮರ್ಪಣೆ, ಕುಂಕುಮಾರ್ಚನೆ ಸೇವೆ

ಶ್ರೀ ಮಹಾಕಾಳಿ ಅಮ್ಮನವರ ಮೆಚ್ಚಿ ಸಂಭ್ರಮ

ಉಪ್ಪಿನಂಗಡಿ: ಇಲ್ಲಿನ ಶ್ರೀ ಸಹಸ್ರಲಿಂಗೇಶ್ವರ ಮಹಾಕಾಳಿ ದೇವಾಲಯದಲ್ಲಿ ಮಹಾಕಾಳಿ ಅಮ್ಮನವರ ಮೆಚ್ಚಿಯು ಅಪಾರ ಸಂಖ್ಯೆಯ ಭಕ್ತಾದಿಗಳ ಸಮ್ಮುಖದಲ್ಲಿ ಪಾರಂಪಾರಿಕ ವಿಧಿ ವಿಧಾನಗಳೊಂದಿಗೆ ಜರಗಿತು.



ಭಾರೀ ಸಂಖೆಯ ಭಕ್ತಾದಿಗಳು ಮಹಾಕಾಳೀ ಅಮ್ಮನವರ ಮುಡಿಗೆ ಮಲ್ಲಿಗೆ ಹೂವನ್ನು ಅರ್ಪಿಸಿ, ಶ್ರೀ ದೇವರಿಗೆ ಕುಂಕು ಮಾರ್ಚನೆ ಸೇವೆ ಸಲ್ಲಿಸಿದರೆ, ಇನ್ನೊಂದೆಡೆ ದುಷ್ಟ ಶಕ್ತಿಗಳಿಂದ ರಕ್ಷಣೆಯನ್ನು ಬಯಸಿ ಮಹಾಕಾಳಿ ಅಮ್ಮನವರ ನೇಮವನ್ನು ನಿರ್ವಹಿಸುವ ಪರವ ಮನೆತನದ ಮಂದಿಯಿಂದ ಕರಿ ನೂಲು ಕಟ್ಟಿಸಿಕೊಳ್ಳುವಲ್ಲಿ ಭಕ್ತ ಜನ ಮುಗಿಬಿದ್ದಿದ್ದರು.
ಸಂತೆ ಮಜಲಿನಲ್ಲಿ ನಡೆದ ಮಹಾಕಾಳಿ ನೇಮೋತ್ಸವದ ವಿಧಿ ವಿಧಾನಗಳನ್ನು, 1001 ದೈವಗಳಿಗೆ ಕಟ್ಟುಕಟ್ಟಳೆಗೆಯ ಮೂಲಕ ನಡೆದ ನೇಮವನ್ನು ಸಹಸ್ರಾರು ಭಕ್ತಾದಿಗಳು ಕಣ್ತುಂಬಿಕೊಂಡರು.
ಖ್ಯಾತ ಸ್ಯಾಕ್ಸೋಫೋನ್ ವಾದಕ ಕೃಷ್ಣಪ್ರಸಾದ್ ದೇವಾಡಿಗ ಮತ್ತು ಖ್ಯಾತ ಕೊಳಲು ವಾದಕ ಡಾ. ರಾಮಕೃಷ್ಣ ಭಟ್ ನೇತೃತ್ವದ ಬಳಗದಿಂದ ಆಕರ್ಷಕ ವಾದ್ಯಗೋಷ್ಠಿ ಹಾಗೂ ಸುಸ್ವರ ಮೆಲೋಡೀಸ್ ತಂಡದಿಂದ ಭಕ್ತಿ ಭಾವ ಗಾನ ಸಂಭ್ರಮ ನಡೆಯಿತು. ಗ್ಯಾರೇಜ್ ಮಾಲಕರ ಸಂಘದವತಿಯಿಂದ ಆಗಮಿಸಿದ ಭಕ್ತಾದಿಗಳಿಗೆ ಸೋಜಿ ವಿತರಣಾ ಸೇವೆ ನಡೆದಿದ್ದು, ದೇವಳದ ವತಿಯಿಂದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯು ನಡೆದಿತ್ತು. ಕಾರ್ಯಕ್ರಮದಲ್ಲಿ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ಮಾಜಿ ಶಾಸಕ ಸಂಜೀವ ಮಠಂದೂರು, ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್, ಕಾರ್ಯನಿರ್ವಹಣಾಧಿಕಾರಿ ಕವಿತ ಎಂ., ಪ್ರಧಾನ ಅರ್ಚಕ ಹರೀಶ್ ಉಪಾಧ್ಯಾಯ, ಸದಸ್ಯರಾದ ಬಿ. ಗೋಪಾಲಕೃಷ್ಣ ರೈ, ವೆಂಕಪ್ಪ ಪೂಜಾರಿ ಮರುವೇಲು , ಸೋಮನಾಥ, ಡಾ. ರಮ್ಯ ರಾಜಾರಾಮ್, ದೇವಿದಾಸ್ ರೈ, ಕೃಷ್ಣ ರಾವ್ ಅರ್ತಿಲ, ಅನಿತಾ ಕೇಶವ ಗೌಡ ಪ್ರಮುಖರಾದ ಕರುಣಾಕರ ಸುವರ್ಣ, ಕಂಗ್ವೆ ವಿಶ್ವನಾಥ ಶೆಟ್ಟಿ ಯು. ಸುಧಾಕರ ಶೆಟ್ಟಿ, ಜನಾರ್ಧನ ಪೂಜಾರಿ, ಕೆ ಜಗದೀಶ್ ಶೆಟ್ಟಿ ರಾಮಚಂದ್ರ ಮಣೆಯಾಣಿ, ಅನಂತರಾಯ ಕಿಣಿ, ಸುಜೀರ್ ಗಣಪತಿ ನಾಯಕ್ , ರತ್ನಾಕರ ಪೈ, ಕೃಷ್ಣ ಶೆಣೈ, ಬಾಲಚಂದ್ರ ಶೆಟ್ಟಿ ಡಾ. ರಾಜಾರಾಮ ಕೆ.ಬಿ., ಸುಂದರ ಗೌಡ, ವಿಜಯ ಕುಮಾರ್ ಕಲ್ಲಳಿಕೆ, ವೆಂಕಟರಮಣ ರಾವ್, ರವೀಂದ್ರ ದಕ್ಷ , ಮೊದಲದವರು ಉಪಸ್ಥಿತರಿದ್ದರು.

ಕೋಟಿಮುರ-ಸರಿಪಳ್ಳ ಸಂಪರ್ಕ ರಸ್ತೆ ಅಭಿವೃದ್ಧಿಗೆ ಶಾಸಕರಿಂದ ಗುದ್ದಲಿಪೂಜೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 36ನೇ ಪದವುಪೂರ್ವ ವಾರ್ಡಿನ ಕೋಟಿಮುರ - ಸರಿಪಳ್ಳ ಸಂಪರ್ಕಿಸುವ ಮುಖ್ಯ ರಸ್ತೆಯು 1.80 ಕೋಟಿ ರೂ. ವಿಶೇಷ ಅನುದಾನದಲ್ಲಿ ಅಭಿವೃದ್ಧಿಗೊಳ್ಳಲಿದ್ದು, ಶಾಸಕ ವೇದವ್ಯಾಸ ಕಾಮತ್ ನೇತೃತ್ವದಲ್ಲಿ ಗುದ್ದಲಿ ಪೂಜೆ ನಡೆಯಿತು.
ನಂತರ ಮಾತನಾಡಿದ ಶಾಸಕರು, ಸುಮಾರು 900 ಮೀಟರ್ ಉದ್ದದ ಈ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ-2 ನೇ ಹಂತದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಯ ಅಗತ್ಯತೆಯ ಕುರಿತು ಸ್ಥಳೀಯ ಬಿಜೆಪಿ ಪ್ರಮುಖರು, ಕಾರ್ಯಕರ್ತರು, ಅನೇಕ ಬಾರಿ ನನ್ನಲ್ಲಿ ಮನವಿ ಮಾಡಿದ್ದರು. ಅಲ್ಲದೇ ಸ್ಥಳೀಯ ನಿಕಟಪೂರ್ವ ಪಾಲಿಕೆ ಸದಸ್ಯ ಭಾಸ್ಕರ್ ಮೊಯ್ಲಿ ಅವರೂ ಈ ನಿಟ್ಟಿನಲ್ಲಿ ವಿಶೇಷ ಶ್ರಮ ವಹಿಸಿದ್ದರು. ಅವೆಲ್ಲದರ ಫಲವಾಗಿ ಇಂದು ಬಹುದಿನಗಳ ಬೇಡಿಕೆ ಈಡೇರುತ್ತಿದೆ. ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದ 38 ವಾರ್ಡ್‌ಗಳಲ್ಲಿಯೂ ವಿವಿಧ ಹಂತದ ಕಾಮಗಾರಿಗಳು ಮುಂದುವರಿಯಬೇಕಿದ್ದು, ಅಭಿವೃದ್ಧಿ ವಿಚಾರದಲ್ಲಿ ಯಾವುದೇ ರಾಜಕೀಯಕ್ಕೆ ಆಸ್ಪದವಿಲ್ಲ ಎಂದರು.
ಪ್ರಮುಖರಾದ ರಮೇಶ್ ಕಂಡೆಟ್ಟು, ಅಜಯ್ ಕುಲಶೇಖರ, ಲಲ್ಲೇಶ್ ಕುಮಾರ್, ಪ್ರಶಾಂತ್, ರಾಜೇಶ್, ನಿತಿನ್ ಕುಮಾರ್, ಅಶ್ವಿತ್ ಕೊಟ್ಟಾರಿ, ಸುಜನ್ ದಾಸ್ ಕುಡುಪು, ಹರಿಣಿ ಪ್ರೇಮ್, ಸುಶಾಂತ್ ಕೋಟಿಮುರ, ನವೀನ್ ಶೆಣೈ, ರತೀಶ್, ಪ್ರಕಾಶ್ ಶೆಟ್ಟಿಗಾರ್, ಅಕ್ಷಿತ್, ವಿಶ್ವಜೀತ್, ರಾಜೇಂದ್ರ, ಪಾಂಡುರಂಗ, ವಿಶ್ವನಾಥ್, ಮಹೇಶ್ ಹೆಗ್ಡೆ, ಸುರೇಶ್, ಸಂದೀಪ್, ದೇವಪ್ಪಣ್ಣ, ಪ್ರಕಾಶ್, ಸಂದೀಪ್ ರೆಡಿಬ್ರಿಕ್ಸ್, ಯತೀಶ್ ಆಚಾರ್ಯ, ಫ್ರಾನ್ಸಿಸ್ ಆರೋಜ, ಮುಕೇಶ್ ಮೊದಲಾದವರು ಉಪಸ್ಥಿತರಿದ್ದರು.


ಶಾಸ್ತ್ರೀಯ ಕಲೆ ನಾಡಿನ ಶ್ರೀಮಂತಿಕೆಯ ಪ್ರತೀಕ: ಗೋಪಾಲಕೃಷ್ಣ ಭಟ್ ಬಣ್ಣನೆ



ಪುತ್ತೂರು: ಸಂಗೀತ ನೃತ್ಯ ಸಾಹಿತ್ಯ ಮುಂತಾದ ಶಾಸ್ತ್ರೀಯ ಕಲೆಗಳು ನಾಡಿನ ಶ್ರೀಮಂತಿಕೆಯ ಪ್ರತೀಕ. ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯ ಮೂಲಕ ನಮ್ಮ ಉತ್ಕೃಷ್ಟತೆಯ ಅಂಶಗಳನ್ನು ಸಮಾಜಕ್ಕೆ ತೋರಿಸಿಕೊಟ್ಟಂತಾಗುತ್ತದೆ ಎಂದು ದ್ವಾರಕಾ ಕಾರ್ಪೊರೇಷನ್ ಮುಖ್ಯಸ್ಥ ಗೋಪಾಲಕೃಷ್ಣ ಭಟ್ ಹೇಳಿದರು.
ಪುತ್ತೂರು ಸಮೀಪದ ಮುರದ ಶಿವಸದನ ಹಿರಿಯ ನಾಗರಿಕರ ವಸತಿ ನಿಲಯದಲ್ಲಿ ಜರುಗಿದ ಸಂಗೀತ ಕಲಾವಿದ ಆಗಮ ಪೆರ್ಲ ಅವರ ಸಂಗೀತ ಕಚೇರಿಯನ್ನು ಉದ್ಘಾಟಿಸಿ ಅವರು ಮಾತಾಡಿದರು.
ಕಲಾವಿದ ಆಗಮ ಪೆರ್ಲ ಓರ್ವ ಪ್ರತಿಭಾವಂತ ಯುವ ಗಾಯಕರಾಗಿ ಗುರುತಿಸಿಕೊಂಡಿದ್ದಾರೆ. ಅವರ ಭವಿಷ್ಯ ಉಜ್ವಲವಾಗಲಿ ಎಂದು ಆಶಿಸಿದರು.
ಅಧ್ಯಕ್ಷತೆ ವಹಿಸಿದ ಶಿವಸದನ ಹಿರಿಯ ನಾಗರಿಕರ ವಸತಿ ನಿಲಯದ ಮುಖ್ಯಸ್ಥೆ ಸುಮಂಗಲಾ ಪ್ರಭಾಕರ್, ಇಲ್ಲಿ ಸುಮಾರು 135ರಷ್ಟು ಅಶಕ್ತ ಮಂದಿಗೆ ವಸತಿ ವ್ಯವಸ್ಥೆ ಕಲ್ಪಿಸಿದ್ದೇವೆ. ಅವರ ಶ್ರೇಯೋಭಿವೃದ್ಧಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತಿದ್ದೇವೆ ಎಂದರು.
ಮುಖ್ಯ ಅತಿಥಿಯಾಗಿದ್ದ ಸಾಹಿತಿ ಹಾಗೂ ಮಂಗಳೂರು ಆಕಾಶವಾಣಿಯ ನಿವೃತ್ತ ನಿರ್ದೇಶಕ ಡಾ. ವಸಂತ ಕುಮಾರ ಪೆರ್ಲ, ಶಿವಸದನ ಹಿರಿಯ ನಾಗರಿಕರ ವಸತಿ ನಿಲಯವು ಉತ್ತಮವಾಗಿ ಸಮಾಜಸೇವೆ ಮಾಡುತ್ತಿದೆ ಎಂದರು.
ಮಂಗಳೂರಿನ ಪ್ರತಿಭಾವಂತ ಯುವ ಸಂಗೀತ ಕಲಾವಿದ ಆಗಮ ಪೆರ್ಲ ಸಂಗೀತ ಕಚೇರಿ ನಡೆಸಿಕೊಟ್ಟರು. ಮಂಗಳೂರಿನ ಧನಶ್ರೀ ಶಬರಾಯ ವಯಲಿನ್ ಮತ್ತು ಕಾಸರಗೋಡು ಉಬರಂಗಳದ ಪರಾಶರ ಮೃದಂಗ ಪಕ್ಕವಾದ್ಯ ಸಹಕಾರ ನೀಡಿದರು. ಕಲಾವಿದೆ ವಿದ್ಯಾಶ್ರೀ ವಿಕ್ರಮ ರಾವ್ ಪ್ರಾರ್ಥಿಸಿದರು. ಮೇಲ್ವಿಚಾರಕಿ ರೇಖಾ ಅತಿಥಿಗಳ ಪರಿಚಯಿಸಿದರು. ಕಾರ್ಯದರ್ಶಿ ಕರುಣ್ ರಾವ್ ಬೆಳ್ಳೆ ವಂದಿಸಿದರು.



ಬಂಟ್ವಾಳ ತಾಲೂಕಿನ ಸಜೀಪ ಮಾಗಣೆಪಡೇರಮಾಡ ಕ್ಷೇತ್ರದಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ಶ್ರೀ ದೈವಂಗಳ ಹಾಗೂ ಶ್ರೀ ನಾಲ್ಕೈತ್ತಾಯ ದೈವದ ನೇಮದ ಪ್ರಯುಕ್ತ ಸಾಮೂಹಿಕ ಪ್ರಾರ್ಥನೆ, ಕೋಳಿಗುಂಟ ಸಜೀಪ ಮಾಗಣೆ ತಂತ್ರಿ ಎಂ ಸುಬ್ರಹ್ಮಣ್ಯ ಭಟ್ ಅವರ ನೇತೃತ್ವದಲ್ಲಿ ಶನಿವಾರ ನೆರವೇರಿತು. ಬಿಜಂದಾರುಗುತ್ತು ಶಿವರಾಮ ಭಂಡಾರಿ, ಸಜೀಪಗುತ್ತು ಗಡಿ ಪ್ರಧಾನರಾದ ಮುತ್ತಣ್ಣ ಶೆಟ್ಟಿ ಯಾನೆ ಕಾಳ ಶೆಟ್ಟಿ,ಮಾಡದಾರು ಗುತ್ತು ಗಡಿಪ್ರದಾನ ರಾಧಾ ಶಶಿಧರ ರೈ ಯಾನೆ ನಾರಣ ಆಳ್ವ, ಪ್ರದೀಪ್ ಶೆಟ್ಟಿ,ಸತ್ಯನಾರಾಯಣ ನಾಯಕ್, ಕಿಶನ್ ಶೇಣವ,ಯಶವಂತ ಪೂಜಾರಿ ದೇರಾಜೆ ಗುತ್ತು ಮತ್ತಿತರರಿದ್ದರು.



ಮುಲ್ಕಿ ಸಮೀಪದ ಶಿಮಂತೂರು ಶ್ರೀ ಆದಿ ಜನಾರ್ದನ ದೇವಸ್ಥಾನದ ಎದುರು ಭಾಗದ ಗದ್ದೆಗೆ ಆಕಸ್ಮಿಕ ಬೆಂಕಿ ತಗಲಿ ಹೊತ್ತಿ ಉರಿದಿದೆ. ಕೂಡಲೇ ಸ್ಥಳೀಯರು ಬೆಂಕಿಯನ್ನು ನಂದಿಸಲು ಪ್ರಯತ್ನಿಸಿದ್ದಾರೆ.

ರೂ.1.25 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ | ಮುರುಳ್ಯರಿಂದ ಶಿಲಾನ್ಯಾಸ

ಕೆದ್ದೊಟೆ ಕೆರೆಯ ಅಭಿವೃದ್ಧಿಗೆ ಸಿಕ್ಕಿತು ಕಾಯಕಲ್ಪ

ಆಲಂಕಾರು: ಕಡಬ ತಾಲೂಕು ಪೆರಾಬೆ ಗ್ರಾಮದ ಕೆದ್ದೊಟೆ ಕೆರೆಯ ಅಭಿವೃದ್ಧಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.
ಸುಮಾರು ರೂ.1.25 ಕೋಟಿ ವೆಚ್ಚದಲ್ಲಿ ಅಭಿವೃದ್ದಿಯಾಗಲಿರುವ ಕಾಮಗಾರಿಗೆ ಶಾಸಕಿ ಭಾಗೀರಥಿ ಮುರುಳ್ಯ ಗುದ್ದಲಿಪೂಜೆ ನೆರವೇರಿಸಿದರು.
ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ಆಶಾ ತಿಮ್ಮಪ್ಪ ಗೌಡ,
ಸುಳ್ಯ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರದೀಪ್ ರೈ, ಜಿಲ್ಲಾ ಬಿಜೆಪಿ ಎಸ್.ಟಿ. ಮೋರ್ಚಾ ಪ್ರಧಾನ ಕಾರ್ಯದರ್ಶಿ ಪೂವಪ್ಪ ನಾಯ್ಕ್, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ ಸಂಧ್ಯಾ ಕೆ.,
ಕುಂತೂರು ಶಕ್ತಿ ಕೇಂದ್ರದ ಪ್ರಮುಖ್ ಸುಭೀಕ್ಷರತ್ನ ಕುಂತೂರು 2ನೇ ವಾರ್ಡ್ ಬಿಜೆಪಿ ಅಧ್ಯಕ್ಷ ನಿತೀಶ್




ಏನಾಜೆ, ಪ್ರಮುಖರಾದ, ರಾಜು ಪಿ.ಜಿ., ಮೋಹಿನಿ, ವಸಂತ ಗೌಡ ಕೆದ್ದೊಟೆ, ಸುಕೇಶ್ ಕೆದ್ದೊಟೆ, ಸುರೇಶ್ ಕುಂಡಡ್ಕ, ಸೋಮಪ್ಪ ಗೌಡ, ಶೇಖರ್ ಕೆದ್ದೊಟೆ, ಗಂಗಾಧರ ಗೌಡ ಕೆದ್ದೊಟೆ, ರಾಮಣ್ಣ ಗೌಡ ಕೆದ್ದೊಟೆ, ಮೇದಪ್ಪ ಗೌಡ ಕೆದ್ದೊಟೆ, ಯೋಗೀಶ್ ಕೆದ್ದೊಟೆ, ಹರೀಶ್ ಕೆದ್ದೊಟೆ, ತಿಮ್ಮಪ್ಪ ಗೌಡ ಕುಂಡಡ್ಕ, ಇಂಜಿನಿಯರ್ ರವಿಚಂದ್ರ, ಗುತ್ತಿಗೆದಾರ ಗಣೇಶ್ ಮತ್ತಿತರರು ಉಪಸ್ಥಿತರಿದ್ದರು.

ವಳಲಂಕೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ವಾರ್ಷಿಕ ರಥೋತ್ಸವ

ಮಾ.27ಕ್ಕೆ ಬ್ರಹ್ಮರಥೋತ್ಸವ, ವಸಂತ ಪೂಜೆ

ಮುಲ್ಕಿ: ಮುಲ್ಕಿ ವಳಲಂಕೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಮಾ.27ಕ್ಕೆ ಶ್ರೀ ರಾಮನವಮಿ ಯಂದು ವಾರ್ಷಿಕ ರಥೋತ್ಸವವು ಶ್ರೀ ಸಂಸ್ಥಾನ ಶ್ರೀ ಕಾಶಿಮಠಾಧೀಶ ಶ್ರೀಮತ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರ ಶುಭಾಶೀರ್ವಾದಗಳೊಂದಿಗೆ ಜರಗಲಿದೆ.
ಮಾ.23ರಂದು ಸಂಜೆ 5ಕ್ಕೆ ದ್ವಜಾರೋಹಣ, ರಾತ್ರಿ ಮೃಗಬೇಟೆ ಉತ್ಸವ, ಚೈತ್ರ ಶುದ್ಧ ನವಮಿ ಮಾ.27ಕ್ಕೆ ಬೆಳಗ್ಗೆ 9ಕ್ಕೆ ಶ್ರೀ ವೆಂಕಟರಮಣ ದೇವರಿಗೆ ಪಂಚಾಮೃತ ಅಭಿಷೇಕ, ಮಧಾಹ್ನ 12ಕ್ಕೆ ಮಹಾನ್ಯೆವೇದ್ಯ ಮಂಗಳಾರತಿ ನಂತರ 12:30ಕ್ಕೆ ಶ್ರೀದೇವರು ಯಜ್ಞಕ್ಕೆ ಹೊರಡುವುದು, ಸಂಜೆ 3.45ಕ್ಕೆ ಯಜ್ಞ ಪೂರ್ಣಾಹುತಿ, ಸಂಜೆ 6.30ಕ್ಕೆ ಬ್ರಹ್ಮರಥೋಹರಣ, ಭೂರಿ ಸಮಾರಾಧನೆ, ರಾತ್ರಿ



ಬ್ರಹ್ಮರಥದಲ್ಲಿ ಶ್ರೀ ದೇವರಿಗೆ ದೀಪ ನಮಸ್ಕಾರ, ಶ್ರೀ ನರಸಿಂಹ ಸ್ತುತಿ, ರಾತ್ರಿ ಪೂಜೆ, ಬ್ರಹ್ಮರಥೋತ್ಸವ, ವಿಶ್ರಾಂತಿಪೂಜೆ, ದೇವದರ್ಶನ ಸೇವೆ, ಚಂದ್ರ ಮಂಡಲ ಉತ್ಸವ, ವಸಂತ ಪೂಜೆ, ಏಕಾಂತ ಶಯನಪೂಜೆ ಜರಗಲಿರುವುದು. ಮಾ.28ಕ್ಕೆ ಬೆಳಗ್ಗೆ 10ಕ್ಕೆ ಕವಾಟೋದ್ಘಾಟನೆ, ಸಂಜೆ 3.30ಕ್ಕೆ ಅವಭೃತ ಒಕುಳಿ ಉತ್ಸವವು ಜರಗಲಿರುವುದು. ಚೈತ್ರ ಶುದ್ಧ ಹುಣ್ಣಿಮೆ ಏ.2 ಗುರುವಾರ ಶತಕಲಶ ಸಂಪ್ರೋಕ್ಷಣೆ ಪ್ರಯುಕ್ತ ಬೆಳಗ್ಗೆ 9ಕ್ಕೆ ಪ್ರಾರ್ಥನೆ, ಎಲ್ಲಾ ದೇವರಿಗೆ ಪಂಚಾಮೃತಅಭಿಷೇಕ, ಶಿಯಾಳ ಅಭಿಷೇಕ, ಮಧ್ಯಾಹ್ನ 12.30ಕ್ಕೆ ಕನಾಕಾಭಿಷೇಕ, ಗಂಗಾ ಭಾಗೀರಥಿ ಅಭಿಷೇಕ, ಸಂಜೆ 5.30ಕ್ಕೆ ಮಹಾನ್ಯೆವೇದ್ಯ, ಮಂಗಳಾರತಿ, ಭೂರಿಸಮಾರಾಧನೆ, ರಾತ್ರಿ 8:00ಕ್ಕೆ ರಾತ್ರಿಪೂಜೆ, ದೀಪಾರಾಧನೆ, ರಥೋತ್ಸವ, ದೇವರ ದರ್ಶನ ಸಹಿತ ನಿತ್ಯೋತ್ಸವ, ಚಂದ್ರಮಂಡಲ ಉತ್ಸವ ವಸಂತಪೂಜೆ ಜರಗಲಿರುವುದು. ಮಾ. 22ಕ್ಕೆ ಸಂಜೆ ಶ್ರೀ ಕ್ಷೇತ್ರದಲ್ಲಿ ಅಂಕುರಾರೋಪಣೆ ಪ್ರಯುಕ್ತ ಮೃತ್ತಿಕಾ ಹರಣ ಬಳಿಕ ಸಂಜೆ ಶ್ರೀ ವ್ಯಾಸಮಹರ್ಷಿ ವೇದಪಾಠ ಶಾಲೆಯ ವಾರ್ಷಿಕೋತ್ಸವ, ವಿದ್ಯಾರ್ಥಿಗಳಿಂದ ಬಾಲಚರಿತಂ ಸಂಸ್ಕೃತ ನಾಟಕ ನಡೆಯಲಿದೆ ಎಂದು ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸದಿಗಂತ ಸಂಗಮ 3

ಭಾನುವಾರ 22, ಮಾರ್ಚ್ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಪುಟ ಸಂಖ್ಯೆ

ಸುತ್ತಮುತ್ತ

ನಾಳೆ ಉಳಿಪಾಡಿ ಕೋಲ

ಕೈಕಂಬ: ಕುಪ್ಪೆಪದವು ಕಿಲೆಂಜಾರು ಗ್ರಾಮದ ಉಳಿಪಾಡಿಗುತ್ತಿನಲ್ಲಿ ಕಲ್ಲುರ್ಟಿ–ಪಂಜುರ್ಲಿ ದೈವಗಳ ವರ್ಷಾವಧಿ ಕೋಲಬಲಿ ಸೇವೆಯು ಮಾ.23ರಂದು ನಡೆಯಲಿದೆ. ಅಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಕೊಡಮಣಿತ್ತಾಯ ದೈವಕ್ಕೆ ದರ್ಶನ ಸೇವೆ ಮತ್ತು ರಾತ್ರಿ ಕಲ್ಲುರ್ಟಿ–ಪಂಜುರ್ಲಿ ದೈವಗಳಿಗೆ ಕೋಲ ಬಲಿ ಸೇವೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾರ್ವಜನಿಕ ಸಂಪರ್ಕ ಸಭೆ

ಉಡುಪಿ: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಹಾಗೂ ಎಸ್.ಬಿ.ಎಂ (ಯು) 2.0 ಅನುದಾನದ ಜಲಶುದ್ಧಿ ಅಭಿಯಾನದಡಿಯಲ್ಲಿ ಮಲತ್ಯಾಜ್ಯ ಸಂಸ್ಕರಣಾ ಘಟಕ ಯೋಜನೆ ಅನುಷ್ಠಾನಗೊಳಿಸುವ ಸಂಬಂಧ ಮಾ.25 ರಂದು ಬೆಳಿಗ್ಗೆ 11 ಗಂಟೆಗೆ ಉಳ್ತೂರು ಗ್ರಾಮದ ಸಾಲಿಗ್ರಾಮ ಪ.ಪಂ. ಮಾಲೀಕತ್ವದ ಸರ್ವೆ ನಂಬ್ರ: 219/2 ರಲ್ಲಿ ಸಾಲಿಗ್ರಾಮ ಪ.ಪಂ.ನ ಆಡಳಿತಾಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಂಪರ್ಕ ಸಭೆ ನಡೆಯಲಿದೆ ಎಂದು ಸಾಲಿಗ್ರಾಮ ಪಟ್ಟಣ ಪಂಚಾಯತ್ ನ ಕಚೇರಿ ಪ್ರಕಟಣೆ ತಿಳಿಸಿದೆ.

ಮಾ.25: ಎಸ್.,ಎಸ್.ಟಿ ಕುಂದುಕೊರತೆ ಸಭೆ

ಮಂಗಳೂರು: ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಸಂಘ ಸಂಸ್ಥೆಯ ಪದಾಧಿಕಾರಿಗಳ ಸಭೆಯನ್ನು ಮಾ. 25 ರಂದು ಬೆಳಿಗ್ಗೆ 11 ಗಂಟೆಗೆ ಮುಲ್ಕಿ ತಾಲೂಕು ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಮೂಲ್ಕಿ ಪ್ರಜಾ ಸೌಧ ತಾಲೂಕು ಸಭಾಂಗಣದಲ್ಲಿ ಕರೆಯಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.26: ಮಹಾ ನಗರ ಪಾಲಿಕೆ ಬಜೆಟ್ ಸಭೆ

ಮಂಗಳೂರು: 2026–27ನೇ ಸಾಲಿನ ಆಯವ್ಯಯ (ಬಜೆಟ್) ಸಭೆಯನ್ನು ಮಾ.26 ರಂದು ಬೆಳಿಗ್ಗೆ 11 ಗಂಟೆಗೆ ಮಂಗಳೂರು ಮಹಾನಗರಪಾಲಿಕೆಯ ಆಡಳಿತಾಧಿಕಾರಿಗಳಾಗಿರುವ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಂಗಳೂರು ಮಹಾನಗರಪಾಲಿಕೆಯ ಮಂಗಳಾ ಸಭಾಂಗಣದಲ್ಲಿ ನಿಗಧಿಪಡಿಸಲಾಗಿದೆ ಎಂದು ಮಹಾನಗರಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.6: ಸಾರ್ವಜನಿಕರ ಆಹವಾಲು ಸ್ವೀಕಾರ

ಮಂಗಳೂರು: ಉಳ್ಳಾಲ ತಾಲೂಕು ಕೋಟೆಕಾರ್ ಗ್ರಾಮದ ಕೊಲ್ಯದಿಂದ ಕೋಟೆಕಾರ್ ರಾಷ್ಟ್ರೀಯ ಹೆದ್ದಾರಿ–66 ರ ಸರ್ವೀಸ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಡಚಣೆಯಾಗುವ ರಾಷ್ಟ್ರೀಯ ಹೆದ್ದಾರಿ 66 ರ 12+000 ಕಿ.ಮೀ. ನಿಂದ 12+700 ಕಿ.ಮೀ. ವರೆಗೆ ಬರುವ ಮರಗಳನ್ನು ಕಡಿಯಲು ಅನುಮತಿ ಕೋರಿದ ಬಗ್ಗೆ 50 ಕ್ಕಿಂತ ಹೆಚ್ಚು ಮರಗಳನ್ನು ಸ್ಥಳದಲ್ಲಿ ಗುರುತಿಸಿದ್ದು 1976 ನೇ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಯಡಿ ಸಾರ್ವಜನಿಕರ ಆಹವಾಲು ಸ್ವೀಕರಿಸಿ ಮುಂದಿನ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಏಪ್ರಿಲ್ 6 ರಂದು ಬೆಳಿಗ್ಗೆ 11 ಗಂಟೆಗೆ ಉಳ್ಳಾಲ ತಾಲೂಕು ಗಾಂಧಿನಗರ ಕಾಪಿಕಾಡು ಎಂಬಲ್ಲಿರುವ 'ಕುದ್ಮುಲ್ ರಂಗರಾವ್ ಸಭಾಂಗಣ'ದಲ್ಲಿ ಸಭೆಯನ್ನು ಕರೆಯಲಾಗಿದೆ. ಈ ಬಗ್ಗೆ ಸಾರ್ವಜನಿಕರಿಂದ ಆಹವಾಲುಗಳಿದ್ದಲ್ಲಿ ಖುದ್ದಾಗಿ ಸಭೆಯಲ್ಲಿ ಹಾಜರಾಗಿ ಲಿಖಿತ ರೂಪದಲ್ಲಿ ಅಭಿಪ್ರಾಯವನ್ನು ಸಲ್ಲಿಸಬಹುದಾಗಿದೆ ಎಂದು ಮಂಗಳೂರು ವಿಭಾಗದ ವೃಕ್ಷಾಧಿಕಾರಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈದಲ್ ಫಿತ್ರ ಸಂಭ್ರಮ

ಬಂಟ್ವಾಳ: ಈದ್ ಸಂಭ್ರಮದ ಹೆಸರಿನಲ್ಲಿ ಅನಾವಶ್ಯಕ ಆಡಂಬರ ಕಾರ್ಯಕ್ರಮಗಳ ಬದಲಾಗಿ ಸೃಷ್ಟಿಕರ್ತನಿಗೆ ಸಾಷ್ಟಾಂಗ ಅರ್ಪಿಸುವುದರ ಜೊತೆ ದಾನ–ಧರ್ಮಗಳನ್ನು ಹೆಚ್ಚಿಸುವುದರ ಮೂಲಕ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದು ಈದ್ ಸಂಭ್ರಮವನ್ನು ಇಮ್ಮಡಿಗೊಳಿಸುವಂತೆ ಪಾಣೆಮಂಗಳೂರು–ಆಲಡ್ಕ ಮುಹಿಯುದ್ದೀನ್ ಜುಮಾ ಮಸೀದಿ ಮುದರ್ರಿಸ್ ಹಾಜಿ ಬಿ ಎಚ್ ಅಬೂಸ್ವಾಲಿಹ್ ಮುಸ್ಲಿಯಾರ್ ಕರೆ ನೀಡಿದರು. 29 ದಿನಗಳ ರಂಝಾನ್ ಉಪವಾಸ ಕೊನೆಗೊಳಿಸಿ ಶುಕ್ರವಾರ ಪವಿತ್ರ ಈದುಲ್–ಫಿತ್ರ್ ಹಬ್ಬದ ಹಿನ್ನಲೆಯಲ್ಲಿ ಮಸೀದಿಯಲ್ಲಿ ಶುಕ್ರವಾರ ನಡೆದ ಈದ್ ನಮಾಝ್ ಹಾಗೂ ಖುತ್ಬಾ ಪಾರಾಯಣಕ್ಕೆ ನೇತೃತ್ವ ನೀಡಿ ಮಾತನಾಡಿದರು, ತಮ್ಮಲ್ಲಿರುವ ಸಂಪತ್ತನ್ನು ಮೋಜು–ಮಸ್ತಿಗಾಗಿ ಉಪಯೋಗಿಸದೆ ಸಮಾಜದ ಬಡ–ಬಗ್ಗರ, ಅನಾಥರ, ಅಶಕ್ತರ ಕಣ್ಣೀರೊರೆಸುವುದರ ಜೊತೆಗೆ ಸಮಾಜದ ಒಳಿತಿಗೆ ಬಳಸುವಂತಾಗಬೇಕು ಎಂದರು. ಬಂಟ್ವಾಳದಾದ್ಯಂತ ನಡೆದ ಈದುಲ್ ಫಿತ್ರ್ ವಿಶೇಷ ಪ್ರಾರ್ಥನೆ ಬಳಿಕ ಜಮಾಅತ್ ಬಾಂಧವರು ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿದರು.

ಖಂಡಿಗೆ ಬಳಿ ನಂದಿನಿ ನದಿಗೆ ಆಸ್ಪತ್ರೆಗಳ ತ್ಯಾಜ್ಯ ನೀರು | ಶಾಸಕ ಉಮಾನಾಥ ಕೋಟ್ಯಾನ್ ಗರಂ

ನದಿಯಲ್ಲಿ ಮುಳುಗಿದರೆ ಮೇಲೇಳುವಾಗ ಮೈಯೆಲ್ಲಾ ಕಪ್ಪು!

ಸುರತ್ಕಲ್: ಚೇಳಾಯರು ಖಂಡಿಗೆ ಬಳಿ ನಂದಿನಿ ನದಿಗೆ ಮಂಗಳೂರಿನ ಆಸ್ಪತ್ರೆಗಳ ತ್ಯಾಜ್ಯ ನೀರು ಹರಿದು ಮಲಿನಗೊಂಡಿದ್ದು ಈ ಬಗ್ಗೆ ನಗರ ಪಾಲಿಕೆ ಇಲಾಖೆ ಅಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ಮನವಿ ಸಲ್ಲಿಸಿದರೂ ಇದುವರೆಗೂ ಯಾವುದೇ ಪ್ರಗತಿ ಕಂಡಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಉಮಾನಾಥ ಕೋಟ್ಯಾನ್ ಅವರಿಗೆ ಮನವಿ ಮಾಡಿದ್ದಾರೆ.



ಸ್ಥಳೀಯ ಬಾವಿಗಳ ನೀರು ಕೂಡ ಮಲಿನ

ಮಂಗಳೂರು ನಗರ ಪಾಲಿಕೆಯ ಹಾಗೂ ಮುಕ್ಕ ಆಸ್ಪತ್ರೆಯ ಮಲ ತ್ಯಾಜ್ಯ ನೀರು ನೇರವಾಗಿ ನದಿಗೆ ಹರಿಯ ಬಿಡುತ್ತಿದ್ದು ಜೀವನದಿ ನಂದಿನಿಯೇ ನಿಸ್ತೇಜವಾಗಿದೆ. ನಂದಿನಿ ನದಿ ಕೊಳಚೆಯಾಗಿದ್ದು ಎಲ್ಲೆಂದರಲ್ಲಿ ಹಾವಸೆ ಬೆಳೆದಿದೆ. ಇದೀಗ ನಗರ ಪಾಲಿಕೆ ವತಿಯಿಂದ ಹಾವಸೆ ತೆಗೆಯುವ ಕಾರ್ಯ ನಡೆಯುತ್ತಿದೆ. ನಂದಿನಿ ನದಿ ಮಾಲಿನ್ಯದಿಂದ ಸ್ಥಳೀಯ ಬಾವಿಗಳ ನೀರು ಕೂಡ ಮಲಿನವಾಗಿದೆ ಈ ಬಗ್ಗೆ ಚೇಳಾಯರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಪುಷ್ಪರಾಜ ಶೆಟ್ಟಿ ಮಾತನಾಡಿ ಅಂದು ನಗರ ಪಾಲಿಕೆಯ ಅವೈಜ್ಞಾನಿಕ ಯುಜಿಡಿ ಕಾಮಗಾರಿಯಿಂದ ಇಂದು ಗ್ರಾಮೀಣ ಭಾಗದ ಜನತೆ ಸಂಕಷ್ಟ ಎದುರಿಸುವಂತಾಗಿದೆ

ಮನವಿಗೂ ಸಿಕ್ಕಿಲ್ಲ ಸ್ಪಂದನೆ

ಈ ಬಗ್ಗೆ ಅನೇಕ ಬಾರಿ ಸಂಬಂಧಪಟ್ಟ ಇಲಾಖೆಗೆ ಮನವಿ ಸಲ್ಲಿಸಿದರೂ ಇದುವರೆಗೂ ಪ್ರಯೋಜನವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ

ಶಾಸಕ ಉಮಾನಾಥ ಕೋಟ್ಯಾನ್ ಮಾತನಾಡಿ , ಮಂಗಳೂರು ನಗರ ಪಾಲಿಕೆಯ ಹಾಗೂ ಮುಕ್ಕ ಆಸ್ಪತ್ರೆಯ ತ್ಯಾಜ್ಯ ನೀರು ನಂದಿನಿ ನದಿಗೆ ಹರಿಯ ಬಿಡುತ್ತಿದ್ದು ಖಂಡಿಗೆ ಪ್ರದೇಶದಲ್ಲಿ ನೀರು ಮಲಿನವಾಗುತ್ತಿದೆ. ನದಿಯಲ್ಲಿ ಮುಳುಗಿದರೆ ಮೇಲೆ ಬರುವಾಗ ಮೈಯೆಲ್ಲಾ ಕಪ್ಪು ಕಪ್ಪಾಗಿ ರೋಗದ ಭೀತಿ ಕಾಣುತ್ತಿದೆ. ಕೂಡಲೇ ಜಿಲ್ಲಾಡಳಿತ ಎಚ್ಚೆತ್ತು ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಸ್ಥಳೀಯ ಶಾಸಕನಾಗಿ ಊರಿನವರ ಜೊತೆ ಸೇರಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ ಎಂದರು.

> **ದೂರು ನೀಡಿದರೂ ಪ್ರಯೋಜನವಿಲ್ಲ**
> ಹಳೆಯಂಗಡಿ ಪಾವಂಜೆ ಖಂಡಿಗೆ ಭಾಗದ ಜೀವನದಿ ನಂದಿನಿ ಹಾವಸೆ, ಮಾಲಿನ್ಯದಿಂದ ಮೀನು, ಜಲಚರಗಳು ಸಾಯುತ್ತಿವೆ. ನದಿ ಮಾಲಿನ್ಯದಿಂದ ಖಂಡಿಗೆಯ ಬಾವಿಗಳ ನೀರು ಮಲಿನವಾಗಿದೆ.ಈ ಪ್ರದೇಶದ ಕೃಷಿಕರು, ಹೈನುಗಾರರು ಆತಂತ್ರರಾಗಿದ್ದಾರೆ. ಇದರಿಂದ ಚೇಳಾಯರು ಗ್ರಾಪಂ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸಮಸ್ಯೆಗೆ ಲೋಕಾಯುಕ್ತರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎನ್ನುತ್ತಾರೆ ಚೇಳಾಯರು ನಿವಾಸಿಗಳು

ಖಂಡಿಗೆ ಅಣೆಕಟ್ಟು ಬಳಿ ನದಿ ಪಕ್ಕ ಯಾದವ ದೇವಾಡಿಗ, ಹೂವಯ್ಯ ದೇವಾಡಿಗ, ಭೋಜ ಶೆಟ್ಟಿ ಸಂಜೀವ ಕುಲಾಲ್ ಮತ್ತಿತರರ ಕುಡಿಯುವ ನೀರಿನ ಬಾವಿಗಳು ಮಲಿನವಾಗಿವೆ. ಪಂಚಾಯಿತಿ ಪೂರೈಸುವ ನೀರು ಕುಡಿಯಲು ಯೋಗ್ಯವಾಗಿಲ್ಲದೆ ದೂರದಿಂದ ನೀರು ತರಬೇಕಾಗಿದೆ. ಕಿಂಡಿ ಅಣೆಕಟ್ಟು ವೈಫಲ್ಯದಿಂದ ಉಪ್ಪು ನೀರು ಜತೆ ಸೇರಿದೆ. ಇದರಿಂದ ಸುಗ್ಗಿ, ಉದ್ದು ಇತ್ಯಾದಿ ಬೆಳೆಸದೆ ವರ್ಷಗಳೇ ಸಂದಿವೆ. ನದಿಯಲ್ಲಿ ತುಂಬಿರುವ ಹೂಳು ತೆಗೆಯದೆ, ಹಾವಸೆ ತುಂಬಿರುವ ಕಾರಣ ಈ ವರ್ಷ ಏಣೇಲು ಬೆಳೆ ಅನುಮಾನ. ಸಣ್ಣ ನೀರಾವರಿ ಇಲಾಖೆ ಕಿಂಡಿ ಅಣೆಕಟ್ಟಿಗೆ ವಾಡಿಕೆಯಂತೆ ಹಲಗೆ ಹಾಕಿದ್ದರೂ ಪ್ರಯೋಜನವಿಲ್ಲ, ರೈತರ ಗೋಳು ಕೇಳುವವರೆ ಇಲ್ಲ ಎನ್ನುತ್ತಾರೆ ಕೃಷಿಕ ಕೇಶವ ಶೆಟ್ಟಿ ಖಂಡಿಗೆ.

ಬಾವಿಗಳ ನೀರು ಕುಡಿಯಲು ಯೋಗ್ಯವಾಗಿಲ್ಲ

ನಗರ ಪಾಲಿಕೆ ವ್ಯಾಪ್ತಿಯ ಮಧ್ಯ ಎಸ್‌ಟಿಪಿ ಬಳಿಯ ಸುಮಾರು ನಾಲ್ಕು ಬಾವಿಗಳ ನೀರು ಕುಡಿಯಲು ಯೋಗ್ಯವಾಗಿಲ್ಲ ಎಂದು ಎನ್ ಐಟಿಕೆ ತಜ್ಞರು ವರದಿ ನೀಡಿದ್ದರೂ ಸ್ಥಳೀಯ ನಿವಾಸಿಗಳು ನೀರು ಕುಡಿಯುತ್ತಿರುವುದು ಆತಂಕಕ್ಕೆ ಕಾರಣವಾಗಿದೆ

ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ಕಂಪ್ಯೂಟರ್ ಲ್ಯಾಬ್ -4 ಉದ್ಘಾಟನೆ



ಕಾರ್ಕಳ: ಇಲ್ಲಿನ ಭುವನೇಂದ್ರ ಕಾಲೇಜಿನಲ್ಲಿ ನೂತನ ಕಂಪ್ಯೂಟರ್ ಲ್ಯಾಬ್–4ರ ಉದ್ಘಾಟನಾ ಕಾರ್ಯಕ್ರಮ ನೆರವೇರಿತು.

ಉದ್ಘಾಟನೆ ನೆರವೇರಿಸಿದ ಮಾಹೆ ಮಣಿಪಾಲದ ಉಪ ಕುಲಪತಿ ಡಾ. ಶರತ್ ಕುಮಾರ್ ರಾವ್ ಮಾತನಾಡಿ, ಈ ಕಾಲೇಜಿನ ಹಳೆ ವಿದ್ಯಾರ್ಥಿಯಾಗಿ ನಾನು ಇಲ್ಲಿಂದ ಒಳ್ಳೆಯ ಮತ್ತು ತೃಪ್ತಿಯ ಬದುಕನ್ನು ಕಂಡುಕೊಂಡಿದ್ದೇನೆ. ಇಲ್ಲಿಂದ ಕಲಿತ ಜ್ಞಾನವು ನನ್ನ ಬದುಕಿಗೆ ಅನೇಕ ತಿಳುವಳಿಕೆಯನ್ನು ನೀಡಿದೆ ಎಂದರು.

ಆಧುನಿಕ ಶಿಕ್ಷಣ ಪದ್ಧತಿಯು ತಂತ್ರಜ್ಞಾನಗಳಿಲ್ಲದೆ ಸಾಧ್ಯವಿಲ್ಲ, ಇದು ಎಲ್ಲ ವಿದ್ಯಾರ್ಥಿಗಳ ಉಜ್ವಲ ಭವಿಷ್ಯವನ್ನು ರೂಪಿಸುತ್ತದೆ. ಡಿಜಿಟಲ್ ತಂತ್ರಜ್ಞಾನ ವಿದ್ಯಾರ್ಥಿಗಳಿಗೆ ಪ್ರಸ್ತುತ ದಿನಮಾನಗಳಲ್ಲಿ ಅತೀ ಅಗತ್ಯವಾಗಿರುವುದರಿಂದ ಹೆಚ್ಚಿನ ಅನುಕೂಲತೆಗಳ ಲಭ್ಯತೆ ಸಾಧ್ಯ ಎಂದರು.

> **ಸದುಪಯೋಗಿಸಿ**
> ವಿದ್ಯಾರ್ಥಿ ವೇತನ ಪಡೆಯುವ ಮಕ್ಕಳು ಮುಂದಕ್ಕೆ ಸಾಧಿಸ ಬೇಕಾದ ದಾರಿಗಾಗಿ ದಾನಿಗಳು ಕೊಡ ಮಾಡಿದ ವೇತನವನ್ನು ಸರಿಯಾದ ರೀತಿಯಲ್ಲಿ ಉಪಯೋಗಿ ಸಿಕೊಳ್ಳಬೇಕು
> ● ಡಾ.ಶರತ್ ಕುಮಾರ್ ರಾವ್

ಮಾಹೆ, ಮಣಿಪಾಲದ ಸಿ. ಇ. ಓ. ಡಾ. ಆನಂದ್ ವೇಣುಗೋಪಾಲ್ , ದಾನಿಗಳಾದ ಸಿ. ಎ. ಕಮಲಾಕ್ಷ, ಶ್ರೀ ರಮೇಶ್ ಪ್ರಭು, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷರಾದ ಸಿ. ಎ. ಶಿವಾನಂದ ಪೈ, ಕಾಲೇಜಿನ ಪ್ರಾಚಾರ್ಯ ಡಾ. ಮಂಜುನಾಥ ಎ. ಕೋಟ್ಯಾನ್, ಪ.ಪೂ. ಕಾಲೇಜಿನ ಪ್ರಾಚಾರ್ಯ ರಮೇಶ್ ಎಸ್. ಸಿ., ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ, ಡಾ. ಈಶ್ವರ ಭಟ್ ಉಪಸ್ಥಿತರಿದ್ದರು.

ಯುದ್ಧ ಕಾಲದಲ್ಲಿ ಕಾಂಗ್ರೆಸ್ ಪ್ರತಿಭಟನೆ ಹಾಸ್ಯಾಸ್ಪದ: ಕಂಠಿ ಕಾರ್ಯಪ್ಪ ಅಸಮಾಧಾನ

ಮಡಿಕೇರಿ: ಯುದ್ಧದ ಪರಿಸ್ಥಿತಿಯಿಂದ ವಿಶ್ವದ ಹಲವು ದೇಶಗಳು ನಾನಾ ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಬಗ್ಗೆ ಕನಿಷ್ಠ ಅರಿವಿಲ್ಲದ ಕಾಂಗ್ರೆಸ್ ಪಕ್ಷ ಅಡುಗೆ ಅನಿಲದ ಬೆಲೆ ಏರಿಕೆಯ ನೆಪವೊಡ್ಡಿ ಕುಶಾಲನಗರದಲ್ಲಿ ನಡೆಸಿರುವ ಪ್ರತಿಭಟನೆ ಹಾಸ್ಯಾಸ್ಪದವಾಗಿದೆ ಎಂದು ಬಿಜೆಪಿಯ ಸೋಮವಾರಪೇಟೆ ಮಂಡಲದ ವಕ್ತಾರ ಬಲ್ಲಾರಂಡ ಕಂಠಿ ಕಾರ್ಯಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಪತ್ರಿಕಾ ಪ್ರಕಟಣೆ ನೀಡಿರುವ ಅವರು ಯುದ್ಧ ಕಾಲದಲ್ಲಿ ಆಡಳಿತ ಪಕ್ಷದೊಂದಿಗೆ ಕೈಜೋಡಿಸಿ ಸಂಕಷ್ಟದ ಪರಿಸ್ಥಿತಿಯನ್ನು ನಿಭಾಯಿಸಲು ಸಹಕಾರ ನೀಡುವ ಬದಲು ಕಾಂಗ್ರೆಸ್ ಪಕ್ಷ ಕ್ಷುಲ್ಲಕ ರಾಜಕಾರಣ ಮಾಡುತ್ತಿದೆ ಎಂದು ಟೀಕಿಸಿದ್ದಾರೆ.

ವಿಶ್ವದ ಎರಡನೇ ಅತಿದೊಡ್ಡ ಎಲ್‌ಪಿಜಿ ಆಮದುದಾರ ರಾಷ್ಟ್ರವಾಗಿರುವ ಭಾರತ ಯುದ್ಧದಿಂದಾಗಿ ಬಿಕ್ಕಟ್ಟನ್ನು ಎದುರಿಸುತ್ತಿದ್ದು ಬೆಲೆ ಹೆಚ್ಚಳವಾಗಲು ಕಾರಣವಾಗಿದೆ. ಅಡುಗೆ ಅನಿಲದ ಸಿಲಿಂಡರ್‌ಗಳ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ.

ಈ ಸಮಸ್ಯೆಯನ್ನು ಕೇಂದ್ರದ ಎನ್‌ಡಿಎ ನೇತೃತ್ವದ ಸರಕಾರ ಬೇಕಂತಲೇ ಸೃಷ್ಟಿ ಮಾಡಿಲ್ಲ ಅಥವಾ ಪ್ರಧಾನಮಂತ್ರಿಗಳು ಉದ್ದೇಶಪೂರ್ವಕವಾಗಿ ಅಡುಗೆ ಅನಿಲದ ಬೆಲೆ ಏರಿಕೆ ಮಾಡಿಲ್ಲ, ಜಾಗತಿಕ ಮಟ್ಟದಲ್ಲಿ ಬೆಲೆ ಏರಿಕೆಯಾಗಿದೆ, ಆದರೆ ಸಾಮಾನ್ಯ ಜ್ಞಾನವಿಲ್ಲದ ಕಾಂಗ್ರೆಸ್ಸಿಗರು ಎಲ್ಲಾ ಸಮಸ್ಯೆಗಳಿಗೆ ಕೇಂದ್ರ ಸರಕಾರವೇ ನೇರ ಹೊಣೆ ಎಂದು ಪ್ರತಿಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ

ಜನರಿಗೆ ಪ್ರಚೋದನೆ ನೀಡುವ ಉದ್ದೇಶದಿಂದ ರಸ್ತೆಯಲ್ಲಿ ಸೌದೆ ಒಲೆಯಲ್ಲಿ ಅಡುಗೆ ಮಾಡಿ ತೊಂದರೆ ನೀಡುತ್ತಿದ್ದಾರೆ. ಕೊಡಗಿನ ಜನ ಪ್ರಜ್ಞಾವಂತರಾಗಿದ್ದು, ಈ ಪ್ರತಿಭಟನೆಯಿಂದ ಸ್ವತ: ಕಾಂಗ್ರೆಸ್ಸಿಗರೇ ಅಪಹಾಸ್ಯಕ್ಕೆ ಒಳಗಾಗುತ್ತಿದ್ದಾರೆ ಎಂದು ಕಂಠಿ ಕಾರ್ಯಪ್ಪ ತಿಳಿಸಿದ್ದಾರೆ.

> **ಜನ ತಕ್ಕ ಪಾಠ ಕಲಿಸಲಿದ್ದಾರೆ**
> ಕಾಂಗ್ರೆಸ್ ಪಕ್ಷ ಮೊದಲು ದೇಶಭಕ್ತಿ ಯನ್ನು ಪ್ರದರ್ಶಿಸಲಿ ಮತ್ತು ಜನಪರ ಕಾಳಜಿ ತೋರಲಿ. ಯುದ್ಧದಂತಹ ಸಂಕಷ್ಟದ ಕಾಲದಲ್ಲೂ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಂದಾ ದರೆ ಜನ ತಕ್ಕ ಪಾಠ ಕಲಿಸಲಿದ್ದಾರೆ .
> ● ಬಲ್ಲಾರಂಡ ಕಂಠಿ ಕಾರ್ಯಪ್ಪ

ಮಂಚಿ-ಕೊಳ್ನಾಡು ಪ್ರೌಢಶಾಲೆಗೆ ಅತ್ಯುತ್ತಮ ಎಸ್‌ಡಿಎಂಸಿ ಪ್ರಶಸ್ತಿ



ಬಂಟ್ವಾಳ: ಕರ್ನಾಟಕ ಸರಕಾರ ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ನೀಡಲ್ಪಡುವ 2025 – 26ನೇ ಸಾಲಿನ ಅತ್ಯುತ್ತಮ ಎಸ್ ಡಿ ಎಂ.ಸಿ ಪುಷ್ಟಿ ಪ್ರಶಸ್ತಿಗೆ ಬಂಟ್ವಾಳ ತಾಲೂಕಿನ ಮಂಚಿ –ಕೊಳ್ನಾಡು ಪ್ರೌಢಶಾಲೆಯು ಆಯ್ಕೆಯಾಗಿದೆ.

ಮಂಚಿ ಕೊಳ್ನಾಡು ಶಾಲೆಯ ಭೌತಿಕ ಮತ್ತು ಶೈಕ್ಷಣಿಕ ಪ್ರಗತಿಯ ಸಹಿತ ಸರ್ವತೋಮುಖ ಅಭಿವೃದ್ಧಿಯನ್ನು ಈ ಪ್ರಶಸ್ತಿಗಾಗಿ ಪರಿಗಣಿಸಲಾಗಿದೆ. ತಾಲೂಕು ಶಿಕ್ಷಣಾಧಿಕಾರಿಗಳ, ಜಿಲ್ಲಾ ಶಿಕ್ಷಣಾಧಿಕಾರಿಗಳ ತಂಡ ಮತ್ತು ಆಯ್ದ ಹತ್ತು ಶಾಲೆಗಳ ಮುಖ್ಯ ಶಿಕ್ಷಕರು, ಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷರು ಮತ್ತು ಸದಸ್ಯರವರದಿಗಳನ್ನಾಧರಿಸಿ ಈ ಪ್ರಶಸ್ತಿಗೆ ಆಯ್ಕೆಗೊಳಿಸಲಾಗಿದೆ.

ಈ ಪ್ರಶಸ್ತಿಯಲ್ಲಿ 1 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರದ ಪುರಸ್ಕಾರ ದೊರಕಲಿದೆ.

ಈ ಪ್ರಶಸ್ತಿಗೆ ಮಂಚಿ – ಕೊಳ್ನಾಡು ಶಾಲಾಭಿವೃದ್ಧಿ ಸಮಿತಿ ಪಾತ್ರವಾಗಿರುವುದು ಶಾಲಾ ಶಿಕ್ಷಕ ವೃಂದ, ವಿದ್ಯಾರ್ಥಿ ವೃಂದ, ಪೋಷಕ ವೃಂದ ಹಾಗೂ ಶಾಲಾ ಹಿರಿಯ ವಿದ್ಯಾರ್ಥಿ ಸಂಘ ಸಂತಸ ವ್ಯಕ್ತಪಡಿಸಿದೆ.

ಈ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶಿವಶಂಕರ್ ರಾವ್ ಮಂಚಿ, ಶಾಲಾ ಮುಖ್ಯೋಪಾಧ್ಯಾಯರಾದ ಸುಶೀಲಾ ವಿಟ್ಲ, ಶಾಲಾಭಿವೃದ್ಧಿ ಸಮಿತಿ ಸದಸ್ಯರುಗಳಾದ ನಾರಾಯಣ ಭಟ್ ನೂಜಿಬೈಲು, ಡಾ. ಗೋಪಾಲಾಚಾರ್ ಮಂಚಿ, ಗಣೇಶ್ ಪ್ರಭು ಮೋಂತಿಮಾರು, ಮೋಹನ್ ದಾಸ್ ಶೆಟ್ಟಿ ಪುದ್ದೊಟ್ಟು , ಮಹಾಬಲ ಶೆಟ್ಟಿ ಮಂಚಿ, ಯಶೋಧ ಶೆಟ್ಟಿ , ಸುಲೈಮಾನ್ ಜಿ ಸುರಿಬೈಲು, ಇಬ್ರಾಹಿಂ ಮಂಚಿ, ರಮೇಶ್ ರಾವ್ ಪತ್ತುಮುಡಿ, ಜಯಕಿಶೋರ್ ಮಂಚಿ, ಪ್ರವೀಣ ಕೊಟ್ಟಾರಿ, ಜಯಪ್ರಕಾಶ್ ರೈ ಮೇರಾವು, ರಾಮ್ ಪ್ರಸಾದ್ ರೈ ತಿರುವಾಜೆ, ಮ್ಯಾಕ್ಸಿಂ ಫೆರ್ನಾಂಡಿಸ್, ನಿಶ್ಚಲ್ ಜಿ. ಶೆಟ್ಟಿ ಕೇಶವ ರಾವ್ ನೂಜಿಪ್ಪಾಡಿ, ಸವಿತಾ, ರಮೇಶ್ ಟೈಲರ್ ಕೋಕಳ, ವಿಜಯಕುಮಾರ್ ಕಯ್ಯೂರು ಹಾಗೂ ಪೋಷಕ ಸದಸ್ಯರಾದ ಗಿರೀಶ್ ಗೌಡ, ಜಯಂತ ಪತ್ತುಮುಡಿ, ಮೊಯಿದಿನಬ್ಬ ಸಿ ಎಚ್ , ಚಂದ್ರಾವತಿ, ಮೀನಾಕ್ಷಿ , ಮೈಮುನಾ, ಚಂದ್ರಿಕಾ, ಫಾತಿಮಾ ಮತ್ತು ಕೊಳ್ನಾಡು ಗ್ರಾಮ ಪಂಚಾಯತ್ ಅಧ್ಯಕ್ಷ ಮಹಮ್ಮದ್ ಅಶ್ರಫ್, ಉಪಾಧ್ಯಕ್ಷೆ ಅಸ್ಮಾ ಹಸೈನಾರ್, ಸದಸ್ಯರಾದ ಮಹಮ್ಮದ್ ಮಂಚಿ, ಲವೀನಾ ಡಿಸೋಜ, ವಸಂತಿ, ಕಿಶೋರ್ ದೇವಾಡಿಗ ಇವರೆಲ್ಲರ ಸಹಕಾರವನ್ನು ಸ್ಮರಿಸಲಾಯಿತು.

ಕರಂಬಳ್ಳಿ ವಲಯದ ಬ್ರಾಹ್ಮಣ ಸಮಿತಿ: ವಿಪ್ರ ಮಹಿಳಾ ದಿನಾಚರಣೆ, ಸನ್ಮಾನ



ಉಡುಪಿ: ಕರಂಬಳ್ಳಿ ವಲಯ ಬ್ರಾಹ್ಮಣ ಸಮಿತಿಯಿಂದ ವಿಪ್ರ ಮಹಿಳಾ ದಿನಾಚರಣೆ ನಡೆಯಿತು. ಎಂಜಿಎಂ ಕಾಲೇಜಿನ ಸಂಸ್ಕೃತ ವಿಭಾಗದ ಉಪನ್ಯಾಸಕರಾದ ಡಾ ವಸುಮತಿ ಭಟ್ ಅವರು ಉಪನ್ಯಾಸ ನೀಡಿದರು.

ಪತಂಜಲಿ ಯೋಗ ಸಂಸ್ಥೆಯ ಕರಂಬಳ್ಳಿ ಕಕ್ಷೆಯ ಮುಖ್ಯ ಯೋಗ ಶಿಕ್ಷಕಿ ಸಂಪ್ರೀತ ಹೆಗ್ಡೆ ಅವರನ್ನು ಸಮಿತಿಯ ವತಿಯಿಂದ ಸನ್ಮಾನಿಸಲಾಯಿತು.

ಕರಂಬಳ್ಳಿ ವಲಯದ ಅಧ್ಯಕ್ಷ ಕೀಳಂಜೆ ಶ್ರೀ ಶ್ರೀಕೃಷ್ಣ ರಾಜ ಭಟ್ ಅಧ್ಯಕ್ಷತೆ ವಹಿಸಿ ಪ್ರಸ್ತಾವನೆಗೈದರು. ಮಹಿಳಾಪ್ರತಿನಿಧಿಲಲಿತಾ ರಾಜಶೇಖರ್ ಮಹಿಳಾ ದಿನಾಚರಣೆಯ ಬಗ್ಗೆ ಮಾತನಾಡಿದರು. ಇದಕ್ಕೂ ಮೊದಲು ವಿಪ್ರ ಮಹಿಳೆಯರಿಗೆ ವಿವಿಧ ಸ್ಪರ್ಧೆಗಳನ್ನು ಸುಧಾ ಹರಿದಾಸ್ ಭಟ್ ಮತ್ತು ವಸುಧಾ ಕೃಷ್ಣರಾಜ ನಡೆಸಿದರು. ಸನ್ಮಾನ ಸ್ವೀಕರಿಸಿದ ಸಂಪ್ರೀತ ಹೆಗಡೆ ವೇದಿಕೆಯಲ್ಲಿ ಯೋಗ ಪ್ರಾತ್ಯಕ್ಷಿಕೆ ನೀಡಿದರು. ಈ ಸಂದರ್ಭ ನೂತನ ಸದಸ್ಯರನ್ನು ಸಮಿತಿಯಿಂದ ಗೌರವಿಸಲಾಯಿತು.

ಮಹಿಳಾ ಅಧ್ಯಕ್ಷ ಜಯ ಟೀಚರ್, ಕಾರ್ಯದರ್ಶಿ ನಾಗರಾಜ ಭಟ್ ಉಪಾಧ್ಯಕ್ಷ ರಂಗನಾಥ ಸಾಮಗ ಉಪಸ್ಥಿತರಿದ್ದರು. ರೂಪ ಲಕ್ಷ್ಮೀಶ್, ಶ್ರೀಜಾ, ರಂಗನಾಥ ಸರಳಾಯ ಮತ್ತು ಲಕ್ಷ್ಮೀನಾರಾಯಣ ಆಚಾರ್ಯ ಸಹಕರಿಸಿದರು. ಶ್ರದ್ಧಾ ಭಟ್, ಕವಿತಾ ಲಕ್ಷ್ಮೀ ನಾರಾಯಣ್ ನಿರೂಪಿಸಿ, ರಾಧಿಕಾ ಚಂದ್ರಕಾಂತ್ ವಂದಿಸಿದರು.

> **ಸನ್ಮಾನಿತರು**
> ಪತಂಜಲಿ ಯೋಗ ಸಂಸ್ಥೆಯ ಕರಂಬಳ್ಳಿ ಕಕ್ಷೆಯ ಮುಖ್ಯ ಯೋಗ ಶಿಕ್ಷಕಿ ಸಂಪ್ರೀತ ಹೆಗ್ಡೆಯನ್ನು ಸನ್ಮಾನಿಸಲಾಯಿತು.

ಮಂಗಳೂರು ಸೇವಾಭಾರತಿ ಸಂಸ್ಥೆಯಿಂದ ಸಾಮಾನ್ಯ ವೈದ್ಯಕೀಯ ತಪಾಸಣಾ ಶಿಬಿರ



ಮಂಗಳೂರು: ಸೇವಾಭಾರತಿ ಮಂಗಳೂರು ಇದರ ಸೇವಾ ಪ್ರಕಲ್ಪವಾದ 'ಅನಂತ ಸೌಖ್ಯ'ದ ವತಿಯಿಂದ ಯೆನೆಪೋಯಾ ಮೆಡಿಕಲ್ ಕಾಲೇಜು ದೇರಳಕಟ್ಟೆ, ಡಿಮೆನ್ಶಿಯಾ ಇಂಡಿಯಾ ಅಲಯನ್ಸ್, ಸ್ಪೂರ್ತಿ ಚಾರಿಟೇಬಲ್ ಟ್ರಸ್ಟ್, ಮಂಗಳೂರು ಹಿರಿಯ ನಾಗರಿಕರ ಸಂಘ ಜಂಟಿ ಆಶ್ರಯದೊಂದಿಗೆ ಹಿರಿಯ ನಾಗರಿಕರಿಗೆ ನಗರದ ವಿ.ಟಿ.ರಸ್ತೆಯಲ್ಲಿರುವ ಚೇತನಾ ಬಾಲವಿಕಾಸ ಕೇಂದ್ರ ವಠಾರದಲ್ಲಿ ಶನಿವಾರ ಉಚಿತ 'ಸಾಮಾನ್ಯ ವೈದ್ಯಕೀಯ ತಪಾಸಣಾ ಶಿಬಿರ ಆಯೋಜಿಸಿಲಾಯಿತು.

ಶಿಬಿರ ಉದ್ಘಾಟಿಸಿ ಮಾತನಾಡಿದ ಯೆನೆಪೋಯಮೆಡಿಕಲ್ ಕಾಲೇಜುವೃದ್ಧಾಪ್ಯ ಕಾಯಿಲೆಗಳ ಚಿಕಿತ್ಸಾ ವಿಭಾಗ ಮುಖ್ಯಸ್ಥೆ , ಪೇಜ್ ಸಂಯೋಜಕಿ ಡಾ.ಪ್ರಭಾ ಅಧಿಕಾರಿ, ಕಾಯಿಲೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ಅದಕ್ಕನುಸಾರವಾಗಿ ಔಷಧ ಗಳನ್ನು ತೆಗೆದುಕೊಳ್ಳುವ ಅಗತ್ಯತೆಯಿದೆ ಎಂದರು.

ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಪಿ.ಒ. ರಾಡ್ರಿಗಸ್ ಮಾತನಾಡಿ, ಸೇವಾ ಭಾರತಿಯೊಂದಿಗೆ ಇಂತಹ ಕಾರ್ಯಕ್ರಮಗಳಲ್ಲಿ ಮುಂದೆ ತಮ್ಮ ಸಂಸ್ಥೆ ಸಹಕಾರ ನೀಡಲಿದೆ ಎಂದರು.

ಅನಂತಸೌಖ್ಯದ ಸಂಯೋಜಕ ಉಮೇಶ್ ಶೆಣೈ, ಸೇವಾಭಾರತಿ ಗೌರವ ಕಾರ್ಯದರ್ಶಿ ನಾಗರಾಜ ಭಟ್, ಕೋಶಾಽಕಾರಿ ವಿನೋದ್ ಶೆಣೈ, ಹಿರಿಯ ನಾಗರಿಕರ ಸಂಘ ಕಾರ್ಯದರ್ಶಿ ಕೆ.ಎನ್.ಶಶಿಧರ್ ಉಪಸ್ಥಿತರಿದ್ದರು.

ಉಮೇಶ್ ಶೆಣೈ ಅವರ ನೇತೃತ್ವ ನಡೆದ ಶಿಬಿರದಲ್ಲಿಡಾ.ಪ್ರಭಾಅಧಿಕಾರಿ, ಅವರನುರಿತ ವೈದ್ಯರ ತಂಡದಿಂದ ಸ್ಮರಣ ಶಕ್ತಿ, ಬೀಳುವಿಕೆ ಸಾಧ್ಯತೆ, ಸಮತೋಲನ, ಮಧುಮೇಹ ಮತ್ತು ರಕ್ತದೊತ್ತಡ ಪರೀಕ್ಷೆಗಳನ್ನು ನಡೆಸಲಾಯಿತು. ಸೇವಾ ಭಾರತಿ ಟ್ರಸ್ಟಿಗಳು, ಕಚೇರಿ ಸಿಬ್ಬಂದಿ, ಸ್ವಯಂಸೇವಕರು, ಚೇತನಾ ಶಾಲಾ ಶಿಕ್ಷಕ ಶಿಕ್ಷಕೇತರ ವೃಂದದವರು ಸಹಕರಿಸಿದರು. ಶಿಬಿರದಲ್ಲಿ 85 ಮಂದಿ ಪಾಲ್ಗೊಂಡರು.

ಕಣಿಹಿತ್ತಿಲು ನಾಗದೇವರ, ರಕ್ತೇಶ್ವರಿ ದೈವದ ಪುನರ್ ಪ್ರತಿಷ್ಠಾ ಕಲಶಾಭಿಷೇಕ ಸಂಪನ್ನ



ಕುಂಬಳೆ: ಶ್ರೀ ಮಲರಾಯ ಧೂಮಾವತಿ ಧರ್ಮದೈವ ಕುಪ್ಪೆ ಪಂಜುರ್ಲಿ ನಾಗ ಪರಿವಾರ ದೈವಸ್ಥಾನ ಕಣಿಹಿತ್ತಿಲು ಚಿಪ್ಪಾರು ಇಲ್ಲಿನ ನಾಗ ದೇವರ ಪುನರ್ ಪ್ರತಿಷ್ಠೆ ಮತ್ತು ಕಲಶಾಭಿಷೇಕವು ಉಳಿಯತ್ತಾಯ ವಿಷ್ಣು ಆಸ್ರ ಅವರ ನೇತೃತ್ವದಲ್ಲಿ ಆಶ್ಲೇಷ ಬಲಿ ಪೂಜೆ, ನಾಗ ದೇವರ ಹಾಗೂ ರಕ್ತೇಶ್ವರಿ ದೈವದ ಪುನರ್ ಪ್ರತಿಷ್ಠಾ ಕಲಶಾಭಿಷೇಕವು ಸಂಪನ್ನಗೊಂಡಿತು.

ವಾರ್ಷಿಕ ಉತ್ಸವದ ಅಂಗವಾಗಿ ಏಪ್ರಿಲ್ 4ಕ್ಕೆ ಬೆಳಗ್ಗೆ ಹರಿಸೇವೆ, ಸಂಜೆ ಪರಿವಾರ ದೈವಗಳ ನೇಮೋತ್ಸವ, ಏಪ್ರಿಲ್ 5ರಂದು ಧೂಮಾವತಿ ಹಾಗೂ ಮಲರಾಯ ದೈವಗಳ ನೇಮೋತ್ಸವ ಜರಗಲಿದೆ.

ಏ.1ರಿಂದ 8ರವರೆಗೆ ಬಪ್ಪನಾಡು ಶ್ರೀ ದೇವಳದ ಜಾತ್ರಾ ಮಹೋತ್ಸವ | ಪೂರ್ವಭಾವಿ ಸಭೆ

ಜಾತ್ರೆ ಯಶಸ್ವಿಗೆ ಸೀಮೆಯ ಭಕ್ತರ ಸಹಕಾರ ಮುಖ್ಯ: ದುಗ್ಗಣ್ಣ ಸಾವಂತರು

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜಾತ್ರಾ ಮಹೋತ್ಸವ ಏ.1ರಿಂದ 8ರವರೆಗೆ ನಡೆಯಲಿದ್ದು, ಪೂರ್ವಭಾವಿಯಾಗಿ ಕ್ಷೇತ್ರದ ಆಡಳಿತ ಆಡಳಿತ ಮಂಡಳಿ ಹಾಗೂ, ಅಭಿವೃದ್ಧಿ ಸಮಿತಿ, ಗ್ರಾಮಸ್ಥರ ಸಭೆ ಕ್ಷೇತ್ರದ ಜ್ಞಾನ ಮಂದಿರದ ಸಭಾಂಗಣದಲ್ಲಿ ನಡೆಯಿತು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕ್ಷೇತ್ರದ ಆನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಮಾತನಾಡಿ, ಬಪ್ಪನಾಡು ಕ್ಷೇತ್ರದ ಜಾತ್ರಾ ಮಹೋತ್ಸವ ಯಶಸ್ವಿಯಾಗಲು ಸೀಮೆಯ ಭಕ್ತರ ಸಹಕಾರ ಮುಖ್ಯವಾಗಿದ್ದು, ಜಾತ್ರಾ ಮಹೋತ್ಸವದ ದಿನಗಳಲ್ಲಿ ಕ್ಷೇತ್ರದಲ್ಲಿ ಅನ್ನ ಸಂತರ್ಪಣೆ ಹಾಗೂ ಪುತ್ತೂರು ಸುಳ್ಯ ಕಾಸರಗೋಡು ಮತ್ತಿತರ ಕಡೆಗಳಿಂದ ಬರುವ ಭಕ್ತರಿಗೆ ಟ್ರಾಫಿಕ್ ಸಮಸ್ಯೆ ನಿವಾರಣೆಗೆ ಗಮನಹರಿಸಲಾಗುವುದು ಎಂದರು



ದೇವಳದ ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ ಮಾತನಾಡಿ, ದೇವಸ್ಥಾನದ ಸರ್ವತೋಮುಖ ಅಭಿವೃದ್ಧಿಗೆ ಹಾಗೂ ಜಾತ್ರಾ ಮಹೋತ್ಸವದ ಯಶಸ್ವಿಗೆ ವಿವಿಧ ಸಂಘ– ಸಂಸ್ಥೆಗಳು ಕೈಜೋಡಿಸಿ ಸಹಕರಿಸಲು ಮನವಿ ಮಾಡಿದರು

ಸಭೆಯಲ್ಲಿ ಮುಲ್ಕಿ ಬಿಲ್ಲವರ ಸಂಘದ ಅಧ್ಯಕ್ಷ ವಾಮನ್ ಕೋಟ್ಯಾನ್ ನಡಿಕುದ್ರು, ಮುಲ್ಕಿ ಬಂಟರ ಸಂಘದ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ಅಭಿವೃದ್ಧಿ ಸಮಿತಿಯ ಸುನಿಲ್ ಆಳ್ವ ಕಿರಣ್ ಕುಮಾರ್ ಶೆಟ್ಟಿ ಕೋಲ್ನಾಡು ಗುತ್ತು, ಡಾ. ಹರಿಶ್ಚಂದ್ರ ಪಿ ಸಾಲ್ಯಾನ್, ವಿನೋದ್ ಸಾಲ್ಯಾನ್ ಬೆಳ್ಳಾಯರು, ಕೃಷ್ಣ ಶೆಟ್ಟಿ, ಉದಯಕುಮಾರ್ ಶೆಟ್ಟಿ ಅಧಿಧನ್, ಮೋಹನ್ ದಾಸ್ ಹೆಜಮಾಡಿ, ಕಾರು ಚಾಲಕ ಮಾಲಕರ ಸಂಘದ ಅಧ್ಯಕ್ಷ ರಾಜೇಶ್ ಕೆರೆಕಾಡು, ಪದಾಧಿಕಾರಿಗಳಾದ ದೇವಣ್ಣ ನಾಯಕ್, ಚಂದ್ರಶೇಖರ್, ದೇವಸ್ಥಾನದ ಅಕೌಂಟೆಂಟ್ ಶಿವಶಂಕರ್, ಕಾರ್ತಿಕ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದು ಮಾತನಾಡಿದರು

ಸಭೆಯಲ್ಲಿ ಜಾತ್ರಾ ಮಹೋತ್ಸವದ ದಿನಗಳಾದ ಧ್ವಜಾರೋಹಣ, ಹಗಲು ರಥೋತ್ಸವ, ಮಹಾರಥೋತ್ಸವ ದಿನಗಳಲ್ಲಿ ಅನ್ನ ಸಂತರ್ಪಣೆ ವ್ಯವಸ್ಥೆ, ಕ್ಷೇತ್ರಕ್ಕೆ ಬರುವ ಭಕ್ತರಿಗೆ ಪಾರ್ಕಿಂಗ್ ಸುವ್ಯವಸ್ಥೆ ಬಗ್ಗೆ ಚರ್ಚೆ ನಡೆಯಿತು.

ಟ್ರಾಫಿಕ್ ವ್ಯವಸ್ಥೆ ಬಗ್ಗೆ ಮುಲ್ಕಿ ಪೊಲೀಸ್ ಹಾಗೂ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರ ಸಭೆ ಮಾ.28ಕ್ಕೆ ಬೆಳಿಗ್ಗೆ 10.30ಕ್ಕೆ ನಡೆಸಲು ತೀರ್ಮಾನಿಸಲಾಯಿತು.

> **ಮಾ. 31: ಹೊರೆ ಕಾಣಿಕೆ**
> ಬಪ್ಪನಾಡು ಕ್ಷೇತ್ರದ ಜಾತ್ರಾ ಮಹೋ ತ್ಸವದ ಅಂಗವಾಗಿ ಸೀಮೆಯ ಒಂಬತ್ತು ಮಾಗಣೆಯ ಭಕ್ತರಿಂದ ಹೊರೆ ಕಾಣಿಕೆ ಸಮರ್ಪಣಾ ಕಾರ್ಯಕ್ರಮ ಮಾ. 31ರಂದು ಸಂಜೆ ಮುಲ್ಕಿ ಬಸ್ ನಿಲ್ದಾಣದ ಬಳಿಯ ಶಿವಾಜಿ ಮಂಟಪದಿಂದ ಭವ್ಯ ಮೆರವಣಿಗೆಯಲ್ಲಿ ಬಪ್ಪನಾಡು ನಾಡು ಕ್ಷೇತ್ರದ ವರೆಗೆ ನಡೆಯಲಿದೆ

ಸಂದರ್ಶನ ಮುಂದೂಡಿಕೆ

ಕಾಸರಗೋಡು: ಜಿಲ್ಲೆಯ ಸರಕಾರಿ ಎಲ್‌ಪಿ ಶಾಲೆಗಳಲ್ಲಿ ಖಾಲಿ ಇರುವ ಪಿಟಿಸಿಎಂ ಹುದ್ದೆಗಳ ಆಯ್ಕೆಗಾಗಿ ಮಾ.24 ರಿಂದ 27ರ ವರೆಗೆ ನಡೆಯಬೇಕಿದ್ದ ಸಂದರ್ಶನ ಮುಂದೂಡಲಾಗಿದೆ. ಪರಿಷ್ಕೃತ ದಿನಾಂಕವನ್ನು ನಂತರ ಪ್ರಕಟಿಸಲಾಗು ವುದೆಂದು ಸಂಬಂಧಿತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸುತ್ತಮುತ್ತ

ರಘುಪತಿ ಭಟ್ ಆರೋಪಕ್ಕೆ ಶಾಸಕ ಯಶ್‌ಪಾಲ್ ಸ್ಪಷ್ಟನೆ

ಉಡುಪಿ: ಬಡಾನಿಡಿಯೂರು ಗ್ರಾಮದ ವಿವಾದಿತ ಜಾಗದ ಏಕವಿನ್ಯಾಸ ನಕ್ಷೆ ಅನುಮೋದನೆಗೆ ಸಂಬಂಧಿಸಿದಂತೆ ಮಾಜಿ ಶಾಸಕ ರಘುಪತಿ ಭಟ್



ಮಾಡಿರುವ ಆರೋಪಗಳನ್ನು ಶಾಸಕ ಯಶ್‌ಪಾಲ್ ಸುವರ್ಣ ತಳ್ಳಿಹಾಕಿದ್ದಾರೆ. ಈ ವಿಷಯದಲ್ಲಿ ತಮಗೆ ಯಾವುದೇ ವೈಯಕ್ತಿಕ ದ್ವೇಷವಾಗಲಿ ಅಥವಾ ಸ್ವಹಿತಾಸಕ್ತಿಯಾಗಲಿ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಬಡಾನಿಡಿಯೂರು ಗ್ರಾಮದ ಸರ್ವೇ ನಂಬರ್ 118/2ಎ1ಎ3 ಮತ್ತು 118/2ಬಿ ವ್ಯಾಪ್ತಿಯ 0.90 ಎಕರೆ ಜಾಗಕ್ಕೆ ಸಂಬಂಧಿಸಿದಂತೆ ನಕಲಿ ದಾಖಲೆ ಸೃಷ್ಟಿಸಿರುವ ಬಗ್ಗೆ ಸ್ಥಳೀಯ ಕರಾವಳಿ ಯುವಕ ಮಂಡಲದ ಸದಸ್ಯರು ಹಾಗೂ ಮೀನುಗಾರರು ದೂರು ನೀಡಿದ್ದಾರೆ. ಈ ಹಿಂದೆ ಇದೇ ಪ್ರಕರಣದಲ್ಲಿ ಭಾಗಿಯಾಗಿದ್ದ ನಗರಾಭಿವೃದ್ಧಿ ಪ್ರಾಧಿಕಾರದ ಅಂದಿನ ಕಮಿಷನರ್ ಮಹೇಶ್ಚಂದ್ರ ಅವರು ಅಮಾನತುಗೊಂಡಿದ್ದಾರೆ ಎಂದು ಯಶ್‌ಪಾಲ್ ತಿಳಿಸಿದ್ದಾರೆ. ಪ್ರಸ್ತುತ ಈ ಕಡತದ ಬಗ್ಗೆ ಲೋಕಾಯುಕ್ತದಲ್ಲಿ ತನಿಖೆ ನಡೆಯುತ್ತಿದ್ದು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆಯೂ ದಾಖಲಾಗಿದೆ. ಸ್ಥಳೀಯ ಯುವಕ ಮಂಡಲ ಹಾಗೂ ಮೀನುಗಾರರ ಮನವಿಯ ಮೇರೆಗೆ, ಒಬ್ಬ ಜವಾಬ್ದಾರಿಯುತ ಶಾಸಕನಾಗಿ ನಿಯಮಾವಳಿಗೆ ಬದ್ಧವಾಗಿ ಕ್ರಮ ಕೈಗೊಳ್ಳುವಂತೆ ನಾನು ಪತ್ರ ಬರೆದಿದ್ದೇನೆ. ಸಾರ್ವಜನಿಕರ ಹಿತರಕ್ಷಣೆ ಮಾಡುವುದು ನನ್ನ ಕರ್ತವ್ಯ. ಇದರಲ್ಲಿ ಯಾವುದೇ ದುರುದ್ದೇಶವಿಲ್ಲ ಎಂದು ಯಶ್‌ಪಾಲ್ ಸುವರ್ಣ ತಿಳಿಸಿದ್ದಾರೆ.

ಮಾ.27ರಂದು ಶ್ರೀ ವೆಂಕಟರಮಣ ದೇವಳದ ಬ್ರಹ್ಮರಥೋತ್ಸವ

ಕುಂದಾಪುರ: ಕುಂದಾಪುರ ಪೇಟೆ ಶ್ರೀ ವೆಂಕಟರಮಣ ದೇವಸ್ಥಾನದ ಬ್ರಹ್ಮರಥೋತ್ಸವವು ರಾಮ ನವಮಿ ದಿನವಾದ ಮಾ.27ರಂದು ವಿವಿಧ ಧಾರ್ಮಿಕ ವಿಧಿಗಳೊಂದಿಗೆ ಜರುಗಲಿದೆ. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಮಾರ್ಚ್ 24ರಂದು ಕೊಂಕಣಿ ನಾಟಕ, 25ರಂದು ಯಕ್ಷಗಾನ ಬಯಲಾಟ ಹಾಗೂ 26ರಂದು ಉಪ್ಪಿನಕುದ್ರು ಗೊಂಬೆಯಾಟ ಪ್ರದರ್ಶನಗೊಳ್ಳಲಿದೆ ಎಂದು ದೇವಳದ ಆಡಳಿತ ಮೊಕ್ತೇಸರ ಕೆ. ರಾಧಾಕೃಷ್ಣ ಶೆಣೈ ತಿಳಿಸಿದ್ದಾರೆ.

ಬೇಸಿಗೆ ಶಿಬಿರಕ್ಕೆ ಚಾಲನೆ

ಮುಲ್ಕಿ: ಕಿಲ್ಪಾಡಿ ಶ್ರೀ ವ್ಯಾಸ ಮಹರ್ಷಿ ವಿದ್ಯಾಪೀಠ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಬೇಸಿಗೆ ಶಿಬಿರಕ್ಕೆ ಚಾಲನೆ ಮಾಡಲಾಯಿತು. ಶಿಬಿರವನ್ನು ಪ್ರಮುಖರಾದ ಭರತ್ ರಾಜ್ ಕೆ. ಉದ್ಘಾಟಿಸಿ, ಶಿಬಿರವು ಸೃಜನಾತ್ಮಕ ಹಾಗೂ ಕ್ರಿಯಾಶೀಲತೆಗಳನ್ನೊಳಗೊಂಡ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸಮಯವನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಕೆ. ನರಸಿಂಹ ಪೈ ಮಾತನಾಡಿದರು. ಶಾಲಾ ಪ್ರಾಂಶುಪಾಲರಾದ ಕಾಮಾಕ್ಷಿ ಆರ್. ನಾಯಕ್ ಶಿಬಿರದ ಮಾಹಿತಿ ನೀಡಿದರು. ಸ್ಕೌಟ್ ಮಾಸ್ಟರ್ ಶ್ರೀಲಕ್ಷ್ಮಿ ನಿರೂಪಿಸಿದರು. ಗೈಡ್ಸ್ ಕ್ಯಾಪ್ಟನ್ ಶೈಲಜ ಸ್ವಾಗತಿಸಿ, ಸ್ಕೌಟ್ ಮಾಸ್ಟರ್ ಮಲ್ಲಿಕಾ ವಂದಿಸಿದರು.

ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ

ಕುಂದಾಪುರ: ಇರಾನ್ ಹಾಗೂ ಇಸ್ರೇಲ್ ನಡುವೆ ನಡೆಯುತ್ತಿರುವ ಯುದ್ಧದ ಪರಿಣಾಮ ಭಾರತದ ಮೇಲೂ ತಟ್ಟಿದ್ದು, ಇದರಿಂದ ಗ್ಯಾಸ್ ಸಿಲಿಂಡರ್ ಕೊರತೆಯಾಗುತ್ತಿದ್ದು, ಬೆಲೆ ಏರಿಕೆಯೂ ಆಗುತ್ತಿದೆ. ಇದನ್ನು ವಿರೋಧಿಸಿ ಸಿಪಿಎಂ ಕುಂದಾಪುರ ತಾಲೂಕು ಸಮಿತಿ ವತಿಯಿಂದ ಶುಕ್ರವಾರ ಇಲ್ಲಿನ ಶಾಸ್ತ್ರಿ ಸರ್ಕಲ್ ಬಳಿ ಪ್ರತಿಭಟನೆ ನಡೆಯಿತು.

ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡಿ, ಯುದ್ಧವೆಂದರೆ ಸಾಮ್ರಾಜ್ಯಶಾಹಿಯ ವ್ಯಾಪಾರ. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ಜನರ ಮೇಲೆ ತುಂಬಾ ಪರಿಣಾಮ ಬೀಳುತ್ತದೆ ಎಂದರು. ಸಿಪಿಎಂ ಮುಖಂಡ ಹೆಚ್. ನರಸಿಂಹ ಮಾತನಾಡಿ, ಯುದ್ಧದಿಂದಾಗಿ ಗ್ಯಾಸ್ ಕೊರತೆ, ಪೆಟ್ರೋಲಿಯಂ ಉತ್ಪನ್ನಗಳು ಕೊರತೆ ಆಗುತ್ತಿದೆ. ಜನಜೀವನ ಅಸ್ತವ್ಯಸ್ತಗೊಂಡಿದೆ. ದೇಶದ ಆಡಳಿತ ಈ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು. ಎಂದವರು ಹೇಳಿದರು.

ಪ್ರಮುಖರಾದ ಚಂದ್ರಶೇಖರ್ ವಿ., ಕೆ. ಶಂಕರ್, ಮಹಾಬಲ ವಡೇರಹೋಬಳಿ, ಹಯವಧನ್ ಮೂಡುಸಗ್ರಿ, ರಮೇಶ್ ಬಲ್ಕಿಸ್ ಬಾನು, ಶೀಲಾವತಿ, ರಾಜೇಶ್ ಕುಂದಾಪುರ, ಸಂತೋಷ್ ಹೆಮ್ಮಾಡಿ, ಮತ್ತಿತರರು ಉಪಸ್ಥಿತರಿದ್ದರು.

ಆದ್ಯಪಾಡಿ ದೇವಸ್ಥಾನದ ಬ್ರಹ್ಮಕಲಶದ ಧಾರ್ಮಿಕ ಸಭೆಯಲ್ಲಿ ವಿದ್ಯಾಪ್ರಸನ್ನತೀರ್ಥ ಶ್ರೀ ಆಶೀರ್ವಚನ

ದೇವರ ಸನ್ನಿಧಾನಗಳು ಕಲ್ಮಷಗೊಂಡರೆ ಊರಿಗೆ ಸಮಸ್ಯೆ

ಕೈಕಂಬ: ಸನ್ನಿದಾನ ಕಲ್ಮಶವಾದಾಗ, ಸನ್ನಿಧಾನದಲ್ಲಿ ಕುಂದು ಉಂಟಾದಾಗ ಶಾಸ್ತ್ರೀಯವಾಗಿ 12 ವರ್ಷಗಳಿಗೊಮ್ಮೆ ಅಷ್ಟಬಂಧ ಬ್ರಹ್ಮಕಲಶ ನಡೆಸಬೇಕು. ದೇವರ ಸನ್ನಿದಾನ ಕಲ್ಮಷಗೊಂಡರೆ ಊರಿಗೆ ಸಮಸ್ಯೆ ಉಂಟಾಗುತ್ತದೆ. ಊರಿಗೆ ಒಳ್ಳೆಯದಾಗಬೇಕಾದರೆ ನಾವು ನಂಬಿದ ಪುರಾತನ ದೇವಾಲಯಗಳು ಅಭಿವೃದ್ಧಿಯಾಗಬೇಕು. ದೇವರ ಸನ್ನಿಧಾನದಲ್ಲಿ ಬೆಳಕು ಇಲ್ಲದೇ ಹೋದರೆ ಊರಿನಲ್ಲಿ ಕತ್ತಲು ಆವರಿಸಿದಂತಿರುತ್ತದೆ ಎಂದು ಸುಬ್ರಹ್ಮಣ್ಯ ಸಂಪುಟ ನರಸಿಂಹ ಮಠದ ಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

ಆದ್ಯಪಾಡಿ ದೈವಂಗಳಗುಡ್ಡೆ ಶ್ರೀ ನೀಲಕಂಠ ಉಮಾಮಹೇಶ್ವರ ದೇವಸ್ಥಾನದಲ್ಲಿ ಶುಕ್ರವಾರ ನಡೆದ ಅಷ್ಟಬಂಧ ಬ್ರಹ್ಮಕಲಶಾಭಿಷೇಕ ಪ್ರಯುಕ್ತ ನಡೆದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.



ರಾಜ್ಯ ವಿಧಾನಸಭಾಧ್ಯಕ್ಷ ಯು. ಟಿ. ಖಾದರ್ ಮಾತನಾಡಿ, ಹಿರಿಯರು ಮಾಡುವ ಧಾರ್ಮಿಕ ಮತ್ತು ಸಮಾಜಿಕ ಕೆಲಸಗಳು ಯುವ ಜನಾಂಗಕ್ಕೆ ಪ್ರೇರಣೆಯಾಗಬೇಕು. ಇಂತಹ ಕೆಲಸಗಳಿಂದ ಬಲಿಷ್ಠ ಕರ್ನಾಟಕ ಬಲಿಷ್ಠ ಭಾರತ ನಿರ್ಮಾಣ ನಮ್ಮ ಗುರಿಯಾಗಿರಬೇಕು. ಯಾವ ಪಾಶ್ಚಾತ್ಯ ಸಂಸ್ಕೃತಿ ಕೂಡಾ ನಮ್ಮ ತುಳುನಾಡಿನ ಸಂಸ್ಕೃತಿಯನ್ನು ಮೆಟ್ಟಿ ನಿಲ್ಲಲು ಸಾಧ್ಯವಿಲ್ಲ, ಧಾರ್ಮಿಕ ಶ್ರದ್ಧಾ ಕೇಂದ್ರಗಳು ಅಭಿವೃದ್ಧಿ ಹೊಂದಿದರೆ ಊರಿಗೆ ಸುಭಿಕ್ಷೆ ಎಂಬುದು ನೂರಕ್ಕೆ ನೂರು ಸತ್ಯ ಎಂದರು.

ಮಾಜಿ ಸಚಿವ ಬಿ. ರಮಾನಾಥ ರೈ ಮಾತನಾಡಿ, ವಿದೇಶದಲ್ಲಿ ಎಲ್ಲೋ ನಡೆಯುತ್ತಿರುವ ಯುದ್ಧದ ಬಿಸಿ ಭಾರತಕ್ಕೆ ತಟ್ಟಿದೆ. ಜನಾಂಗೀಯ ಸಂಘರ್ಷ ಇಡೀ ಜಗತ್ತನ್ನೇ ಸುಡುತ್ತದೆ. ಮನುಷ್ಯರನ್ನು ದ್ವೇಷಿಸುವವರು ದೇವರನ್ನು ಪ್ರೀತಿಸುವುದಿಲ್ಲ ಎಂದರು.

ಶ್ರೀ ಕ್ಷೇತ್ರ ಕಟೀಲಿನ ಆನುವಂಶಿಕ ಅರ್ಚಕ ಲಕ್ಷ್ಮೀನಾರಾಯಣ ಅಸ್ರಣ್ಣರು ಆಶೀರ್ವಚನ ನೀಡಿ, ಹಿಂದೂ ಧರ್ಮದಲ್ಲಿ ಹುಟ್ಟಿದ ನಾವು ಪುಣ್ಯವಂತರು. ನಮ್ಮ ಆಚಾರ, ಸಂಸ್ಕೃತಿ, ಆರಾಧನೆ, ನಂಬಿಕೆಗಳಲ್ಲಿ ಇರುವ ನೆಮ್ಮದಿ ಬೇರೆ ಧರ್ಮಗಳಲ್ಲಿ ಸಿಗದು ಎಂದರು.

> **ಹಿಂದೂ ಧರ್ಮದಿಂದ ಸಮಾಜಕ್ಕೆ ಒಳಿತು**
>
> ಇಂತಹ ವೇದಿಕೆಗಳಲ್ಲಿ ಹಿಂದುಗಳಿಗೆ ಬುದ್ಧಿ ಮಾತು ಹೇಳುವ ಬದಲು, ಯುದ್ಧಕ್ಕೆ ಕಾರಣೀಭೂತರಾದವರಿಗೆ ಬುದ್ಧಿ ಮಾತು ಹೇಳಿದರೆ ಉತ್ತಮ. ಹಿಂದೂ ಧರ್ಮ ಜಗತ್ತಿಗೆ ಒಳ್ಳೆಯದನ್ನೇ ಬಯಸುತ್ತದೆ. ಸನಾತನ ಹಿಂದೂ ಧರ್ಮ ಅನ್ಯ ಸಂಸ್ಕೃತಿಗಳನ್ನು ನಾಶ ಮಾಡಿದ ಪರಂಪರೆ ಇಲ್ಲ.
>
> ● **ಶರಣ್ ಪಂಪ್‌ವೆಲ್**, ವಿಹಿಂಪ ಕರ್ನಾಟಕ ದಕ್ಷಿಣ ಪ್ರಾಂತ ಸಹ ಕಾರ್ಯದರ್ಶಿ

ವಿಹಿಂಪ ಮಂಗಳೂರು ಜಿಲ್ಲಾಧ್ಯಕ್ಷ ಎಚ್. ಕೆ. ಪುರುಷೋತ್ತಮ, ಉದ್ಯಮಿ ಮೂಡುಂಬೈಲು ರವಿ ಶೆಟ್ಟಿ, ಅದಾನಿ ಗ್ರೂಪ್‌ನ ದಕ್ಷಿಣ ಭಾರತ ಸಿಇಒ ಕಿಶೋರ್ ಆಳ್ವ ಮಾತನಾಡಿದರು. ಮಾಜಿ ಸಚಿವ ಬಿ. ನಾಗರಾಜ ಶೆಟ್ಟಿ ಸ್ವಾಗತಿಸಿದರು. ಶಾರದಾ ವಿದ್ಯಾ ಸಂಸ್ಥೆಯ ಅಧ್ಯಕ್ಷ ಪ್ರೊ. ಎಂ. ಬಿ. ಪುರಾಣಿಕ್ ಅಧ್ಯಕ್ಷತೆ ವಹಿಸಿದ್ದರು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ, ಗುಡ್ಡೆ ಗುತ್ತು ಭುಜಂಗ ಶೆಟ್ಟಿ, ಮೂಡಬಿದ್ರೆ ಅರಮನೆ ಕುಲದೀಪ ಚೌಟ, ದೇವದಾಸ ನಾಯಕ್ ಮೂಡುಕರೆ ಯಜಮಾನ, ಉದಯಚಂದ್ರ ಭಂಡಾರಿ, ಶಿವರಾಮ ಮಲ್ಲಿ, ಶ್ರೀಪತಿ ಉಡುಪ ಚೆನ್ನೈ ಮತ್ತಿತರರು ಇದ್ದರು. ಪುರುಷೋತ್ತಮ ಭಂಡಾರಿ ಅಡ್ಯಾರು ಮತ್ತು ನವನೀತ ಶೆಟ್ಟಿ ಅವರು ನಿರೂಪಿಸಿದರು. ತೇಜಸ್ವಿ ಎಸ್. ರೈ ಮಲ್ಲೂರು ಪರಾರಿ ವಂದಿಸಿದರು.

> **ಗಣ್ಯರಿಗೆ ಸನ್ಮಾನ**
>
> ದೇವಸ್ಥಾನದ ಆಡಳಿತ ಮೊಕ್ತೇಸರ ಮುಂಜುನಾಥ ಭಂಡಾರಿ ಹಾಗೂ ಅವರ ಪತ್ನಿ ಅನಸೂಯ ಎಂ. ಭಂಡಾರಿ, ಹರೀಶ್ ಶೆಟ್ಟಿ ಏತಮೊಗರು ದೊಡ್ಡಮನೆ ಬೈಲುಮೂಡುಕರೆ, ಸಂತೋಷ್ ಶೆಟ್ಟಿ ಶೆಡ್ಡೆ ಹೊಸಲಕ್ಕೆ, ರತ್ನಾಕರ ನಾಯಕ್ ದಂಪತಿಗಳನ್ನು ಗಣ್ಯರು ಸನ್ಮಾನಿಸಿದರು.

ಮುಕ್ಕೂರು ಅಂಗನವಾಡಿ ಕೇಂದ್ರದ 2ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಪುತ್ತೂರು: ಕೋಟೆ ಫೌಂಡೇಷನ್ ಪ್ರಾಯೋಜಕತ್ವದಲ್ಲಿ ಹಾಗೂ ಮುಕ್ಕೂರು ನೇಸರ ಯುವಕ ಮಂಡಲ, ನೇಸರ ಯುವತಿ ಮಂಡಲ, ನೇಸರ ದಶಪ್ರಣತಿ ಸಮಿತಿ– 2026 ಸಹಕಾರದೊಂದಿಗೆ ರೂ.1.28 ಲಕ್ಷ ವೆಚ್ಚದಲ್ಲಿ ಮುಕ್ಕೂರು ಅಂಗನವಾಡಿ ಕೇಂದ್ರದ 2ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಲಾಯಿತು.

ಪ್ರಗತಿಪರ ಕೃಷಿಕ ಕೆ. ಗಣಪಯ್ಯ ವನಶ್ರೀ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ಸಭಾ ಕಾರ್ಯಕ್ರಮ ಉದ್ಘಾಟಿಸಿದ ಮುಕ್ಕೂರು ನೇಸರ ದಶಪ್ರಣತಿ ಸಮಿತಿ ಸಂಚಾಲಕ ಕುಂಬ್ರ ದಯಾಕರ ಆಳ್ವ, ಮುಕ್ಕೂರು ಅಂಗನವಾಡಿ ಕೇಂದ್ರಕ್ಕೆ ಅನುದಾನ ತರುವಲ್ಲಿ ಪ್ರಧಾನ ಪಾತ್ರ ವಹಿಸಿದ ನರಸಿಂಹ ತೇಜಸ್ವಿ ಕಾನಾವು ಅವರ ಪ್ರಯತ್ನ ಶ್ಲಾಘನೀಯ ಎಂದರು.

ಮುಕ್ಕೂರು ನೇಸರ ದಶಪ್ರಣತಿ ಸಮಿತಿ ಉಪಾಧ್ಯಕ್ಷ ನರಸಿಂಹ ತೇಜಸ್ವಿ ಕಾನಾವು ಮಾತನಾಡಿದರು. ನೇಸರ ಯುವಕ ಮಂಡಲದ ಗೌರವಾಧ್ಯಕ್ಷ ಜಗನ್ನಾಥ ಪೂಜಾರಿ ಮುಕ್ಕೂರು ಅಧ್ಯಕ್ಷತೆ ವಹಿಸಿದ್ದರು. ಮುಕ್ಕೂರು ಶ್ರೀ ವೈಷ್ಣವಿ ಮಹಿಳಾ ಮಂಡಲ ಅಧ್ಯಕ್ಷೆ ಸುಮಿತ್ರಾ ಬೀರುಸಾಗು, ಮಹಿಳಾ ಮತ್ತು ಮಕ್ಕಳ ಇಲಾಖೆಯ ಬೆಳ್ಳಾರೆ ವಲಯ ಮಹಿಳಾ ಮೇಲ್ವಿಚಾರಕಿ ಉಷಾ ಪ್ರಸಾದ್ ರೈ, ನೇಸರ ದಶಪ್ರಣತಿ ಸಮಿತಿ ಸದಸ್ಯ ಜೈನುದ್ದೀನ್ ತೋಟದಮೂಲೆ ಮೂಲೆ ಶುಭ ಹಾರೈಸಿದರು. ವೇದಿಕೆಯಲ್ಲಿ ಮುಕ್ಕೂರು ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಜಯಂತ ಕುಂಡಡ್ಕ, ಮುಕ್ಕೂರು ಅಂಗನವಾಡಿ ಕೇಂದ್ರದ ಬಾಲ ವಿಕಾಸ ಸಮಿತಿ ಅಧ್ಯಕ್ಷೆ ಸುನೀತಾ ಕಂಬುರ್ತೋಡಿ, ಮುಕ್ಕೂರು ಶ್ರೀ ಸಾರ್ವಜನಿಕ ಗಣೇಶೋತ್ಸವ ಸಮಿತಿ ಅಧ್ಯಕ್ಷ ರವೀಂದ್ರ ಕೆ., ಮುಕ್ಕೂರು ನೇಸರ ಯುವಕ ಮಂಡಲದ ಅಧ್ಯಕ್ಷ ರಮೇಶ್ ಕಾನಾವು, ಪ್ರಗತಿಪರ ಕೃಷಿಕರಾದ ಮೋಹನ ಬೈಪಡಿತ್ತಾಯ, ಉಮೇಶ್ ಕೆಎಂಬಿ, ಸತ್ಯಪ್ರಸಾದ್ ಕಂಡಿಪ್ಪಾಡಿ, ಹೊನ್ನಪ್ಪ ಗೌಡ ಚಾಮುಂಡಿಮೂಲೆ, ಗ್ರಾ.ಪಂ. ಮಾಜಿ ಸದಸ್ಯೆ ಗುಲಾಬಿ ಬೊಮ್ಮೆಮಾರು, ಮುಕ್ಕೂರು ಶಾಲಾ ಮುಖ್ಯ ಗುರು ಲತಾ ಕುಮಾರಿ ಉಪಸ್ಥಿತರಿದ್ದರು. ಕಾರ್ಯಕರ್ತೆ ರೂಪಾ ಸ್ವಾಗತಿಸಿ, ನೇಸರ ಯುವತಿ ಮಂಡಲದ ಅಧ್ಯಕ್ಷೆ ಬೃಂದಾ ಪಿ. ಮುಕ್ಕೂರು ವಂದಿಸಿದರು. ನೇಸರ ಯುವತಿ ಮಂಡಲದ ಸದಸ್ಯೆ ದೀಕ್ಷಾ ನೀರ್ಕಜೆ ನಿರ್ವಹಿಸಿದರು.

ಮಂಗಳೂರು: ತುಳು ಭವನದಲ್ಲಿ ಮೂರನೇ ವಿದ್ಯಾರ್ಥಿ ತುಳು ಸಮ್ಮೇಳನ



ಮಂಗಳೂರು: ಎಲ್ಲಾ ಭಾಷೆಗಳಿಗೆ ಗೌರವ ನೀಡುವುದರೊಂದಿಗೆ ನಮ್ಮ ಕರಾವಳಿಯ ತುಳು ಭಾಷೆಗೆ ಹೆಚ್ಚಿನ ಮಾನ್ಯತೆ ನೀಡಿ ಅದನ್ನು ಉಳಿಸುವ ಜವಾಬ್ದಾರಿ ವಿದ್ಯಾರ್ಥಿ ಸಮುದಾಯದ ಮೇಲಿದೆ ಎಂದು ನಿಟ್ಟೆ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿ ಪ್ರೀತಮ್ ನಾಯಕ್ ಹೇಳಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮತ್ತು ತುಳು ಪರಿಷತ್ ಆಶ್ರಯದಲ್ಲಿ ಶುಕ್ರವಾರ ತುಳು ಭವನದಲ್ಲಿ ಮೂರನೇ ವಿದ್ಯಾರ್ಥಿ ತುಳು ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ತಲಾ ಐದು ಕಿ.ಮೀ. ದೂರಕ್ಕೊಂದು ಭಾಷೆ, ಸಂಸ್ಕೃತಿ, ಆಹಾರ ವ್ಯತ್ಯಾಯಗೊಳ್ಳುತ್ತಲೇ ಹೋಗುತ್ತಿದೆ. ಆದರೆ ತುಳು ಭಾಷೆ ಎಲ್ಲ ಕಡೆಯೂ ಪಸರಿಸುತ್ತಿರಬೇಕು ಎಂದು ಅವರು ಆಶಿಸಿದರು.

ಸಮ್ಮೇಳನಾಧ್ಯಕ್ಷ ಭಾಷಣ ಮಾಡಿದ ಬ್ರಹ್ಮಾವರ ಎಸ್‌ಎಂಎಸ್ ಕಾಲೇಜು ವಿದ್ಯಾರ್ಥಿನಿ ಅಭಿಜ್ಞಾ, ಆಧುನಿಕತೆಯ ಭರಾಟೆಯಲ್ಲಿ ತುಳು ಭಾಷೆ ಮರೆಗೆ ಸರಿಯುವ ಭೀತಿ ಎದುರಾಗಿದೆ. ವಿದ್ಯಾರ್ಥಿಗಳ ಮೂಲಕ ತುಳು ತೇರು ಎಳೆಯುವ ಕೆಲಸವನ್ನು ಅಕಾಡೆಮಿ ಮತ್ತು ಪರಿಷತ್ ಮಾಡುತ್ತಿದೆ. ಟಿ.ವಿ, ಮೊಬೈಲ್‌ನ ದಾಸರಾಗಿರುವ ಇಂದಿನ ದಿನಗಳಲ್ಲಿ ಮಕ್ಕಳಲ್ಲಿ ತುಳು ಭಾಷೆ, ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕು ಎಂದರು.

ಬಂಟ್ವಾಳ ರಾಣಿ ಅಬ್ಬಕ್ಕ ಅಧ್ಯಯನ ಕೇಂದ್ರ ಮುಖ್ಯಸ್ಥ ಡಾ.ತುಕರಾಮ ಪೂಜಾರಿ ದಿಕ್ಸೂಚಿ ಭಾಷಣ ಮಾಡಿದರು. ತುಳು ಪರಿಷತ್ ಅಧ್ಯಕ್ಷ ಶುಭೋದಯ ಆಳ್ವ ಪ್ರಾಸ್ತಾವಿಕ ಮಾತನಾಡಿದರು.

ನಿಡುಸೋಸಿ ಶ್ರೀಜಗದ್ಗುರು ದುರುದುಂಡೀಶ್ವರ ಸಿದ್ಧಸಂಸ್ಥಾನ ಮಠದ ಶ್ರೀ ನಿಜಲಿಂಗೇಶ್ವರ ಸ್ವಾಮೀಜಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಅಧ್ಯಕ್ಷೆ ಮಮತಾ ಗಟ್ಟಿ, ತುಳು ಪರಿಷತ್ ಗೌರವಾಧ್ಯಕ್ಷ ಡಾ.ಪ್ರಭಾಕರ ನೀರುಮಾರ್ಗ, ತುಳು ಅಕಾಡೆಮಿ ರಿಜಿಸ್ಟ್ರಾರ್ ಪೂರ್ಣಿಮಾ, ಪ್ರಮುಖರಾದ ಬೆನೆಟ್ ಅಮ್ಮಣ್ಣ, ಸುಮತಿ ಹೆಗ್ಡೆ, ಅಮಿತ್ ಅಶ್ವಿತ್, ಕಲಾ ಸಿರಿ ಸಂಚಾಲಕರಾದ ಚಂದ್ರಕಲಾ ರಾವ್, ದುರ್ಗಾ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಸನ್ನಿಧಿ ಸ್ವಾಗತಿಸಿದರು. ರಾಹುಲ್ ಶೆಟ್ಟಿ ವಂದಿಸಿದರು. ಮೇಘಶ್ರೀ ಕಾರ್ಯಕ್ರಮ ನಿರೂಪಿಸಿದರು.

ನಮ್ಮೊಳಗಿನ ಸಾಧಕನನ್ನು ಗುರುತಿಸಿ: ಶ್ರೀರಕ್ಷಾ ಕಿವಿಮಾತು



ಪುತ್ತೂರು: ಪ್ರತಿಯೊಬ್ಬನಲ್ಲೂ ಒಬ್ಬ ಸಾಧಕನಿದ್ದಾನೆ. ನಮ್ಮೊಳಗಿನ ಸಾಧಕನನ್ನು ಗುರುತಿಸಿ ಸಾಧನೆಯ ಕಡೆಗೆ ಮುನ್ನಡೆಯಬೇಕು ಎಂದು ಶಾಲಾ ಹಿರಿಯ ವಿದ್ಯಾರ್ಥಿನಿ ಶ್ರೀರಕ್ಷಾ ಹೇಳಿದರು.

ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯಲ್ಲಿ ಕಲಿಕಾ–ಹರ್ಷ ಬೇಸಿಗೆ ಶಿಬಿರದ ಉದ್ಘಾಟನಾ ಕಾರ್ಯಕ್ರಮದ ಅಭ್ಯಾಗತರಾಗಿ ಅವರು ಮಾತನಾಡಿದರು.

ಶಾಲಾ ಹಿರಿಯ ವಿದ್ಯಾರ್ಥಿನಿ ಗಗನ ಅವರು, ನಮ್ಮೊಳಗಿನ ಪ್ರತಿಭೆಯನ್ನು ಅನಾವರಣಗೊಳಿಸಲು ಕಲಿಕಾ ಶಿಬಿರ ವೇದಿಕೆಯಾಗಿದೆ ಎಂದರು.

ಶಾಲಾ ಪ್ರಾಥಮಿಕ ವಿಭಾಗದ ಮುಖ್ಯ ಗುರು ನಳಿನಿ ವಾಗ್ಲೆ, ಶಿಬಿರ ಸಂಯೋಜಕಿ ಶ್ವೇತಾ ಎ.ಬಿ. ಉಪಸ್ಥಿತರಿದ್ದರು. ಅಭ್ಯಾಗತರಾಗಿದ್ದ ಶಾಲಾ ಹಿರಿಯ ವಿದ್ಯಾರ್ಥಿನಿಯರು ಶಿಬಿರಾರ್ಥಿಗಳಿಗೆ ಮನರಂಜನೆಯ ಆಟಗಳನ್ನು ಆಡಿಸಿದರು. ಕಾರ್ಯಕ್ರಮದಲ್ಲಿ ಪೋಷಕರು, ಶಿಬಿರಾರ್ಥಿಗಳು, ಪೋಷಕ ವೃಂದದವರು ಇದ್ದರು. ಕಾರ್ಯಕ್ರಮವನ್ನು ಶಾಲಾ ಸಹಶಿಕ್ಷಕಿ ಪ್ರತೀಕ್ಷಾ ಆರ್.ಕೆ. ನಿರ್ವಹಿಸಿದರು.

ಶಿವಪುರ ವಸ್ತುಸಂಗ್ರಹಾಲಯಕ್ಕೆ ಅಮೃತ ಭಾರತಿ ವಿದ್ಯಾರ್ಥಿಗಳು ಭೇಟಿ



ಹೆಬ್ರಿ: ಹೆಬ್ರಿ ಪಿ ಆರ್ ಎನ್ ಅಮೃತಭಾರತಿ ವಿದ್ಯಾಲಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯ 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳು ಶಿವಪುರದ ಛಾಯಾಂತರಂಗಕ್ಕೆ ಭೇಟಿ ನೀಡಿದರು.

ಅಮೃತ ಭಾರತಿ ವಿದ್ಯಾಲಯದ ಪೂರ್ವಛಾತ್ರ ಮಾನ್ವಿತ್ ಅಡಿಗ ಅವರ ಛಾಯಾಂತರಂಗ ಮತ್ತು ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿ ಅಲ್ಲಿನ ವಿಷಯಗಳನ್ನು ಪರಿಶೀಲಿಸಿ, ಕೃಷಿಗೆ ಸಂಬಂಧಿಸಿದ ಜೀವಾಮೃತ ತಯಾರಿಕೆಯ ಬಗ್ಗೆ ಹಲವು ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಶಿವಪುರ ದೇವಸ್ಥಾನದ ಪ್ರಧಾನ ಅರ್ಚಕ ಮಹಾಬಲೇಶ್ವರ ಅಡಿಗ, ಸಂಸ್ಥೆಯ ಮುಖ್ಯಸ್ಥೆ ಅಪರ್ಣಾ ಆಚಾರ್ ಹಾಗೂ ಸಂಸ್ಥೆಯ ಶಿಕ್ಷಕರಾದ ಮಹೇಶ್ ಹೈಕಾಡಿ, ಸಾವಿತ್ರಿ ಕಿಣಿ, ಸೌಪರ್ಣಿಕಾ ಜೋಶಿ, ನವ್ಯಾ ಪೈ, ಪಂಚಮಿ, ಸುಮನ್ ನಾಯಕ್, ಮೀನಾಕ್ಷಿ , ನಿಶಾನ್ ಶೆಟ್ಟಿ ಸುಮನವಾಣಿ, ವಾಹನ ಚಾಲಕ ತಾರಕುಮಾರ್ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಪತ್ರಕರ್ತರ ಸಂಘದಿಂದ ಡಿ.ವಿ.ಜಿ. ಸಂಸ್ಮರಣೆ



ಮಂಗಳೂರು: ಪ್ರಸಿದ್ಧ ಕವಿ ಡಿ.ವಿ. ಗುಂಡಪ್ಪ (ಡಿವಿಜಿ) ಅವರ ಮಂಕುತಿಮ್ಮನ ಕಗ್ಗದಲ್ಲಿ ಎಲ್ಲ ಧರ್ಮಗಳ ಸಾರ ಅಡಗಿದೆ. ಪತ್ರಕರ್ತರಾಗಿದ್ದ ಡಿವಿಜಿ ಅವರು 1932ರಲ್ಲಿ ಸ್ಥಾಪಿಸಿದ ಮೈಸೂರು ರಾಜ್ಯ ಪತ್ರಕರ್ತರ ಸಂಘ ಬಳಿಕ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವಾಗಿ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಸಂಸ್ಥಾಪಕ ಡಿವಿಜಿ ಅವರ ಆದರ್ಶ ಹಾಗೂ ಚಿಂತನೆಗಳಲ್ಲಿ ಬೆಳೆದು ಬಂದಿರುವ ಪತ್ರಕರ್ತರ ಸಂಘ ಹಂತಹಂತವಾಗಿ ಬೆಳೆದು ಈಗ 10 ಸಾವಿರ ಸದಸ್ಯರನ್ನು ಒಳಗೊಂಡಿರುವ ದೇಶದ ಬೃಹತ್ ಸಂಘಟನೆಯಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಹೇಳಿದರು.

ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಶನಿವಾರ ನಗರದ ಪ್ರೆಸ್ ಕ್ಲಬ್‌ನಲ್ಲಿ ನಡೆದ ಡಿ.ವಿ.ಜಿ. ಸಂಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ, ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ ಅನ್ನು ಮಂಗಳೂರು, ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ, ಜಿಲ್ಲಾ ಸಂಘದ ಉಪಾಧ್ಯಕ್ಷ ವಿಲ್ಫ್ರೆಡ್ ಡಿಸೋಜಾ, ರಾಜೇಶ್ ಶೆಟ್ಟಿ ಕಾರ್ಯದರ್ಶಿ ಸುರೇಶ್, ಡಿ.ಪಳ್ಳಿ, ಸಿದ್ದಿಕ್ ನೀರಾಜೆ, ಸಮಿತಿ ಸದಸ್ಯರಾದ ದಿವಾಕರ ಪದ್ಮುಂಜ, ಭುವನೇಶ್ವರ.ಜಿ. ಹರೀಶ್ ಆದೂರು, ತಾಲೂಕು ಘಟಕಗಳ ಅಧ್ಯಕ್ಷರಾದ ತುಕಾರಾಮ, ನವೀನ್ ಸಾಲ್ಯಾನ್, ಸಮಿತಿಯ ಮಾಜಿ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಕುಂದೇಶ್ವರ, ಮಾಜಿ ಉಪಾಧ್ಯಕ್ಷ ಭಾಸ್ಕರ ರೈ ಕಟ್ಟ ಇದ್ದರು. ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್. ಬಿ.ಎನ್. ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ರಾಜೇಶ್. ಕೆ.ಪೂಜಾರಿ ವಂದಿಸಿದರು.

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ ವಿರುದ್ಧ ರಘುಪತಿ ಭಟ್ ಪ್ರತಿಭಟನೆ

ಉಡುಪಿ: ಕಳೆದ ಎರಡು ವರ್ಷಗಳಿಂದ ಏಕ ವಿನ್ಯಾಸ ನಕ್ಷೆ ಅನುಮೋದನೆ ನೀಡದೆ ಸತಾಯಿಸುತ್ತಿರುವ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ವಿರುದ್ಧ ಮಾಜಿ ಶಾಸಕ ರಘುಪತಿ ಭಟ್ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಿದ್ದಾರೆ.

ಉಡುಪಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಿಳಂಬ ನೀತಿಯ ಹಿಂದೆ ಸ್ಥಳೀಯ ಶಾಸಕರ ರಾಜಕೀಯ ಕೈವಾಡವಿದೆ ಎಂದು ಗಂಭೀರ ಆರೋಪ ಮಾಡಿದರು.

ಬಡಾನಿಡಿಯೂರು ಗ್ರಾಮದ 90 ಸೆಂಟ್ಸ್ ಜಾಗದಲ್ಲಿ ರೆಸಾರ್ಟ್ ನಿರ್ಮಿಸುವ ಉದ್ದೇಶದಿಂದ ಏಕ ವಿನ್ಯಾಸ ನಕ್ಷೆಗಾಗಿ ಎರಡು ವರ್ಷಗಳ ಹಿಂದೆಯೇ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಎಲ್ಲಾ ಕಾನೂನು ಪ್ರಕ್ರಿಯೆಗಳು ಪೂರ್ಣಗೊಂಡಿದ್ದರೂ, ಹೈಕೋರ್ಟ್ ಆದೇಶವಿದ್ದರೂ ಪ್ರಾಧಿಕಾರದ ಆಯುಕ್ತರು ಅನುಮೋದನೆ ನೀಡಲು ಹಿಂದೇಟು ಹಾಕುತ್ತಿದ್ದಾರೆ. ಇದನ್ನು ಪ್ರತಿಭಟಿಸಿ ಮಾ.23ರಂದು ಬೆಳಿಗ್ಗೆ 9.30ರಿಂದ ಪ್ರಾಧಿಕಾರದ ಆವರಣದಲ್ಲಿ ಒಬ್ಬಂಟಿಯಾಗಿ ಧರಣಿ ಕುಳಿತುಕೊಳ್ಳಲಿದ್ದೇನೆ ಎಂದು ಭಟ್ ತಿಳಿಸಿದರು.

ಮೂರು ಬಾರಿ ಶಾಸಕನಾದ ನನಗೇ ಈ ಪರಿಸ್ಥಿತಿ ಬಂದರೆ ಇನ್ನು ಸಾಮಾನ್ಯ ಜನರ ಕಥೆ ಏನು? ಎಂದು ಪ್ರಶ್ನಿಸಿದ ಅವರು, ಪ್ರಸ್ತುತ ಶಾಸಕ ಯಶ್‌ಪಾಲ್ ಸುವರ್ಣ ಅವರ ಒತ್ತಡವೇ ಈ ವಿಳಂಬಕ್ಕೆ ಕಾರಣ ಎಂದರು. ಶಾಸಕರು ನನ್ನ ಜೊತೆ ರಾಜಕೀಯ ದ್ವೇಷ ಮಾಡಲಿ, ಅದನ್ನು ಬಿಟ್ಟು ವೈಯಕ್ತಿಕ ದ್ವೇಷದ ಮೂಲಕ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿಪಡಿಸುವುದು ಸರಿಯಲ್ಲ ಎಂದರು.

ಈಗಾಗಲೇ ಅಪರ ಜಿಲ್ಲಾಧಿಕಾರಿಗಳ ತನಿಖಾ ವರದಿ ಹಾಗೂ ಸಿಆರ್‌ಝಡ್ ವಿಭಾಗದಿಂದ ನಿರಾಕ್ಷೇಪಣಾ ಪತ್ರ ದೊರೆತಿದೆ. ವಲಯ ಬದಲಾವಣೆಯೂ ಕ್ರಮಬದ್ಧವಾಗಿ ನಡೆದಿದೆ. ನನಗೆ ನ್ಯಾಯ ಸಿಗುವವರೆಗೆ ಹೋರಾಟ ಮುಂದುವರಿಯಲಿದೆ. ನಕ್ಷೆಗೆ ಅನುಮೋದನೆ ನೀಡಬೇಕು ಅಥವಾ ಸಾಧ್ಯವಿಲ್ಲದಿದ್ದರೆ ಹಿಂಬರಹ ನೀಡಬೇಕು. ಹಿಂಬರಹ ನೀಡಿದರೆ ಅದರ ಆಧಾರದ ಮೇಲೆ ಮುಂದಿನ ಕಾನೂನು ಹೋರಾಟ ರೂಪಿಸಲಾಗುವುದು ಎಂದು ರಘುಪತಿ ಭಟ್ ಎಚ್ಚರಿಸಿದ್ದಾರೆ.

ಮಾ.24: ವಿವಿಧೆಡೆ ವಿದ್ಯುತ್ ವ್ಯತ್ಯಯ

ಕುಂದಾಪುರ: ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮಾ.24ರಂದು ಬೆಳಿಗ್ಗೆ 9.30ರಿಂದ ಸಂಜೆ 5.30ರವರೆಗೆ ಬೈಂದೂರು, ಶಿರೂರು, ಪಡುವರಿ, ಉಪ್ಪುಂದ, ಯಡ್ತರೆ, ಬಿಜೂರು, ತಗ್ಗರ್ಸೆ, ಗಂಗನಾಡು, ಯಳಜಿತ್, ಮುದೂರು, ಕೊಲ್ಲೂರು, ನಾಯ್ಕನಕಟ್ಟೆ, ಕೆರ್ಗಾಲ್, ಅರೆಶಿರೂರು, ಗೋಳಿಹೊಳೆ, ಇಡೂರು, ಹೇರೂರು, ಆಲೂರು, ಮತ್ತು ಬಡಾಕೆರೆ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.


ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದ ಬಿಜೆಪಿ ನಡೆಗೆ ಖಂಡನೆ | ಸುದ್ದಿಗೋಷ್ಠಿಯಲ್ಲಿ ವೀರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಕಿಡಿ

ಆನೆ-ಮಾನವ ಸಂಘರ್ಷ ವಿಚಾರದಲ್ಲಿ ಬಿಜೆಪಿ ಸಾವಿನ ಮೇಲೆ ರಾಜಕೀಯ ಮಾಡುತ್ತಿದೆ

ಮಡಿಕೇರಿ: ಆನೆ–ಮಾನವ ಸಂಘರ್ಷದ ವಿಚಾರದಲ್ಲಿ ಬಿಜೆಪಿ ಸಾವಿನ ಮೇಲೆ ರಾಜಕೀಯ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್ .ಪೊನ್ನಣ್ಣ ಅವರು, ಅರಣ್ಯದ ವಿಚಾರದಲ್ಲಿ ಕೇಂದ್ರದ್ದೂ ಹೊಣೆಗಾರಿಕೆಯಿದ್ದು, ಕಳೆದ 12 ವರ್ಷಗಳ ಅವಧಿಯಲ್ಲಿ ಕೇಂದ್ರ ಪ್ರಾಯೋಜಿತ ಯೋಜನೆಯಲ್ಲಿ ರಾಜ್ಯಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಿದೆ ಎಂದು ಪ್ರಶ್ನಿಸಿದ್ದಾರೆ.

ನಗರದ ಸುದರ್ಶನ ಅತಿಥಿಗೃಹದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆನೆ ಮಾನವ ಸಂಘರ್ಷಕ್ಕೆ ಸಂಬಂಧಿಸಿದಂತೆ ರಸ್ತೆ ತಡೆ ಪ್ರತಿಭಟನೆ ನಡೆಸಿದ ಬಿಜೆಪಿಯವರು ಅರಣ್ಯ ಸಚಿವರ ಬಗ್ಗೆ ಕೀಳಾಗಿ ಮಾತಾಡಿದ್ದಾರೆ. ಅಲ್ಲದೆ ಮಹಿಳಾ ಅಧಿಕಾರಿ ಮೇಲೆ ಸೌಜನ್ಯ ಇಲ್ಲದೆ ವರ್ತಿಸಿದ್ದಾರೆ ಎಂದು ಕಿಡಿಕಾರಿದರು.

ವನ್ಯಪ್ರಾಣಿಗಳ ದಾಳಿಯಿಂದ ಕೊಡಗಿನ ಜನತೆ ಸಾವನ್ನಪ್ಪಿದಾಗ ನನಗೆ ಕುಟುಂಬ ಸದಸ್ಯರನ್ನು ಕಳೆದುಕೊಂಡಷ್ಟೇ ನೋವಾಗುತ್ತದೆ. ಆದರೆ ಜಿಲ್ಲೆಯಲ್ಲಿ ಈ ಸಮಸ್ಯೆ ಇಂದು ನಿನ್ನೆಯದಲ್ಲ. 25 ವರ್ಷ ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಆನೆ ಮಾನವ ಸಂಘರ್ಷ ಆಗಿಲ್ಲವೇ? ಆಗ ಜನರು ಸತ್ತಾಗ ಆಗಿನ ಶಾಸಕರು ಏನು ಮಾಡಿದ್ದರು? ಆವಾಗಿನ ಅರಣ್ಯ ಸಚಿವರು ಯಾವ ಝೂನಲ್ಲಿರಬೇಕು? ಎಂದು ಪ್ರಶ್ನಿಸಿದರು. ಕೊಡಗಿನಲ್ಲಿ ಕಾಂಗ್ರೆಸ್ ವಿರೋಧ ಪಕ್ಷದಲ್ಲಿದ್ದಾಗ ಯಾವತ್ತೂ ಈ ರೀತಿಯಾಗಿ ವರ್ತಿಸಿರಲಿಲ್ಲ, ಇವರ ಅವಧಿಯಲ್ಲಿ ಸಾವು



ಸಂಭವಿಸಿದಾಗ ಏನು ಮಾಡಿದ್ದರು ಎಂಬುದನ್ನು ತಿಳಿಸಿದರೆ, ನಾವೂ ಅದನ್ನೇ ಮಾಡುತ್ತೇವೆ ಎಂದು ಪೊನ್ನಣ್ಣ ನುಡಿದರು.

ಇವತ್ತಿನ ಸಂಘರ್ಷಕ್ಕೆ ಕಾಂಗ್ರೆಸ್ ಕಾರಣವೇ ಎಂದು ಪ್ರಶ್ನಿಸಿದ ಅವರು, ಅರಣ್ಯದ ವಿಚಾರದಲ್ಲಿ ಕೇಂದ್ರದ್ದೂ ಹೊಣೆಗಾರಿಕೆ ಇದೆ. ಕೇಂದ್ರದಲ್ಲಿ ಅರಣ್ಯ ಸಚಿವರಿದ್ದಾರೆ. ಅವರು ಕೇವಲ ಶೋ ಮಾಡಲು ಇರುವುದಾ? ಇವರ ಸರ್ಕಾರ ಬಂದು 12 ವರ್ಷವಾಗಿದೆ. ಕೇಂದ್ರ ಪ್ರಾಯೋಜಿತ ಯೋಜನೆಯಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಿದೆ ಎಂಬ ಬಗ್ಗೆ ಮಾಜಿ ಸ್ಪೀಕರ್ ವಿವರಣೆ ನೀಡಲಿ ಎಂದು ಬೋಪಯ್ಯ ಅವರ ವಿರುದ್ಧ ಕಿಡಿಕಾರಿದರು.

ಅರಣ್ಯಕ್ಕೆ ಸಂಬಂಧಿಸಿದಂತೆ ಕೇರಳಕ್ಕೆ ಅತಿಹೆಚ್ಚು ಅನುದಾನ ಹೋಗಿದೆ. ರಾಜ್ಯಕ್ಕೆ ಎಷ್ಟು ಬಂದಿದೆ ಎಂಬುದನ್ನು ಮಹಾನುಭಾವರು ಹೇಳಲಿ. ಆನೆ ಮಾನವ ಸಂಘರ್ಷ ತಡೆಗೆ ಕೇಂದ್ರ ಸರ್ಕಾರದ್ದೂ ಬಹುದೊಡ್ಡ ಜವಾಬ್ದಾರಿ ಇದೆ. ಆನೆ ಯೋಜನೆ ಮತ್ತು ಹುಲಿ ಯೋಜನೆಗೆ 290 ಕೋಟಿ ರೂ. ಮೀಸಲಿಟ್ಟಿದೆ. ಇದರಲ್ಲಿ ಶೇ 30ರಷ್ಟು ಹಣ ಮಾತ್ರ ವಿನಿಯೋಗವಾಗಿದೆ ಎಂದ ಪೊನ್ನಣ್ಣ ಅವರು, ಕಳೆದ 25 ವರ್ಷಗಳಿಂದ ಬಿಜೆಪಿಗೆ ಅಧಿಕಾರ ನೀಡಿರುವ ಕೊಡಗಿಗೆ ಕೇಂದ್ರ ಸರ್ಕಾರ ಒಂದೇ ಒಂದು ಪೈಸೆ ಅನುದಾನ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆನೆ ಮಾನವ ಸಂಘರ್ಷ ತಡೆಯಲು ಈಗಾಗಲೇ ಉನ್ನತ ಮಟ್ಟದ ಸಭೆ ನಡೆಸಲಾಗಿದೆ. ರೈಲ್ವೆ ಬ್ಯಾರಿಕೇಡ್, ಸೋಲಾರ್ ಲೈನ್, ಆನೆ ಕಂದಕ ನಿರ್ಮಾಣಕ್ಕೆ 290 ಕೋಟಿ ರೂ. ಬೇಕಾಗಿದೆ. ಕೇಂದ್ರ ಸರ್ಕಾರದಲ್ಲಿ ಶೇ.70 ರಷ್ಟು ಹಣ ಉಳಿದಿದ್ದು ಅದನ್ನು ಕೊಡಲಿ ಎಂದು ಪೊನ್ನಣ್ಣ ಒತ್ತಾಯಿಸಿದರು.

ಮುಂದಿನ ಐದು ವರ್ಷದಲ್ಲಿ 150 ಕಿ.ಮೀ. ರೈಲ್ವೆ ಬ್ಯಾರಿಕೇಡ್, 102 ಕಿ.ಮೀ. ಸೋಲಾರ್ ಫೆನ್ಸಿಂಗ್ 23 ಕಿ.ಮಿ ಆನೆ ಕಂದಕ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಕಾಡಾನೆ ಸೆರೆ ಹಿಡಿದರೆ ನಮ್ಮ ಮೇಲೆ ಪರಿಸರವಾದಿಗಳು ಕೇಸ್ ಹಾಕುತ್ತಾರೆ. ಇವೆಲ್ಲವನ್ನೂ ನಾವು ಸರಿದೂಗಿಸಿಕೊಂಡು ಹೋಗಬೇಕಾಗಿದೆ. ಯಾವುದೇ ಸರ್ಕಾರ ಇರಲಿ ಹೋಗಲಿ, ಆನೆ ಮಾನವ ಸಂಘರ್ಷ ಕೊನೆಯಾಗಬೇಕು. ಇದಕ್ಕೆ ಎಲ್ಲರೂ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದು ಪೊನ್ನಣ್ಣ ಅಭಿಪ್ರಾಯಪಟ್ಟರು..

ಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಸಿ.ಎಸ್. ಅರುಣ್ ಮಾಚಯ್ಯ, ಪ್ರಚಾರ ಸಮಿತಿ ಪ್ರಮುಖರಾದ ಟಿ.ಪಿ.ರಮೇಶ್, ಅರೆಭಾಷೆ ಅಕಾಡೆಮಿ ಮಾಜಿ ಅಧ್ಯಕ್ಷ ಕೊಲ್ಯದ ಗಿರೀಶ್ ಮತ್ತಿತರರು ಇದ್ದರು.

ಸುತ್ತ ಮುತ್ತ

ಕುರುಡಪದವಿನಲ್ಲಿ ಇಂದು ರಕ್ತದಾನ ವೈದ್ಯಕೀಯ ಶಿಬಿರ

ಮಂಜೇಶ್ವರ: ಶ್ರೀರಾಮ್ ಫ್ರೆಂಡ್ಸ್ ಕ್ಲಬ್ ಕುರುಡಪದವು ಹಾಗೂ 'ಕೆ.ಎಸ್.ಹೆಗ್ಡೆ ಹಾಸ್ಪಿಟಲ್ ದೇರಳಕಟ್ಟೆ, ಮಂಗಳೂರು ಇದರ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಮತ್ತು ಉಚಿತ ವೈದ್ಯಕೀಯ ಶಿಬಿರ ಮಾ.22ರಂದು ಬೆಳಗ್ಗೆ 9ಕ್ಕೆ ಕುರುಡಪದವು ಎಯುಪಿ ಶಾಲೆಯಲ್ಲಿ ಜರಗಲಿದೆ. ವಾರ್ಡ್ ಸದಸ್ಯೆ ಸುಮನಾ ಜಿ.ಭಟ್ ಉದ್ಘಾಟಿಸುವರು. ಶಾಲಾ ನಿವೃತ್ತ ಮುಖ್ಯೋಪಾಧ್ಯಾಯ ಶಂಕರನಾರಾಯಣ ಭಟ್ ಕಾಡೂರು ಅಧ್ಯಕ್ಷತೆ ವಹಿಸುವರು. ಶಾಲಾ ಮುಖ್ಯೋಪಾಧ್ಯಾಯ ಪದ್ಮನಾಭ ಬಲ್ಲಾಯ, ಬಾಯಾರು ಜ್ಯೂನಿಯರ್ ಹೆಲ್ತ್ ಇನ್‌ಸ್ಪೆಕ್ಟರ್ ಬ್ರಹ್ಮದತ್ತ್ ಎನ್., ದಿನೇಶ್ ಶೆಟ್ಟಿ ಕರುವೋಳು, ವಾಸುದೇವ ಶೆಟ್ಟಿಗಾರ್, ರವೀಂದ್ರ ಮೂಂಕೋಡಿ, ಅಶ್ರಫ್ ವಡ್ಯತ್ತಡ್ಕ, ಗುರುರಾಜ್ ಚಿಪ್ಪಾರು, ಪ್ರವೀಣ ಬೇಡಗುಡ್ಡೆ, ಚಂದ್ರಶೇಖರ ಕುರುವೇರಿ ಹಾಗೂ ವೈದ್ಯಾಧಿಕಾರಿಗಳು ಪಾಲ್ಗೊಳ್ಳುವರು.

ಸಂದರ್ಶನ ಮುಂದೂಡಿಕೆ

ಕಾಸರಗೋಡು: ಜಿಲ್ಲಾ ಪ್ರಾಣಿ ಕಲ್ಯಾಣ ಇಲಾಖೆಯು ಬ್ಲಾಕ್ ಆಧಾರದ ಮೇಲೆ ಜಾರಿಗೆ ತಂದಿರುವ ಮನೆ ಮನೆಗೆ ರಾತ್ರಿ ಪ್ರಾಣಿ ಚಿಕಿತ್ಸಾ ಸೇವೆಗೆ ಚಾಲಕರು ಮತ್ತು ಸಹಾಯಕರ ನೇಮಕಾತಿಗಾಗಿ ಮಾ.23 ರಂದು ನಿಗದಿಯಾಗಿದ್ದ ವಾಕ್-ಇನ್ ಸಂದರ್ಶನವನ್ನು ಮುಂದೂಡಲಾಗಿದೆ ಎಂದು ಜಿಲ್ಲಾ ಪ್ರಾಣಿ ಕಲ್ಯಾಣ ಇಲಾಖೆ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿ.ಎಡ್.ಪರೀಕ್ಷೆಯಲ್ಲಿ ಮೂರನೇ ರ‍್ಯಾಂಕ್

ಮಂಜೇಶ್ವರ: ಮಂಗಳೂರು ವಿಶ್ವವಿದ್ಯಾಲಯ



ನಡೆಸಿದ ಬಿ.ಎಡ್ ಪರೀಕ್ಷೆಯಲ್ಲಿ ಪಡೀಲ್ ಅಮೃತ ಬಿ.ಎಡ್ ಕಾಲೇಜಿನ ವಿದ್ಯಾರ್ಥಿನಿ ಶಿವಾನಿ ಬಿ.ಎಸ್. 3ನೇ ರ‍್ಯಾಂಕ್ ಗಳಿಸಿದ್ದಾರೆ. ಅವರು ತೂಮಿನಾಡು ಕುಂಜತ್ತೂರು ನಿವಾಸಿ ಬಿ.ಕೆ.ಶಶಿಕುಮಾರ್ ಹಾಗೂ ವೀಣಾಕುಮಾರಿ ದಂಪತಿಯ ಪುತ್ರಿ.

ಮಾ.27: ಢಾಕಾ ಅದಾಲತ್

ಕಾಸರಗೋಡು: ರಾಜ್ಯ ಅಂಚೆ ವೃತ್ತದ ಕಾಸರಗೋಡು ಜಿಲ್ಲೆಯೂ ಸೇರಿದಂತೆ ಉತ್ತರ ಭಾಗದ ಢಾಕಾ ಅದಾಲತ್ ಹಮ್ಮಿಕೊಳ್ಳಲಾಗಿದೆ. ಅದಾಲತ್ ಮಾ.27 ರಂದು ಬೆಳಗ್ಗೆ 11 ಗಂಟೆಗೆ ಕೋಝಿಕ್ಕೋಡ್‌ನ ನಡಕ್ಕಾವುನಲ್ಲಿರುವ ಪೋಸ್ಟ್ ಮಾಸ್ಟರ್ ಜನರಲ್ ಕಚೇರಿಯಲ್ಲಿ ನಡೆಯಲಿದೆ. ಇದರಲ್ಲಿ ಕಾಸರಗೋಡಿನಿಂದ ಪಾಲಕ್ಕಾಡ್ ವರೆಗಿನ ಕಂದಾಯ ಜಿಲ್ಲೆಗಳು ಸೇರಿವೆ. ಲೆಟರ್ ಪೋಸ್ಟ್, ಮನಿ ಆರ್ಡರ್ , ಪಾರ್ಸೆಲ್, ಸ್ಪೀಡ್ ಪೋಸ್ಟ್ ಮತ್ತು ಉಳಿತಾಯ ಬ್ಯಾಂಕ್ ಸೇವೆಗಳಿಗೆ ಸಂಬಂಧಿಸಿದ ದೂರುಗಳನ್ನು ಶೀಜಾ ಪ್ರಭಾಕರನ್, ಸಹಾಯಕ ನಿರ್ದೇಶಕಿ, ಪೋಸ್ಟ್ ಮಾಸ್ಟರ್ ಜನರಲ್ ಕಚೇರಿ, ಉತ್ತರ ಭಾಗ, ನಡಕ್ಕಾವು, ಕೋಝಿಕ್ಕೋಡ್ – 673011 ಈ ವಿಳಾಸಕ್ಕೆ ಮಾ.25ರೊಳಗೆ ಲಭಿಸುವಂತೆ ಕಳುಹಿಸಲು ಕೋರಲಾಗಿದೆ.

ಸಾರಿಗೆ ಸಂಚಾರ ನಿಯಂತ್ರಣ

ಕಾಸರಗೋಡು: ಚೌಕಿ – ಉಳಿಯತ್ತಡ್ಕ – ಎಸ್‌ಪಿ ನಗರ – ಹಿದಾಯತ್ ನಗರ – ಕೋಪ್ಪ ರಸ್ತೆ ಬಿಎಂ ಕಾಮಗಾರಿ ನಡೆಯುತ್ತಿದ್ದು, ಈ ನಿಟ್ಟಿನಲ್ಲಿ ಮಾ.24 ರಿಂದ 28ರ ವರೆಗೆ ಈ ರಸ್ತೆಯಲ್ಲಿ ಸಾರಿಗೆ ಸಂಚಾರ ನಿಷೇಧಿಸಲಾಗುವುದು. ಈ ರಸ್ತೆಯ ಮೂಲಕ ವಿದ್ಯಾನಗರಕ್ಕೆ ಹೋಗುವ ವಾಹನಗಳು ಹಿದಾಯತ್ ನಗರ – ಪನ್ನಿಪ್ಪಾರ ಮೂಲಕ ಮತ್ತು ಉಳಿಯತ್ತಡ್ಕಕ್ಕೆ ತೆರಳುವ ವಾಹನಗಳು ಎಸ್‌ಪಿ ನಗರ ಮೂಲಕ ಸಾಗಬೇಕು ಎಂದು ಲೋಕೋಪಯೋಗಿ ರಸ್ತೆ ಇಲಾಖೆಯ ಸಹಾಯಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಎಲ್‌ಒ ಸಾವು: ಅಂತಿಮ ನಮನ ಸಲ್ಲಿಸಿದ ಡೀಸಿ

ಕಾಸರಗೋಡು: ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಮೊಗ್ರಾಲ್ ಪುತ್ತೂರು ನದಿಯಲ್ಲಿ ಮೃತಪಟ್ಟ ಶಿಕ್ಷಕ ಮತ್ತು ಬೂತ್ ಹೆಡ್ ಆಫೀಸರ್ (ಬಿಎಲ್‌ಒ) ಬಿ.ಮುಹಮ್ಮದ್ ಸವದ್ ಅವರ ಮೊಗ್ರಾಲ್ ಪುತ್ತೂರು ಕಡವಂನಲ್ಲಿರುವ ಮನೆಗೆ ಶನಿವಾರ ತೆರಳಿ ಅಂತಿಮ ನಮನ ಸಲ್ಲಿಸಿ ಶ್ರದ್ಧಾಂಜಲಿ ಸೂಚಿಸಿದರು. ಕುಟುಂಬ ಸದಸ್ಯರಿಗೆ ಜಿಲ್ಲಾಧಿಕಾರಿಗಳು ಸಂತಾಪ ವ್ಯಕ್ತಪಡಿಸಿದರು. ಪೊಲೀಸರು ಸಮಗ್ರವಾಗ ತನಿಖೆ ನಡೆಸಿ ಸವದ್ ಅವರ ಕುಟುಂಬಕ್ಕೆ ಅರ್ಹವಾದ ಎಲ್ಲಾ ಪ್ರಯೋಜನಗಳನ್ನು ಪಡೆಯುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಭರವಸೆ ನೀಡಿದರು. ಈ ಸಂದರ್ಭ ಕಾಸರಗೋಡು ಆರ್‌ಡಿಒ ಬಿನು ಜೋಸೆಫ್, ತಹಶೀಲ್ದಾರ್ ಶೆರಿಲ್ ಬಾಬು, ಗ್ರಾಮಾಧಿಕಾರಿ ಜಯಪ್ರಕಾಶ್ ಜೊತೆಗಿದ್ದರು.



ಶ್ರೀ ವಿಷ್ಣುಮೂರ್ತಿ ಸೇವಾ ಸಮಿತಿ ಆಟ್ಟೆಗೋಳಿ ವಿಷ್ಣು ನಗರ ಇದರ ಆಶ್ರಯದಲ್ಲಿ 51ನೇ ವರ್ಷದ ಶ್ರೀ ವಿಷ್ಣುಮೂರ್ತಿ ದೈವದ ಬಯಲು ಕೋಲ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು.

ಕಾರಡ್ಕ ಗ್ರಾ.ಪಂ.ವ್ಯಾಪ್ತಿಯಲ್ಲಿ ನಡೆದ ಬಿಜೆಪಿ ಪದಾಧಿಕಾರಿಗಳ ಸಭೆ | ಎಂ.ಎಲ್.ಅಶ್ವಿನಿ ಆರೋಪ

ತ್ರಿವಳಿ ಇಂಜಿನ್ ಆಡಳಿತವಿದ್ದರೂ ಅಭಿವೃದ್ಧಿಗೊಳ್ಳದ ಕಾಸರಗೋಡು



ಕಾಸರಗೋಡು: ದಶಕಗಳಿಂದ ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ರಾಷ್ಟ್ರೀಯ, ರಾಜ್ಯ ಮತ್ತು ಸ್ಥಳೀಯಾಡಳಿತ ಸಂಸ್ಥೆಗಳು ಹಾಗೂ ವಿಧಾನಸಭೆಯಲ್ಲಿ ನಿರಂತರ ಪ್ರಾತಿನಿಧ್ಯ ಹೊಂದಿರುವ ಮುಸ್ಲಿಂಲೀಗ್ (ಐಕ್ಯರಂಗ)ನ ತ್ರಿವಳಿ ಇಂಜಿನ್ ಆಡಳಿತದಲ್ಲಿ ಅಭಿವೃದ್ಧಿ ಯೋಜನೆ ಜಾರಿಗೊಳಿಸಲು ಸಾಧ್ಯವಾಗಿಲ್ಲ, ಮಾತ್ರವಲ್ಲದೆ ಈ ಮೂಲಕ ಜನರನ್ನು ಸಂಪೂರ್ಣ ವಂಚಿಸಲಾಗಿದೆ ಎಂದು ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಆರೋಪಿಸಿದ್ದಾರೆ.

ಕಾರಡ್ಕ ಗ್ರಾ.ಪಂ. ವ್ಯಾಪ್ತಿಯ ಮುಳ್ಳೇರಿಯದಲ್ಲಿ ಶನಿವಾರ ಆಯೋಜಿಸಲಾಗಿದ್ದ ಬಿಜೆಪಿ ಪದಾಧಿ ಕಾರಿಗಳ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲಾ ರಂಗಗಳಲ್ಲಿ ಹಿಂದುಳಿದೆ

ಮುಸ್ಲಿಂಲೀಗ್ ಮತ್ತು ಅದರ ಮಿತ್ರ ಪಕ್ಷವಾದ ಕಾಂಗ್ರೆಸ್ ಪಕ್ಷವು ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಅಥವಾ ಕುಡಿಯುವ ನೀರು ಹಾಗೂ ರಸ್ತೆಗಳು ಸೇರಿದಂತೆ ಮೂಲಭೂತ ಅಗತ್ಯ ಪೂರೈಸುವ ನಿಟ್ಟಿನಲ್ಲಿ ನಿರ್ಲಕ್ಷ್ಯ ವಹಿಸಿವೆ. ಇದರಿಂದಾಗಿ ಕಾಸರಗೋಡು ವಿಧಾನಸಭಾ ಕ್ಷೇತ್ರವು ಎಲ್ಲಾ ರಂಗಗಳಲ್ಲೂ ತೀರಾ ಹಿಂದುಳಿಯುವಂತಾಗಿದೆ ಎಂದು ಅವರು ಗಮನ ಸೆಳೆದರು.

ಬಿಜೆಪಿ ಕಾರಡ್ಕ ಪಂಚಾಯತ್ ಸಮಿತಿ ಅಧ್ಯಕ್ಷ ವಸಂತ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷೆ ಹಾಗೂ ಕಾರಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷೆ ಎಂ.ಜನನಿ, ಬದಿಯಡ್ಕ ಮಂಡಲಾಧ್ಯಕ್ಷ ಗೋಪಾಲಕೃಷ್ಣ ಮುಂಡೋಳುಮೂಲೆ, ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀಧರ ಎಂ. ಬೆಳ್ಳೂರು, ರಾಜ್ಯ ಪರಿಷತ್ ಸದಸ್ಯ ಶಿವಕೃಷ್ಣ ಭಟ್ ಬಳಕ್ಕ ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು.

ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಮತಯಾಚನೆ



ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಶನಿವಾರ ವಿವಿಧ ಕಡೆಗಳಲ್ಲಿ ಮತಯಾಚಿಸಿದರು. ಅಭ್ಯರ್ಥಿಯ ಪ್ರವಾಸದ ಅಂಗವಾಗಿ ಬದಿಯಡ್ಕ, ಕುಂಬ್ಡಾಜೆ, ಕಾರಡ್ಕ, ಬೆಳ್ಳೂರು, ಚೆಂಗಳ ಮೊದಲಾದ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಜರಗಿದ ವಿವಿಧ ಸಭೆಗಳಲ್ಲಿ ಪಾಲ್ಗೊಂಡು ಮಾತನಾಡಿದರು. ಅಲ್ಲದೆ ಭರಣಿ ಮಹೋತ್ಸವ ನಡೆಯುತ್ತಿರುವ ಕಾಸರಗೋಡು ಕಸಬಾ ಕಡಪ್ಪುರದ ಶ್ರೀ ಕುರುಂಬಾ ಭಗವತಿ ದೇವಸ್ಥಾನ ಮತ್ತು ಪಾಡಿ ಬಾರಿಕ್ಕಾಟ್ ಶ್ರೀ ವಯನಾಟ್ ಕುಲವನ್ ದೈವಂಕಟ್ಟು ಮಹೋತ್ಸವಕ್ಕೆ ಭೇಟಿ ನೀಡಿದರು.

ಎಲ್ಲಾ ವಲಯಗಳಲ್ಲೂ ಕಾಸರಗೋಡು ಹಿಂದಿದೆ

ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯೇ ಬಹಳಷ್ಟಿದೆ. ಮಾತ್ರವಲ್ಲದೆ ಎಲ್ಲಾ ರಂಗಗಳಲ್ಲೂ ಕಾಸರಗೋಡು ಅತ್ಯಂತ ಹಿಂದುಳಿದಿದೆ. ಆರೋಗ್ಯ, ಶಿಕ್ಷಣ, ಉದ್ಯೋಗ ಮೊದಲಾದ ವಲಯಗಳು ನೆಲಕಚ್ಚಿವೆ. ಕಾಸರಗೋಡಿನ ಸಂಸದರು, ಶಾಸಕರು ಹಾಗೂ ಇಲ್ಲಿನ ಇತರ ಜನಪ್ರತಿನಿಧಿಗಳ ಬೇಜವಾಬ್ದಾರಿಯೇ ಇದಕ್ಕೆ ಕಾರಣವಾಗಿದೆ. ಕೇಂದ್ರ, ರಾಜ್ಯ , ಸ್ಥಳೀಯಾಡಳಿತ ಸಂಸ್ಥೆಗಳ ಅನುದಾನಗಳನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಲು ಇಲ್ಲಿನ ಶಾಸಕರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಆದ್ದರಿಂದ ಈ ಬಾರಿ ಕ್ಷೇತ್ರದ ಮತದಾರರು ಭಾರೀ ಬದಲಾವಣೆ ಬಯಸಿದ್ದು, ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿ ವಿಜಯಗೊಳಿಸುವ ನಿಟ್ಟಿನಲ್ಲಿ ಶ್ರಮಿಸಲಿದ್ದಾರೆ ಎಂದರು ಎಂ.ಎಲ್.ಅಶ್ವಿನಿ ಹೇಳಿದರು.

ಚನ್ನಿಕುಡೇಲು ತರವಾಡಿನಲ್ಲಿ ಪ್ರತಿಷ್ಠಾ ವಾರ್ಷಿಕೋತ್ಸವ, ವಾರ್ಷಿಕ ಮಹಾಸಭೆ



ಮಂಜೇಶ್ವರ: ಶ್ರೀ ನಾಗಬ್ರಹ್ಮ, ಮಲರಾಯಿ ಮತ್ತು ಪರಿವಾರ ದೈವಗಳ ಮೂಲಸ್ಥಾನ ಚನ್ನಿಕುಡೇಲು ತರವಾಡು – ಕುಲಾಲ ಉಪ್ಪಣ್ಣ ಬರಿ ಇಲ್ಲಿ ಧರ್ಮದೈವ ಶ್ರೀ ಮಲರಾಯಿ ಮತ್ತು ಪರಿವಾರ ದೈವಗಳ ಪ್ರತಿಷ್ಠಾ ವಾರ್ಷಿಕೋತ್ಸವ ಕಾರ್ಯಕ್ರಮ ಹಾಗೂ ನಾಗಬ್ರಹ್ಮ, ಮಲರಾಯಿ ಮತ್ತು ಪರಿವಾರ ದೈವಗಳ ಮೂಲಸ್ಥಾನ ಸಮಿತಿಯ ವಾರ್ಷಿಕ ಮಹಾಸಭೆಯು ಜರಗಿತು.

ತರವಾಡಿನ ತಂತ್ರಿಗಳಾದ ಬ್ರಹ್ಮಶ್ರೀ ವೇ.ಮೂ.ತಂತ್ರಿ ಉರ್ಮಿ ರಾಮ್‌ಪ್ರಸಾದ್ ನಲ್ಲೂರಾಯ ಮಾತನಾಡಿ, ಚನ್ನಿಕುಡೇಲು ತರವಾಡಿನಲ್ಲಿ ಕ್ಷಿಪ್ರ ಅಭಿವೃದ್ಧಿ ಕಾರ್ಯ ನಡೆಯುತ್ತಾ ಬಂದಿವೆ. ಈ ಮೂಲಕ ಕುಟುಂಬ ಉನ್ನತಿ ಹಾದಿಯಲ್ಲಿ ಸಾಗುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ತರವಾಡಿನ ಅಧ್ಯಕ್ಷ ಚೆನ್ನಪ್ಪ ಕುಲಾಲ್ ಎರುಗಲ್ಲು ಮಾತನಾಡಿ, ಮುಂದಿನ ವರ್ಷ ಶ್ರೀ ದೈವಗಳ ಪ್ರತಿಷ್ಠೆ ನಡೆದು 12 ವರ್ಷಗಳು ಆಗುತ್ತಿದ್ದು ಹಲವು ದೈವಿಕ – ಅಭಿವೃದ್ಧಿ ಕಾರ್ಯ ನಡೆಯಬೇಕಿದ್ದು, ಕುಟುಂಬಸ್ಥರ ಸಹಕಾರ ಕೋರಿದರು.

ಮೇ 24ರಂದು ಜರಗಲಿರುವ ಮೃತ್ಯುಂಜಯ ಹೋಮ, ಹರಿಸೇವೆ, ಕಾಲಾವಧಿ ತಂಬಿಲದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಲಾಯಿತು. ಸಮಿತಿ ಕಾರ್ಯದರ್ಶಿ ಕೃಷ್ಣ ಕಳತ್ತೂರು ವಾರ್ಷಿಕ ಲೆಕ್ಕಪತ್ರ ಮಂಡಿಸಿದರು. ಗೋಪಾಲಕೃಷ್ಣ ಕುಲಾಲ್ ವಾಂತಿಚ್ಚಾಲ್ ಮುಂದಿನ ವರ್ಷ ನಡೆಯುವ ಕಾರ್ಯ ಬಗ್ಗೆ ಮಾಹಿತಿ ನೀಡಿದರು. ಹೇರೂರು ತಾಡ ಶ್ರೀ ಮಹಾವಿಷ್ಣು ದೇವಳ ಶ್ರೀ ದುಗ್ಗಲಾಯ ದೈವದ ಪಾತ್ರಿ ಮಾರಪ್ಪ ಪಾರೆಕೋಡಿ, ಧರ್ಮ ದೈವ ಶ್ರೀ ಮಲರಾಯಿ ದೈವದ ಪ್ರಧಾನ ಕರ್ಮಿ ನಾರಾಯಣ ಮೂಲ್ಯ ಕೊಮ್ಮುಂಜ, ಕುಟುಂಬದ ಹಿರಿಯರಾದ ಮಂಜಪ್ಪ ಮೂಲ್ಯ ಪರಪ್ಪು, ರಾಮಣ್ಣ ಮೂಲ್ಯ ದಳಿಕುಕ್ಕು, ಈಶ್ವರ ಉಪ್ಪಿನೆ, ಶಂಕರ ಮೂಲ್ಯ ಬೆಜಪ್ಪೆ, ಐತ್ತಪ್ಪ ಕುಲಾಲ್ ಮಂಡೆಕಾಪು ಇದ್ದರು. ತೇಜಕುಮಾರ್ ಕುಲಾಲ್ ನಾಗತೀರ್ಥ ವಂದಿಸಿ, ಸುಂದರ ಕುಲಾಲ್ ಕಟ್ಟಡ್ಕ ನಿರೂಪಿಸಿದರು.

ಚುನಾವಣಾ ಆಯೋಗದಿಂದ ನೇಮಕವಾದ ವೀಕ್ಷಕರಿಂದ ಮಾಧ್ಯಮ ಕೇಂದ್ರಕ್ಕೆ ಭೇಟಿ



ಕಾಸರಗೋಡು: ವಿಧಾನಸಭಾ ಚುನಾವಣೆ ಅಂಗವಾಗಿ ಕಾಸರಗೋಡು ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಕೇಂದ್ರ ಚುನಾವಣಾ ಆಯೋಗದಿಂದ ನೇಮಿಸಲ್ಪಟ್ಟ ವೀಕ್ಷಕರು ಜಿಲ್ಲಾ ಮಾಹಿತಿ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಧ್ಯಮ ಕೇಂದ್ರಕ್ಕೆ ಭೇಟಿ ನೀಡಿದರು.

ಉದುಮ, ಕಾಞಂಗಾಡು ಮತ್ತು ತೃಕ್ಕರೀಪ್ಪುರ ಕ್ಷೇತ್ರಗಳ ಸಾಮಾನ್ಯ ವೀಕ್ಷಕ ಜ್ಞಾನೇಶ್ವರ ಕೊಂಡಿಭಾವು ಖಿಲಾರಿ, ಮಂಜೇಶ್ವರ ಮತ್ತು ಕಾಸರಗೋಡು ಕ್ಷೇತ್ರಗಳ ಸಾಮಾನ್ಯ ವೀಕ್ಷಕ ವಿಜಯ್ ಬಾಲಕೃಷ್ಣ ವಾಘ್ಮಾರ್, ಜಿಲ್ಲಾ ಪೊಲೀಸ್ ವೀಕ್ಷಕ ಅಶುತೋಷ್ ಕುಮಾರ್, ಕಾಸರಗೋಡು, ಮಂಜೇಶ್ವರಂ, ಉದುಮ ಕ್ಷೇತ್ರಗಳ ವೆಚ್ಚ ವೀಕ್ಷಕ ನಿಶಾಂತ್ ಅಗರ್ವಾಲ್, ಕಾಞಂಗಾಡು, ತೃಕ್ಕರೀಪ್ಪುರ ಕ್ಷೇತ್ರಗಳ ವೆಚ್ಚ ವೀಕ್ಷಕ ಅಜಯ್ ಕುಮಾರ್ ಧಾಡಿಯಾ ಮಾಧ್ಯಮ ಕೇಂದ್ರಕ್ಕೆ ಸಂದರ್ಶನವಿತ್ತರು.

ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಮತ್ತು ಜಿಲ್ಲಾ ಪೊಲೀಸ್ ಮುಖ್ಯಸ್ಥ ವಿಜಯ್ ಭರತ್ ರೆಡ್ಡಿ ಉಪಸ್ಥಿತರಿದ್ದರು. ಚುನಾವಣಾ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್, ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್, ವೆಚ್ಚ ನೋಡಲ್ ಅಧಿಕಾರಿ ಪಿ.ಚಂದ್ರನ್, ವೀಕ್ಷಕ ನೋಡಲ್ ಅಧಿಕಾರಿ ಜೆ.ಕೆ. ಜಿಜೇಶ್ ಕುಮಾರ್, ಸಹಾಯಕ ಸಂಪಾದಕಿ ಎ.ಪಿ.ದಿಲ್ನಾ, ಸಹಾಯಕ ಮಾಹಿತಿ ಅಧಿಕಾರಿ ಎಸ್.ಚಿಲಂಕಾ, ಜಿಲ್ಲಾ ಮಾಹಿತಿ ಕಚೇರಿ ಸಿಬ್ಬಂದಿಗಳಿದ್ದರು. ನಂತರ ವೀಕ್ಷಕರು ನಿಯಂತ್ರಣ ಕೊಠಡಿಗೆ ಭೇಟಿ ನೀಡಿದರು.

ಸ್ಥಿರ ಕಣ್ಗಾವಲು ತಂಡ ಸದಸ್ಯರ ಭೇಟಿ

ಕಾಞಂಗಾಡು ಮತ್ತು ತೃಕ್ಕರೀಪ್ಪುರ ಕ್ಷೇತ್ರಗಳ ವೆಚ್ಚ ವೀಕ್ಷಕ ಅಜಯ್ ಕುಮಾರ್ ಧಾಡಿಯಾ ಅವರು ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ಒಳವಾರ ಮತ್ತು ಕಾಲಿಕ್ಕಡವುಗಳಲ್ಲಿನ ಸ್ಥಿರ ಕಣ್ಗಾವಲು ತಂಡದ ಸದಸ್ಯರನ್ನು ಭೇಟಿ ಮಾಡಿದರು. ಪೊಲೀಸ್ ವೀಕ್ಷಕ ಅಶುತೋಷ್ ಕುಮಾರ್ ಮಂಜೇಶ್ವರ ಸ್ಥಿರ ಕಣ್ಗಾವಲು ತಂಡ ಮತ್ತು ಮಂಜೇಶ್ವರ ಪೊಲೀಸ್ ಠಾಣೆಗೆ ಸಂದರ್ಶನ ನೀಡಿ ಪರಿಶೀಲನೆ ನಡೆಸಿದರು.

ಕರಿಚ್ಚೇರಿ ಶ್ರೀ ವೆಂಕಟ್ರಮಣ ದೇವಸ್ಥಾನ ಬ್ರಹ್ಮಕಲಶ: ಹಸಿರುವಾಣಿ ಮೆರವಣಿಗೆ



ಕಾಸರಗೋಡು: ಕರಿಚ್ಚೇರಿ ದೀಪಸ್ತಂಭ ಶ್ರೀ ವೆಂಕಟ್ರಮಣ ದೇವಸ್ಥಾನದ ನವೀಕರಣ–ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಮಹೋತ್ಸವ ಅಂಗವಾಗಿ ಕರಿಚ್ಚೇರಿಯ ನಿಟ್ಟಾಂಕೋಟ್ ಭಗವತಿ ದೇವಸ್ಥಾನ ಮತ್ತು ಪೆರ್ಲಡ್ಕಂ ಶ್ರೀ ಗೋಪಾಲಕೃಷ್ಣ ದೇವಳದಿಂದ ಹಸಿರುವಾಣಿ ಸಮರ್ಪಣಾ ಮೆರವಣಿಗೆ ಜರಗಿತು.

ಬ್ರಹ್ಮ ಕಲಶ ಮಹೋತ್ಸವ ಸಮಿತಿ ಅಧ್ಯಕ್ಷ ವಕೀಲ ಎ.ಬಾಲಕೃಷ್ಣನ್ ನಾಯರ್, ನಿರ್ಮಾಣ ಸಮಿತಿ ಅಧ್ಯಕ್ಷ ಕೆ.ಗಂಗಾಧರನ್ ನಾಯರ್ ಮುನಿಕ್ಕಲ್, ಟ್ರಸ್ಟಿ ಆಡಳಿತ ಮಂಡಳಿ ಅಧ್ಯಕ್ಷ ಕೆ.ಮೋಹನನ್ ನಾಯರ್, ಬ್ರಹ್ಮಕಲಶ ಮಹೋತ್ಸವ ಸಮಿತಿ ಸಂಚಾಲಕ ರವೀಂದ್ರನ್ ಕರಿಚ್ಚೇರಿ, ಪ್ರಚಾರ ಸಮಿತಿ ಅಧ್ಯಕ್ಷ ಎ.ದಿವಾಕರನ್ ಕುಂಜಿತೋಡ್, ಕೆ.ಗೋಪಾಲಕೃಷ್ಣನ್ ಕರಿಚ್ಚೇರಿ, ಬೇಬಿ ಬಾಲನ್ ನಿಟ್ಟಂಕೋಟ್ ಮೆರವಣಿಗೆ ನೇತೃತ್ವ ವಹಿಸಿದ್ದರು.

ಮಾ.25ರಂದು ಬೆಳಗ್ಗೆ 108 ತೆಂಗಿನ ಕಾಯಿ ಮಹಾಗಣಪತಿ ಹೋಮ, ನಂತರ 9.29 ರಿಂದ 11.32ರ ಶುಭ ಮುಹೂರ್ತದಲ್ಲಿ ಶ್ರೀ ದೇವರ ಪ್ರತಿಷ್ಠೆ ನಂತರ ಉಪ ದೇವತೆಗಳಾದ ಗಣಪತಿ ಶಾಸ್ತಾರ, ದುರ್ಗಾ ದೇವಿ, ಮತ್ತು ಉಪ ದೇವತೆಗಳಾದ ವಿಷ್ಣು ಮೂರ್ತಿಯ ಪ್ರತಿಷ್ಠೆ ಹೊರ ಗೋಪುರದಲ್ಲಿ ಚಾಮುಂಡಿ ನಾಗ ಮತ್ತು ಬ್ರಹ್ಮ ರಾಕ್ಷಸರ ಪ್ರತಿಷ್ಠಾ ಕಾರ್ಯಕ್ರಮ ನಡೆಯಲಿದೆ.



ಕಾಸರಗೋಡು ನಗರದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಜಾತ್ರಾ ಮಹೋತ್ಸವದ ಸಂದರ್ಭ ಶ್ರೀ ದೇವರ ಅವಭೃತ ಸ್ನಾನದ ಆರಾಟು ಕೊಳವನ್ನು ಎಸ್‌ವಿಟಿ ಫ್ರೆಂಡ್ ಸರ್ಕಲ್‌ನ ಕಾರ್ಯಕರ್ತರು ಶ್ರಮದಾನ ಮೂಲಕ ಶುಚಿಗೊಳಿಸಿದರು. ಸಂಸ್ಥೆಯ ಸ್ಥಾಪಕಾಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ನಗರಸಭಾ ಕೌನ್ಸಿಲರ್ ಕೆ.ಎನ್. ರಾಮಕೃಷ್ಣ ಹೊಳ್ಳ, ಗೋಕುಲ್, ರಘುರಾಜ ಅಗ್ಗಿತ್ತಾಯ, ರವಿ ಕೇಸರಿ, ನಾಮದೇವ ಪೈ, ಕೆ.ವಿ.ಶೇಷಾದ್ರಿ ಹೊಳ್ಳ ಕಿಶೋರ್ ಎಸ್‌ವಿಟಿ ತುಳಸಿ, ಬಾಲಕೃಷ್ಣ ಪಡ್ರೆ, ಕಿಶೋರ್ ಬಿ.ಪಿ., ವಸಂತ್ ಕೆರೆಮನೆ, ಜಪ್ಪ ಪ್ರಕಾಶ್, ಶಂಕರ, ಸೀನಪ್ಪ ಪಡ್ರೆ ಭಾಗವಹಿಸಿದ್ದರು.



ಐಲ ಶ್ರೀ ದುರ್ಗಾಪರಮೇಶ್ವರಿ ಕಲಾ ಸಂಘದ 47ನೇ ವರ್ಷದ ಭಜನೋತ್ಸವ ಕಾರ್ಯಕ್ರಮ ಶುಕ್ರವಾರ ಸೂರ್ಯೋದಯ ದಿಂದ ಸೂರ್ಯಹಸ್ತಮಾನದ ತನಕ ಐಲ ಶ್ರೀ ಕ್ಷೇತ್ರದಲ್ಲಿ ಜರಗಿತು. ಶ್ರೀ ಕ್ಷೇತ್ರದ ಪ್ರಧಾನ ಅರ್ಚಕರ ಉಪಸ್ಥಿತಿಯಲ್ಲಿ ಶ್ರೀ ಕ್ಷೇತ್ರದ ಸೇವಾ ಸಮಿತಿ ಉಪಾಧ್ಯಕ್ಷ ವಸಂತ್‌ಕುಮಾರ್ ಮಯ್ಯ ತಿಂಬರ ದೀಪ ಪ್ರಜ್ವಲನೆಗೊಳಿಸಿ ಭಜನೆಗೆ ಚಾಲನೆ ನೀಡಿದರು. ಬಳಿಕ ವಿವಿಧದ ತಂಡಗಳಿಂದ ಭಜನಾ ಕಾರ್ಯಕ್ರಮ ನಡೆಯಿತು. ಈ ವೇಳೆ ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು, ಊರ ಹಿರಿಯರು ಉಪಸ್ಥಿತರಿದ್ದರು.

ಅಡೂರು ಶ್ರೀ ದೇವಳ ಜಾತ್ರಾ ಸಂಭ್ರಮ: ಜನಮನ ಗೆದ್ದ ಸಾಂಸ್ಕೃತಿಕ ಕಲಾ ವೈಭವ



- ಗುರುರಾಜ್ ಕಾಸರಗೋಡು ಅವರ ಸಂಯೋಜನೆ ಹಾಗೂ ನಿರೂಪಣೆಯೊಂದಿಗೆ ಜರಗಿದ ಸಾಂಸ್ಕೃತಿಕ ಕಾರ್ಯಕ್ರಮ
- ಸಂಸ್ಥೆಯ ಕಲಾವಿದರಿಗೆ ದೇವಾಲಯದಿಂದ ಗೌರವ ಸಮರ್ಪಣೆ

ಮುಳ್ಳೇರಿಯ: ಅಡೂರು ಮಹಾತೋಭಾರ ಶ್ರೀ ಮಹಾಲಿಂಗೇಶ್ವರ ಮಹಾವಿಷ್ಣು ವಿನಾಯಕ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರೋತ್ಸವವು ಹಲವು ಧಾರ್ಮಿಕ, ವೈದಿಕ, ಸಾಂಸ್ಕೃತಿಕ ವಿಧಿ ವಿಧಾನಗಳಿಂದ ಅತ್ಯಂತ ವಿಜೃಂಭಣೆಯಿಂದ ಸಂಪನ್ನಗೊಂಡಿತು. ಈ ಮಹೋತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆಯ ವತಿಯಿಂದ ಸಾಂಸ್ಕೃತಿಕ ಕಲಾ ವೈಭವವು ಪ್ರಸ್ತುತಗೊಂಡು ಜನಮನ ಗೆದ್ದಿತು.

ಗುರುರಾಜ್ ಕಾಸರಗೋಡು ಅವರ ಸಂಯೋಜನೆ ಹಾಗೂ ನಿರೂಪಣೆಯೊಂದಿಗೆ ಜರಗಿದ ಕಾರ್ಯಕ್ರಮದಲ್ಲಿ ವರ್ಷಾ ಶೆಟ್ಟಿ, ಧೀಕ್ಷಾ ಕುಲಾಲ್, ಭಾನ್ವಿ ಕುಲಾಲ್, ಭವಿಷ್ಯ ಪೂಜಾರಿ, ಸಾನ್ವಿ ಆರ್.ರೈ, ತೇಜೂಷಾ, ಶ್ರಾವ್ಯ ವಿ.ಆರ್., ತ್ರಿಷಾ ಅಡಕಳಕಟ್ಟೆ, ಆನ್ಮೇತಾ ಶೆಟ್ಟಿ ಕೋಡಿಜಾಲ್, ಸುಚಿತಾ, ಸಾಯಿ ಶರಣ್, ಶಿಯಾ ಶರಣ್, ಹರೀಶ್ ಪಂಜಿಕಲ್ಲು ಮುಂತಾದ ಸಂಸ್ಥೆಯ ಅಪ್ರತಿಮ ಕಲಾವಿದರು ಹಲವು ವಿಧದ ಕಲಾ ಪ್ರಕಾರಗಳನ್ನು ಪ್ರಸ್ತುತಗೊಳಿಸಿದರು. ದೇವಸ್ಥಾನದ ವತಿಯಿಂದ ಸಂಸ್ಥೆಗೆ ಶ್ರೀ ದೇವರ ಪ್ರಸಾದ ನೀಡಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಸ್ಥೆಯ ಕಲಾವಿದರಿಗೆ ದೇವಾಲಯದ ಆಡಳಿತ ಮಂಡಳಿಯ ಪ್ರಮುಖರಾದ ಗಂಗಾಧರ ಕಾಂತಡ್ಕ, ಬಾಲಸುಬ್ರಹ್ಮಣ್ಯ ಭಟ್ ಅವರ ಉಪಸ್ಥಿತಿಯಲ್ಲಿ ಸಂಸ್ಥೆಯ ಆಶ್ರಯದಲ್ಲಿ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಮಂಜೇಶ್ವರ ಬ್ಲಾಕ್ ರಿಸೋರ್ಸ್ ಸೆಂಟರ್ ನೇತೃತ್ವದಲ್ಲಿ ಇಫ್ತಾರ್ ಕೂಟ ಸಮಾರಂಭ



ಮಂಜೇಶ್ವರ: ಮಂಜೇಶ್ವರ ಬ್ಲಾಕ್ ರಿಸೋರ್ಸ್ ಸೆಂಟರ್ (ಬಿಆರ್‌ಸಿ) ಯಿಂದ ಇಫ್ತಾರ್ ಸಮಾರಂಭ ನಡೆಯಿತು. ಮಂಜೇಶ್ವರ ಸಮಗ್ರ ಶಿಕ್ಷಣ ಕಾಸರಗೋಡು ಬಿಆರ್‌ಸಿ ಮಂಜೇಶ್ವರ ಇದರ ನೇತೃತ್ವದಲ್ಲಿ ಶಾಂತಿ ಮತ್ತು ಸಹೋದರತ್ವ ಸಂದೇಶವನ್ನು ಸಾರುವ ಇಫ್ತಾರ್ ಕೂಟ ಸಮಾರಂಭ ಮತ್ತು ಸಾಮೂಹಿಕ ಉಪವಾಸ ಮುಕ್ತಾಯವನ್ನು ಆಯೋಜಿಸಲಾಯಿತು.

ಧಾರ್ಮಿಕ ಸೌಹಾರ್ದತೆ, ಸಹೋದರತ್ವ ಮತ್ತು ಮಾನವೀಯ ಮೌಲ್ಯಗಳನ್ನು ಉತ್ತೇಜಿಸಿದ ಕಾರ್ಯಕ್ರಮ ಸಂಘಟನಾ ಶ್ರೇಷ್ಠತೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಯಿಂದ ವಿಶೇಷ ಗಮನ ಸೆಳೆಯಿತು. ಕಾರ್ಯಕ್ರಮವನ್ನು ಮಂಗಲ್ಪಾಡಿ ಗ್ರಾಮ ಪಂಚಾಯತ್ ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಿಮಾನ್ ಉದ್ಘಾಟಿಸಿದರು. ಈ ಸಂದರ್ಭ ಕಾಸರಗೋಡು ಜಿಲ್ಲಾ ಶಿಕ್ಷಣ ಉಪನಿರ್ದೇಶಕ ಇಬ್ರಾಹಿಂ ಬಿ. ಅತಿಥಿಯಾಗಿದ್ದರು. ಮಂಜೇಶ್ವರ ಉಪಜಿಲ್ಲಾ ಶಿಕ್ಷಣಾಧಿಕಾರಿ ಜಾರ್ಜ್ ಕ್ರಾಸ್ತಾ ಸಿ.ಎಚ್. ಅಧ್ಯಕ್ಷತೆ ವಹಿಸಿದ್ದರು. ಸಮಗ್ರ ಶಿಕ್ಷಣ ಕಾಸರಗೋಡು ಜಿಲ್ಲಾ ಪ್ರೋಗ್ರಾಂ ಅಧಿಕಾರಿಗಳಾದ ಪ್ರಕಾಶನ್ ಟಿ., ಅಗಸ್ಟಿಯನ್ ಬರ್ನಾರ್ಡ್, ಚೆರುವತ್ತೂರು ಬಿಪಿಸಿ ಸುಬ್ರಹ್ಮಣ್ಯನ್ ವಿ.ವಿ., ಹೊಸದುರ್ಗ ಬಿಆರ್‌ಸಿ ಬಿಪಿಸಿ ಸನಲ್ ವೆಳ್ಳುವ, ಚಿತ್ತಾರಿಕ್ಕಲ್ ಬಿಪಿಸಿ ಶೈಜು ಸಿ., ಬೇಕಲ್ ಬಿಪಿಸಿ ಅಬ್ದುಲ್ ಸಲಾಂ, ಕುಂಬಳೆ ಬಿಪಿಸಿ ಶೀನಾ ಪಿ., ಮುಳಿಂಜ ಶಾಲೆಯ ಮುಖ್ಯೋಪಾಧ್ಯಾಯಿನಿ ಚಿತ್ರಾವತಿ ಚಿಗುರುಪಾದೆ, ಸಜೀಶ್ ಯು. ಮೊದಲಾದವರು ಉಪಸ್ಥಿತರಿದ್ದರು.

ಬಿಆರ್‌ಸಿ ಕಲಾವಿದರ ನೇತೃತ್ವದಲ್ಲಿ ವಿವಿಧ ಧರ್ಮಗಳ ಸೌಹಾರ್ದ ಸಂದೇಶಗಳನ್ನು ಒಳಗೊಂಡ ಹಾಡುಗಳನ್ನು ಹಾಡಲಾಯಿತು. ವಿಶೇಷ ಶಿಕ್ಷಕರು, ಕಚೇರಿ ಸಿಬ್ಬಂದಿಗಳು, ವಿಶೇಷ ಶಿಕ್ಷಣಗಾರರು ಹಾಗೂ ಸಿಆರ್‌ಸಿ ಸಂಯೋಜಕರ ನೇತೃತ್ವದಲ್ಲಿ ಜರಗಿತು. ಮಂಜೇಶ್ವರ ಬಿಪಿಸಿ ಪಿ.ರಾಜಗೋಪಾಲನ್ ಸ್ವಾಗತಿಸಿ, ಸುಮಯ್ಯ ವಂದಿಸಿದರು.

ಬೆಳ್ಳೂರು ಶ್ರೀ ಮಹಾವಿಷ್ಣು ದೇವಾಲಯ ಸಭಾಂಗಣದಲ್ಲಿ 'ಭತ್ತದ ತಳಿಯ ಕಾವಲುಗಾರ' ಕೃತಿ ಬಿಡುಗಡೆ

ಭತ್ತದ ತಳಿ ಸಂರಕ್ಷಕನ ಮುಂದುವರಿದ ಅಧ್ಯಯನಕ್ಕೆ ಟ್ರಸ್ಟ್ ನಿರ್ಮಾಣ ಅನಿವಾರ್ಯ

ಮುಳ್ಳೇರಿಯ: ನೂರಾರು ಭತ್ತದ ತಳಿಗಳ ಸಂವರ್ಧನೆಗೆ ಮಹತ್ವದ ಕೊಡುಗೆ ನೀಡುವುದರೊಂದಿಗೆ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾದ ಸತ್ಯನಾರಾಯಣ ಬೆಳೇರಿ ಅವರ ಮುಂದಿನ ಸಂಶೋಧನೆಗೆ ಸಹಾಯಕ್ಕಾಗಿ ಟ್ರಸ್ಟ್ ರಚನೆ ಅನಿವಾರ್ಯ ಎಂಬುದಾಗಿ ಪ್ರಗತಿಪರ ಕೃಷಿಕ, ಸಾಮಾಜಿಕ ಮುಂದಾಳು ಕಲ್ಲಗ ಚಂದ್ರಶೇಖರ ರಾವ್ ಹೇಳಿದ್ದಾರೆ.

ಬೆಳ್ಳೂರು ಶ್ರೀ ಮಹಾವಿಷ್ಣು ದೇವಾಲಯ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ 650ಕ್ಕೂ ಅಧಿಕ ಭತ್ತದ ತಳಿ ಸಂರಕ್ಷಿಸಿ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ಮುಡಿಗೇರಿಸಿದ ಸತ್ಯನಾರಾಯಣ ಬೆಳೇರಿ ಅವರ ಬಗ್ಗೆ ಲೇಖಕ, ಅಂಕಣಕಾರ ನರೇಂದ್ರ ರೈ ದೇರ್ಲ ಬರೆದ ನೆಲದ ಪದ್ಮಶ್ರೀ ಸತ್ಯನಾರಾಯಣ ಬೆಳೇರಿಯ 'ಭತ್ತದ ತಳಿಯ ಕಾವಲುಗಾರ' ಕೃತಿ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಉದ್ಯಮಿ, ಧಾರ್ಮಿಕ ಮುಂದಾಳು ಮಧುಸೂಧನ ಆಯರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಬೆಳೇರಿ ಅವರ ಭತ್ತ ತಳಿ ಸಂಗ್ರಹಣಾ ಅಧ್ಯಯನ ಕೇಂದ್ರವನ್ನು ಸುಸಜ್ಜಿತವಾಗಿ ನಿರ್ಮಿಸುವ ನಿಟ್ಟಿನಲ್ಲಿ ಕಾಸರಗೋಡಿನ ಜನತೆ ಕೈ ಜೋಡಿಸಬೇಕಾದ ಅನಿವಾರ್ಯತೆ ಇದೆ ಎಂದರು.

ಈ ಸಂದರ್ಭ ಪಯ್ಯನ್ನೂರಿನ ಮಹಾವಿಷ್ಣು ದೇವಳದ ಭದ್ರಕಲಶದೊಳಗೆ ದೊರೆತ ಶತಮಾನಕ್ಕೂ ಹಿಂದಿನ ಭತ್ತದ ಬೀಜವನ್ನು ಸತ್ಯನಾರಾಯಣ ಬೆಳೇರಿ ಅವರ ಸಂಗ್ರಹಕ್ಕೆ ಮಧುಸೂಧನ ಆಯರ್ ಹಸ್ತಾಂತರಿಸಿದರು.

ಕೃತಿ ಬಿಡುಗಡೆಗೆ ಮುನ್ನ ಕೃತಿಕಾರ ನರೇಂದ್ರ ರೈ ದೇರ್ಲ ಮುನ್ನುಡಿಯಾಗಿ ಮಾತನಾಡಿ, ರಾಜಕೀಯದವರಿಗೆ ಕೃಷಿ ಬಗ್ಗೆ ಇಚ್ಛಾಶಕ್ತಿಯ ಕೊರತೆಯಿಂದ ಕೃಷಿಗೆ ಅಗತ್ಯ ಮನ್ನಣೆ ಲಭಿಸದ ಸ್ಥಿತಿ ನಿರ್ಮಾಣವಾಗಿದೆ ಎಂದರು.

> **ದೇಶಕ್ಕೆ ಮಾದರಿ**
>
> ಗದ್ದೆ, ಜಮೀನು ಇಲ್ಲದಿದ್ದರೂ, 650ಕ್ಕೂ ಹೆಚ್ಚು ಭತ್ತದ ತಳಿಗಳ ಸಂವರ್ಧನೆ, ಸಂರಕ್ಷಣೆ ನಡೆಸಿರುವ ಸತ್ಯನಾರಾಯಣ ಬೆಳೇರಿ ಅವರ ಸಾಧನೆ ದೇಶಕ್ಕೆ ಮಾದರಿಯಾಗಿದೆ. ನಾಡಿನ ಹೆಗ್ಗುರುತಾಗಿರುವ ಸತ್ಯನಾರಾಯಣ ಬೆಳೇರಿ ಅವರ ಬಗೆಗಿನ ಕೃತಿ ಓದುಗನ ಎದೆಯೊಳಗೆ ತೆರೆದುಕೊಳ್ಳಬೇಕಾಗಿದೆ.
>
> ● ನರೇಂದ್ರ ರೈ ದೇರ್ಲ, ಕೃತಿಕಾರ

ಕಾಸರಗೋಡಿನ ಹಿರಿಯ ಲೇಖಕ ನರಸಿಂಗ ರಾವ್ ಕಾಸರಗೋಡು ಅವರು 'ಭತ್ತದ ತಳಿಯ ಕಾವಲುಗಾರ' ಕೃತಿಯನ್ನು ಬಿಡುಗಡೆ ಮಾಡಿದರು. ಸತ್ಯನಾರಾಯಣ ಬೆಳೇರಿ ಅವರಿಗೆ ಪದ್ಮಶ್ರೀ ದೊರೆಯಲು ಮಾರ್ಗದರ್ಶಕರಾಗಿ ಸಹಕರಿಸಿದ ಕರ್ನಾಟಕ ಕೃಷಿ ವಿಜ್ಞಾನ ಕೇಂದ್ರದ ಕೃಷಿ ವಿಜ್ಞಾನಿಗಳಾದ ಡಾ.ಉಲ್ಲಾಸ್ ಹಾಗೂ ಡಾ.ಮಲ್ಲಿಕಾರ್ಜುನ ಎಲ್. ಅವರಿಗೆ ಮೊದಲ ಪ್ರತಿ ಬಿಡುಗಡೆಗೊಳಿಸಲಾಯಿತು.

ಬೆಳ್ಳೂರು ಶ್ರೀ ಮಹಾವಿಷ್ಣು ದೇವಾಲಯದ ಆಡಳಿತ ಮೊಕ್ತೇಸರ ಗಂಗಾಧರ ಬಲ್ಲಾಳ್, ಕಸಾಪ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಡಾ.ಮೋಹನದಾಸ್ ರೈ ಬೆಳ್ಳೂರು ಅತಿಥಿಗಳಾಗಿದ್ದರು. ಸತ್ಯನಾರಾಯಣ ಬೇಳೇರಿ ತನ್ನ ಸಾಧನೆ ಪಯಣದ ಬಗ್ಗೆ ಮೆಲುಕು ಹಾಕಿದರು. ದಯಾನಂದ ರೈ ಕಳುವಾಜೆ ಸ್ವಾಗತಿಸಿ, ನಿವೃತ್ತ ಶಿಕ್ಷಕ ಕುಂಞಿರಾಮ ಮಣಿಯಾಣಿ ವಂದಿಸಿದರು. ಪತ್ರಕರ್ತ ಎಂ.ನಾ.ಚಂಬಲ್ತಿಮಾರ್ ನಿರೂಪಿಸಿದರು.

ಸುತ್ತಮುತ್ತ

ಮಾ.24: ಕಾಪು ಕಚೇರಿಯಲ್ಲಿ ಮೆಸ್ಕಾಂ ಜನಸಂಪರ್ಕ ಸಭೆ

ಕಾಪು: ಮೆಸ್ಕಾಂ ಕಾಪು ಉಪವಿಭಾಗ ಕಚೇರಿಯಲ್ಲಿ ಮಾ.24ರಂದು ಬೆಳಿಗ್ಗೆ 10.30 ರಿಂದ 12ರವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿ ಕಾರಿಗಳು ಭಾಗವಹಿಸಲಿದ್ದಾರೆ, ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದ್ದು, ದೂರವಾಣಿ ಮೂಲಕವು ಅಹವಾಲು ಸಲ್ಲಿಸಲು ಅವಕಾಶವಿದ್ದು, ದೂ.ಸಂ.: 0820-2579977 ಅನ್ನು ಸಂಪರ್ಕಿಸಿ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ನಿರಾಕ್ಷೇಪಣಾ ಪತ್ರ ಪಡೆಯದೆ ವ್ಯಾಪಾರ, ಮಳಿಗೆ ಸ್ಥಾಪನೆಗೆ ನಿರ್ಬಂಧ

ಕಾಪು: ಕಾಪು ಪುರಸಭೆ ವ್ಯಾಪ್ತಿಯಲ್ಲಿ ಕಾಪು ಸುಗ್ಗಿ ಮಾರಿಪೂಜೆಯ ಸಂದರ್ಭದಲ್ಲಿ ಪುರಸಭೆ ನಿಗಧಿಪಡಿಸಿದ ಜಾಗವನ್ನು ಹೊರತುಪಡಿಸಿ ಯಾವುದೇ ಖಾಸಗಿ / ಇತರೆ ಜಾಗದಲ್ಲಿ ಅಂಗಡಿ, ಮನೋರಂಜನಾ ಪಾರ್ಕ್‌ಗಳು ಅಥವಾ ಯಾವುದೇ ವ್ಯಾಪಾರವನ್ನು ಪೊಲೀಸ್ ಇಲಾಖೆಯ ಅನುಮತಿಯೊಂದಿಗೆ ಪುರಸಭೆಯಿಂದ ನಿರಾಕ್ಷೇಪಣಾ ಪತ್ರ ಪಡೆಯದೆ ನಡೆಸುವಂತಿಲ್ಲ ಎಂದು ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಯಾರಾದರೂ ಈ ನಿರ್ಣಯವನ್ನು ಉಲ್ಲಂಘಿಸಿ ವ್ಯಾಪಾರ ನಡಸಿದ್ದಲ್ಲಿ ನಿಯಾಮಾನುಸಾರ ದಂಡ ವಿಧಿಸಿ ಮೇಲ್ಕಾಣಿಸಿದ ಯಾವುದೇ ವ್ಯಾಪಾರವನ್ನು ಸಹಯೋಗದೊಂದಿಗೆ ತೆರವುಗೊಳಿಸಲಾಗುವುದು ಎಂದು ಮುಖ್ಯಾಧಿಕಾರಿಗಳು ಪೊಲೀಸ್ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಮಾರ್ಚ್ 24ರಂದು ಬೃಹತ್ ಸಮಾವೇಶ

ಕಾರ್ಕಳ: ಭೋವಿ, ಬಂಜಾರ, ಕೊರಮ, ಕೊರಚ, ಛಲವಾದಿ, ಮತ್ತು ಚರ್ಮಕಾರ ಸೂಕ್ಷ್ಮ ಜಾತಿಗಳ ಒಳಮೀಸಲಾತಿಯ ಸಮಸ್ಯೆಯಿಂದ ಬೆಂಗಳೂರು ಚಲೋ ಪ್ರತಿಭಟನಾ ಸಮಾವೇಶವು ಮಾರ್ಚ್ 24 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿದ್ದು ಕಾರ್ಕಳ ತಾಲೂಕಿನ ಎಲ್ಲಾ ಭೋವಿ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಸಮಾವೇಶ ಯಶಸ್ವಿಗೊಳಿಸಬೇಕಾಗಿ ಭೋವಿ ಸಮಾಜದ ಯುವ ಮುಖಂಡ ಪವನ್ ಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇನ್‌ಸ್ಪೈಯರ್ ಅವಾರ್ಡ್‌ಗೆ ಆಯ್ಕೆ

ಗಂಗೊಳ್ಳಿ: ಶಾಲಾ ಮಕ್ಕಳಲ್ಲಿ ವೈಜ್ಞಾನಿಕ ಸೃಜನಶೀಲತೆ ಮತ್ತು ನವೀನ ಆಲೋಚನೆಗಳನ್ನು ಉತ್ತೇಜಿಸುವ



ಗುರಿಯನ್ನು ಹೊಂದಿರುವ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಮತ್ತು ನ್ಯಾಷನಲ್ ಇನ್ನೋವೇಶನ್ ಫೌಂಡೇಶನ್ ಜಂಟಿಯಾಗಿ ಆಯೋಜಿಸುವ ಇನ್‌ಸ್ಪೈಯರ್ ಅವಾರ್ಡ್ ಸ್ಪರ್ಧೆಗೆ ಗಂಗೊಳ್ಳಿಯ ಕೊಂಚಾಡಿ ರಾಧಾ ಶೆಣೈ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿಯ ವಿದ್ಯಾರ್ಥಿ ಸಂಚಿತ್ ಎಂ. ದೇವಾಡಿಗ ಅವರು ಪ್ರದರ್ಶಿಶಿಸಿದ್ದ 'ರಸ್ತೆ ಅಪಘಾತ ತಡೆ ಮತ್ತು ಸುರಕ್ಷತಾ ಕ್ರಮಗಳ ಮಾಡೆಲ್' ಆಯ್ಕೆಯಾಗಿದೆ. ಈತ ಗಂಗೊಳ್ಳಿಯ ಸ್ಯಾಕ್ಸೋಫೋನ್ ಕಲಾವಿದ ಮಾಧವ ದೇವಾಡಿಗ ಹಾಗೂ ಉಪನ್ಯಾಸಕಿ ಸಾವಿತ್ರಿ ಎಸ್. ದಂಪತಿ ಪುತ್ರ.

ಮೊದಲನೇ ಪುಟದಿಂದ

ಜೀವಜಲ

ಈ ನಿಟ್ಟಿನಲ್ಲಿ ಕೇರಳ ವಿಧಾನಸಭಾ ಚುನಾವಣೆಯ ದಿನಾಂಕ ಘೋಷಣೆಯ ಮೊದಲೇ ಕುಡಿಯುವ ನೀರು ಸಮಸ್ಯೆ ಪರಿಹರಿಸಲು ಮತ್ತು ಬೇಸಿಗೆ ದುರಂತ ನಿವಾರಿಸಲು ಅಗತ್ಯದ ಅನುದಾನ ಒದಗಿಸಲಾಗಿದೆ. ಜಿಲ್ಲೆಯ ಎಲ್ಲಾ ಸ್ಥಳೀಯಾಡಳಿತ ಸಂಸ್ಥೆಗಳು ಜಿಲ್ಲಾ ಮಟ್ಟದ ಮಾದರಿಯಲ್ಲಿ ಸ್ಥಳೀಯ ಯೋಜನೆಗಳನ್ನು ತಯಾರಿಸುವಂತೆ ನಿರ್ದೇಶಿಸಲಾಗಿದೆ. ಆರೋಗ್ಯ ಇಲಾಖೆಯ ನೇತೃತ್ವದಲ್ಲಿ ವಿಶೇಷ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಸೂಚಿಸಲಾಗಿದೆ. ಬಿಸಿಲಿನ ಹೊಡೆತಕ್ಕೆ ಪ್ರಥಮ ಚಿಕಿತ್ಸೆ ನೀಡಲು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ಪ್ರಮುಖ ಮಾರುಕಟ್ಟೆಗಳು, ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ಘಟಕ ಸ್ಥಾಪಿಸಲು ಆದೇಶಿಸಲಾಗಿದೆ. ಇನ್ನೊಂದೆಡೆ ಪರೀಕ್ಷೆ ವೇಳೆಯಲ್ಲಿ ತರಗತಿಯಲ್ಲಿ ಕುಡಿಯುವ ನೀರಿನ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು. ಅಗತ್ಯವಿದ್ದರೆ ಹೆಚ್ಚಿನ ಘಟಕ ಸ್ಥಾಪಿಸಬೇಕು ಎಂದು ಜಿಲ್ಲಾಡಳಿತವು ಸೂಚನೆ ನೀಡಿದೆ.

ತಾಪಕೋಪ

ಆಹಾರ ತಿನ್ನುವ ಪ್ರಮಾಣ ಗಣನೀಯ ಕಡಿಮೆಯಾಗಿ, ಮಾಂಸಕೋಳಿಗಳ ತೂಕ ಬಾರದೆ ಇರಬಹುದು ಮತ್ತು ಉಷ್ಣಾಂಶದ ಪ್ರಮಾಣ 360 ಅ ಗಿಂತ ಹೆಚ್ಚಾದಾಗ ಕೋಳಿಗಳು ಸಾಯಲು ಪ್ರಾರಂಭಿಸುತ್ತವೆ. ಉಷ್ಣಾಂಶದ ಒತ್ತಡದಲ್ಲಿ ಬಳಲಿದ ಪ್ರಾಣಿ ಪಕ್ಷಿಗಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಸಾಂಕ್ರಾಮಿಕ ರೋಗಗಳು ಕಂಡುಬರಬಹುದು. ನೀರಿನ ಕೊರತೆ ಕಂಡುಬಂದರೆ ಸ್ಥಳೀಯ ಸಂಸ್ಥೆಗಳ ಮೂಲಕ ಪಡೆದುಕೊಳ್ಳಬೇಕು. ಜಾನುವಾರುಗಳನ್ನು ನೆರಳಿನಲ್ಲಿ ಮಾತ್ರ ಹೊರಗಡೆ ಕಟ್ಟಬೇಕು. ಜಾನುವಾರು ಶೆಡ್ ಮೇಲೆ ತೆಂಗಿನ ಅಥವಾ ಅಡಿಕೆ ಗರಿ ಹಾಕಿ ಸ್ಪ್ರಿಂಕ್ಲರ್‌ನಲ್ಲಿ ನೀರು ಚಿಮ್ಮಿಸಬಹುದು ಅಥವಾ ಬಿಳಿ ಬಣ್ಣದ ಪೇಂಟ್ ಹಾಕಬಹುದು. ಶೆಡ್ ಒಳಗಡೆ ಫ್ಯಾನ್‌ಗಳನ್ನು ಅಳವಡಿಸಿದ್ದಲ್ಲಿ ಉಷ್ಣತೆ ಪ್ರಮಾಣ ತಗ್ಗಿಸಬಹುದಾಗಿದೆ.

ಚಿಟ್ಟಿಬೆಟ್ಟು ಕೊರಗ ಕಾಲನಿಗೆ ಎಂಎಲ್ಸಿ ಶಾಂತಾರಾಮ ಸಿದ್ದಿ ಭೇಟಿ | ರಾಜ್ಯ ಸರ್ಕಾರಕ್ಕೆ ಒತ್ತಾಯ

ಆದಿವಾಸಿ ಜನಾಂಗದ ಒಳಮೀಸಲಾತಿ ಗೊಂದಲ ಬಗೆಹರಿಸಿ

ಕೋಟ: ರಾಜ್ಯದಲ್ಲಿ ಬುಡಕಟ್ಟು ಮೂಲನಿವಾಸಿಗಳ 50 ಪಂಗಡಗಳಿದ್ದು, ಒಟ್ಟು ನಲವತ್ತು ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿದ್ದೇವೆ. ಆದರೆ ರಾಜ್ಯ ಸರಕಾರದ ಮೀಸಲಾತಿ ಪಡೆಯುವಾಗ ಅನ್ಯಾಯಕ್ಕೆ ತುತ್ತಾಗಿದ್ದೇವೆ ಎಂದು ವಿಧಾನಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಅವರು ಕಳವಳ ವ್ಯಕ್ತಪಡಿಸಿದರು.

ಅವರು ಶನಿವಾರ ಕೋಟತಟ್ಟು ಪಂಚಾಯತ್ ವತಿಯಿಂದ ನಿರ್ಮಾಣಗೊಂಡ ಚಿಟ್ಟಿಬೆಟ್ಟು ಕೊರಗ ಕಾಲನಿಯ ಎಂಟು ಮನೆಗಳಿಗೆ ಭೇಟಿ ನೀಡಿ ಮೂಲಸೌಲಭ್ಯ ಹಾಗೂ ವಸ್ತುಸ್ಥಿತಿಗಳನ್ನು ಪರಿಶೀಲಿಸಿ, ಬಳಿಕ ಮಾತನಾಡಿದರು.



ಮೀಸಲಾತಿ ಸಮರ್ಪಕಗೊಳಿಸಿಲ್ಲ

ಪ್ರಸ್ತುತ ಆದಿವಾಸಿ ಜನಾಂಗದಲ್ಲಿ ಐವತ್ತು ಜನರಲ್ಲಿ ಒಂದೆ ಗುಂಪಿನ ಅಡಿಯಲ್ಲಿ ಮೀಸಲಾತಿ ಪಡೆದು ಕೊಳ್ಳುತ್ತಿದ್ದೇವೆ. ಆದರೆ ಮೀಸಲಾತಿ ಸಮರ್ಪಕ ಗೊಳಿಸಿಲ್ಲ, ಈ ಬಗ್ಗೆ ಯಾವ ಸರಕಾರದ ವಿರುದ್ಧ ಆರೋಪ ಮಾಡಲಾರೆ. ಆದರೆ ಒಳಮಿಸಲಾತಿಯಲ್ಲಿ ಎಸ್‌ಸಿ ಸಮುದಾಯದಲ್ಲಿ ಒಳಮಿಸಲಾತಿ ವಿಂಗಡನೆಯನ್ನು ಕಳೆದ ವರ್ಷ ಸರಕಾರ ಮಾಡಿದ್ದು, 2024ರಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಎಸ್‌ಸಿ, ಎಸ್‌ಟಿ ಗಳಿಗೆ ಒಳ ಮೀಸಲಾತಿ ತಂದಾಗ ಅತಿ ಚಿಕ್ಕ ಗುಂಪುಗಳಿಗೆ ಅನುದಾನ ಒದಗಿಸಬಹುದಾಗಿದೆ ತಿಳಿಸಿದ್ದು, ಆದರೆ ಸರಕಾರ ಆಯೋಗದ ಮೂಲಕ ಸ್ವಲ್ಪ ಪ್ರಮಾಣದಲ್ಲಿ ಮಾರ್ಪಾಡುಗೊಳಿಸಿ ಎಸ್‌ಸಿ ಸಮುದಾಯಕ್ಕೆ ಮಿಸಲಾತಿ ಘೋಷಿಸಿದೆ. ಆದರೆ ನಮ್ಮ ಆಗ್ರಹ ಏನೆಂದರೆ ಸುಪ್ರೀಂ ಕೋರ್ಟ್ ನಿರ್ದೇಶದ ಆಧಾರದ ಮೇಲೆ ಪ್ರತ್ಯೇಕ ನಿಯೋಗ ರಚಿಸಿ, ಅಧ್ಯಯನ ಮಾಡಿ ನಮ್ಮ ಜನಾಂಗಕ್ಕೆ ಸೌಲಭ್ಯ ಹಾಗೂ ಅನುದಾನ ಒದಗಿಸಲು ವೈಜ್ಞಾನಿಕ ಚಿಂತನೆ ನಡೆಸುವ ಕುರಿತು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದೇನೆ. ಪ್ರಸ್ತುತ ಸಣ್ಣ-ಸಣ್ಣ ಸಮುದಾಯಗಳು ಸೌಲಭ್ಯದಿಂದ ವಂಚಿತವಾಗುತ್ತಿದೆ. ಈ ದಿಸೆಯಲ್ಲಿ ಒಳ ಮಿಸಲಾತಿಯನ್ನು ಸಮರ್ಪಕಗೊಳಿಸಲು ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಹಾಗೂ ಸಮಾಜ ಕಲ್ಯಾಣ ಇಲಾಖೆ,ಮುಖ್ಯಮಂತ್ರಿಗಳಿಗೂ ಮನವಿ ನೀಡಿದ್ದೇವೆ. ಸದನದಲ್ಲೂ ಪ್ರಸ್ತಾವ ಮಾಡಿದ್ದೇವೆ ಎಂದರು.

> **ಸರ್ಕಾರ ಮನವಿ ಸಲ್ಲಿಸಲಾಗಿದೆ**
>
> ರಾಜ್ಯ ಸರ್ಕಾರವು ಒಳ ಮೀಸಲಾತಿ ಗೊಂದಲ ಬಗೆಹರಿಸಿ, ಹಿಂದುಳಿದ ವರ್ಗದ ಸಮುದಾಯದ ಕಲ್ಯಾಣಕ್ಕೆ ಒತ್ತು ನೀಡಬೇಕು. ಹಿಂದುಳಿದ ವರ್ಗದ ವಸ್ತುಸ್ಥಿತಿ ಹಾಗೂ ಮೂಲಸೌಲಭ್ಯ ಬಗ್ಗೆ ವೈಜ್ಞಾನಿಕವಾದ ಅಧ್ಯಯನ ಅಗತ್ಯವಿದೆ. ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡಲಾಗುವುದು. ಈಗಾಗಲೇ ಈ ಬಗ್ಗೆ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯಲಾಗಿದೆ.
>
> • ಶಾಂತಾರಾಮ ಸಿದ್ದಿ, ವಿಧಾನಪರಿಷತ್ ಸದಸ್ಯ

ಗೃಹ ನಿರ್ಮಾಣ ಕಾರ್ಯಕ್ಕೆ ಶ್ಲಾಘನೆ

ಕೋಟತಟ್ಟು ಗ್ರಾಮ ಪಂಚಾಯತ್ ವತಿಯಿಂದ ಕೊರಗ ಸಮುದಾಯಕ್ಕೆ ಕೈಗೊಂಡ ಗೃಹ ನಿರ್ಮಾಣ ಕಾರ್ಯವನ್ನು ಮುಕ್ತ ಕಂಠದಿಂದ ಶ್ಲಾಘಿಸಿ ಸ್ಥಳೀಯಾಡಳಿತಗಳು ಸಣ್ಣ ಸಮುಯದಾಯಗಳ ಕಣ್ಣೊರೆಸುವ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕೋಟತಟ್ಟು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವೀಂದ್ರ ರಾವ್, ಪಂಚಾಯತ್ ನಿಕಟಪೂರ್ವ ಅಧ್ಯಕ್ಷ ಸತೀಶ್ ಕುಂದರ್, ಮಾಜಿ ಉಪಾಧ್ಯಕ್ಷೆ ಸರಸ್ವತಿ ಪೂಜಾರಿ, ಮಾಜಿ ಸದಸ್ಯ ವಾಸು ಪೂಜಾರಿ, ಪ್ರಕಾಶ್ ಹಂದಟ್ಟು, ವಿದ್ಯಾ ಸಾಲಿಯಾನ್, ಸೀತಾ, ಮಾಜಿ ಜಿ.ಪಂ ಸದಸ್ಯ ರಾಘವೇಂದ್ರ ಕಾಂಚನ್, ಪ್ರಮುಖರಾದ ಕೊತ್ತಾಡಿ ಅಜಿತ್ ಶೆಟ್ಟಿ, ಸುರೇಶ್ ಸಮತಾ, ರತ್ನಾಕರ ಬಾರಿಕೆರೆ, ಕೊರಗ ಸಮುದಾಯದ ಮುಖಂಡ ಗಣೇಶ ಕುಂಭಾಶಿ, ಸ್ಥಳೀಯ ರವಿ ಮತ್ತಿತರರು ಇದ್ದರು.

ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಏ.2ರಂದು ಬೃಹತ್ ಉದ್ಯೋಗ ಮೇಳ



ಕುಂದಾಪುರ: ಸರಕಾರದ ವಿವಿಧ ಇಲಾಖೆಗಳ ಆಶ್ರಯದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ಮಾಹಿತಿ ತಂತ್ರಜ್ಞಾನ, ಆರೋಗ್ಯ, ಸೇವಾ ವಲಯ, ಕೈಗಾರಿಕಾ, ಕೃಷಿ, ಇತರೆ ಕಂಪೆನಿಗಳ ಸಹಿತ 60ಕ್ಕೂ ಮಿಕ್ಕಿ ಸಂಸ್ಥೆಗಳು ಬರಲಿದೆ. ಇದು ಈ ಭಾಗದ ಯುವಕ-ಯುವತಿಯರಿಗೆ ಉತ್ತಮ ಅವಕಾಶವಾಗಿದ್ದು, ಇದನ್ನು ಸದುಪಯೋಗ ಪಡಿಸಿಕೊಳ್ಳಿ ಎಂದು ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ಅವರು ಶನಿವಾರ ಇಲ್ಲಿನ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಏ.2ರಂದು ನಡೆಯುವ ಜಿಲ್ಲಾ ಮಟ್ಟದ ಉದ್ಯೋಗ ಮೇಳದ ಪೋಸ್ಟರ್ ಬಿಡುಗಡೆಗೊಳಿಸಿ, ಮಾತನಾಡಿದರು.

ಉಡುಪಿ ಜಿ.ಪಂ. ಯೋಜನಾ ನಿರ್ದೇಶಕ ವಿಜಯ್ ಕುಮಾರ್ ಮಾತನಾಡಿ, ಈ ಉದ್ಯೋಗ ಮೇಳದ ಹಿಂದೆ ಹಲವು ದಿನದ ಶ್ರಮವಿದೆ. ಹೆಚ್ಚಿನ ಸಂಖ್ಯೆಯಲ್ಲಿ ಯುವಕ-ಯುವತಿಯರು ವಿದ್ಯಾರ್ಥಿಗಳ ಬಂದು, ಸದುಪಯೋಗಪಡಿಸಿಕೊಳ್ಳಿ ಎಂದರು.

ಗ್ರಾಮೀಣಾಭಿವೃದ್ಧಿ ಸಚಿವಾಲಯ, ಕೌಶಲಾಭಿವೃದ್ಧಿ, ಉದ್ಯಮಲಶೀಲತಾ ಮತ್ತು ಜೀವನೋಪಾಯ ಇಲಾಖೆ, ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ ಯೋಜನೆ, ಜಿ.ಪಂ., ಕುಂದಾಪುರ ತಾ.ಪಂ, ಭಂಡಾರ್ ಕಾರ್ಸ್ ಕಾಲೇಜು ಸಂಯುಕ್ತ ಆಶ್ರಯದಲ್ಲಿ ಈ ಉದ್ಯೋಗ ಮೇಳ ಆಯೋಜಿಸಲಾಗಿದೆ. ಎಸೆಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಬಿಇ, ಬಿಕಾಂ, ಯಾವುದೇ ಪದವಿ, ಸ್ನಾತಕೋತ್ತರ ಪದವೀಧರರು ನಿಮ್ಮ ಪರಿಚಯ, ಆಧಾರ್ ಕಾರ್ಡ್, ಭಾವಚಿತ್ರ ಪ್ರತಿಯೊಂದಿಗೆ ಸಂದರ್ಶನದಲ್ಲಿ ಭಾಗವಹಿಸಬಹುದು.

ಈ ಸಂದರ್ಭದಲ್ಲಿ ಕುಂದಾಪುರ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಕಾನ್ಮಕ್ಕಿ, ಕುಂದಾಪುರ ತಾ.ಪಂ. ಕಾರ್ಯನಿರ್ವಾಹಣಾಧಿಕಾರಿ ಮಹೇಶ್ ಕುಮಾರ್, ತಾಲೂಕು ಪಂಚಾಯತ್ ವ್ಯವಸ್ಥಾಪಕ ರಾಮಚಂದ್ರ ಮಯ್ಯ, ಕಾಲೇಜಿನ ಆಡಳಿತ ವ್ಯವಸ್ಥಾಪಕ ಗೋಪಾಲ್, ಜಿ.ಪಂ. ಎನ್‌ಆರ್‌ಎಲ್‌ಎಂ ಜಿಲ್ಲಾ ವ್ಯವಸ್ಥಾಪಕ ಅವಿನಾಶ್, ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕ ಯತೀಶ್ ಮತ್ತಿತರರು ಉಪಸ್ಥಿತರಿದ್ದರು.

ಭಂಡಾರ್‌ಕಾರ್ಸ್ ಕಾಲೇಜಿನ ಪ್ರಾಂಶುಪಾಲ ಡಾ. ಶುಭಕರ ಆಚಾರ್ಯ ಪ್ರಸ್ತಾವಿಕ ನುಡಿಗಳನ್ನಾಡಿ, ಸ್ವಾಗತಿಸಿದರು.

ಕಾಪು ಕ್ಷೇತ್ರಕ್ಕೆ 2 ವರ್ಷದಲ್ಲಿ ಗ್ರಾಮೀಣ ರಸ್ತೆಗೆ 16.04 ಕೋಟಿ ರೂ. ಅನುದಾನ

ಕಾಪು: ಕಾಪು ವಿಧಾನಸಭಾ ಕ್ಷೇತ್ರದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ಅಧಿವೇಶನದಲ್ಲಿ ಕಾಪು ವಿಧಾನಸಭಾ ಕ್ಷೇತ್ರದಲ್ಲಿ ಪ್ರಗತಿ ಪಥ ಯೋಜನೆಯಡಿ ಗ್ರಾಮೀಣ ರಸ್ತೆಗಳ ಅಭಿವೃದ್ದಿಗೆ ಮಂಜೂರು ಮಾಡಿದ ಅನುದಾನ ಹಾಗೂ ಪ್ರಸ್ತಾವನೆ ಸಲ್ಲಿಸಿದ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿದೆ ಪ್ರಸ್ತಾವನೆ ಸರಕಾರದ ಅನುಮೋದನೆ ಬಾಕಿ ಇದ್ದಲ್ಲಿ ಯಾವ ಕಾಲಮಿತಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕ್ರಮವಹಿಸಲಾಗುವುದು ಎಂದು ಪ್ರಶ್ನೆಯನ್ನು ಸಲ್ಲಿಸಿದ್ದರು.



ಇದಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಉತ್ತರಿಸಿ, ಕಳೆದ 2 ವರ್ಷಗಳಲ್ಲಿ ಕಾಪು ಕ್ಷೇತ್ರಕ್ಕೆ ಪ್ರಗತಿ ಪಥ ಯೋಜನೆಯಡೀ ಗ್ರಾಮೀಣ ರಸ್ತೆಗಳ ಅಭಿವೃದ್ದಿಗೆ 16.04 ಕೋಟಿ ಅನುದಾನ ಮಂಜೂರು ಮಾಡಲಾಗಿದೆ. ಮಂಜೂರು ಮಾಡಿದ ಅನುದಾನದಲ್ಲಿ 9 ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು, ಈ ಪೈಕಿ 7 ರಸ್ತೆಗಳು ಇ.ಎಸ್.ಝುಡ್/ಫಾರೆಸ್ಟ್/ಪ್ರೊಟೆಕ್ಟಡ್ ಏರಿಯಾದಲ್ಲಿ ಬರುತ್ತಿರುವ ಕಾರಣ ಎ.ಡಿ.ಬಿ ತಂಡದ ಪರಿಶೀಲನೆ ಇದ್ದು ತಿರುವಳಿ ನೀಡಿದ ನಂತರ ಕಾಮಗಾರಿ ಕೈಗೊಳ್ಳಲಿದ್ದು, ಇನ್ನುಳಿದ 2 ಕಾಮಗಾರಿಗಳನ್ನು ಶೀಘ್ರವೇ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲಾಗುವುದು ಎಂದು ಉತ್ತರ ನೀಡಿದ್ದಾರೆ.

ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರಿಗೆ ಗೌರವ ಧನದ ಬಗ್ಗೆ ಪ್ರಶ್ನಿಸಿದ ಶಾಸಕರಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಉತ್ತರಿಸಿ, ಅಂಗನವಾಡಿ ಕಾರ್ಯಕರ್ತೆಯರಿಗೆ 12500 ರೂ. ಗೌರವಧ ಹಾಗೂ ಅಂಗನವಾಡಿ ಸಹಾಯಕಿಯರಿಗೆ 7500 ರೂ ಗೌರವಧನ ಪಾವತಿಸಲಾಗಿದೆ. 2025-26ನೇ ಸಾಲಿನ ಆಯವ್ಯಯ ಘೋಷಣೆ ಯನ್ವಯ ಅಂಗನವಾಡಿ ಕಾರ್ಯಕರ್ತೆಯರಿಗೆ ಹೆಚ್ಚುವರಿ 1000 ಹಾಗೂ ಅಂಗನವಾಡಿ ಸಹಾಯಕಿಯರಿಗೆ ಹೆಚ್ಚುವರಿಯಾಗಿ 750 ರೂ ಗೌರವಧನ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ನಾವುಂದ ಸರ್ಕಾರಿ ಶಾಲೆಯಲ್ಲಿ ಶೌಚಾಲಯ ನಿರ್ಮಾಣಕ್ಕೆ ಶಿಲಾನ್ಯಾಸ



ಬೈಂದೂರು: ಸಮೃದ್ಧ ಬೈಂದೂರು 300 ಟ್ರಸ್ಟ್ ಯೋಜನೆಯಲ್ಲಿ ಭೂಮಿ ಟ್ರಸ್ಟ್ ಸಹಕಾರದೊಂದಿಗೆ ಭೀಮಾ ಗೋಲ್ಡ್ ಇವರ ಸಿಎಸ್‌ಆರ್ ನಿಧಿಯಿಂದ ನಾವುಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ನಿರ್ಮಾಣದ ಬಾಲಕಿಯರ ಶೌಚಾಲಯ ಕಾಮಗಾರಿಗೆ ಶಾಸಕ ಗುರುರಾಜ ಗಂಟಿಹೊಳೆ ಭೂಮಿಪೂಜೆ ನೆರವೇರಿಸಿ, ಮಾತನಾಡಿದರು.

ಬೈಂದೂರು ಸರ್ಕಾರಿ ಪದವಿ ಪೂರ್ವ ಕಾಲೇಜು, ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಬೈಂದೂರು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೂಡ ಶಾಸಕರು ಕುಡಿಯುವ ನೀರಿನ ಘಟಕವನ್ನು ಮತ್ತು ಬೈಂದೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಎಂಐಟಿ ಕುಂದಾಪುರ ಕಾಲೇಜು ಪ್ರಾಯೋಜಕತ್ವದಲ್ಲಿ ಉಚಿತವಾಗಿ ಕಲಿಸುವ ಸಿಇಟಿ, ನೀಟ್, ಜೆಇಇ ಕಾರ್ಯಕ್ರಮ ಸಂಕಲ್ಪವನ್ನು ಸಹ ಉದ್ಘಾಟಿಸಿ, ಶುಭಹಾರೈಸಿದರು.

ಎಂಐಟಿ ಕುಂದಾಪುರ ಪ್ರಾಂಶುಪಾಲ ರಾಮಕೃಷ್ಣ ಹೆಗ್ಡೆ, ಭೂಮಿ ಟ್ರಸ್ಟ್‌ನ ವಿಶ್ವನಾಥ್ ಶೆಟ್ಟಿ, ಸಿಎಸ್‌ಆರ್ ಅನುದಾನ ತರುವಲ್ಲಿ ಸಹಕರಿಸಿದ ಚರಣ್ ಬೈಂದೂರು, ಶಾಲಾ ಮುಖ್ಯೋಪಾಧ್ಯಾಯರು, ಕಾಲೇಜುಗಳು ಪ್ರಾಂಶುಪಾಲರು, ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕೃಷಿ ಕ್ಷೇತ್ರದಲ್ಲಿ ಸಾಧನೆಗೆ ಆಸಕ್ತಿ ಬಹುಮುಖ್ಯ: ಕುದಿ ಶ್ರೀನಿವಾಸ್ ಭಟ್



ಹಿರಿಯಡ್ಕ ಉಡುಪಿ ಜಿಲ್ಲಾ ಕೃಷಿಕ ಸಂಘದ ವತಿಯಿಂದ ಕುದಿ ಫಾರ್ಮ್‌ನಲ್ಲಿ ಕ್ಷೇತ್ರೋತ್ಸವವನ್ನು ಶನಿವಾರ ಆಯೋಜಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕುದಿ ಶ್ರೀನಿವಾಸ್ ಭಟ್ ಅವರು, ಕೃಷಿಯಲ್ಲಿನ ಲಾಭದ ಬಗ್ಗೆ ಹೇಳಿದರೆ ಯಾರಿಗೂ ಅರ್ಥವಾಗುವುದಿಲ್ಲ, ಕೃಷಿಯನ್ನು ಪ್ರೀತಿಯಿಂದ ಮಾಡಿದಾಗ ನಮಗೆ ಕೃಷಿ ಒಲಿದು ಬರುತ್ತದೆ. ಎಲ್ಲವನ್ನು ತಿಳಿದು ಕೃಷಿ ಮಾಡಬೇಕು. ಕೃಷಿ ನೋಡಲು ಖುಷಿ. ಆದರೆ ಮಾಡಲು ತುಂಬಾ ಕಷ್ಟ. ಪ್ರೀತಿಸಿ ಕೃಷಿ ಕೃಷಿ ಮಾಡಿದಾಗ ನಮಗೆ ಒಲಿದು ಬರುತ್ತದೆ. ಮಕ್ಕಳನ್ನು ಕೃಷಿ ಬದುಕಿನಲ್ಲಿ ತೊಡಗಿಸಿ ಕೊಂಡಾಗ ಮುಂದಿನ ಪೀಳಿಗೆಗೆ ಕೃಷಿಯನ್ನು ಉಳಿಸಲು ಮತ್ತು ಮುಂದುವರಿಸಲು ಸಹಕಾರಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೃಷಿಕ ಸಂಘದ ಅಧ್ಯಕ್ಷ ರಾಮಕೃಷ್ಣಶರ್ಮ ಮಾತನಾಡಿ, ಕೃಷಿಯನ್ನು ಜಿಲ್ಲೆಯಲ್ಲಿ ಅತ್ಯಂತ ಲಾಭದಾಯಕ ವಾಗಿ ನಿರ್ಮಾಣ ಮಾಡುವುದು ಕೃಷಿಕ ಸಂಘದ ಮುಖ್ಯ ಉದ್ದೇಶ. ಸರಿಯಾದ ಕ್ರಮವನ್ನು ಅಳವಡಿಸದೆ ನಾವು ಕೃಷಿಯಲ್ಲಿ ನಷ್ಟ ಅನುಭವಿಸುತ್ತಿದ್ದೇವೆ. ಸಂಶೋಧನೆ ಮಾಡಿ ವೈಜ್ಞಾನಿಕ ಕೃಷಿಯನ್ನು ಅಳವಡಿಸಿಕೊಂಡಲ್ಲಿ ಯಶಸ್ವಿಯಾಗಲು ಸಾಧ್ಯ ಎಂದರು.

ಅಡಿಕೆ ಕೃಷಿಯಲ್ಲಿ ಪೋಷಕಾಂಶ ನಿರ್ವಹಣೆ, ಕೊಳೆ ರೋಗ ನಿಯಂತ್ರಣ, ಸಿಂಗಾರ ಒಣಗುವ ರೋಗ, ಬೇರು ಹುಳದ ನಿಯಂತ್ರಣ, ಎಲೆ ಚುಕ್ಕಿ ರೋಗ ಹತೋಟಿ, ಅಡಿಗೆ ಸಂಸ್ಕರಣೆ, ಅಡಿಕೆ ಸುಲಿಯುವ ಯಂತ್ರದ ಪ್ರಾತ್ಯಕ್ಷಿತೆ, ತೆಂಗು ಕೃಷಿ ಪೋಷಕಾಂಶ ನಿರ್ವಹಣೆ, ಕುರುವಾಯಿ, ಕೆಂಪು ಮೂತಿ ಹುಳು, ನುಸಿ ರೋಗ ಹತೋಟಿ ಬೆಳೆಗಳ ಮೌಲ್ಯವರ್ಧನ, ಕಾಲು ಮೆಣಸು ನಾಟಿ ಪೋಷಕಾಂಶ ನಿರ್ವಹಣೆ, ಶೀಘ್ರ ಹಾಗೂ ನಿಧಾನ ಸೊರಗು ರೋಗ ನಿಯಂತ್ರಣ, ಹಣ್ಣಿನ ಗಿಡಗಳ ಕೃಷಿ, ಹೈನುಗಾರಿಕೆ ಮಾಹಿತಿ, ಸಾವಯವ ಗೊಬ್ಬರ ತಯಾರಿ ಮಾರ್ಗದರ್ಶನ, ಮಾಂಸದ ಕೋಳಿ ಸಾಕಣೆ ಇವುಗಳ ಬಗ್ಗೆ ಪ್ರಾತ್ಯಕ್ಷಿತೆ ಜೊತೆಗೆ ಮಾಹಿತಿ ನೀಡಲಾಯಿತು.

ಕೃಷಿಕ ಸಂಘದ ಉಪಾಧ್ಯಕ್ಷ ಶ್ರೀನಿವಾಸ್ ಬಳ್ಳಾಲ್ ಸ್ವಾಗತಿಸಿ, ಕಾರ್ಯದರ್ಶಿ ರವೀಂದ್ರ ಗುಜ್ಜರಬೆಟ್ಟು ನಿರೂಪಿಸಿದರು. ಕೋಶಾಧಿಕಾರಿ ಕೆ. ಶ್ರೀಪತಿ ಭಟ್ ಕರಂಬಳ್ಳಿ ಕಾರ್ಯಕ್ರಮ ವಂದಿಸಿದರು.



ಕೋಟ ಇಲ್ಲಿನ ಕೋಟ ಗ್ರಾಮಪಂಚಾಯತ್‌ನ ಘನ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ಭೇಟಿ ನೀಡಿ ಪರಿಶೀಲಿಸಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಉಮೇಶ್ ಹಾಗೂ ಘಟಕದ ಮುಖ್ಯಸ್ಥೆ ಭವ್ಯ ಅವರೊಂದಿಗೆ ಕಸ ವಿಲೇವಾರಿ ಹಾಗೂ ವಿಂಗಡನಾ ಕ್ರಮಗಳ ಕುರಿತು ಚರ್ಚಿಸಿದರು. ಪಂಚಾಯತ್ ಆಡಳಿತಾಧಿಕಾರಿ ಪ್ರತಾಪಚಂದ್ರ ಶೆಟ್ಟಿ, ಮಾಜಿ ಸದಸ್ಯರು, ಸಂಸದರ ಆಪ್ತ ಕಾರ್ಯದರ್ಶಿ ಹರೀಶ್ ಕುಮಾರ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಪ್ರಶಿಕ್ಷಣ ವರ್ಗ, ಎಸ್‌ಐಆರ್ ತಯಾರಿ: ಕಾಪು ಬಿಜೆಪಿಯಿಂದ ಪೂರ್ವಭಾವಿ ಸಭೆ



ಕಾಪು: ಕಾಪು ಮಂಡಲ ಬಿಜೆಪಿ ವತಿಯಿಂದ ಪಕ್ಷದ ಕಚೇರಿಯಲ್ಲಿ ಕಾರ್ಯಕರ್ತರಿಗೆ ನಡೆಸುವ ಪ್ರಶಿಕ್ಷಣ ವರ್ಗ ಹಾಗೂ ಎಸ್‌ಐಆರ್ ತಯಾರಿ ಬಗ್ಗೆ ಪೂರ್ವಭಾವಿ ಸಭೆ ಮಂಡಲ ಅಧ್ಯಕ್ಷ ಜಿತೇಂದ್ರ ಶೆಟ್ಟಿ ಯವರ ನೇತೃತ್ವದಲ್ಲಿ ನಡೆಸಲಾಯಿತು.

ಈ ಸಭೆಯಲ್ಲಿ ಕಾಪು ಕ್ಷೇತ್ರದ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ಭಾಗವಹಿಸಿ, ಮಂಡಲದ ಪ್ರಶಿಕ್ಷಣ ವರ್ಗದ ಬಗ್ಗೆ ಹಾಗೂ ಎಸ್‌ಐಆರ್ ಬಗ್ಗೆ ಈವರೆಗೆ ನಡೆದಿರುವಂತಹ ತಯಾರಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ಮುಂದೆ ನಡೆಯಲಿರುವ ಪ್ರಶಿಕ್ಷಣ ವರ್ಗ, ಹಾಗೂ ಎಸ್‌ಐಆರ್ ಪ್ರಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸಿ ಬೂತ್ ಮಟ್ಟದಿಂದಲೇ ಪಕ್ಷದ ಸಂಘಟನೆಗೆ ಇನ್ನಷ್ಟು ವೇಗ ನೀಡಬೇಕಾಗಿ ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಕುತ್ಯಾರ್ ನವೀನ್ ಶೆಟ್ಟಿ ನಿಕಟಪೂರ್ವ ಶಾಸಕ ಲಾಲಾಜಿ ಆರ್. ಮೆಂಡನ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಪ್ರಕಾಶ್ ಶೆಟ್ಟಿ ಪಡೇಬೆಟ್ಟು ಜಿಲ್ಲಾ ಸಹ ಸಂಯೋಜಕ ರಘುವೀರ್ ಎಸ್. ಕಾರ್ಕಳ, ಮಂಡಲ ಪ್ರದಾನ ಕಾರ್ಯದರ್ಶಿ ಎಂ. ಗೋಪಾಲ್ ಕೃಷ್ಣ ರಾವ್, ಶರಣ್ ಕುಮಾರ್ ಮಟ್ಟು ರಾಜ್ಯ ಮಹಿಳಾ ಮೋರ್ಚಾ ಪ್ರದಾನ ಕಾರ್ಯದರ್ಶಿ ಶಿಲ್ಪಾ ಜಿ ಸುವರ್ಣ ಬಿಎಲ್‌ಎ ಸಂದೀಪ್ ಮಜೂರ್ ಮಂಡಲದ ಪದಾಧಿಕಾರಿಗಳು ಮೋರ್ಚಾಗಳ ಪದಾಧಿಕಾರಿಗಳು ಜಿಲ್ಲಾ ಪ್ರಮುಖರು ಉಪಸ್ಥಿತರಿದ್ದರು.

ಶಿಶುಮಂದಿರದಲ್ಲಿ ಯುಗಾದಿ ಹಬ್ಬ



ಹಿರಿಯಡ್ಕ: ಆತ್ರಾಡಿ ಸವ್ಯಸಾಚಿ ಶಿಶು ಮಂದಿರದಲ್ಲಿ ಯುಗಾದಿ ಹಬ್ಬವನ್ನು ಮಂದಿರದ ಅಧ್ಯಕ್ಷ ಕೃಷ್ಣಮೂರ್ತಿ ಪ್ರಭು ಅಧ್ಯಕ್ಷತೆಯಲ್ಲಿ ವೈಶಿಷ್ಟ ಪೂರ್ಣವಾಗಿ ಆಚರಿಸಲಾಯಿತು.

ಉಮಾ ಮಹೇಶ್ವರಿ ಭಟ್, ಸತ್ಯಾನಂದ ನಾಯಕ್ ಮತ್ತು ಕೃಷ್ಣಮೂರ್ತಿ ಪ್ರಭು ಯುಗಾದಿ ಹಬ್ಬದ ಮಹತ್ವವನ್ನು ತಿಳಿಸಿದರು. ಭಾರತಮಾತೆಯ ಭಾವ ಚಿತ್ರಕ್ಕೆ ಪುಷ್ಪಾರ್ಚನೆ, ಶಿಶುಮಂದಿರದ ಪುಟಾಣಿಗಳು ಪ್ರಾತಃ ಸ್ಮರಣೆಯನ್ನು ಅರ್ಥ ಸಹಿತ ಪಠಿಸಿದರು. ಸಂಸ್ಕೃತ ವಚನಗಳನ್ನು ಓದಿದರು. ಉಪಸ್ಥಿತರಿದ್ದ ಮಾತೆಯರು ಪುಟಾಣಿಗಳಿಗೆ ಮಂಗಳಾರತಿ ಮಾಡಿ ಸಾಮೂಹಿಕ ಜನ್ಮ ದಿನಾಚರಣೆ ಆಚರಿಸಿದರು. ಎಲ್ಲರಿಗೂ ಬೇವು ಬೆಲ್ಲ ಹಂಚಲಾಯಿತು. ವಸಂತಿ ಶೆಟ್ಟಿ, ಸಾಧುಶೆಟ್ಟಿ ಉಪಸ್ಥಿತರಿದ್ದರು. ಸಮಿತಿಯ ಪ್ರಧಾನ ಕಾರ್ಯದರ್ಶಿ ಸಂಪತ್ ಸ್ವಾಗತಿಸಿ, ಅನಿತಾ ನಿರೂಪಿಸಿದರು. ವಿದ್ಯಾ ವಂದಿಸಿದರು. ನಂತರ ಸಿಹಿ ತಿಂಡಿ ಮತ್ತು ಹಣ್ಣು ಹಂಪಲು ಗಳನ್ನು ಪ್ರಸಾದ ರೂಪವಾಗಿ ವಿತರಣೆ ಮಾಡಲಾಯಿತು.

ಉಡುಪಿ ನಗರ ಪೊಲೀಸರ ಮಧ್ಯಪ್ರವೇಶ | 38 ಮಂದಿ ಹಿಂದು ಕಾರ್ಯಕರ್ತರ ಬಂಧನ, ಬಳಿಕ ಬಿಡುಗಡೆ

'ಸಮಾಧಾನ ಮಹೋತ್ಸವ'ಕ್ಕೆ ಹಿಂದು ಕಾರ್ಯಕರ್ತರಿಂದ ವ್ಯಾಪಕ ವಿರೋಧ

ಉಡುಪಿ: ನಗರದ ಮಿಷನ್ ಕಂಪೌಂಡ್ ಬಳಿಯ ಕ್ರಿಶ್ಚಿಯನ್ ಪಿ.ಯು. ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದ್ದ 'ಸಮಾಧಾನ ಮಹೋತ್ಸವ' ಧಾರ್ಮಿಕ ಪ್ರವಚನ ಕಾರ್ಯಕ್ರಮವನ್ನು ವಿರೋಧಿಸಿ ಪ್ರತಿಭಟನೆ ನಡೆಸಲು ಯತ್ನಿಸಿದ ಹಿಂದು ಜಾಗರಣ ವೇದಿಕೆಯ 38 ಮಂದಿ ಕಾರ್ಯಕರ್ತರನ್ನು ಪೊಲೀಸರು ದಸ್ತಗಿರಿ ಮಾಡಿ, ಬಳಿಕ ಬಿಡುಗಡೆಗೊಳಿಸಿದ್ದಾರೆ.

ಫೆಲೋಶಿಪ್ ಆಫ್ ಉಡುಪಿ ಡಿಸ್ಟ್ರಿಕ್ಟ್ ಚರ್ಚಸ್ ವತಿಯಿಂದ ಮಾ.20ರಿಂದ 22ರವರೆಗೆ ಸಂಜೆ 5:30 ರಿಂದ ರಾತ್ರಿ 9:30ರ ತನಕ ಈ ಕಾರ್ಯಕ್ರಮ ಆಯೋಜನೆಯಾಗಿತ್ತು. ಹೈಕೋರ್ಟ್ ಆದೇಶದಂತೆ ನಡೆಯುತ್ತಿರುವ ಈ ಸಮಾವೇಶಕ್ಕೆ ತಮಿಳುನಾಡಿನ ಪಾದ್ರಿ ಮೋಹನ್ ಸಿ. ಲಾಜರಸ್ ಅವರು ವಿಶೇಷ ಸಂದೇಶಕರಾಗಿ ಆಗಮಿಸುವ ಬಗ್ಗೆ ಮಾಹಿತಿ ಲಭಿಸಿತ್ತು. ಲಾಜರಸ್ ಅವರ ವಿರುದ್ಧ ತಮಿಳುನಾಡಿನಲ್ಲಿ ಹಿಂದು ದೇವತೆಗಳ ಅವಹೇಳನದ ಪ್ರಕರಣಗಳು ದಾಖಲಾಗಿರುವುದರಿಂದ, ಅವರಿಗೆ ಜಿಲ್ಲಾ ಪ್ರವೇಶಕ್ಕೆ ಅವಕಾಶ ನೀಡಬಾರದು ಎಂದು ಹಿಂದು ಪರ ಸಂಘಟನೆಗಳು ಮೊದಲೇ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದವು.



> **ರಸ್ತೆಯಲ್ಲೇ ಪ್ರತಿಭಟನೆ**
>
> ಶುಕ್ರವಾರ ಸಂಜೆ 5 ಗಂಟೆಯ ಸುಮಾರಿಗೆ ಗೋವಿಂದ ಕಲ್ಯಾಣ ಮಂಟಪದ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಬಳಿಕ ಮೈದಾನದತ್ತ ನುಗ್ಗಲು ಪ್ರಯತ್ನಿಸಿದಾಗ ಪೊಲೀಸರು ಅವರನ್ನು ತಡೆದರು. ಈ ಸಂದರ್ಭ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು.

ಪ್ರತಿಭಟನೆ ಮತ್ತು ಬಂಧನ

ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಕಾರ್ಯಕ್ರಮಕ್ಕೆ ಅನುಮತಿ ನೀಡಬಾರದೆಂದು ಆಗ್ರಹಿಸಿ ಮಾ.20ಕ್ಕೆ ಸಂಜೆ 5ಕ್ಕೆ ಗೋವಿಂದ ಕಲ್ಯಾಣ ಮಂಟಪದ ಬಳಿ ಹಿಂ.ಜಾ.ವೇ ಕಾರ್ಯಕರ್ತರು ಜಮಾಯಿಸಿದ್ದರು. ಅಲ್ಲಿ ಮಾಧ್ಯಮಗಳಿಗೆ ಹೇಳಿಕೆ ನೀಡಿದ ಬಳಿಕ, 'ನಾವು ಕ್ರಿಶ್ಚಿಯನ್ ಕಾಲೇಜಿನ ಕಾರ್ಯಕ್ರಮಕ್ಕೆ ಹೋಗುತ್ತೇವೆ' ಎಂದು ಹೇಳಿ ಮುಖ್ಯ ರಸ್ತೆಯ ಮೂಲಕ ಮುನ್ನುಗ್ಗಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸರು ಪ್ರತಿಭಟನಾಕಾರರನ್ನು ತಡೆದು, ಒಟ್ಟು 38 ಜನರನ್ನು ದಸ್ತಗಿರಿ ಮಾಡಿದರು. ಬಳಿಕ ಅವರನ್ನು ಬಿಡುಗಡೆಗೊಳಿಸಲಾಗಿದೆಯಾದರೂ, ಉಡುಪಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.